1950

ಅನಂದ ಬ್ರದರ್ಸ್

ಬೆಂಗಳೂರು

ಮುಯ್ಯಿಗೆ ಮುಯ್ಯಿ

(ಕಾದಂಬರಿ)

ಅ. ನ. ಕೃಷ್ಣರಾಯ

ಆನಂದ ಬ್ರದರ್ಸ್
ಬೆಂಗಳೂರು ೨

ಮುಯ್ಯಿಗೆ ಮುಯ್ಯಿ

(ಕಾದಂಬರಿ)

ಅ. ನ. ಕೃಷ್ಣರಾಯ

ಆನಂದ ಬ್ರದರ್ಸ್
ಬೆಂಗಳೂರು ೨

ಮೊದಲನೆಯ ಮುದ್ರಣ ಜೂನ್ ೧೯೫೦

[redacted]

ಬೆಲೆ : ರೂ. ೨—೪—೦

ಮುದ್ರಕರು :
ಎಸ್. ನಂಜಪ್ಪ,
ಉಷಾ ಪ್ರೆಸ್, ೮೪೨, ಚಿಕ್ಕಪೇಟೆ,
ಬೆಂಗಳೂರು ೨

ಮುನ್ನುಡಿ

ಭಾರತ ಸಂಸ್ಕೃತಿಯ ಸಮ್ಯಗ್ದರ್ಶನ ಸುಲಭಸಾಧ್ಯವಿಲ್ಲ. ಭಾರತವನ್ನು ಆದರಾಭಿಮಾನಗಳಿಂದ ನೋಡಿದ ಮ್ಯಾಕ್ಸ್‌ಮುಲ್ಲರ್, ಮೋಣಿಯರ್ ವಿಲಿಯಮ್ಸ್, ಪಾಲ್ ಡಾಯ್‌ಸನ್ನರಿಗೆ ಭಾರತದ ಒಂದು ಮುಖ ಕಂಡುಬಂತು; ಭಾರತವನ್ನು ತಿರಸ್ಕಾರದಿಂದ ಕಂಡ ಆಬೆ ಡೂಬ್ವಾ, ಮಿಸ್ ಮೇಯೋ, ಬೆವರ್ಲಿ ನಿಕ್ಲಾಸರಿಗೆ ಅದರ ಇನ್ನೊಂದು ಮುಖ ಕಂಡುಬಂತು. ಜಗದ್ಧಾತ್ರಿಯನ್ನು ಭಾರತೀಯರು ಗೌರಿ, ಪಾರ್ವತಿ ಎಂದೂ ಪೂಜಿಸುತ್ತಾರೆ; ಕಾಳಿ, ದುರ್ಗಿ ಎಂದೂ ಆರಾಧಿಸುತ್ತಾರೆ. ಭಾರತದಲ್ಲಿ ಈ ಎರಡು ಗುಣಗಳೂ ಹಾಸುಹೊಕ್ಕಾಗಿ ಹೊಂದಿಕೊಂಡಿವೆ. ವೇದೋಪನಿಷತ್ತುಗಳ ಅಧ್ಯಾತ್ಮಶಿಖರ; ಶ್ರೀರಾಮ, ಶ್ರೀಕೃಷ್ಣರ ಆದರ್ಶಜೀವನ; ಭಗವಾನ್ ಬುದ್ಧದೇವನ ನಿಸ್ಸೀಮ ಕರುಣೆ; ಶ್ರೀ ಶಂಕರಾಚಾರ್ಯರ ಅಮಾನುಷ ಜೀವನ; ಶ್ರೀ ರಾಮಾನುಜಾಚಾರ್ಯರ ವಿಶುದ್ಧಾಂತಃಕರಣ; ಕಬೀರನ ಹಾಗೂ ಶ್ರೀರಾಮಕೃಷ್ಣ ಪರಮಹಂಸರ ಸರ್ವಧರ್ಮ ಸಮನ್ವಯ ಭಾರತೀಯ ಸಂಸ್ಕೃತಿಯ ಕೆಲವು ಹೆಗ್ಗುರುತುಗಳಾಗಿವೆ. ಇದರ ಜತೆಯಲ್ಲಿಯೇ ವಾಮಾಚಾರ, ಅಸಹಿಷ್ಣುತೆ, ಪರಮತಭರ್ತ್ಸನೆ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ನರಬಲಿಗಳೂ ಬೆಳೆದುಬಂದಿವೆ. ಭಾರತವನ್ನು ಪೂರ್ಣವಾಗಿ ಅರಿಯಬೇಕೆನ್ನುವವರು ಅದರ ಗುಣಗಳೊಂದಿಗೆ ದೋಷಗಳನ್ನೂ ತಿಳಿಯಬೇಕು. ಅದರ ಪುಣ್ಯಪುರುಷರ, ಸಾಧುಸಂತರ, ಭಿಕ್ಷು, ಮುಮುಕ್ಷುಗಳ ಜತೆಗೆ ಪಾಪಿಗಳ, ಹೀನಾಚಾರಪ್ರವೃತ್ತರ, ಧರ್ಮಾಂಧರ, ಕಟುಧರ್ಮಿಗಳ ಪರಿಚಯವನ್ನೂ ಮಾಡಿಕೊಳ್ಳಬೇಕು. ಇವೆರಡನ್ನೂ

ತಕ್ಕಡಿಯಲ್ಲಿಟ್ಟು ತೂಗಿ ಯಾವದು ಹೆಚ್ಚು, ಯಾವದು ಕಡಿಮೆಯೆನ್ನು ವುದನ್ನು ವಿಚಾರಪರರು ನಿರ್ಧರಿಸಬೇಕು.

ಭಾರತದಲ್ಲಿ ಪಾಪ ತನ್ನ ಕೈವಾಡ ತೋರದೆ ಹೋಗಿಲ್ಲ. ಆದರೆ ಈ ದೇಶವನ್ನು ಯಾವ ಮಹಾಶಕ್ತಿ ಕಾಪಾಡುತ್ತಿದೆಯೋ ಅಂಥ ಕಾಲದಲ್ಲಿ ಒಬ್ಬ ಮಹಾನುಭಾವ ಅವತರಿಸಿ ಪಾಪದೊಂದಿಗೆ ಕಾದಾಡಿ, ಅದರ ರಾಕ್ಷಸ ಶಕ್ತಿಯನ್ನು ದಮನಮಾಡಿದ್ದಾನೆ. ವೇದದ ಪ್ರಭೆಯನ್ನಳಿಸಿ, ಜಡಕರ್ಮ ದಲ್ಲಿ ಜನ ಪ್ರವೃತ್ತರಾದಾಗ ಭಗವಾನ್ ಬುದ್ಧ ಅವತರಿಸಿ ತನ್ನ ಜೀವ ಕಾರುಣ್ಯವಾದವನ್ನು ಮುಂದಿಟ್ಟ. ಗಾಣಪತ್ಯರು, ಸೌರಮಾನರು, ವಾಮಾ ಚಾರಿಗಳು ಧರ್ಮದ ಹೆಸರಿನಲ್ಲಿ ಅಕೃತ್ಯಗಳನ್ನಾಚರಿಸಲಾರಂಭಿಸಿದಾಗ ಅದ್ವೈತಧ್ವಜವನ್ನು ಹಿಡಿದೆತ್ತಿ ಶ್ರೀ ಶಂಕರಾಚಾರ್ಯರು ಧರ್ಮೋದ್ಧಾರ ಮಾಡಿದರು. ಇತ್ತೀಚೆಗೆ ಪಾಶ್ಚಾತ್ಯರ ಹೈತುಕವಾದ, ನಾಸ್ತಿಕವಾದ ಪ್ರಬಲಿಸಿದಾಗ ಶ್ರೀರಾಮಕೃಷ್ಣ ಪರಮಹಂಸರು ಅವತರಿಸಿ ಈಶ್ವರನಿದ್ದಾ ನೆಂಬುದನ್ನು ಸ್ಥಾಪಿಸಿದರು.

ಸತ್ಯಸೂರ್ಯನನ್ನು ಸುವರ್ಣಸಂಪುಟದಲ್ಲಿಯೂ ಸೆರೆಹಾಕಬಾರದು. ಭಾರತವನ್ನು, ಅದರ ಅಭೂತಪೂರ್ವ ಆಧ್ಯಾತ್ಮಿಕ ಸಂಪತ್ತನ್ನು ಅಭಿ ಮಾನದ ಗೌರವದ ಕಣ್ಣಿಂದ ನೋಡಬೇಕು. ಆದರೆ ಗೌರವ ಅಭಿಮಾನ ಸತ್ಯದ ಕಣ್ಣಿಗೆ ಅವಕುಂಠನ ಹಾಕಬಾರದು. ಭಾರತದ ದೌರ್ಬಲ್ಯ, ಅಂಧ ಕಾರ, ಅಜ್ಞಾನವನ್ನು ಮುಚ್ಚಿಡುವುದು ಬೇಡ. ಅವುಗಳಿಗೆ ನಮ್ಮ ಬುದ್ಧಿ ಬಲದಿಂದ ನೂತನ ಅರ್ಥಕಲ್ಪಿಸಿ ಆತ್ಮವಂಚನೆಮಾಡಿಕೊಳ್ಳುವುದು ಬೇಡ. ತಪ್ಪನ್ನು ಒಪ್ಪಿಕೊಳ್ಳೋಣ – ತಪ್ಪು ನೆಪ್ಪಾಗಲು ತ್ರಿಕರಣಪೂರ್ವಕವಾಗಿ ಪ್ರಯತ್ನಿಸೋಣ.

"ಮುಯ್ಯಿಗೆ ಮುಯ್ಯಿ" ಕಥೆ ಬರೆಯಬೇಕೆಂದುಕೊಂಡಾಗ ನನ್ನ ಚಿತ್ರಫಲಕದ ಮೇಲೆ ಹೊಳೆದ ಭಾವನೆಗಳಿವು. ಈ ಭಾವನೆಗಳಿಗೆ ನನ್ನ ಶಕ್ತ್ಯನುಸಾರ ರೂಪುಗೊಡಲು ಪ್ರಯತ್ನಿಸಿದ್ದೇನೆ.

ನಮ್ಮ ದೇಶದ ಅನೇಕ ಕಡೆಗಳಲ್ಲಿ ವಾಮಾಚಾರ ಇಂದಿಗೂ ಪ್ರಸಾರ ದಲ್ಲಿದೆ. ಮಲೆಯಾಳ ಇದಕ್ಕೆ ತುಂಬ ಪ್ರಸಿದ್ಧವಾಗಿದೆ. ವಾಮಾಚಾರ

ಒಂದು ಮಹಾಶಕ್ತಿಯ ಸಂಚಯನವೆಂದು ಒಪ್ಪಿಕೊಳ್ಳಬೇಕು. ಆದರೆ ಈ ಶಕ್ತಿಯ ವಿನಿಯೋಗವೆಂತು? ಜನತೆಯ ಹಿತಕ್ಕೆ – ಉದ್ಧಾರಕ್ಕೆ ವಿನಾಸ ಲಾಗದ ಯಾವ ವಿದ್ಯೆಯಾದರೂ ದುರ್ವಿದ್ಯೆಯೇ. ವಾಮಾಚಾರದಲ್ಲಿ ನಿಷ್ಣಾತನಾಗಿ ಅದನ್ನು ತನ್ನ ರಾಕ್ಷಸಲಾಲಸೆಗೆ ಉಪಯೋಗಿಸಿಕೊಳ್ಳುತ್ತಿದ್ದ ಒಬ್ಬ ಪ್ರಜಾಪೀಡಕನ ಚಿತ್ರವನ್ನು ಈ ಕಾದಂಬರಿಯಲ್ಲಿ ಕೊಡಲಾಗಿದೆ. ಅದೇ ವಾಮಾಚಾರವನ್ನು ಕಲಿತು ಅದನ್ನು ಲೋಕಕಲ್ಯಾಣಕ್ಕಾಗಿ ಉಪ ಯೋಗಿಸಿದ ಒಬ್ಬ ಪ್ರಜಾವತ್ಸಲನ ಚಿತ್ರವನ್ನೂ ಕೊಡಲಾಗಿದೆ. ಇವರಿಬ್ಬರ ಮಧ್ಯೆ ಸಾತ್ತ್ವಿಕವೃತ್ತಿಯನ್ನವಲಂಬಿಸಿ, ಋಜುಜೀವನ, ದೈವಭಕ್ತಿಗಳಿಗೆ ಮೈತ್ರಿ ಕಲ್ಪಿಸಿ ಹಿರಿಬಾಳುವೆ ನಡೆಸಿದ ಒಬ್ಬ ಮಹಾಬ್ರಾಹ್ಮಣನ ಚಿತ್ರವನ್ನೂ ಕೊಡಲಾಗಿದೆ. ಈ ಚಿತ್ರಗಳಿಗೆ ಹೊಂದಿಕೆಯಾಗಿ ನಮ್ಮ ಹಳ್ಳಿಗಳ ಬಾಳುವೆ, ವಿವಿಧ ವರ್ಣ, ವರ್ಗದವರಲ್ಲಿ ಮೂಡಿದ್ದ ವಿಶ್ವಾಸ, ಹಳ್ಳಿಯಜನರ ಲೋಪ ದೋಷಗಳು, ಅವರ ಅಪಾರ ಅಜ್ಞಾನ – ಅಜ್ಞಾನದಡಿಯಿರುವ ಭಯ – ಭೀತಿಗಳನ್ನು ವರ್ಣಿಸಲಾಗಿದೆ.

ವಾಮಾಚಾರದ ಕ್ರಿಯೆ – ಪ್ರತಿಕ್ರಿಯೆಗಳನ್ನು ಅವುಗಳ ಹಿನ್ನೆಲೆ ಯಲ್ಲಿಯೇ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಅವುಗಳ ಮೇಲೆ ವೈಜ್ಞಾನಿಕ ವಿಚಾರದ ಕ್ಷ-ಕಿರಣ ಚೆಲ್ಲಿ, ಅವುಗಳ ಅಸ್ತಿತ್ವವನ್ನು ಅಳೆದುನೋಡುವುದು ಕಲಾವಿದನ ಕಾರ್ಯಭಾಗವಲ್ಲ. ಆದರೆ ವಿಜ್ಞಾನವೂ ಅಗೋಚರ, ಅವ್ಯಕ್ತ ಮಹಾಶಕ್ತಿಯ ಇರುವನ್ನು ಈಗೀಗ ಒಪ್ಪಿಕೊಳ್ಳುತ್ತಿದೆ. ಸರ್ ಆಲಿವರ್ ಲಾಡ್ಜ್, ಆರ್ಥರ್ ಕಾನನ್ ಡಾಯಿಲ್‌ಗಳು ಸುಪ್ತಜಗತ್ತು ಒಂದಿದೆ, ಅದು ನಮ್ಮ ಜಗತ್ತಿನ ಮೇಲೆ ಪ್ರಭಾವ ಮೂಡುತ್ತದೆ ಎಂದು ಒಪ್ಪಿಕೊಂಡರು. ಈಚಿನ ಪ್ರಸಿದ್ಧ ವಿಜ್ಞಾನಿಗಳಾದ ಈಡಿಂಗ್‌ಟನ್, ಜೀನ್ಸ್, ಐನ್‌ಸ್ಟೀನರು ಭಾರತೀಯ ತತ್ತ್ವಾರ್ಥಕ್ಕೆ ವಿಜ್ಞಾನವನ್ನು ತಂದು ಹಚ್ಚುತ್ತಿದ್ದಾರೆ. ಸಾಹಜಿಕ ವಿಜ್ಞಾನ ತನ್ನ ಎಲ್ಲೆಯನ್ನು ಕಂಡುಕೊಂಡ ಮೇಲೆ ಮುಂದೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆ ಪ್ರಶ್ನೆಗೆ ಉತ್ತರ ಭಾರತದಲ್ಲಿದೆಯೇ?

ಈ ಕಥೆ ರೂಪುಗೊಂಡ ಇತಿಹಾಸವೂ ಸ್ವಾರಸ್ಯವಾಗಿದೆ. ನಾನು ಒಮ್ಮೆ ಚಿತ್ರದುರ್ಗಕ್ಕೆ ಹೋಗಿದ್ದಾಗ ಒಂದು ರಾತ್ರಿ ಗೆಳೆಯರ ಸುಖಕಥಾ

ಪ್ರಸಂಗ ನಡೆದಿತ್ತು. ಮಾತಿನಿಂದ ಮಾತು ಬೆಳೆದು ಭೂತ, ಪ್ರೇತಗಳ ವಿಷಯ ಹೊರಟಿತು. ತಾವು ಕಂಡಿದ್ದ, ಕೇಳಿದ್ದ ಕಥೆಗಳನ್ನು ಗೆಳೆಯರು ವರ್ಣಿಸಿದರು. ಗೆಳೆಯ ಮರಡೀಹಳ್ಳಿ ಶ್ರೀಧರಮೂರ್ತಿಗಳು ಒಂದು ಕಥೆ ಹೇಳಿದರು. ನನ್ನ ಮನಸ್ಸಿನ ಮೇಲೆ ಅವರು ನಿರೂಪಿಸಿದ ಕಥೆ ವಿಶೇಷ ಪರಿಣಾಮವನ್ನುಂಟುಮಾಡಿತು. ನಾನು ಚಿತ್ರದುರ್ಗದಲ್ಲಿದ್ದ ಎರಡು ದಿನ ಆ ಕಥೆ ನನ್ನನ್ನು ಒಂದೇ ಸಮನಾಗಿ ಕಾಡಿತು. ನನ್ನ ಪರಿಸ್ಥಿತಿ ಕಂಡು ಶ್ರೀಧರಮೂರ್ತಿ ಒಂದು ದಿನ ಕೇಳಿದರು

"ಏನೋ ಬಹಳ ವಿಚಾರಮಾಡುತ್ತಿರುವಿರಿ?"

"ಹೌದು! ನೀವು ಹೇಳಿದ ಮಾಂತ್ರಿಕನ ವಿಷಯ."

"ಬರೆದುಬಿಡಿ– ಮನಸ್ಸು ಹಗುರವಾಗುತ್ತದೆ."

"ಬರೆಯುವ ಮನಸ್ಸಿದೆ. ಆದರೆ ನೀವು ಬರೆಯುತ್ತೀರೇನೋ ಎಂದು ಅನುಮಾನಿಸುತ್ತಿದ್ದೇನೆ."

"ನಾನು ಬರೆಯುವ ವಿಚಾರಮಾಡಿಲ್ಲ. ನೀವು ಬರೆದರೆ ಬಹಳ ಸಂತೋಷ."

ತಾವೇ ಸ್ವಯಂ ಉತ್ತಮ ಕತೆಗಾರರಾದ ಶ್ರೀಧರಮೂರ್ತಿಯವರು ತಮ್ಮ ಕಥೆಯನ್ನು ಬಿಟ್ಟುಕೊಟ್ಟು ಉಪಕಾರಮಾಡಿದರು. ಊರಿಗೆ ಮರಳಿದ ಕೂಡಲೆ ಶ್ರೀಧರಮೂರ್ತಿಗಳು ಹೇಳಿದ್ದ ಕಥೆಯ ರೂಪರೇಷೆಯನ್ನು ಉಪಯೋಗಿಸಿಕೊಂಡು ಬೆಳಸಿ ಒಂದು ಸಣ್ಣಕಥೆ ಬರೆದು ಮುಗಿಸಿದೆ. ಓದಿದ ಗೆಳೆಯರು ಅದನ್ನು ಬಹುವಾಗಿ ಮೆಚ್ಚಿಕೊಂಡರು.

ಆಗ ನನ್ನ ಕತಾಸಂಗ್ರಹವೊಂದು ಅಚ್ಚಿನಲ್ಲಿತ್ತು. ಅದರಲ್ಲಿ ಸೇರಿಸಲು ಈ ಕಥೆ–'ಅವನು ಹಾಕಿದ ಛಾಪು' ಕಳಿಸಿಕೊಟ್ಟೆ. ಈ ಕಥೆ ಮತ್ತು ಅದರ ಜತೆ ಕಳಿಸಿದ ಮತ್ತೆ ಎರಡು ಕಥೆಗಳೂ ಅಚ್ಚಿನಾಲಯದಲ್ಲಿ ಕಳೆದು ಹೋದವು. ಹಸ್ತಪ್ರತಿ ಹೋದ ಕೆಲವು ದಿನ ನನಗೆ ನಿದ್ರಾಹಾರ ಬೇಡವಾಯಿತು. ನನ್ನ ಉತ್ತಮ ಕೃತಿಯೊಂದು ಹೋಯಿತಲ್ಲಾ ಎಂದು ಮಮ್ಮಲ ಮರುಗಿದೆ. ಕುಳಿತು ಪುನಃ ಆ ಕಥೆ ಬರೆಯುವಂತಿರಲಿಲ್ಲ.

ಒಮ್ಮೆ ಬರೆದ ಕಥೆ ಎರಡನೆಯ ಸಾರಿ ಬರೆದರೆ ಹಳಸಿದನ್ನಕ್ಕೆ ಒಗ್ಗರಣೆ ಕೊಟ್ಟಂತಾಗುತ್ತದೆಯೆಂದು ಸುಮ್ಮನಾಗಿಬಿಟ್ಟೆ.

ನಾನು ಈ ಕಥಾವಸ್ತುವಿನ ಕೈಬಿಟ್ಟರೂ ಅದು ನನ್ನ ಕೈಬಿಡಲಿಲ್ಲ. ಸಣ್ಣ ಕಥೆ ಕ್ರಮಕ್ರಮೇಣ ಕಾದಂಬರಿ ಸ್ವರೂಪ ಹೊತ್ತು ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ಕಡೆದುನಿಂತಿತು. ಅದರ ಜತೆಗೆ ನಾನು ರತ್ನಗಿರಿಗೆ ಗೆಳೆಯ ಮುಂಡಲಹಳ್ಳಿ ನರಸಿಂಹಮೂರ್ತಿಗಳವರ ಜತೆ ಹೋಗಿದ್ದಾಗ ಅವರು ಒಂದು ಮನೆ ತೋರಿಸಿ, ಅದರಲ್ಲಿನ ಒಬ್ಬ ವ್ಯಕ್ತಿ ತೋರಿಸಿ ಅವನ ವಿಚಿತ್ರ ಅನುಭವದ ಒಂದು ಕಥೆ ಹೇಳಿದ್ದುದು ನೆನಪಾಯಿತು. ಅದೇ 'ಮುಯ್ಯಿಗೆ ಮುಯ್ಯಿ' ಕಾದಂಬರಿಯಲ್ಲಿ ಸಾಂಬನ ಮೇಲೆ ನರಸಿಂಹಶಾಸ್ತ್ರಿಗಳು ಬರುವ ಪ್ರಕರಣವಾಗಿ ರೂಪುಗೊಂಡಿತು. ತಾವು ತಿಳಿಸಿದ ವಸ್ತುವನ್ನು ಉಪ ಯೋಗಿಸಿಕೊಳ್ಳಲು ಉದಾರಚಿತ್ತದಿಂದ ಅನುಮತಿಯಿತ್ತ ಈ ಉಭಯ ಗೆಳೆಯರಿಗೂ ನನ್ನ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ನನ್ನ ಕಾದಂಬರಿ ಹೊರಬಿದ್ದ ಮೇಲೆ ಅದರ ಮೇಲೆ ಬರುವ ವಿಮರ್ಶೆಗಳ ದೃಷ್ಟಿ, ವಾದವೈಖರಿಯನ್ನು ನಾನು ಈಗಲೇ ಊಹಿಸಬಲ್ಲೆ. ಅದರಲ್ಲಿ ಒಂದು ಆಕ್ಷೇಪಣೆ 'ಈ ಗ್ರಂಥಕರ್ತರು ಬ್ರಾಹ್ಮಣ್ಯದ ಹಿರಿಮೆ ಯನ್ನು ಎತ್ತಿಹಿಡಿಯುವುದಕ್ಕೆ ಹೊರಟಿದ್ದಾರೆ' ಎಂದು ಬರಬಹುದು. ಆ ವಿಮರ್ಶೆಯ ಉದ್ದೇಶ ಕೇವಲ ವ್ಯಕ್ತಿನಿಂದೆಯಾಗಿದ್ದರೆ ಅದನ್ನು ಲಕ್ಷಿಸುವ ಗೋಜಿಗೆ ನಾನು ಬೀಳುವ ಅಗತ್ಯವಿಲ್ಲ. ಆದರೆ ಅದು ವರ್ಗ – ತತ್ವ – ಆದರ್ಶಗಳ ಮೇಲಣ ಟೀಕೆಯಾಗಿ ಪರಿಣಮಿಸುವುದರಿಂದ ಒಂದೆರಡು ಮಾತು ಹೇಳುವುದು ಅನವಶ್ಯಕವಾಗಲಾರದು.

ಇಂದು ಬ್ರಾಹ್ಮಣನ ಬಗ್ಗೆ ಒಂದೆರಡು ಒಳ್ಳೆಯ ಮಾತು ಆಡುವುದು ಮಹಾಪರಾಧವಾಗಿದೆ. ಸಮದರ್ಶಿಯಾದ ಕವಿ, ಪಂಡಿತ ಎಲ್ಲರ ಗುಣ ಗ್ರಹಿಸಿ, ಆರಾಧಿಸುವಂತೆ ಬ್ರಾಹ್ಮಣನ ಗುಣವನ್ನೂ ಗ್ರಹಿಸುತ್ತಾನೆ. ಇವನು ಬ್ರಾಹ್ಮಣ – ಇವನು ಬ್ರಾಹ್ಮಣೇತರ; ಇವನು ಮುಸ್ಲಿಮ, ಇವನು ಕ್ರಿಸ್ತಧರ್ಮಾವಲಂಬಿ ಎಂದು ಮತಗಳ ಹೆಸರರಿತು ಗುಣವಿಮರ್ಶೆ ಮಾಡುವ ಪರಿಪಾಠ ನಾಡಿನ ಸಂಸ್ಕೃತಿಗೆ ಮಸಿಬಳೆಯುವಂಥದು.

ಬ್ರಾಹ್ಮಣನಲ್ಲಿರುವ ದೋಷ, ಅವಗುಣವನ್ನು ಬಯಲಿಗೆಳೆಯುವುದಕ್ಕೆ ನಾವು ಹೇಗೆ ಹಿಂಜರಿಯುವುದಿಲ್ಲವೋ ಹಾಗೆ ಅವನ ಗುಣ, ತಪಸ್ಸು ಇರುವೆಡೆ ಅದನ್ನು ಬಣ್ಣಿಸುವುದಕ್ಕೂ ಹಿಂಜರಿಯಬಾರದು. ಈ ಲೇಖಕನ ಅಗ್ನಿಲೇಖಿಸಿಯಿಂದ ಬ್ರಾಹ್ಮಣನಿಗೆ ವಿನಾಯಿತಿ ಸಿಕ್ಕಿಲ್ಲವೆಂಬುದನ್ನು ಓದುಗರು ಲೇಖಕನ ಇತರ ಕೃತಿಗಳಿಂದ ತಿಳಿಯಬಹುದು. ಬ್ರಾಹ್ಮಣನ ಲೋಪ ದೋಷಗಳನ್ನು ಈ ಲೇಖಕ ನಿರ್ದಾಕ್ಷಿಣ್ಯದಿಂದ ಖಂಡಿಸಿದ್ದಾನೆ. ಆದರೆ ನಾರಾಯಣಶಾಸ್ತ್ರಿ, ಸಾಂಬನಂಥ ಆದರ್ಶ ಬ್ರಾಹ್ಮಣರ ಚಿತ್ರ ನಮ್ಮ ನಮ್ಮ ಜನಕ್ಕೆ ಅತ್ಯಗತ್ಯವೆಂದು ಲೇಖಕನ ಅಭಿಮತ.

ಬ್ರಾಹ್ಮಣನ ಇಂದಿನ ಪರಿಸ್ಥಿತಿಯನ್ನು ಯೋಚಿಸುವಾಗ ಒಂದೆರಡು ವಿಷಯಗಳು ತನ್ನ ಮನಸ್ಸಿನ ಮೇಲೆ ಹೊಳೆದಿವೆ. ಬ್ರಾಹ್ಮಣ್ಯ ಹುಟ್ಟಿನಿಂದ ಸಾಧಿಸತಕ್ಕದ್ದಲ್ಲ – ಗುಣದಿಂದಲೇ ಅದು ಸಾಧ್ಯವಾಗಬೇಕು. ಬ್ರಾಹ್ಮಣೇತರ ವರ್ಗದಲ್ಲಿ ಅನೇಕ ಸದ್ಬ್ರಾಹ್ಮಣರನ್ನು ನಾನು ಕಂಡಿದ್ದೇನೆ. ತಮ್ಮ ಋಜುಜೀವನದಿಂದ ಬ್ರಾಹ್ಮಣರಾಗಿ ಬಾಳುತ್ತಿರುವ ಮುಸ್ಲಿಮ, ಕ್ರೈಸ್ತರನ್ನು ನಾನು ಬಲ್ಲೆ. ನಾನು ಈ ಕಾದಂಬರಿಯಲ್ಲಿ ಎತ್ತಿ ಹಿಡಿಯುತ್ತಿರುವುದು **ಬ್ರಾಹ್ಮಣನನ್ನಲ್ಲ – ಬ್ರಾಹ್ಮಣ್ಯವನ್ನು.** ಬ್ರಾಹ್ಮಣ ಗುಣವನ್ನು ರಕ್ತಗತಮಾಡಿಕೊಳ್ಳದಿರುವ ಯಾವನೂ ಬ್ರಾಹ್ಮಣ ಶಬ್ದಕ್ಕೆ ಅರ್ಹನಲ್ಲ.

ಈ ಆದರ್ಶ ದೃಷ್ಟಿಯಿಂದ ಬ್ರಾಹ್ಮಣರ ಸಂಖ್ಯೆ ನೂರಕ್ಕೆ ನಾಲ್ಕಲ್ಲ; ಅದಕ್ಕೂ ಬಹಳ ಕಡಿಮೆಯಾಗಿದೆ. ಭಗವಂತ ಗೀತೆಯಲ್ಲಿ ಹೇಳಿದ ಸಂದೇಶ ಬ್ರಾಹ್ಮಣ ಮರೆತ. (ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ) ಬ್ರಾಹ್ಮಣ ತನ್ನ ನಿಸರ್ಗಪಥವನ್ನು ಬಿಟ್ಟು ವೈಶ್ಯ, ಶೂದ್ರ ವೃತ್ತಿಯನ್ನವಲಂಬಿಸಿದ. ಅದೇ ಅವನ ಪತನದ ಹೇತುವಾಯಿತು. ಬ್ರಾಹ್ಮಣ ಹೇಗೆ ತನ್ನ ಸಹಜಪ್ರವೃತ್ತಿಯನ್ನು ಬಿಟ್ಟು ಆಶೆಯ ಶಿಶುವಾಗಿ ತನ್ನ ಪತನ ತಂದುಕೊಂಡನೊ ಇಂದು ಇತರ ವರ್ಣದವರೂ ಅದೇ ತಪ್ಪುದಾರಿ ತುಳಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮ ಸಹಜವೃತ್ತಿಗಳನ್ನು ತೊರೆದು ಆಧುನಿಕ ಶಿಕ್ಷಣದ ಮೊಬ್ಬಿಗೆ ಬಿದ್ದು, ಸರ್ಕಾರಿ ಕೆಲಸದ ಮೃಗಜಲದ ಹಿಂದೆ ಓಡುತ್ತಿದ್ದಾರೆ.

ಯಾಜ್ಞವಲ್ಕನಂಥ ಬ್ರಾಹ್ಮಣನನ್ನೂ, ಶ್ರೀ ರಾಮಚಂದ್ರನಂಥ ಕ್ಷತ್ರಿಯನ್ನೂ ಚಂದನದಾಸನಂಥ ವೈಶ್ಯನನ್ನು, ರೈಕ್ವನಂಥ ಶೂದ್ರನನ್ನು ಯಾವ ಶಕ್ತಿಯೂ ಅಲುಗಾಡಿಸಲಾರದು. ತನ್ನ ವೃತ್ತಿಯನ್ನೇ ರೂಢಿಸಿಕೊಂಡು, ಅದರಲ್ಲಿಯೇ ಸಂಪೂರ್ಣ ಸಿದ್ಧಿಯನ್ನು ದೊರಕಿಸಿಕೊಂಡು, ಅದನ್ನು ಲೋಕಕಲ್ಯಾಣಕ್ಕೆ ಬಳಸುವ ಮೊಚ್ಚೆಗಾರ ಮಹಾ ಬ್ರಾಹ್ಮಣನಷ್ಟೇ ಹಿರಿಯ – ಅವನನನ್ನೇ ಶ್ರೀಕೃಷ್ಣ 'ಯೋಗಿ' ಎಂದು ಕರೆದಿರುವುದು.

ಈ ಲೇಖಕ ಓದುಗರ ಮುಂದಿಟ್ಟಿರುವ ಆದರ್ಶವನ್ನು ಪರಿಗ್ರಹಿಸ ಬೇಕು. ಲೇಖಕನ ಮನಸ್ಸಿನಲ್ಲಿ ಸ್ವಪ್ನಾವಸ್ಥೆಯಲ್ಲಿಯೂ ಸುಳಿಯದಿರುವ ಜಾತಿ, ಮತ, ವರ್ಣ, ವರ್ಗಗಳ ಕೀಳು – ಮೇಲು ಭಾವನೆಯನ್ನು ಯಾರೂ ಆಪಾದಿಸಬಾರದೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ಕಾದಂಬರಿಯನ್ನು ಪ್ರಕಟಿಸಿದ ಆನಂದ್ ಬ್ರದರ್ಸ್ ಕಂಪೆನಿ ಯವರಿಗೂ, ಲಕ್ಷಣವಾಗಿ ಅಚ್ಚುಮಾಡಿಕೊಟ್ಟಿರುವ ಉಷಾ ಪ್ರೆಸ್ ಒಡೆಯ ರಿಗೂ ನನ್ನ ನೆನಕೆ ಸಲ್ಲುತ್ತದೆ.

"ಅನ್ನಪೂರ್ಣ"
ವಿಶ್ವೇಶ್ವರಪುರಂ
ಬೆಂಗಳೂರು ನಗರ
೨೬ ಜೂನ್, ೧೯೫೦

ಅ. ನ. ಕೃಷ್ಣರಾಯ.

ಮುಯ್ಯಿಗೆ ಮುಯ್ಯಿ

ಮುಯ್ಯಿಗೆ ಮುಯ್ಯಿ

(ಕಾದಂಬರಿ)

ಅ. ನ. ಕೃಷ್ಣರಾಯ

ಆನಂದ ಬ್ರದರ್ಸ್
ಬೆಂಗಳೂರು ೨

ಮೊದಲನೆಯ ಮುದ್ರಣ ಜೂನ್ ೧೯೫೦

ಬೆಲೆ: ರೂ. ೨—೪—೦

ಮುದ್ರಕರು:
ಎಸ್. ನಂಜಪ್ಪ,
ಉಷಾ ಪ್ರೆಸ್, ೮೪೨, ಚಿಕ್ಕಪೇಟೆ,
ಬೆಂಗಳೂರು ೨

ಮುನ್ನುಡಿ

ಭಾರತ ಸಂಸ್ಕೃತಿಯ ಸಮ್ಯಗ್ದರ್ಶನ ಸುಲಭಸಾಧ್ಯವಿಲ್ಲ. ಭಾರತವನ್ನು ಆದರಾಭಿಮಾನಗಳಿಂದ ನೋಡಿದ ಮ್ಯಾಕ್ಸ್‌ಮುಲ್ಲರ್, ಮೋಣಿಯರ್ ವಿಲಿಯಮ್ಸ್, ಪಾಲ್ ಡಾಯ್‌ಸನ್ನರಿಗೆ ಭಾರತದ ಒಂದು ಮುಖ ಕಂಡುಬಂತು; ಭಾರತವನ್ನು ತಿರಸ್ಕಾರದಿಂದ ಕಂಡ ಆಬೆ ಡೂಬ್ವಾ, ಮಿಸ್ ಮೇಯೋ, ಬೆವರ್ಲಿ ನಿಕ್ಲಾಸರಿಗೆ ಅದರ ಇನ್ನೊಂದು ಮುಖ ಕಂಡುಬಂತು. ಜಗದ್ಧಾತ್ರಿಯನ್ನು ಭಾರತೀಯರು ಗೌರಿ, ಪಾರ್ವತಿ ಎಂದೂ ಪೂಜಿಸುತ್ತಾರೆ; ಕಾಳಿ, ದುರ್ಗಿ ಎಂದೂ ಆರಾಧಿಸುತ್ತಾರೆ. ಭಾರತದಲ್ಲಿ ಈ ಎರಡು ಗುಣಗಳೂ ಹಾಸುಹೊಕ್ಕಾಗಿ ಹೊಂದಿಕೊಂಡಿವೆ. ವೇದೋಪನಿಷತ್ತುಗಳ ಅಧ್ಯಾತ್ಮಶಿಖರ; ಶ್ರೀರಾಮ, ಶ್ರೀಕೃಷ್ಣರ ಆದರ್ಶಜೀವನ; ಭಗವಾನ್ ಬುದ್ಧದೇವನ ನಿಸ್ಸೀಮ ಕರುಣೆ; ಶ್ರೀ ಶಂಕರಾಚಾರ್ಯರ ಅಮಾನುಷ ಜೀವನ; ಶ್ರೀ ರಾಮಾನುಜಾಚಾರ್ಯರ ವಿಶುದ್ಧಾಂತಃಕರಣ; ಕಬೀರನ ಹಾಗೂ ಶ್ರೀರಾಮಕೃಷ್ಣ ಪರಮಹಂಸರ ಸರ್ವಧರ್ಮ ಸಮನ್ವಯ ಭಾರತೀಯ ಸಂಸ್ಕೃತಿಯ ಕೆಲವು ಹೆಗ್ಗುರುತುಗಳಾಗಿವೆ. ಇದರ ಜತೆಯಲ್ಲಿಯೇ ವಾಮಾಚಾರ, ಅಸಹಿಷ್ಣುತೆ, ಪರಮತಭರ್ತ್ಸನೆ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ನರಬಲಿಗಳೂ ಬೆಳೆದುಬಂದಿವೆ. ಭಾರತವನ್ನು ಪೂರ್ಣವಾಗಿ ಅರಿಯಬೇಕೆನ್ನುವವರು ಅದರ ಗುಣಗಳೊಂದಿಗೆ ದೋಷಗಳನ್ನೂ ತಿಳಿಯಬೇಕು. ಅದರ ಪುಣ್ಯಪುರುಷರ, ಸಾಧುಸಂತರ, ಭಿಕ್ಷು, ಮುಮುಕ್ಷುಗಳ ಜತೆಗೆ ಪಾಪಿಗಳ, ಹೀನಾಚಾರಪ್ರವೃತ್ತರ, ಧರ್ಮಾಂಧರ, ಕಟುಧರ್ಮಿಗಳ ಪರಿಚಯವನ್ನೂ ಮಾಡಿಕೊಳ್ಳಬೇಕು. ಇವೆರಡನ್ನೂ

ತಕ್ಕಡಿಯಲ್ಲಿಟ್ಟು ತೂಗಿ ಯಾವದು ಹೆಚ್ಚು, ಯಾವದು ಕಡಿಮೆಯೆನ್ನು ವುದನ್ನು ವಿಚಾರಪರರು ನಿರ್ಧರಿಸಬೇಕು.

ಭಾರತದಲ್ಲಿ ಪಾಪ ತನ್ನ ಕೈವಾಡ ತೋರದೆ ಹೋಗಿಲ್ಲ. ಆದರೆ ಈ ದೇಶವನ್ನು ಯಾವ ಮಹಾಶಕ್ತಿ ಕಾಪಾಡುತ್ತಿದೆಯೋ ಅಂಥ ಕಾಲದಲ್ಲಿ ಒಬ್ಬ ಮಹಾನುಭಾವ ಅವತರಿಸಿ ಪಾಪದೊಂದಿಗೆ ಕಾದಾಡಿ, ಅದರ ರಾಕ್ಷಸ ಶಕ್ತಿಯನ್ನು ದಮನಮಾಡಿದ್ದಾನೆ. ವೇದದ ಪ್ರಭೆಯನ್ನಳಿಸಿ, ಜಡಕರ್ಮ ದಲ್ಲಿ ಜನ ಪ್ರವೃತ್ತರಾದಾಗ ಭಗವಾನ್ ಬುದ್ಧ ಅವತರಿಸಿ ತನ್ನ ಜೀವ ಕಾರುಣ್ಯವಾದವನ್ನು ಮುಂದಿಟ್ಟ. ಗಾಣಪತ್ಯರು, ಸೌರಮಾನರು, ವಾಮಾ ಚಾರಿಗಳು ಧರ್ಮದ ಹೆಸರಿನಲ್ಲಿ ಅಕೃತ್ಯಗಳನ್ನಾಚರಿಸಲಾರಂಭಿಸಿದಾಗ ಅದ್ವೈತಧ್ವಜವನ್ನು ಹಿಡಿದೆತ್ತಿ ಶ್ರೀ ಶಂಕರಾಚಾರ್ಯರು ಧರ್ಮೋದ್ಧಾರ ಮಾಡಿದರು. ಇತ್ತೀಚೆಗೆ ಪಾಶ್ಚಾತ್ಯರ ಹೈತುಕವಾದ, ನಾಸ್ತಿಕವಾದ ಪ್ರಬಲಿಸಿದಾಗ ಶ್ರೀರಾಮಕೃಷ್ಣ ಪರಮಹಂಸರು ಅವತರಿಸಿ ಈಶ್ವರನಿದ್ದಾ ನೆಂಬುದನ್ನು ಸ್ಥಾಪಿಸಿದರು.

ಸತ್ಯಸೂರ್ಯನನ್ನು ಸುವರ್ಣಸಂಪುಟದಲ್ಲಿಯೂ ಸೆರೆಹಾಕಬಾರದು. ಭಾರತವನ್ನು, ಅದರ ಅಭೂತಪೂರ್ವ ಆಧ್ಯಾತ್ಮಿಕ ಸಂಪತ್ತನ್ನು ಅಭಿ ಮಾನದ ಗೌರವದ ಕಣ್ಣಿಂದ ನೋಡಬೇಕು. ಆದರೆ ಗೌರವ ಅಭಿಮಾನ ಸತ್ಯದ ಕಣ್ಣಿಗೆ ಅವಕುಂಠನ ಹಾಕಬಾರದು. ಭಾರತದ ದೌರ್ಬಲ್ಯ, ಅಂಧ ಕಾರ, ಅಜ್ಞಾನವನ್ನು ಮುಚ್ಚಿಡುವುದು ಬೇಡ. ಅವುಗಳಿಗೆ ನಮ್ಮ ಬುದ್ಧಿ ಬಲದಿಂದ ನೂತನ ಅರ್ಥಕಲ್ಪಿಸಿ ಆತ್ಮವಂಚನೆಮಾಡಿಕೊಳ್ಳುವುದು ಬೇಡ. ತಪ್ಪನ್ನು ಒಪ್ಪಿಕೊಳ್ಳೋಣ – ತಪ್ಪು ನೆಪ್ಪಾಗಲು ತ್ರಿಕರಣಪೂರ್ವಕವಾಗಿ ಪ್ರಯತ್ನಿಸೋಣ.

"ಮುಯ್ಯಿಗೆ ಮುಯ್ಯಿ" ಕಥೆ ಬರೆಯಬೇಕೆಂದುಕೊಂಡಾಗ ನನ್ನ ಚಿತ್ತಫಲಕದ ಮೇಲೆ ಹೊಳೆದ ಭಾವನೆಗಳಿವು. ಈ ಭಾವನೆಗಳಿಗೆ ನನ್ನ ಶಕ್ತ್ಯನುಸಾರ ರೂಪುಗೊಡಲು ಪ್ರಯತ್ನಿಸಿದ್ದೇನೆ.

ನಮ್ಮ ದೇಶದ ಅನೇಕ ಕಡೆಗಳಲ್ಲಿ ವಾಮಾಚಾರ ಇಂದಿಗೂ ಪ್ರಸಾರ ದಲ್ಲಿದೆ. ಮಲೆಯಾಳ ಇದಕ್ಕೆ ತುಂಬ ಪ್ರಸಿದ್ಧವಾಗಿದೆ. ವಾಮಾಚಾರ

ಒಂದು ಮಹಾಶಕ್ತಿಯ ಸಂಚಯನವೆಂದು ಒಪ್ಪಿಕೊಳ್ಳಬೇಕು. ಆದರೆ ಈ ಶಕ್ತಿಯ ವಿನಿಯೋಗವೆಂತು? ಜನತೆಯ ಹಿತಕ್ಕೆ – ಉದ್ಧಾರಕ್ಕೆ ವಿನಾಸ ಲಾಗದ ಯಾವ ವಿದ್ಯೆಯಾದರೂ ದುರ್ವಿದ್ಯೆಯೇ. ವಾಮಾಚಾರದಲ್ಲಿ ನಿಷ್ಣಾತನಾಗಿ ಅದನ್ನು ತನ್ನ ರಾಕ್ಷಸಲಾಲಸೆಗೆ ಉಪಯೋಗಿಸಿಕೊಳ್ಳುತ್ತಿದ್ದ ಒಬ್ಬ ಪ್ರಜಾಪೀಡಕನ ಚಿತ್ರವನ್ನು ಈ ಕಾದಂಬರಿಯಲ್ಲಿ ಕೊಡಲಾಗಿದೆ. ಅದೇ ವಾಮಾಚಾರವನ್ನು ಕಲಿತು ಅದನ್ನು ಲೋಕಕಲ್ಯಾಣಕ್ಕಾಗಿ ಉಪ ಯೋಗಿಸಿದ ಒಬ್ಬ ಪ್ರಜಾವತ್ಸಲನ ಚಿತ್ರವನ್ನೂ ಕೊಡಲಾಗಿದೆ. ಇವರಿಬ್ಬರ ಮಧ್ಯೆ ಸಾತ್ತ್ವಿಕವೃತ್ತಿಯನ್ನವಲಂಬಿಸಿ, ಋಜುಜೀವನ, ದೈವಭಕ್ತಿಗಳಿಗೆ ಮೈತ್ರಿ ಕಲ್ಪಿಸಿ ಹಿರಿಬಾಳುವೆ ನಡೆಸಿದ ಒಬ್ಬ ಮಹಾಬ್ರಾಹ್ಮಣನ ಚಿತ್ರವನ್ನೂ ಕೊಡಲಾಗಿದೆ. ಈ ಚಿತ್ರಗಳಿಗೆ ಹೊಂದಿಕೆಯಾಗಿ ನಮ್ಮ ಹಳ್ಳಿಗಳ ಬಾಳುವೆ, ವಿವಿಧ ವರ್ಣ, ವರ್ಗದವರಲ್ಲಿ ಮೂಡಿದ್ದ ವಿಶ್ವಾಸ, ಹಳ್ಳಿಯಜನರ ಲೋಪ ದೋಷಗಳು, ಅವರ ಅಪಾರ ಅಜ್ಞಾನ – ಅಜ್ಞಾನದಡಿಯಿರುವ ಭಯ – ಭೀತಿಗಳನ್ನು ವರ್ಣಿಸಲಾಗಿದೆ.

ವಾಮಾಚಾರದ ಕ್ರಿಯೆ – ಪ್ರತಿಕ್ರಿಯೆಗಳನ್ನು ಅವುಗಳ ಹಿನ್ನೆಲೆ ಯಲ್ಲಿಯೇ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಅವುಗಳ ಮೇಲೆ ವೈಜ್ಞಾನಿಕ ವಿಚಾರದ ಕ್ಷ-ಕಿರಣ ಚೆಲ್ಲಿ, ಅವುಗಳ ಅಸ್ತಿತ್ವವನ್ನು ಅಳೆದುನೋಡುವುದು ಕಲಾವಿದನ ಕಾರ್ಯಭಾಗವಲ್ಲ. ಆದರೆ ವಿಜ್ಞಾನವೂ ಅಗೋಚರ, ಅವ್ಯಕ್ತ ಮಹಾಶಕ್ತಿಯ ಇರುವನ್ನು ಈಗೀಗ ಒಪ್ಪಿಕೊಳ್ಳುತ್ತಿದೆ. ಸರ್ ಆಲಿವರ್ ಲಾಡ್ಜ್, ಆರ್ಥರ್ ಕಾನನ್ ಡಾಯಿಲ್‌ಗಳು ಸುಪ್ತಜಗತ್ತು ಒಂದಿದೆ, ಅದು ನಮ್ಮ ಜಗತ್ತಿನ ಮೇಲೆ ಪ್ರಭಾವ ಮೂಡುತ್ತದೆ ಎಂದು ಒಪ್ಪಿಕೊಂಡರು. ಈಚಿನ ಪ್ರಸಿದ್ಧ ವಿಜ್ಞಾನಿಗಳಾದ ಈಡಿಂಗ್‌ಟನ್, ಜೀನ್ಸ್, ಐನ್‌ಸ್ಟೀನರು ಭಾರತೀಯ ತತ್ತ್ವಾರ್ಥಕ್ಕೆ ವಿಜ್ಞಾನವನ್ನು ತಂದು ಹಚ್ಚುತ್ತಿದ್ದಾರೆ. ಸಾಹಜಿಕ ವಿಜ್ಞಾನ ತನ್ನ ಎಲ್ಲೆಯನ್ನು ಕಂಡುಕೊಂಡ ಮೇಲೆ ಮುಂದೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆ ಪ್ರಶ್ನೆಗೆ ಉತ್ತರ ಭಾರತದಲ್ಲಿದೆಯೇ?

ಈ ಕಥೆ ರೂಪುಗೊಂಡ ಇತಿಹಾಸವೂ ಸ್ವಾರಸ್ಯವಾಗಿದೆ. ನಾನು ಒಮ್ಮೆ ಚಿತ್ರದುರ್ಗಕ್ಕೆ ಹೋಗಿದ್ದಾಗ ಒಂದು ರಾತ್ರಿ ಗೆಳೆಯರ ಸುಖಕಥಾ

ಪ್ರಸಂಗ ನಡೆದಿತ್ತು. ಮಾತಿನಿಂದ ಮಾತು ಬೆಳೆದು ಭೂತ, ಪ್ರೇತಗಳ ವಿಷಯ ಹೊರಟಿತು. ತಾವು ಕಂಡಿದ್ದ, ಕೇಳಿದ್ದ ಕಥೆಗಳನ್ನು ಗೆಳೆಯರು ವರ್ಣಿಸಿದರು. ಗೆಳೆಯ ಮರಡೀಹಳ್ಳಿ ಶ್ರೀಧರಮೂರ್ತಿಗಳು ಒಂದು ಕಥೆ ಹೇಳಿದರು. ನನ್ನ ಮನಸ್ಸಿನ ಮೇಲೆ ಅವರು ನಿರೂಪಿಸಿದ ಕಥೆ ವಿಶೇಷ ಪರಿಣಾಮವನ್ನುಂಟುಮಾಡಿತು. ನಾನು ಚಿತ್ರದುರ್ಗದಲ್ಲಿದ್ದ ಎರಡು ದಿನ ಆ ಕಥೆ ನನ್ನನ್ನು ಒಂದೇ ಸಮನಾಗಿ ಕಾಡಿತು. ನನ್ನ ಪರಿಸ್ಥಿತಿ ಕಂಡು ಶ್ರೀಧರಮೂರ್ತಿ ಒಂದು ದಿನ ಕೇಳಿದರು

"ಏನೋ ಬಹಳ ವಿಚಾರಮಾಡುತ್ತಿರುವಿರಿ?"

"ಹೌದು! ನೀವು ಹೇಳಿದ ಮಾಂತ್ರಿಕನ ವಿಷಯ."

"ಬರೆದುಬಿಡಿ – ಮನಸ್ಸು ಹಗುರವಾಗುತ್ತದೆ."

"ಬರೆಯುವ ಮನಸ್ಸಿದೆ. ಆದರೆ ನೀವು ಬರೆಯುತ್ತೀರೇನೋ ಎಂದು ಅನುಮಾನಿಸುತ್ತಿದ್ದೇನೆ."

"ನಾನು ಬರೆಯುವ ವಿಚಾರಮಾಡಿಲ್ಲ. ನೀವು ಬರೆದರೆ ಬಹಳ ಸಂತೋಷ."

ತಾವೇ ಸ್ವಯಂ ಉತ್ತಮ ಕತೆಗಾರರಾದ ಶ್ರೀಧರಮೂರ್ತಿಯವರು ತಮ್ಮ ಕಥೆಯನ್ನು ಬಿಟ್ಟುಕೊಟ್ಟು ಉಪಕಾರಮಾಡಿದರು. ಊರಿಗೆ ಮರಳಿದ ಕೂಡಲೆ ಶ್ರೀಧರಮೂರ್ತಿಗಳು ಹೇಳಿದ್ದ ಕಥೆಯ ರೂಪರೇಷೆಯನ್ನು ಉಪಯೋಗಿಸಿಕೊಂಡು ಬೆಳಸಿ ಒಂದು ಸಣ್ಣಕಥೆ ಬರೆದು ಮುಗಿಸಿದೆ. ಓದಿದ ಗೆಳೆಯರು ಅದನ್ನು ಬಹುವಾಗಿ ಮೆಚ್ಚಿಕೊಂಡರು.

ಆಗ ನನ್ನ ಕತಾಸಂಗ್ರಹವೊಂದು ಅಚ್ಚಿನಲ್ಲಿತ್ತು. ಅದರಲ್ಲಿ ಸೇರಿಸಲು ಈ ಕಥೆ – 'ಅವನು ಹಾಕಿದ ಛಾಪು' ಕಳಿಸಿಕೊಟ್ಟೆ. ಈ ಕಥೆ ಮತ್ತು ಅದರ ಜತೆ ಕಳಿಸಿದ ಮತ್ತೆ ಎರಡು ಕಥೆಗಳೂ ಅಚ್ಚಿನಾಲಯದಲ್ಲಿ ಕಳೆದು ಹೋದವು. ಹಸ್ತಪ್ರತಿ ಹೋದ ಕೆಲವು ದಿನ ನನಗೆ ನಿದ್ರಾಹಾರ ಬೇಡವಾಯಿತು. ನನ್ನ ಉತ್ತಮ ಕೃತಿಯೊಂದು ಹೋಯಿತಲ್ಲಾ ಎಂದು ಮಮ್ಮಲ ಮರುಗಿದೆ. ಕುಳಿತು ಪುನಃ ಆ ಕಥೆ ಬರೆಯುವಂತಿರಲಿಲ್ಲ.

ಒಮ್ಮೆ ಬರೆದ ಕಥೆ ಎರಡನೆಯ ಸಾರಿ ಬರೆದರೆ ಹಳಸಿದನ್ನಕ್ಕೆ ಒಗ್ಗರಣೆ ಕೊಟ್ಟಂತಾಗುತ್ತದೆಯೆಂದು ಸುಮ್ಮನಾಗಿಬಿಟ್ಟೆ.

ನಾನು ಈ ಕಥಾವಸ್ತುವಿನ ಕೈಬಿಟ್ಟರೂ ಅದು ನನ್ನ ಕೈಬಿಡಲಿಲ್ಲ. ಸಣ್ಣ ಕಥೆ ಕ್ರಮಕ್ರಮೇಣ ಕಾದಂಬರಿ ಸ್ವರೂಪ ಹೊತ್ತು ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ಕಡೆಯಸಿಂತಿತು. ಅದರ ಜತೆಗೆ ನಾನು ರತ್ನಗಿರಿಗೆ ಗೆಳೆಯ ಮಂದಲಹಳ್ಳಿ ನರಸಿಂಹಮೂರ್ತಿಗಳವರ ಜತೆ ಹೋಗಿದ್ದಾಗ ಅವರು ಒಂದು ಮನೆ ತೋರಿಸಿ, ಅದರಲ್ಲಿನ ಒಬ್ಬ ವ್ಯಕ್ತಿ ತೋರಿಸಿ ಅವನ ವಿಚಿತ್ರ ಅನುಭವದ ಒಂದು ಕಥೆ ಹೇಳಿದ್ದುದು ನೆನಪಾಯಿತು. ಅದೇ 'ಮುಯ್ಯಿಗೆ ಮುಯ್ಯಿ' ಕಾದಂಬರಿಯಲ್ಲಿ ಸಾಂಬನ ಮೇಲೆ ನರಸಿಂಹಶಾಸ್ತ್ರಿಗಳು ಬರುವ ಪ್ರಕರಣವಾಗಿ ರೂಪುಗೊಂಡಿತು. ತಾವು ತಿಳಿಸಿದ ವಸ್ತುವನ್ನು ಉಪಯೋಗಿಸಿಕೊಳ್ಳಲು ಉದಾರಚಿತ್ತದಿಂದ ಅನುಮತಿಯಿತ್ತ ಈ ಉಭಯ ಗೆಳೆಯರಿಗೂ ನನ್ನ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ನನ್ನ ಕಾದಂಬರಿ ಹೊರಬಿದ್ದ ಮೇಲೆ ಅದರ ಮೇಲೆ ಬರುವ ವಿಮರ್ಶೆಗಳ ದೃಷ್ಟಿ, ವಾದವೈಖರಿಯನ್ನು ನಾನು ಈಗಲೇ ಊಹಿಸಬಲ್ಲೆ. ಅದರಲ್ಲಿ ಒಂದು ಆಕ್ಷೇಪಣೆ 'ಈ ಗ್ರಂಥಕರ್ತರು ಬ್ರಾಹ್ಮಣ್ಯದ ಹಿರಿಮೆಯನ್ನು ಎತ್ತಿಹಿಡಿಯುವುದಕ್ಕೆ ಹೊರಟಿದ್ದಾರೆ' ಎಂದು ಬರಬಹುದು. ಆ ವಿಮರ್ಶೆಯ ಉದ್ದೇಶ ಕೇವಲ ವ್ಯಕ್ತಿನಿಂದೆಯಾಗಿದ್ದರೆ ಅದನ್ನು ಲಕ್ಷಿಸುವ ಗೋಜಿಗೆ ನಾನು ಬೀಳುವ ಅಗತ್ಯವಿಲ್ಲ. ಆದರೆ ಅದು ವರ್ಗ–ತತ್ವ–ಆದರ್ಶಗಳ ಮೇಲಣ ಟೀಕೆಯಾಗಿ ಪರಿಣಮಿಸುವುದರಿಂದ ಒಂದೆರಡು ಮಾತು ಹೇಳುವುದು ಅನವಶ್ಯಕವಾಗಲಾರದು.

ಇಂದು ಬ್ರಾಹ್ಮಣನ ಬಗ್ಗೆ ಒಂದೆರಡು ಒಳ್ಳೆಯ ಮಾತು ಆಡುವುದು ಮಹಾಪರಾಧವಾಗಿದೆ. ಸಮದರ್ಶಿಯಾದ ಕವಿ, ಪಂಡಿತ ಎಲ್ಲರ ಗುಣ ಗ್ರಹಿಸಿ, ಆರಾಧಿಸುವಂತೆ ಬ್ರಾಹ್ಮಣನ ಗುಣವನ್ನೂ ಗ್ರಹಿಸುತ್ತಾನೆ. ಇವನು ಬ್ರಾಹ್ಮಣ – ಇವನು ಬ್ರಾಹ್ಮಣೇತರ; ಇವನು ಮುಸ್ಲಿಮ, ಇವನು ಕ್ರಿಸ್ತಧರ್ಮಾವಲಂಬಿ ಎಂದು ಮತಗಳ ಹೆಸರರಿತು ಗುಣವಿಮರ್ಶೆ ಮಾಡುವ ಪರಿಪಾಠ ನಾಡಿನ ಸಂಸ್ಕೃತಿಗೆ ಮಸಿಬಳೆಯುವಂಥದು.

ಬ್ರಾಹ್ಮಣನಲ್ಲಿರುವ ದೋಷ, ಅವಗುಣವನ್ನು ಬಯಲಿಗೆಳೆಯುವುದಕ್ಕೆ ನಾವು ಹೇಗೆ ಹಿಂಜರಿಯುವುದಿಲ್ಲವೋ ಹಾಗೆ ಅವನ ಗುಣ, ತಪಸ್ಸು ಇರುವೆಡೆ ಅವನ್ನು ಬಣ್ಣಿಸುವುದಕ್ಕೂ ಹಿಂಜರಿಯಬಾರದು. ಈ ಲೇಖಕನ ಅಗ್ನಿಲೇಖನಿಯಿಂದ ಬ್ರಾಹ್ಮಣನಿಗೆ ವಿನಾಯಿತಿ ಸಿಕ್ಕಿಲ್ಲವೆಂಬುದನ್ನು ಓದುಗರು ಲೇಖಕನ ಇತರ ಕೃತಿಗಳಿಂದ ತಿಳಿಯಬಹುದು. ಬ್ರಾಹ್ಮಣನ ಲೋಪ ದೋಷಗಳನ್ನು ಈ ಲೇಖಕ ನಿರ್ದಾಕ್ಷಿಣ್ಯದಿಂದ ಖಂಡಿಸಿದ್ದಾನೆ. ಆದರೆ ನಾರಾಯಣಶಾಸ್ತ್ರಿ, ಸಾಂಬನಂಥ ಆದರ್ಶ ಬ್ರಾಹ್ಮಣರ ಚಿತ್ರ ನಮ್ಮ ನಮ್ಮ ಜನಕ್ಕೆ ಅತ್ಯಗತ್ಯವೆಂದು ಲೇಖಕನ ಅಭಿಮತ.

ಬ್ರಾಹ್ಮಣನ ಇಂದಿನ ಪರಿಸ್ಥಿತಿಯನ್ನು ಯೋಚಿಸುವಾಗ ಒಂದೆರಡು ವಿಷಯಗಳು ತನ್ನ ಮನಸ್ಸಿನ ಮೇಲೆ ಹೊಳೆದಿವೆ. ಬ್ರಾಹ್ಮಣ್ಯ ಹುಟ್ಟನಿಂದ ಸಾಧಿಸತಕ್ಕುದಲ್ಲ – ಗುಣದಿಂದಲೇ ಅದು ಸಾಧ್ಯವಾಗಬೇಕು. ಬ್ರಾಹ್ಮಣೇತರ ವರ್ಗದಲ್ಲಿ ಅನೇಕ ಸದ್ಬ್ರಾಹ್ಮಣರನ್ನು ನಾನು ಕಂಡಿದ್ದೇನೆ. ತಮ್ಮ ಋಜುಜೀವನದಿಂದ ಬ್ರಾಹ್ಮಣರಾಗಿ ಬಾಳುತ್ತಿರುವ ಮುಸ್ಲಿಮ, ಕ್ರೈಸ್ತರನ್ನು ನಾನು ಬಲ್ಲೆ. ನಾನು ಈ ಕಾದಂಬರಿಯಲ್ಲಿ ಎತ್ತಿ ಹಿಡಿಯುತ್ತಿರುವುದು **ಬ್ರಾಹ್ಮಣನನ್ನಲ್ಲ – ಬ್ರಾಹ್ಮಣ್ಯವನ್ನು.** ಬ್ರಾಹ್ಮಣ ಗುಣವನ್ನು ರಕ್ತಗತವಾಡಿಕೊಳ್ಳದಿರುವ ಯಾವನೂ ಬ್ರಾಹ್ಮಣ ಶಬ್ದಕ್ಕೆ ಅರ್ಹನಲ್ಲ.

ಈ ಆದರ್ಶ ದೃಷ್ಟಿಯಿಂದ ಬ್ರಾಹ್ಮಣರ ಸಂಖ್ಯೆ ನೂರಕ್ಕೆ ನಾಲ್ಕಲ್ಲ; ಅದಕ್ಕೂ ಬಹಳ ಕಡಿಮೆಯಾಗಿದೆ. ಭಗವಂತ ಗೀತೆಯಲ್ಲಿ ಹೇಳಿದ ಸಂದೇಶ ಬ್ರಾಹ್ಮಣ ಮರೆತ. (ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ) ಬ್ರಾಹ್ಮಣ ತನ್ನ ನಿಸರ್ಗಪಥವನ್ನು ಬಿಟ್ಟು ವೈಶ್ಯ, ಶೂದ್ರ ವೃತ್ತಿಯನ್ನವಲಂಬಿಸಿದ. ಅದೇ ಅವನ ಪತನದ ಹೇತುವಾಯಿತು. ಬ್ರಾಹ್ಮಣ ಹೇಗೆ ತನ್ನ ಸಹಜಪ್ರವೃತ್ತಿಯನ್ನು ಬಿಟ್ಟು ಆಶೆಯ ಶಿಶುವಾಗಿ ತನ್ನ ಪತನ ತಂದುಕೊಂಡನೊ ಇಂದು ಇತರ ವರ್ಣದವರೂ ಅದೇ ತಪ್ಪುದಾರಿ ತುಳಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮ ಸಹಜವೃತ್ತಿಗಳನ್ನು ತೊರೆದು ಆಧುನಿಕ ಶಿಕ್ಷಣದ ಮೊಬ್ಬಿಗೆ ಬಿದ್ದು, ಸರ್ಕಾರಿ ಕೆಲಸದ ಮೃಗಜಲದ ಹಿಂದೆ ಓಡುತ್ತಿದ್ದಾರೆ.

ಯಾಜ್ಞವಲ್ಕನಂಥ ಬ್ರಾಹ್ಮಣನನ್ನೂ, ಶ್ರೀ ರಾಮಚಂದ್ರನಂಥ ಕ್ಷತ್ರಿಯನ್ನೂ ಚಂದನದಾಸನಂಥ ವೈಶ್ಯನನ್ನು, ರೈಕ್ವನಂಥ ಶೂದ್ರನನ್ನು ಯಾವ ಶಕ್ತಿಯೂ ಅಲುಗಾಡಿಸಲಾರದು. ತನ್ನ ವೃತ್ತಿಯನ್ನೇ ರೂಢಿಸಿಕೊಂಡು, ಅದರಲ್ಲಿಯೇ ಸಂಪೂರ್ಣ ಸಿದ್ಧಿಯನ್ನು ದೊರಕಿಸಿಕೊಂಡು, ಅದನ್ನು ಲೋಕಕಲ್ಯಾಣಕ್ಕೆ ಬಳಸುವ ಮೊಚ್ಚೆಗಾರ ಮಹಾ ಬ್ರಾಹ್ಮಣನಷ್ಟೇ ಹಿರಿಯ – ಅವನನನ್ನೇ ಶ್ರೀಕೃಷ್ಣ 'ಯೋಗಿ' ಎಂದು ಕರೆದಿರುವುದು.

ಈ ಲೇಖಕ ಓದುಗರ ಮುಂದಿಟ್ಟಿರುವ ಆದರ್ಶವನ್ನು ಪರಿಗ್ರಹಿಸಬೇಕು. ಲೇಖಕನ ಮನಸ್ಸಿನಲ್ಲಿ ಸ್ವಪ್ನಾವಸ್ಥೆಯಲ್ಲಿಯೂ ಸುಳಿಯದಿರುವ ಜಾತಿ, ಮತ, ವರ್ಣ, ವರ್ಗಗಳ ಕೀಳು–ಮೇಲು ಭಾವನೆಯನ್ನು ಯಾರೂ ಆಪಾದಿಸಬಾರದೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ಕಾದಂಬರಿಯನ್ನು ಪ್ರಕಟಿಸಿದ ಆನಂದ್ ಬ್ರದರ್ಸ್ ಕಂಪೆನಿಯವರಿಗೂ, ಲಕ್ಷಣವಾಗಿ ಅಚ್ಚುಮಾಡಿಕೊಟ್ಟಿರುವ ಉಷಾ ಪ್ರೆಸ್ ಒಡೆಯರಿಗೂ ನನ್ನ ನೆನಕೆ ಸಲ್ಲುತ್ತದೆ.

"ಅನ್ನಪೂರ್ಣ"
ವಿಶ್ವೇಶ್ವರಪುರಂ
ಬೆಂಗಳೂರು ನಗರ
೨೬ ಜೂನ್, ೧೯೫೦

ಅ. ನ. ಕೃಷ್ಣರಾಯ.

ಮುಯ್ಯಿಗೆ ಮುಯ್ಯಿ

೧

ಬೆಳಿಗ್ಗೆ ಶಾಸ್ತ್ರಿಗಳು ಏಳುತ್ತಿದ್ದುದು ಐದು ಗಂಟೆಗೆ. ಅವರಿಗಿಂತ ಅರ್ಧಗಂಟೆ ಮುಂಚಿತವಾಗಿ ಸೀತಮ್ಮ ಏಳುತ್ತಿದ್ದಳು. ಶಾಸ್ತ್ರಿಗಳು ಮುಖ ತೊಳೆದುಕೊಂಡು ಕೆರೆಯಕಡೆ ಹೋಗಿ, ಹಿಂದಿರುಗಿಬರುವಾಗ ಹೂಗಳ ನ್ನಾಯ್ದು ತರುತ್ತಿದ್ದರು. ಆವೇಳೆಗೆ ಸೀತಮ್ಮ ನೀರುಕಾಸಿ, ತಾನು ಅರೆ ಗಾದ ನೀರಿನಲ್ಲಿ ಸ್ನಾನಮುಗಿಸಿ, ದೇವರ ಪಾತ್ರೆಗಳನ್ನೆಲ್ಲಾ ತೊಳೆದಿಟ್ಟು ದೇವರ ದೀಪಕ್ಕೆ ಎಣ್ಣೆಹಾಕಿ, ಪೂಜೆಗೆ ಬೇಕಾಗುವ ಸಾಮಾನುಗಳನ್ನೆಲ್ಲಾ ಅಣಿಮಾಡಿಡುತ್ತಿದ್ದಳು.

ಶಾಸ್ತ್ರಿಗಳು ಮನೆಗೆ ಬಂದೊಡನೆಯೇ ಸ್ನಾನಮಾಡಿ ಮಡಿಪಂಚೆ ಯುಟ್ಟು, ವಿಭೂತಿ ಧರಿಸಿ ಪೂಜೆಗೆ ಕೂಡುತ್ತಿದ್ದರು. ಪೂಜೆಮುಗಿಯುವ ಹೊತ್ತಿಗೆ ಒಂಭತ್ತು ಗಂಟೆಯಾಗುತ್ತಿತ್ತು. ತಂದೆ ಪೂಜೆ ಮುಗಿಸುವಷ್ಟರಲ್ಲಿ ವಿಶ್ವೇಶ್ವರಶಾಸ್ತ್ರಿ ಸ್ನಾನ ಸಂಧ್ಯಾವಂದನೆಮಾಡಿ ಬಂದು, ತಂದೆಯ ಜತೆ ಪೂಜೆಗೆ ಕೂಡುತ್ತಿದ್ದ.

ಪೂಜೆ ಮುಗಿಯುತ್ತ ಬಂದಿದ್ದರೂ ಸಾಂಬ ಏಳುವ ಲಕ್ಷಣ ಕಾಣ ಬರುತ್ತಿರಲಿಲ್ಲ. ಮಂಗಳಾರತಿ ಸಮೀಪಸುತ್ತಬಂದಂತೆ ಸೀತಮ್ಮನ ಧಾವಂತ

ಹೆಚ್ಚಾಗುತ್ತಿತ್ತು. ಮೂರು ನಾಲ್ಕುಸಲ ಸಾಂಬನನ್ನೆಬ್ಬಿಸಿ ಬರುತ್ತಿದ್ದಳು. ಸಾಂಬ ' ಹೂ – ಎದ್ದೆ ' ಎಂದು ಮತ್ತೆ ಬಲವಾಗಿ ಮುಸುಕುಬಿಗಿಯುತ್ತಿದ್ದ. ಮಂಗಳಾರತಿ ಗಂಟಾನಾದ ಕಿವಿಯಮೇಲೆ ಬಿದ್ದೊಡನೆಯೇ ಸಾಂಬ ಸ್ನಾನ ಗೃಹಕ್ಕೆ ಓಡಿ, ಸ್ನಾನ ಆಯಿತು ಎನ್ನಿಸಿ ವಿಭೂತಿ ಧರಿಸಿ ಸಂಧ್ಯಾವಂದನೆಗೆ ಪುರುಸತ್ತಿಲ್ಲವೆಂದು ಆಚಮನ ಮುಗಿಸಿ ಮಂಗಳಾರತಿ ತೆಗೆದುಕೊಳ್ಳುವುದಕ್ಕೆ ಓಡಿಬರುತ್ತಿದ್ದ.

ಶಾಸ್ತ್ರಿಗಳು ಮಗನನ್ನು ನೋಡಿ ನಕ್ಕು ಅವನಿಗೆ ಮಂಗಳಾರತಿ ಕೊಡುತ್ತಿದ್ದರು. ಸೀತಮ್ಮನೂ ಬಂದು ಮಂಗಳಾರತಿ ಸ್ವೀಕರಿಸುತ್ತಿದ್ದರು.

ಪೂಜೆಯ ಕಾರ್ಯ ಮುಗಿದಮೇಲೆ ನಡುಮನೆಯಲ್ಲಿ ಸಾವಿತ್ರಿ ಬಾಳೆಲೆಯನ್ನೋ, ಮುತ್ತುಗದೆಲೆಯನ್ನೋ ಹಾಕಿ ತಂದೆ ಮಕ್ಕಳಿಗೆ ಉಪಹಾರ ನೀಡುತ್ತಿದ್ದಳು.

ತಾಲೀಪಿಟ್ಟು ಮೊಸರು, ಒಗ್ಗರಣೆ ಅವಲಕ್ಕಿ ಮೊಸರು, ಹುರಿಟ್ಟು, ಅಕ್ಕೀತರಿ ಉಪ್ಪಿಟ್ಟು ಯಾವದಾದರೊಂದು ಇರುತ್ತಿತ್ತು. ಅತಿಥಿಗಳು ಯಾರಾದರೂ ಇದ್ದರೆ ಅವರನ್ನೂ ಜತೆಗೆ ಕರೆಯುತ್ತಿದ್ದರು. ತಂದೆ ಮಕ್ಕಳು ಪುಷ್ಕಳವಾಗಿ ಉಪಹಾರ ಮುಗಿಸಿದಮೇಲೆ ಸೀತಮ್ಮ ಮನೆಯಲ್ಲಿ ಕರೆದು ಕಾಸಿದ ಹಸುವಿನ ಹಾಲನ್ನು ಕುಡಿಯುವುದಕ್ಕೆ ಕೊಡುತ್ತಿದ್ದಳು. ತಂದೆ ಮಕ್ಕಳು ತಮ್ಮ ತಮ್ಮ ಕೆಲಸದಮೇಲೆ ಹೋಗುತ್ತಿದ್ದರು.

ಸೀತಮ್ಮ ಅತ್ತೆಯ ಮನೆಗೆ ಬಂದು ಹತ್ತುವರ್ಷಗಳಾಗಿತ್ತು. ಮೊದಲು ನಾಲ್ಕುವರ್ಷ ಅತ್ತೆಯ ಕೈಯಲ್ಲಿ ಚೆನ್ನಾಗಿ ನುರಿತು ಅವರಿಂದಲೇ ಶಹಭಾಸ್‌ಗಿರಿ ಪಡೆದಿದ್ದಳು. ಶಾಸ್ತ್ರಿಗಳ ಹೆಂಡತಿ ತೀರಿಕೊಂಡಮೇಲೆ ಮನೆಯ ಸಮಸ್ತ ಜವಾಬ್ದಾರಿಯೂ ಸೀತಮ್ಮನ ಮೇಲೆ ಬಿತ್ತು. ಮಾವನವರ, ಗಂಡನ, ಮೈದುನನ ಯೋಗಕ್ಷೇಮ; ಅತಿಥಿ ಅಭ್ಯಾಗತರ ಸತ್ಕಾರ; ಮನೆಗೆ ಬರುವ ದವಸ ಧಾನ್ಯದ ಶೇಖರಣೆ; ಮನೆಯಲ್ಲಿ ಕಟ್ಟಿದ ಹಸು, ಎಮ್ಮೆ, ಎತ್ತುಗಳ ಉಸ್ತುವಾರಿ ಎಲ್ಲವನ್ನೂ ಅವಳೇ ನೋಡಿಕೊಂಡುಹೋಗುತ್ತಿದ್ದಳು. ಈ ಪ್ರಪಂಚ ಬಿಟ್ಟು ಬೇರೆ ಪ್ರಪಂಚ ಅವಳು ಕಾಣಳು. ಅವಳ ಪ್ರಪಂಚದಲ್ಲಿ ಅವಳಿಗೆ ಅಮಿತಾನಂದ, ಶಾಂತಿ ಲಭಿಸಿತ್ತು.

ಶಾಸ್ತ್ರಿಗಳು ಸಂಜೆಗೆ ಮನೆ ತಲುಪಿದೊಡನೆಯೇ ಪೂಜೆಗೆ ಕೂಡುವ ಮುಂಚೆ ಸೊಸೆಯನ್ನು ಕೂರಿಸಿಕೊಂಡು, ಆಕೆಯ ಕೈಯಲ್ಲಿ ರಾಮಾಯಣ ವನ್ನೋ ಭಾಗವತವನ್ನೋ ಓದಿಸುತ್ತಿದ್ದರು.

ರಾತ್ರಿ ವಿಶ್ವೇಶ್ವರ, ಸಾಂಬಶಾಸ್ತ್ರಿಗಳೊಂದಿಗೆ ಪೂಜೆಗೆ ಕುಳಿತು, ಪೂಜೆ ಮುಗಿದಮೇಲೆ ಅವರಿಬ್ಬರೂ ಊಟಕ್ಕೆ ಕೂಡುತ್ತಿದ್ದರು. ಶಾಸ್ತ್ರಿಗಳು ರಾತ್ರಿ ಊಟಮಾಡುತ್ತಿರಲಿಲ್ಲ!! ಅವರು ಒಪ್ಪತ್ತು ಊಟವಾರಂಭಿಸಿ ಆರು ವರ್ಷ ಗಳಾಗಿದ್ದುವು. ಪತ್ನಿ ತೀರಿಕೊಂಡ ದಿವಸದಿಂದಲೇ ಅವರು ಆ ವ್ರತ ಕೈಗೊಂಡರು. ನಿದ್ರೆಬರುವವರೆಗೆ ಮಕ್ಕಳೊಂದಿಗೆ ಹರಟೆಹೊಡೆಯುತ್ತಿದ್ದರು. ಮಕ್ಕಳು ಬೇಗಹೋಗಿ ಮಲಗಿದರೆ ತಾವೊಬ್ಬರೇ ಕುಳಿತು ತಮಗೆ ಬರು ತ್ತಿದ್ದ ಸಂಸ್ಕೃತ ಶ್ಲೋಕಗಳನ್ನು ಹೇಳಿಕೊಳ್ಳುತ್ತಿದ್ದರು.

ಹುಲ್ಲೂರು ನಾರಾಯಣಶಾಸ್ತ್ರಿಗಳ ಹೆಸರು ತಾಲ್ಲೂಕಿನಾದ್ಯಂತ ಪ್ರಸಿದ್ಧವಾಗಿತ್ತು. ಶಾಸ್ತ್ರಿಗಳ ನೇಮ, ನಿಷ್ಠೆ, ಪೂಜೆ, ಸತ್ಯಸಂಧತೆ, ಮನೆಮಾತಾಗಿತ್ತು. ರೈತರಿಂದ ಅಧಿಕಾರಿಗಳವರೆಗೆ ಶಾಸ್ತ್ರಿಗಳ ಬಗ್ಗೆ ನಿಸ್ಸೀಮ ಗೌರವಭಕ್ತಿಯನ್ನು ತಳೆದಿದ್ದರು.

ಶಾಸ್ತ್ರಿಗಳು ಬಹಳ ಅನುಕೂಲಸ್ಥರೇನೂ ಅಲ್ಲ. ಊರಮುಂದೆ ಒಂದು ಗದ್ದೆ, ಊರಿಗೆ ಎರಡುಮೈಲಿ ದೂರದಲ್ಲಿ ಒಂದು ಹೊಲ, ಅದರ ಬದಿಗೊಂದು ಸಣ್ಣತೋಟ, ಹುಲ್ಲೂರಿನ ಮನೆ ಇಷ್ಟೇ ಅವರ ಆಸ್ತಿ. ಮನೆಯಲ್ಲಿ ಎರಡು ಹಸು, ಒಂದು ಎಮ್ಮೆ, ಉಳುಮೆಗೆ ಒಂದು ಜತೆ ಎತ್ತು ಕಟ್ಟಿಕೊಂಡಿದ್ದರು.

ಪತ್ನಿ ತೀರಿಕೊಂಡಮೇಲೆ ಶುಭಾಶುಭ ಯಾವ ಕೆಲಸಕ್ಕೂ ಶಾಸ್ತ್ರಿಗಳು ಹೋಗುತ್ತಿರಲಿಲ್ಲ. ಅವರ ಮೊದಲನೆಯ ಮಗ ವಿಶ್ವೇಶ್ವರ ತಂದೆಯ ವೃತ್ತಿಯನ್ನೇ ಅವಲಂಬಿಸಿ ಮುಂದುವರಿಸಿದ್ದ. ಆಗಾಗ್ಗೆ ಸಿಕ್ಕುತ್ತಿದ್ದ ದಕ್ಷಿಣೆ ಪುಡಿಕಾಸನ್ನು ತಂದು ಹೆಂಡತಿಯ ಕೈಗೆ ಹಾಕುತ್ತಿದ್ದ. ಮದುವೆ ಮುಂಜಿ ಕಾಲಬಂದರೆ ವಿಶ್ವೇಶ್ವರ ಹತ್ತಾರು ರೂಪಾಯಿಗಳನ್ನು ಸಂಪಾದಿ ಸುತ್ತಿದ್ದ.

ಇಷ್ಟು ಆದಾಯದಲ್ಲಿ ಶಾಸ್ತ್ರಿಗಳು ನಡೆಸುತ್ತಿದ್ದ ಜೀವನ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಮನೆಗೆ ಯಾರು ಯಾವ ಹೊತ್ತಿನಲ್ಲಿ ಬಂದರೂ ಅವರಿಗೆ ತಿಂಡಿ, ತೀರ್ಥ, ಊಟಕೊಡದೆ ಶಾಸ್ತ್ರಿಗಳು ಕಳುಹಿಸುತ್ತಿರಲಿಲ್ಲ. ರೇವತಿ ನದೀಗೆ ಅಣೆಕಟ್ಟು ಹಾಕುವ ಕೆಲಸ ನಡೆದಿದ್ದಾಗ ಎಲ್ಲಾ ಇಂಜನೀಯರುಗಳೂ, ಓವರ್‌ಸೀಯರುಗಳೂ ಶಾಸ್ತ್ರಿಗಳ ಮನೆಯಲ್ಲಿಯೇ ಪ್ರಸಾದಕ್ಕೆ ಒಕ್ಕರಿಸುತ್ತಿದ್ದರು.

ಹುಲ್ಲೂರಿಗಾಗಲೀ, ಅಕ್ಕಪಕ್ಕದ ಸಂಪಿಗೆ, ಸಂತೇಹಳ್ಳಿ, ಒಡ್ಡರ ಬೈಲಿಗಾಗಲಿ ಕಾರ್ಯಾರ್ಥಿಗಳಾಗಿ ಬರುತ್ತಿದ್ದ ಅಮಲ್ದಾರರೂ, ಶೇಕದಾರರೂ, ಶಾನುಭೋಗರೂ ಶಾಸ್ತ್ರಿಗಳ ಮನೆಗೆ ನಿರ್ದಾಕ್ಷಿಣ್ಯವಾಗಿ ದಯಮಾಡಿಸಿ ಸುಗ್ರಾಸಭೋಜನಮಾಡಿ ಹೋಗುತ್ತಿದ್ದರು.

ಊಟಕ್ಕೆ ಒಬ್ಬರೇ ಕುಳಿತು ಶಾಸ್ತ್ರಿಗಳಿಗೆ ರೂಢಿಯೇ ಇಲ್ಲ. ಒಂದೊಂದು ದಿನ ಯಾರೂ ಅತಿಥಿಗಳು ಬರದಿದ್ದರೆ, ಎಲೆಯ ಮೇಲೆ ಅನ್ನ ಬಡಿಸಿದ್ದರೂ ಗಮನಿಸದೆ ತಲೆಬಾಗಿಲಿನಲ್ಲಿ ನಿಂತು ನಿರೀಕ್ಷಿಸುವರು. ಯಾರೂ ಬರದಿದ್ದರೆ ನಿಟ್ಟುಸಿರುಬಿಟ್ಟು

"ಇವತ್ತು ವಿಶ್ವೇಶ್ವರ ಯಾಕೋ ನಮ್ಮಮೇಲೆ ಕೋಪಮಾಡಿಕೊಂಡಿದ್ದಾನೆ ಸೀತಮ್ಮಾ. ಯಾರೂ ಬರುವಹಾಗೆ ಕಾಣಲಿಲ್ಲ."

ಎನ್ನುತ್ತಾ ಊಟಕ್ಕೆ ಕೂಡುತ್ತಿದ್ದರು. ಶಾಸ್ತ್ರಿಗಳ ಗಂಟಲಲ್ಲಿ ಅಂದು ಅನ್ನ ಇಳಿಯುತ್ತಿರಲಿಲ್ಲ.

ಶಾಸ್ತ್ರಿಗಳ ಜೀವನ ನಿತ್ಯತೃಪ್ತಜೀವನವಾಗಿತ್ತು. ಅದರಲ್ಲಿ ಯಾವ ಕೊರತೆ, ಕುಂದು, ಕೊಂಕು, ಕಶ್ಮಲವೂ ಇರಲಿಲ್ಲ. ದೇವತಾಚರಣೆ, ಅತಿಥಿಸತ್ಕಾರಗಳಲ್ಲಿ ಅವರ ಆಯುಷ್ಯ ಸವೆಯುತ್ತಿತ್ತು. ಆದರೆ ಶಾಸ್ತ್ರಿಗಳ ಮನಸ್ಸಿನಲ್ಲಿ ಎರಡು ಚಿಂತೆ ಮೂಡಿ ಅವರನ್ನು ಕೊರಗಿಸುತ್ತಿತ್ತು.

ಸೀತಮ್ಮ ಗಂಡನ ಮನೆಗೆ ಬಂದು ಆರು ವರ್ಷಗಳಾಗಿದ್ದರೂ ಅವಳಿಗೆ ಮಕ್ಕಳಾಗಿರಲಿಲ್ಲ. ಮೊಮ್ಮಗನ ಮುಖ ಕಾಣುವ ಸುಯೋಗ ತಮಗಿಲ್ಲವೇ ಎಂದು ಶಾಸ್ತ್ರಿಗಳು ವ್ಯಸನಪಡುತ್ತಿದ್ದರು. ವಿಶ್ವೇಶ್ವರನಿಗೂ ಆ ಚಿಂತೆಯಿರದಿರಲಿಲ್ಲ.

ಒಂದು ದಿನ ವಿಶ್ವೇಶ್ವರ ತುಮಕೂರಿಗೆ ಹೋಗಿ ಒಬ್ಬ ಲಾಯರ ಮನೆಯಲ್ಲಿ ಅನ್ನಪ್ರಾಶನಮಾಡಿಸಿ ಬಂದ. ಅಲ್ಲಿನ ವೈಭವ, ಅನ್ನಪ್ರಾಶನ ಮಾಡಿಸಿಕೊಂಡ ಮಗುವಿನ ಆಟಪಾಟ ವಿವರಿಸುತ್ತ ಹೆಂಡತಿಗೆ

"ಕಂಡವರ ಮಕ್ಕಳನ್ನು ನೋಡಿ ಸಂತೋಷಪಡುವುದಷ್ಟೇ ನನ್ನ ಹಣೆಯಲ್ಲಿ ಬರೆಯಿತು"

ಎಂದ. ಗಂಡನ ಮಾತು ಸೀತಮ್ಮನ ಕರುಳು ಕುಕ್ಕಿತು. ಹೆಣ್ಣು ಜೀವ ಗಂಡಸಿಗಿಂತ ಹೆಚ್ಚಾಗಿ ಅದು ಮಗುವಿಗಾಗಿ ಬಯಸುತ್ತಿತ್ತು. ತನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನಿಂದಲೇ ಮುಂದೆ ಶಾಸ್ತ್ರಿಗಳ ವಂಶ ಬೆಳೆಯ ಬೇಕೆಂಬುದನ್ನೂ ಸೀತಮ್ಮ ಬಲ್ಲಳು. ಅದಕ್ಕೆ ಬೇಕಾದ ವ್ರತ, ಪೂಜೆ ಗಳನ್ನೆಲ್ಲಾ ಭಕ್ತಿ ನಿಷ್ಠೆಗಳಿಂದ ಮಾಡಿದ್ದಳು. ಆದರೆ ವಿಶ್ವೇಶ್ವರ ಕಣ್ಣು ಬಿಟ್ಟು ನೋಡಿರಲಿಲ್ಲ.

ಗಂಡ ಆಡಿದ ನೋವಿನ ಮಾತು ಕೇಳಿ ಸೊಂದರೂ ತೋರಿಸಿಕೊಳ್ಳದೆ ಸೀತಮ್ಮ

"ಯಾಕೆ ಹೀಗನ್ನುವಿರಿ?" ಎಂದಳು.

"ನಾನು ಹೇಳಿದ್ದು ಸುಳ್ಳೇ?"

"ಸುಳ್ಳು ಎಂದು ಯಾರು ಅಂದರು"

"ಬೇಡಬೇಡವೆಂದವರಿಗೆ ಮಕ್ಕಳಾಗುತ್ತವೆ. ಬೇಕು ಎಂದು ಬಯಸುವವರಿಗೆ ಆಗುವುದಿಲ್ಲ. ದೈವಲೀಲೆ ಬಹಳ ವಿಚಿತ್ರ".

ದೇವರು ಕೊಡುವಕಾಲಕ್ಕೆ ಕೊಟ್ಟೇಕೊಡುತ್ತಾನೆ. ಆವರೆಗೆ ನಾವು ಸಮಾಧಾನ ತಂದುಕೊಳ್ಳಬೇಕು. ಈಗ ನಮಗಾಗಿರುವ ಕೊರತೆಯಾದರೂ ಏನು? ಸಾಂಬ ನನ್ನ ಮಗು – ನಿಮ್ಮ ಮಗುವಲ್ಲವೇ?"

ಎಂದಳು. ಹೆಂಡತಿಯ ಮನಸ್ಸಿನ ಸಂಸ್ಕೃತಿ ಕಂಡು ವಿಶ್ವೇಶ್ವರ ಬೆರಗಾದ. ತಾನು ಅನುಚಿತ ಮಾತಾಡಿದೆನೆಂದು ವಿಷಾದಪಟ್ಟುಗೊಂಡ.

ಸಾಂಬನಿಗೆ ಸೀತಮ್ಮ ಅತ್ತಿಗೆಯಾಗಿದ್ದಳು. ಅದಕ್ಕೂ ಹೆಚ್ಚಾಗಿ ತಾಯಿಯಾಗಿದ್ದಳು. ತಾಯಿ ತೀರಿಕೊಂಡಾಗ ಸಾಂಬನ ವಯಸ್ಸು ಹತ್ತು. ಅಂದಿನಿಂದ ಅವನ ಯೋಗಕ್ಷೇಮ ಹೆತ್ತತಾಯಿಗಿಂತಲೂ ಹೆಚ್ಚಾಗಿ ಸೀತಮ್ಮ

ನೋಡಿಕೊಂಡು ಬಂದಿದ್ದಳು. ವಾರಕ್ಕೊಮ್ಮೆ, ಎರಡುಸಲವಾದರೂ ಅವನಿಗೆ ತಾನೇ ಎಣ್ಣೆ ಒತ್ತಿ ಅಭ್ಯಂಜನಸ್ನಾನ ಮಾಡಿಸುತ್ತಿದ್ದಳು. ಅವನು ಬಯಸುತ್ತಿದ್ದ ತಿಂಡಿಯ ಸಾಮಾನನ್ನು ಬೇಸರವಿಲ್ಲದೆ ಮಾಡಿಕೊಡುತ್ತಿದ್ದಳು. ಅವನು ಮನೆಗೆಬರುವುದು ಅರ್ಧಗಂಟೆ ತಡವಾದರೆ ತಲೆಬಾಗಿಲಿಗೆ ಹತ್ತುಸಾರಿ ಹೋಗಿ ಹೋಗಿ ದಾರಿನೋಡಿ ಬರುವಳು.

ಸಾಂಬನಿಗೂ ಅತ್ತಿಗೆಯನ್ನು ಕಂಡರೆ ಪಂಚಪ್ರಾಣ. ಆಕೆಯ ಹಿಂದೆ ಓಡಿಯಾಡಿಕೊಂಡು, ಆಕೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಟ್ಟ ಹೊರತು ಅವನಿಗೆ ಸಮಾಧಾನವಿಲ್ಲ. ಅತ್ತಿಗೆ ಹಾಲು ಕರೆಯುವುದಕ್ಕೆ ಹೋದರೆ ಸಾಂಬ ಜತೆಗಿರಬೇಕು. ಅತ್ತಿಗೆ ಸಂಡಿಗೆಯಿಡುವುದಕ್ಕೆ ಹೋದರೆ ಜತೆಗೆ ಸಾಂಬ ಇರಬೇಕು. ಹೊಳೆಯಿಂದ ಅತ್ತಿಗೆಯ ಅಡಿಗೆಯ ಕೆಲಸಕ್ಕೆ ನೀರು ತಂದುಕೊಡುತ್ತಿದ್ದವನೇ ಸಾಂಬ. ಸಂಜೆ ಅತ್ತಿಗೆಯೇ ತಲೆಬಾಚಿ, ಗಂಟುಹಾಕಬೇಕು.

ತಾಯಿಯ ನೆನಪು ಸಾಂಬನಿಗೆ ಸ್ಪಷ್ಟವಾಗಿತ್ತು. ಅವರು ಸಾಯುವ ದಿನ ಸಾಂಬನನ್ನು ಕರೆದು 'ನಿನ್ನ ಅತ್ತಿಗೆಯನ್ನೇ ಇನ್ನುಮೇಲೆ ತಾಯಿ ಎಂದು ತಿಳಿದುಕೊಳ್ಳಪ್ಪಾ' ಎಂದು ಹೇಳಿದ್ದರು. ಅತ್ತಿಗೆಗೂ ಅದೇ ಸಂದೇಶವನ್ನಿತ್ತಿದ್ದರು. ಸಾಂಬ, ಸೀತಮ್ಮ ಕರ್ತವ್ಯದೃಷ್ಟಿಯಿಂದ ಮಾತ್ರವೇ ಅಲ್ಲದೆ ಹಾರ್ದಿಕವಾಗಿ ತಾಯಿ, ಮಗನ ಸಂಬಂಧ ಬೆಳಸಿಕೊಂಡುಬಂದಿದ್ದರು.

ಸೀತಮ್ಮ ತಿಂಗಳಿಗೆ ಮೂರು ದಿವಸ ಹೊರಗೆ ಕುಳಿತಾಗ ಅಡಿಗೆಯ ಸರದಿ ಸಾಂಬನಿಗೆ ಬೀಳುತ್ತಿತ್ತು. ಪ್ರತಿಯೊಂದಕ್ಕೂ ಒಳಗೂ ಹೊರಗೂ ಓಡಾಡಿ, ಎಲ್ಲಕ್ಕೂ ಅತ್ತಿಗೆಯ ಸಲಹೆ ತೆಗೆದುಕೊಂಡು ಸೊಗಸಾಗಿ ಅಡಿಗೆ ಮಾಡುತ್ತಿದ್ದ. ತಂದೆಗೂ, ಅಣ್ಣನಿಗೂ ಊಟ ಬಡಿಸಿಯಾದಮೇಲೆ ಅತ್ತಿಗೆಗೆ ಬಡಿಸಿಯಲ್ಲದೆ ತಾನು ಊಟಮಾಡುತ್ತಿರಲಿಲ್ಲ.

"ಇದೇನೋ ಅನ್ಯಾಯ ಸಾಂಬ" ಎಂದು ಸೀತಮ್ಮ ಕೇಳುತ್ತಿದ್ದಳು.

"ಏನು ಅನ್ಯಾಯಮಾಡಿದೆ ಅತ್ತಿಗೆ"

"ನೀನೂ ಊಟಮಾಡಿ ಆಮೇಲೆ ನನಗೆ ಬಡಿಸಿದರಾಗದೆ ?"

"ಪ್ರತಿದಿನ ಎಲ್ಲರ ಊಟವಾದಮೇಲೇ ನಿನ್ನ ಊಟ– ಒಂದು ದಿನ ವಾದರೂ ಬೇಗ ಆಗಬಾರದೇ?"

"ನೀನು ಹೀಗೆ ಮಾಡಿದರೆ ನನಗೆ ತುಂಬ ಕೋಪಬರುತ್ತದಪ್ಪಾ."

"ಕೋಪಮಾಡಿಕೊಳ್ಳಬೇಡ ಅತ್ತಿಗೆ."

ಎಂದು ಆಕೆ ಊಟ ಮುಗಿಸುವವರೆಗೆ ಎದುರಿಗೆ ಕುಳಿತಿದ್ದು ಉಪ ಚಾರಮಾಡುತ್ತಿದ್ದ.

ಸಾಂಬನನ್ನು ನೋಡಿ ನಾರಾಯಣಶಾಸ್ತ್ರಿಗಳು ನಿಟ್ಟುಸಿರ್ಗರೆಯು ತ್ತಿದ್ದರು. ಅವನು ಯಾವ ಕೆಲಸಮಾಡುವುದಕ್ಕೂ ಹಿಂದೆಮುಂದೆ ನೋಡು ತ್ತಿರಲಿಲ್ಲ. ದನದ ಕೊಟ್ಟಿಗೆಯನ್ನು ಗುಡಿಸಿ, ಸಾರಿಸಿ, ಸಗಣಿ ಎತ್ತಿಹಾಕಿ ಸ್ವಚ್ಛಮಾಡುತ್ತಿದ್ದ. ಊರಹೊರಗೆ ಹೋಗಿ ಸೌದೆ ತರುತ್ತಿದ್ದ. ಹೊಲದ ಕಡೆ ಹೋದರೆ ರೈತರ ಜತೆಗೂ ದುಡಿಯುತ್ತಿದ್ದ.

ಸಾಂಬ ಮೈಗಳ್ಳನೂ ಆಗಿರಲಿಲ್ಲ. ದಡ್ಡನೂ ಆಗಿರಲಿಲ್ಲ. ಆದರೂ ಅವನಿಗೆ ಶಾಸ್ತ್ರಪಾಠ ಹೇಳಿಕೊಡುವ ಶಾಸ್ತ್ರಿಗಳ ಆಕಾಂಕ್ಷೆ ಈಡೇರಿರಲಿಲ್ಲ.

"ಶ್ರೋತ್ರಿಯರ ಮನೆ ಹುಡುಗ ಒಂದು ಸಂಧ್ಯಾವಂದನೆ ಮಂತ್ರ ಕೂಡ ಸರಿಯಾಗಿ ಬರದಲ್ಲೋ ಸಾಂಬ ನಿನಗೆ"

ಎಂದು ಶಾಸ್ತ್ರಿಗಳು ಹೇಳುತ್ತಿದ್ದರು. ತಂದೆಯ ಮಾತಿಗೆ ಸಾಂಬ ನಕ್ಕು ಸುಮ್ಮನಾಗುತ್ತಿದ್ದ.

ಊರಿನ ಪಟೇಲ ಪುಟ್ಟೇಗೌಡ ಸಂಜೆ ಶಾಸ್ತ್ರಿಗಳ ಮನೆಗೆ ಬಂದು, ಅವರ ಜಗುಲಿಯ ಮೇಲೆ ಕುಳಿತು ಶಾಸ್ತ್ರಿಗಳ ಜತೆ ಊರಿನ ಸಮಾಚಾರ ವನ್ನೆಲ್ಲಾ ಮಾತನಾಡಿ ಹೋಗುತ್ತಿದ್ದ. ಅವನು ಯಾವಾಗಲಾದರೂ ಸಾಂಬನ ಸಮಾಚಾರವೆತ್ತಿ ಕೇಳುತ್ತಿದ್ದ.

"ಸಾಂಬಪ್ಪನ್ನ ಏನು ಮಾಡ್ತೀರಿ ಶಾಸ್ತ್ರಿಗಳೇ?"

"ಏನುಮಾಡಲಪ್ಪಾ. ನನಗೊಂದೂ ತೋರದಾಗಿದೆ."

"ಚಿಕ್ಕ ಅಯ್ನೋರ ಅಂಗೆ ಅವರೂ ಎಲ್ಲಾ ಕಲ್ತುಕೊಳ್ಳಾಕಿಲ್ವಾ?"

"ಅವನಿಗೆ ಆಕಡೆ ಲಕ್ಷ್ಯವೇ ಇಲ್ಲವಲ್ಲಾ. ಅವನ ವಯಸ್ಸಿಗೆ ವಿಶ್ವೇಶ್ವರನಿಗೆ ಎಲ್ಲಾ ಮಂತ್ರ ಪಾಠವಾಗಿತ್ತು. ಸಾಂಬನಿಗೆ ಸಂಧ್ಯಾವಂದನೆ ದೇವರ ಪೂಜೆ ಮಂತ್ರ ಕೂಡ ಬರುವುದಿಲ್ಲ."

"ಯಾಕ್ಸಾಮಿ ಅವರೇನೂ ದಡ್ಡರಲ್ಲ. ಬಹಳ ಚೂಟಿಯಾಗವ್ರೆ."

"ಚೂಟಿಗೇನೂ ಕಡಿಮೆಯಿಲ್ಲ. ಅವನು ಅಡಿಗೆ ಮಾಡುತ್ತಾನೆ ನೀನು ನೋಡಿಲ್ಲ—ಘನವಾಗಿ ಮಾಡುತ್ತಾನೆ. ನಾಲ್ಕು ಆಳಿನ ಕೆಲಸ ಒಬ್ಬನೇ ನಿರ್ವಹಿಸುತ್ತಾನೆ. ಆದರೆ ವಿದ್ಯೆ ಕಡೆ ಮಾತ್ರ ಲಕ್ಷ್ಯವಿಲ್ಲ. ಅವನ ಕರ್ಮ ಹೇಗಿದೆಯೋ ?"

"ಏನಾದರೂ ಆಗಲಿ ನೀವು ಪುಣ್ಯವಂತರು ಬುದ್ಧಿ."

"ಯಾಕಪ್ಪಾ."

"ರಾಮ ಲಕ್ಷ್ಮಣರಂತ ಮಕ್ಕಳು – ಸೀತಮ್ಮನಂತ ಸೊಸೆ – ಇದಕ್ಕಿಂತ ಇನ್ನೇನುಬೇಕು ನನ್ನೊಡೆಯಾ."

"ನಿಜ ಗೌಡ. ನನ್ನ ವಿಶ್ವೇಶ್ವರ ನನಗೇನೂ ಕಡಿಮೆಮಾಡಿಲ್ಲ. ಸಾಂಬನ ಚಿಂತೆ ಒಂದು ಹೋದರೆ ನಾನು ಪರಮಸುಖಿ."

"ನಿಮ್ಮ ಸತ್ಯ ಏನೇನೋ ಮಾಡ್ತೈತೆ – ಸಾಂಬಪ್ಪನಿಗೆ ಇದ್ಯಾ ಕೊಡಾಕಿಲ್ವಾ."

ಎಂದು ಪುಟ್ಟೇಗೌಡ ಸಮಾಧಾನ ಹೇಳುತ್ತಿದ್ದ.

ಪೂರ್ವಾಪರ ವಿಧಿಗಳನ್ನು ಕಣ್ಣಿಂದಲಾದರೂ ನೋಡಿರಲಿ ಎಂದು ತಾನು ಹೋದಲ್ಲಿಗೆ ಕೆಲವು ಸಲ ವಿಶ್ವೇಶ್ವರ, ಸಾಂಬನನ್ನೂ ಕರೆದುಕೊಂಡು ಹೋಗುತ್ತಿದ್ದ.

ದೂರದ ಹಳ್ಳಿ ಊರುಗಳ ಜನ ವಿಶ್ವೇಶ್ವರನನ್ನು ಕರೆಸಿಕೊಳ್ಳುತ್ತಿದ್ದರು. ಊರಿನ ಪುರೋಹಿತ ತನ್ನನ್ನು ಬಿಟ್ಟು ಬೇರೆ ಊರಿನ ವಿಶ್ವೇಶ್ವರನನ್ನು ಕರೆಯುತ್ತಾರೆಂದು ಮೃತ್ಯುಂಜಯಶಾಸ್ತ್ರೀಗೆ ಕೋಪ. ನಾರಾಯಣಶಾಸ್ತ್ರಿಗಳಿಗೂ ಅವರ ಮಗನಿಗೂ ನಿತ್ಯ ಶಾಪಹಾಕುತ್ತಿದ್ದ. ಶಾಸ್ತ್ರಿಗಳ ಬಗ್ಗೆ ಯಾರಾದರೂ ಪ್ರಶಂಸೆಮಾಡಿದರೆ ಮೃತ್ಯುಂಜಯಶಾಸ್ತ್ರೀಗೆ ಮೈ ಉರಿಯುತ್ತಿತ್ತು.

ವಿಶ್ವೇಶ್ವರನ ಲೋಕಾದರಕ್ಕೆ ನಾರಾಯಣಶಾಸ್ತ್ರಿಗಳ ಶ್ರೋತ್ರೀಯತೆಯೇ ಕಾರಣವಾಗಿತ್ತು. ಮಗನಿಗೆ ಅವರು ಸ್ಪಷ್ಟವಾಗಿ ಹೇಳಿದ್ದರು:

"ನೋಡು ವಿಶ್ವೇಶ್ವರ. ವೈದೀಕರು ದುರಾಸೆಗೆ ಬಿದ್ದೇ ಬ್ರಾಹ್ಮಣಿಕೆ ಹಾಳಾಗಿಹೋಯ್ತು. ನೀನು ಯಾರ ಹತ್ತಿರವೂ ಕರಾರುಮಾಡಕೂಡದು. ಅವರು ಸಂತೋಷವಾಗಿ ಕೊಟ್ಟದ್ದನ್ನು ಸಂತೋಷವಾಗಿ ಸ್ವೀಕರಿಸು. ಏನೂ ಕೊಡಲಾಗದ ಬಡವರಿದ್ದರೆ ಅವರ ಕೆಲಸಕಾರ್ಯ ಸುಮ್ಮನೆ ಮಾಡಿಕೊಟ್ಟು ಬಾ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಲ್ಲ. ಹೇಗೋ ಜೀವನ ಕಳೆದುಹೋಗುತ್ತದೆ. ಇರುವ ನಾಲ್ಕು ದಿವಸ ಒಳ್ಳೆಯ ಬಾಳ್ವೆ ಮಾಡಿದರು, ಯಾರನ್ನೂ ಸುಲಿದು ತಿನ್ನಲಿಲ್ಲ ಎನ್ನಿಸಿಕೊಂಡರೆ ಸಾಕು."

ವಿಶ್ವೇಶ್ವರ ತಂದೆಯ ಆಜ್ಞೆಯನ್ನು ಚಾಚೂ ತಪ್ಪದೆ ಪರಿಪಾಲಿಸುತ್ತಿದ್ದ.

ಸಂತೇಹಳ್ಳಿ ನರಸಿಂಹಶಾಸ್ತ್ರಿಗಳ ವರ್ಷಾಬ್ಧಿಕ ಬಂತು. ಅವರ ಮಗ ತಮ್ಮಯ್ಯಶಾಸ್ತ್ರಿ ಹುಲ್ಲೂರಿಗೆ ಬಂದು ವಿಶ್ವೇಶ್ವರಶಾಸ್ತ್ರಿಯೇ ಶ್ರಾದ್ಧ ಮಾಡಿಸುವುದಕ್ಕೆ ಬರಬೇಕೆಂದು ಹೇಳಿ ಹೋಗಿದ್ದ.

ನರಸಿಂಹಶಾಸ್ತ್ರಿಗಳು ಅತ್ತಕಡೆ ಪ್ರಸಿದ್ಧರಾದ ಶ್ರೋತ್ರಿಯರೂ ಘನ ವಿದ್ವಾಂಸರೂ ಆಗಿದ್ದರು. ಅವರ ತ್ರಿಕಾಲಪೂಜೆ, ಅನುಷ್ಠಾನ ಉಪವಾಸ ವ್ರತಗಳನ್ನು ಕಂಡು ಜನ ಅವರನ್ನು ದೇವರಂತೆ ಪೂಜಿಸುತ್ತಿದ್ದರು.

ವಿಶ್ವೇಶ್ವರ ಬೆಳಿಗ್ಗೆ ಬೇಗ ಎದ್ದು, ಸಾಂಬನನ್ನೂ ಎಬ್ಬಿಸಿ ಸ್ನಾನ ಮಾಡಿ ಸಂತೇಹಳ್ಳಿಗೆ ಹೊರಟ. ಅಣ್ಣ ತಮ್ಮ ಇಬ್ಬರೂ ಬಾಯಿಗೆ ನೀರು ಕೂಡ ಹಾಕಿರಲಿಲ್ಲ.

ಅವರು ಹೋಗುವ ಹೊತ್ತಿಗೆ ತಮ್ಮಯ್ಯ ಸ್ನಾನಮಾಡಿ, ವೈದೀಕಕ್ಕೆ ಎಲ್ಲಾ ಅಣಿಮಾಡಿಬಿಟ್ಟು ಸಿದ್ಧವಾಗಿದ್ದ. ವಿಶ್ವೇಶ್ವರ ತಮ್ಮಯ್ಯನ ಮನೆ ಸಮೀಪದಲ್ಲಿದ್ದ ಇಳಿಯುವ ಭಾವಿಗೆ ಸ್ನಾನಕ್ಕೆ ಹೋದ. ತನ್ನ ಸ್ನಾನ ಮುಗಿಸಿ, ಒದ್ದೆಯ ಪಂಚೆಯುಟ್ಟು ಕೈಯಲ್ಲಿ ತಂದಿದ್ದ ಪಂಚೆಯನ್ನು ನೆನಸಿ ಬಿಸಿಲಿಗೆ ಹಾಕಿ ಅದು ಒಣಗುವುದನ್ನು ನೋಡುತ್ತ ನಿಂತಿದ್ದ.

ತುಂಡುಪಂಚೆಯುಟ್ಟು ಸಾಂಬನೂ ಸ್ನಾನಕ್ಕೆ ಇಳಿದ. ಈ ವೇಳೆಗಾಗಲೇ ಮಧ್ಯಾಹ್ನ ಸಮೀಪಿಸಿತ್ತು. ತಲೆಯಮೇಲೆ ಸೂರ್ಯ ಪ್ರಖರ

ವಾಗಿ ಪ್ರಜ್ವಲಿಸುತ್ತಿದ್ದ. ಸಾಂಬ ಕಿವಿ ಮೂಗು ಮುಚ್ಚಿಕೊಂಡು ಭಾವಿಯಲ್ಲಿ ಎರಡು ಮೂರುಸಾರಿ ಮುಳುಗೆದ್ದ. ಎದ್ದವನೇ ಸ್ಪಷ್ಟವಾಗಿ ದಕ್ಷಿಣಾಮೂರ್ತಿ ಸ್ತೋತ್ರ ಹೇಳಲಾರಂಭಿಸಿದ. ಪಂಚೆ ಒಣಗಿಸುತ್ತ ನಿಂತಿದ್ದ ವಿಶ್ವೇಶ್ವರ ಸಾಂಬನ ಧ್ವನಿ ಕೇಳಿ ಹತ್ತಿರಬಂದು ನೋಡಿದ. ಅವನ ಕಣ್ಣು ಕಿವಿ ಅವನೇ ನಂಬಲಾರದಾದ. ಸಾಂಬನಿಗೆ ಸ್ತೋತ್ರಪಾಠವಾಗಲಿ, ಮಂತ್ರಪಾಠವಾಗಲಿ ಆಗಿರಲಿಲ್ಲ. ಈ ಸ್ತೋತ್ರ ಅವನಿಗೆ ಹೇಗೆ ಬಂತೆಂದು ವಿಶ್ವೇಶ್ವರ ಆಶ್ಚರ್ಯಪಡುತ್ತಾ ನಿಂತ.

ಸಾಂಬ ಸ್ನಾನ ಮುಗಿಸಿ ಒದ್ದೆ ಪಂಚೆಯನ್ನುಟ್ಟೇ ಹೊರಗೆ ಬಂದು

"ವಿಶ್ವೇಶ್ವರಾ – ನಡೀ ಹೊತ್ತಾಯ್ತು, ಅಪರಾಹ್ನವಾಗುತ್ತಿದೆ"

ಎಂದು ಅಧಿಕಾರವಾಣಿಯಿಂದ ಹೇಳಿದ. ವಿಶ್ವೇಶ್ವರ ಅರೆಮೂಕನಾಗಿ ಅವನನ್ನನುಸರಿಸಿ ಮನೆಯ ಬಳಿಗೆ ಹೋದ.

ಸಾಂಬ ಒಂದು ಮಣೆ ಹಾಕಿಕೊಂಡು ಕುಳಿತು, ಲಕ್ಷಣವಾಗಿ ವಿಭೂತಿ ಧರಿಸಿ ಹತ್ತಿರದಲ್ಲಿದ್ದ ಪಂಚಪಾತ್ರೆ, ಉದ್ಧರಣೆ, ಅರ್ಘ್ಯಪಾತ್ರೆ ತೆಗೆದುಕೊಂಡು ಸಾಂಗವಾಗಿ ಸಂಧ್ಯಾವಂದನೆ ಮಾಡಿದ.

ವಿಶ್ವೇಶ್ವರ, ತಮ್ಮಯ್ಯ ಇಬ್ಬರೂ ಪರಮಾಶ್ಚರ್ಯಗೊಂಡರು. ಸಾಂಬನಲ್ಲಾಗಿದ್ದ ಬದಲಾವಣೆಗೆ ಅವರಿಗೆ ಕಾರಣ ಹೊಳೆಯಲಿಲ್ಲ. ಮನೆಯ ಒಳಗಿದ್ದ ತಮ್ಮಯ್ಯನ ಹೆಂಡತಿ, ತಂಗಿ, ತಾಯಿ ಬಂದು ಸಾಂಬನನ್ನೇ ಎವೆಯಿಕ್ಕದೆ ನೋಡುತ್ತ ನಿಂತರು.

ಸಾಂಬ ಸಂಧ್ಯಾವಂದನೆ ಮುಗಿಸಿ, ಎಲ್ಲರನ್ನೂ ಒಮ್ಮೆ ಅವಲೋಕಿಸಿ

"ವಿಶ್ವೇಶ್ವರಾ – ಸಕಾಲಕ್ಕೆ ಕರ್ಮ ಮಾಡದಿದ್ದರೆ ಕರ್ಮಭ್ರಷ್ಟತ್ವ ಪ್ರಾಪ್ತವಾಗುತ್ತದೆ"

ಎಂದು ಎಚ್ಚರಿಸಿದ. ವಿಶ್ವೇಶ್ವರ ಗಡಗಡ ನಡುಗುತ್ತ ಕರ್ಮವನ್ನಾರಂಭಿಸಿದ. ಪಂಕ್ತಿಗೆ ಬಂದಿದ್ದ ಬ್ರಾಹ್ಮಣರೂ ಸಾಂಬನನ್ನೇ ನೋಡುತ್ತ ಕುಳಿತರು.

ಒಂದೆರಡುಕಡೆ ವಿಶ್ವೇಶ್ವರ ಮಂತ್ರ ತಪ್ಪಲು ಸಾಂಬ ಅವನನ್ನೆಚ್ಚರಿಸಿ ತಿದ್ದಿದ. ವಿಶ್ವೇಶ್ವರನಿಗೆ ಆಶ್ಚರ್ಯದ ಜತೆಗೆ ಭಯವೂ ಮೂಡಿತು.

ಬ್ರಾಹ್ಮಣರ ಭೋಜನ ಮೊದಲಾಯಿತು. ಅನಂತರ ಉಳಿದ ಎಲ್ಲರ ಭೋಜನವಾಯಿತು. ವಿಶ್ವೇಶ್ವರ ಎಲಡಿಕೆ ದಕ್ಷಿಣೆ ಸ್ವೀಕರಿಸಿ ಸಾಂಬ ನೊಂದಿಗೆ ಊರಿಗೆ ಹಿಂದಿರುಗಿದ.

ಸಾಂಬ ಮನೆಗೆ ಬಂದವನು ಒಳಗೆ ಕಾಲಿಡಲಿಲ್ಲ. ಜಗುಲಿಯ ಮೇಲೆ ಹಾಕಿದ್ದ ಚಾಪೆಯ ಮೇಲೆ ಕುಳಿತು ಸ್ತೋತ್ರ ಹೇಳಿಕೊಳ್ಳುತ್ತಿದ್ದ.

ವಿಶ್ವೇಶ್ವರ ತಂದೆ ಹೊಲದಕಡೆ ಹೋಗಿದ್ದಾರೆಂದು ತಿಳಿದು ಓಡಿಹೋಗಿ ಅವರಿಗೆ ತಮ್ಮಯ್ಯಶಾಸ್ತ್ರಿಯ ಮನೆಯಲ್ಲಿ ನಡೆದ ಕೌತುಕ ವಿವರಿಸಿ, ಮನೆಗೆ ಕರೆದುಕೊಂಡುಬಂದ.

ಶಾಸ್ತ್ರಿಗಳು ಬಂದವರೇ ಸಾಂಬನ ಬಳಿ ಕೂಡಲು ಹತ್ತಿರ ಸರಿದರು. ಸಾಂಬ

"ದೂರ ಕೂಡಿ. ನಾನು ಮಡಿಯಲ್ಲಿದ್ದೇನೆ"

ಎಂದು ಹೇಳಿದ.

"ಸಾಂಬ" ಎಂದರು.

"ಯಾರು ಸಾಂಬ? ಶಾಸ್ತ್ರಿಗಳೇ ಎಂದು ಕರೆಯಿರಿ"

ಎಂದು ಹೇಳಿದ.

ತಮಗೆ ಈ ರಹಸ್ಯ ಬಗೆಹರಿಯುವುದಿಲ್ಲವೆಂದು ಶಾಸ್ತ್ರಿಗಳು ಸೊಸೆ ಯನ್ನು ಕರೆದು

"ನೀನು ಮಾತನಾಡಿಸಿ ನೋಡು ಸೀತಮ್ಮ"

ಎಂದರು. ಸೀತಮ್ಮ ಬಂದು ಸಾಂಬನ ಎದುರಿಗೆ ನಿಂತಳು. ಸಾಂಬ ಕತ್ತೆತ್ತಿನೋಡಿ

"ನಿನ್ನಗಂಡ ಕರ್ಮ ಚೆನ್ನಾಗಿ ಮಾಡಿಸುತ್ತಾನೆ ಸೀತಮ್ಮ. ಆದರೆ ಆಗಾಗ್ಗೆ ಮಂತ್ರ ತಪ್ಪುತ್ತಾನೆ. ಇನ್ನುಮೇಲೆ ಎಚ್ಚರವಾಗಿರುವಂತೆ ಹೇಳು"

ಎಂದು ಹೇಳಿದ. ಸೀತಮ್ಮನ ಕಣ್ಣಲ್ಲಿ ಫಳಫಳನೆ ನೀರು ಹರಿಯಿತು.

"ಮಗೂ........" ಎಂದಳು.

ಸಾಂಬ ಸೀತಮ್ಮನನ್ನು ದಿಟ್ಟಿಸಿ ನೋಡಿ

"ನೀನು ಮಹಾಪಾತಿವ್ರತೆ. ನನ್ನ ಮಗೂ ಎಂದು ಕರೆದರೆ ತಪ್ಪಿಲ್ಲ. ಹೆಂಗಸರು ನನಗೆ ಜಗನ್ಮಾತೆಯ ಸ್ವರೂಪರು. ಆದರೆ ನೀನು ನನ್ನ ಮಗು ಎಂದು ಭಾವಿಸಬೇಡ – ನಾನು ನಿನ್ನ ಮಗನಲ್ಲ."

"ನೀವು ಯಾರು ?"

ಸಾಂಬ ಅದಕ್ಕೆ ಉತ್ತರ ಹೇಳದೆ, ಈ ಮಾತು ತನಗೆ ರುಚಿಸುವುದಿಲ್ಲ ವೆಂದು ಸೂಚಿಸುವಂತೆ ಗಟ್ಟಿಯಾಗಿ ಸ್ತೋತ್ರ ಹೇಳಲಾರಂಭಿಸಿದ.

ವಿಶ್ವೇಶ್ವರ ಒಂದುಕಡೆ, ಸೀತಮ್ಮ ಒಂದುಕಡೆ ಗೋಳೋ ಎಂದು ಅಳಲು ಮೊದಲಿಟ್ಟರು. ಶಾಸ್ತ್ರಿಗಳ ಕಣ್ಣುತುಂಬ ನೀರು ತುಂಬಿತ್ತು. ಒಂದರೆ ಕ್ಷಣದಲ್ಲಿ ಊರಿನಲ್ಲಿ ಸುದ್ದಿ ಹಬ್ಬಿತು. ಜನ ಇದ್ದ ಕೆಲಸ ಬಿಟ್ಟುಬಂದು ಶಾಸ್ತ್ರಿಗಳ ಮನೆಯ ಮುಂದೆ ಗುಂಪುಕೂಡಿದರು.

ಸಾಂಬ ಜನಗಳನ್ನುದ್ದೇಶಿಸಿ ವೇದಾಂತ ಉಪದೇಶ ಆರಂಭಿಸಿದ. ಅವನ ಬಾಯಿಂದ ಪುಂಖಾನುಪುಂಖವಾಗಿ ಉಪನಿಷತ್ತಿನ ವಚನಗಳು ಗೀತೆಯ ಶ್ಲೋಕಗಳು.

ಶಾಸ್ತ್ರಿಗಳಿಗೆ ಥಟ್ಟನೆ ಏನೋ ಹೊಳೆದಂತಾಯಿತು. ಎದ್ದುಹೋಗಿ ತಣ್ಣೀರು ಸ್ನಾನಮಾಡಿ, ಕೈಯ್ಯಲ್ಲಿ ಪೂಜಾ ಸಾಮಗ್ರಿಗಳನ್ನು ತೆಗೆದು ಕೊಂಡು ಉಟ್ಟಿದ್ದ ಒದ್ದೆಯಲ್ಲೇ ಬಂದರು. ಶಾಸ್ತ್ರೋಕವಾಗಿ ಸಾಂಬನಿಗೆ ಪೂಜೆ ಮಾಡಿ, ಹಲಗೆಯಾರತಿ ತುಂಬ ಕರ್ಪೂರ ಹಾಕಿ ಅವನಿಗೆ ಮಂಗ ಳಾರತಿ ಎತ್ತಿ ಉದ್ದಂಡ ಪ್ರಣಾಮ ಮಾಡಿದರು.

ಸಾಂಬನಿಗೆ ಹಿಡಿದಿದ್ದ ಹುಚ್ಚು ಶಾಸ್ತ್ರಿಗಳಿಗೂ ಬಡಿಯಿತೇನೊ ಎಂದು ಜನ ತವಕಗೊಂಡರು. ಶಾಸ್ತ್ರಿಗಳ ವಿಚಿತ್ರ ನಡವಳಿಕೆ ಕಂಡು ಅವರಿಗೆ ಪರಮಾಶ್ಚರ್ಯವಾಯಿತು. ದೃಶ್ಯ ನೋಡುತ್ತ ನಿಂತಿದ್ದವರು ತುಟಿಪಿಟ ಕ್ಕೆನ್ನಲಿಲ್ಲ.

ಶಾಸ್ತ್ರಿಗಳು ಎದ್ದುನಿಂತು ಭಯಭಕ್ತಿಗಳಿಂದ ಕೈಜೋಡಿಸಿಕೊಂಡು
"ತಾವು ಯಾರು ಅಪ್ಪಣೆಯಾಗಬೇಕು"
ಎಂದು ಕೇಳಿದರು.

ಸಾಂಬ ತಂದೆಯನ್ನು ಆಪಾದಮಸ್ತಕ ದಿಟ್ಟಿಸಿನೋಡಿ ಗಹಗಹಿಸಿ ನಕ್ಕು

"ನಾರಾಯಣಾ, ನಿನಗೂ ಮಂಕು ಕವಿಯಿತೇನೋ?"

"ಏಕೆ ಅಪ್ಪಣೆಯಾಗಲಿ."

"ನಾನು ಯಾರು ಎಂದು ಕೇಳುವೆಯಲ್ಲಾ. ಇಷ್ಟುಬೇಗ ನನ್ನ ಮರೆತುಬಿಟ್ಟೆಯಾ? ನಿನಗೆ ಶುಕ್ಲಯಜುರ್ವೇದ ಪಾಠ ಹೇಳಿದವರು ಯಾರು?"

"ನನ್ನ ಗುರುಗಳಾದ ನರಸಿಂಹಶಾಸ್ತ್ರಿಗಳೇ!"

"ಈಗಲಾದರೂ ಗೊತ್ತಾಯಿತಲ್ಲ."

"ತಮ್ಮ ಚಿತ್ತವೇನು ತಿಳಿಯಲಿಲ್ಲ."

"ನಿನ್ನ ಮನೆಯಲ್ಲಿರಬೇಕೆನಿಸಿತು – ಬಂದೆ."

"ಅನುಗ್ರಹಕ್ಕೆ ನಾನು ಕೃತಾರ್ಥ – ಆದರೆ........?"

"ಆದರೆ ಗೀದರೆ ಎನ್ನಬೇಡ—ಹೋಗು ನನಗೆ ಸ್ನಾನಕ್ಕೆ ಹೊತ್ತಾಯಿತು"

ಎಂದು ಅಲ್ಲಿಂದ ಎದ್ದು ಬಾವಿಯಬಳಿಗೆ ಹೋಗಿ ಬಿಂದಿಗೆ ಕಟ್ಟಿ ನೀರು ಸೇದಿ ನಲವತ್ತು, ಐವತ್ತು ಬಿಂದಿಗೆ ನೀರು ಹುಯಿದುಕೊಂಡ.

ಶಾಸ್ತ್ರಿಗಳು ತಲೆಯಮೇಲೆ ಕೈಹೊತ್ತು ಕುಳಿತುಬಿಟ್ಟರು.

"ಏನು ಮಾಡುವುದು ಅಣ್ಣಯ್ಯಾ"

ಎಂದು ವಿಶ್ವೇಶ್ವರ ಕೇಳಿದ.

"ದೊಡ್ಡವರು ಬಂದಿದ್ದಾರಪ್ಪಾ. ನಾವೇನೂ ಆಡಬಾರದು. ಅವರಿಗೆ ಹೇಗೆ ಸಂತೋಷವೋ ಹಾಗೆ ಮಾಡಲಿ."

"ಸಾಂಬನ ಗತಿ!"

"ಅದಕ್ಕೆ ಯಾರು ಹೊಣೆ? ವಿಶ್ವೇಶ್ವರನ ಲೀಲೆಗೆ ನಾವು ಯಾರು ಎಮರು"

ಎಂದರು.

ಅಂದಿನಿಂದ ಸಾಂಬನ ಮಡಿ, ಪೂಜೆ, ವ್ರತ ಅನುಷ್ಠಾನಕ್ಕೆ ಹೊಂದಿಕೊಳ್ಳುವುದು ಸೀತಮ್ಮನಿಗೆ ಮಹಾ ಪ್ರಯಾಸವಾಯಿತು. ಈಗ ಸಾಂಬ

ಮನೆಯಮಟ್ಟಿನ ಕಂದನಾಗಿರಲಿಲ್ಲ. ಚತುರ್ವೇದ ಪಾರಾಯಣಮಾಡಿದ ಮಹಾಬ್ರಾಹ್ಮಣನಾಗಿದ್ದ.

ಸಾಂಬನ ಖ್ಯಾತಿ ಸುತ್ತುಮುತ್ತಲಿನ ಹಳ್ಳಿಗಳಲ್ಲದೆ ಡಿಸ್ಟ್ರಿಕ್ಟುಗಳಿಗೂ ವ್ಯಾಪಿಸಿತು. ಜನ ತಂಡೋಪತಂಡವಾಗಿ ಅವನ ದರ್ಶನಕ್ಕೆ ಬರಲಾರಂಭಿಸಿದರು. ಬೆಂಗಳೂರು ಮೈಸೂರಿಂದ ಸ್ಪೆಷಲ್ ಕಾರುಗಳು ಹುಲ್ಲೂರನ್ನು ಆಕ್ರಮಿಸಲಾರಂಭಿಸಿದವು. ಕುಗ್ರಾಮವಾಗಿದ್ದ ಹುಲ್ಲೂರು ಆಧುನಿಕ ಪಟ್ಟಣದಂತೆ ಜನಭರಿತವಾಯಿತು.

ಒಂದುದಿನ ಶಾಸ್ತ್ರಿಗಳು ಸಂತೇಹಳ್ಳಿ ನಾಗಪ್ಪನನ್ನು ಕರೆಕಳಿಸಿದರು. ಮೈಯೆಲ್ಲಾ ಕಜ್ಜಿಯಾಗಿದ್ದರೂ ಲೆಕ್ಕಿಸದೆ ಶಾಸ್ತ್ರಿಗಳ ಮಾತು ಮೀರಲಾರದೆ ನಾಗಪ್ಪ ಬಂದ.

ನಾಗಪ್ಪ ಅತ್ತಕಡೆ ಮಾಂತ್ರಿಕನೆಂದು ಪ್ರಸಿದ್ಧಿಯಾಗಿದ್ದ. ಹಳ್ಳಿಯವರನ್ನು ಸೇರಿಸಿ, ಅವರಿಗೆ ತರಬೇತಿ ಕೊಟ್ಟು ನಾಟಕಗಳನ್ನಾಡಿಸುತ್ತಿದ್ದ. ಅವನ ಮೃದಂಗವಾದನ ಹೆಸರುವಾಸಿಯಾಗಿತ್ತು.

ನಾಗಪ್ಪ ಜಗುಲಿಯ ಕೆಳಗೆ ಕೈಕಟ್ಟಿ ನಿಂತುಕೊಂಡ. ಶಾಸ್ತ್ರಿಗಳು ಅವನನ್ನು ಮನೆಯ ಹಿಂದಿದ್ದ ಹೊಲದ ಕಡೆ ಕರೆದುಕೊಂಡು ಹೋದರು.

"ಸಾಂಬನನ್ನು ನೋಡಿದ್ಯಾ ನಾಗಪ್ಪ".

"ನೋಡಿದೆ. ಇದೇನು ವಿಚಿತ್ರ ?"

"ಏನೋ ಕಾಣೆನಪ್ಪಾ. ಆಯ್ಕೊಂಡು ತಿನ್ನೊ ಕೋಳಿ ಕಾಲು ಮುರಿದಹಾಗೆ ಇದೇನೋ ಒಕ್ಕರಿಸಿತಲ್ಲೋ ನಾಗಪ್ಪ."

"ಸಾಂಬಣ್ಣ ಶಾಂತವಾಗಿದ್ದಾನಲ್ಲಾ ಬುದ್ದಿ. ಯಾಕೆ ಯೋಚನೆ ಮಾಡುತ್ತೀರಿ ?"

"ಶಾಂತವಾಗಿದ್ದಾನೆ. ಒಬ್ಬರಿಗೂ ತೊಂದರೆ ಮಾಡುವುದಿಲ್ಲ. ತಾನಾಯಿತು, ತನ್ನ ಪೂಜೆ ಪುರಸ್ಕಾರವಾಯಿತು. ಆದರೆ ಈ ಜಾತ್ರೆ ನೋಡಿದೆಯಾ ?"

"ಅಪರೂಪದ ವಾಕ್‌ಶಕ್ತಿ ಬಂದಿದೆ ಬುದ್ಧಿ."

"ಬಂದಿದೆಯಪ್ಪಾ........ನನ್ನ ಪ್ರಾಣಕ್ಕೆ ಸಂಚಕಾರ."

"ನೀವು ಹೇಳೋದು ನಂಗೆ ಅರ್ಥವಾಗುವುದಿಲ್ಲ ಶಾಸ್ತ್ರಿಗಳೇ."

"ನಾಗಪ್ಪ, ನಾನು ಬಡವ. ನನ್ನ ಉತ್ಪನ್ನವೇನು, ಯೋಗ್ಯತೆಯೇನು ನೀನು ಬಲ್ಲೆ. ಸಾಂಬನನ್ನು ಕಾಣಬರುವ ಇಷ್ಟು ಜನಗಳನ್ನು ನಾನು ಹೇಗೆ ನಿಭಾಯಿಸಲಿ ಹೇಳು. ಮನೆಯಲ್ಲಿದ್ದ ದವಸ ಈಗಾಗಲೇ ಮುಗಿದುಹೋಯಿತು. ಹೊತ್ತಿಗೆ ನೂರು ಜನರ ಊಟವಾಗಬೇಕು. ಪಾಪ! ನನ್ನ ಸೊಸೆಯಂತೂ ಮಾಡಿಮಾಡಿ ಹಣ್ಣಾಗಿಹೋಗಿದ್ದಾಳೆ. ಇನ್ನು ಅವಳೂ ಮಲಗಿಕೊಂಡರೆ ನಮ್ಮ ಗತಿ?"

"ಕೆಟ್ಟಗಾಳಿ, ಪಿಶಾಚಿಯಾದರೆ ಏನಾದರೂ ಮಾಡಬಹುದಾಗಿತ್ತು. ನರಸಿಂಹಶಾಸ್ತ್ರಿಗಳು ದಯಮಾಡಿಸಿದ್ದಾರೆ ಎಂದು ಕೇಳಿದೆ."

"ಹೌದಪ್ಪಾ–ಅವರೇ–ನನ್ನ ವಿದ್ಯಾಗುರುಗಳು–ನೀನೇನೂ ಮಾಡಲು ಸಾಧ್ಯವಿಲ್ಲವೇ?"

"ನನ್ನ ಅವತಾರ ಮುಗಿದುಹೋಗಿದೆಯಲ್ಲಾ ಶಾಸ್ತ್ರಿಗಳೇ. ಕಾಳಾಚಾರಿ ಕೈಕಾಲು ಮುರಿದು ಕೂಡಿಸಿದ್ದಾನೆ. ನಾನೇನು ಈಗ ಹಲ್ಲು ಕಳೆದ ಹಾವು. ಒಂದು ಹಗ್ಗದ ತುಂಡಿಗಿಂತ ಕಡೆ. ಏನಾದರೂ ಮಾಡಬಹುದಾದರೆ ಕಾಳಾಚಾರಿ ಮಾಡಬಹುದು. ಅವನನ್ನು ಒಂದು ಮಾತು ಕೇಳಿ."

"ಅವನನ್ನು ಕರೆದುಕೊಂಡು ಬಂದು ನನ್ನ ಗುರುಗಳ ಅಪಮಾನ ಮಾಡಿಸಲೇ?"

"ಹಾಗಾದರೆ............?"

"ದೈವೇಚ್ಛೆ—ಅವರನ್ನೇ ಮರೆಹೋಗುವುದು. ಅವರು ತಿಳಿದಂತೆ ಮಾಡಲಿ."

ನಾಗಪ್ಪ ಸಾಂಬನನ್ನು ನೋಡುತ್ತ ಕುಳಿತ. ಅವನ ಮನಸ್ಸಿನಲ್ಲಿ ತರಂಗ ತರಂಗವಾಗಿ ವಿಚಾರಗಳೇಳುತ್ತಿದ್ದವು. ಕಾಳಾಚಾರಿ ಹೊಡೆತಕ್ಕೆ ಸಿಕ್ಕಿ ಭೂಮಿಗೆ ಇಳಿದುಹೋಗಿದ್ದವನಿಗೆ ಹೊಸ ಜೀವ ಬಂದಂತಾಯಿತು.

ಶಾಸ್ತ್ರ, ಶಕುನ, ಪರಿಹಾರ ಕೇಳಲು ಬರುತ್ತಿದ್ದವರ ಸಂಖ್ಯೆ ದಿನದಿನಕ್ಕೆ ಬೆಳೆಯತೊಡಗಿತು. ನಾಗಪ್ಪ ಪ್ರತಿದಿನ ಎದ್ದುಬಂದು ಸಾಂಬನ ಲೀಲೆ ನೋಡುತ್ತ ಕೂಡುತ್ತಿದ್ದ.

ಬಂದವರು ಸಾಂಬನಿಗೆ ನಮಸ್ಕಾರ ಹಾಕಿ, ಹೆಗಲ ಮೇಲಿದ್ದ ಶಾಲನ್ನೋ ಉತ್ತರೀಯವನ್ನೋ ಸೊಂಟಕ್ಕೆ ಬಿಗಿದು ಭಯಭಕ್ತಿಯಿಂದೆ ನಿಲ್ಲುತ್ತಿದ್ದರು.

ಒಬ್ಬ ಕೇಳುತ್ತಿದ್ದ

" ನನ್ನ ತಾಯಿ ಹಾಸಿಗೆ ಹಿಡಿದು ಮುಗಿದ್ದಾಳೆ ಅವಳಿಗೆ ಯಾವಾಗ ಗುಣವಾಗುತ್ತದೆ."

ಸಾಂಬ ಉತ್ತರ ಹೇಳುತ್ತಿದ್ದ.

" ಇನ್ನೆಲ್ಲಿ ಗುಣ—ಆಕೆಗೆ ಅಪ್ಪಣೆ ಚೀಟಿ ಬಂದಿದೆ. ಈ ಅಮಾವಾಸ್ಯೆ ಕಳೆಯುವುದರೊಳಗಾಗಿ ಆಕೆಯ ಕಥೆ ಮುಗಿಯತ್ತೆ."

ಇನ್ನೊಬ್ಬ ಕೇಳುತ್ತಿದ್ದ.

" ನನ್ನ ಹೆಂಡತಿ ಗರ್ಭಿಣಿ. ಆಕೆಗೆ ಎಂಥ ಮಗುವಾಗುತ್ತದೆ."

" ಗಂಡು ಮಗುವಾಗಲಿ ಎಂದು ನೀನೂ, ನಿನ್ನ ಹೆಂಡತಿಯೂ ಹಂಬಲಿಸುತ್ತಿದ್ದೀರಿ. ಆದರೆ ಈ ಸಾರೆ ಆಗುವುದು ಹೆಣ್ಣೇ....ಮುಂದೆ ಗಂಡು ಮಗುವಾಗುತ್ತದೆ."

ಮತ್ತೊಬ್ಬ ಕೋರುತ್ತಿದ್ದ

" ನನ್ನ ತಮ್ಮ ಪಾಲು ಕೇಳುತ್ತಿದ್ದಾನೆ. ಏನು ಮಾಡಲಿ."

" ಕೊಟ್ಟು ಬಿಡು. ವೃಥಾ ಕೋರ್ಟು ಕಛೇರಿ ಹತ್ತಿ ಇರುವ ಆಸ್ತಿಯನ್ನು ಲಾಯರುಗಳ ಬಾಯಿಗೆ ಹಾಕಬೇಡ."

ಇವಲ್ಲದೆ ಇದಕ್ಕಿದ್ದಂತೆ ಸಾಂಬ ಜನಗಳನ್ನುದ್ದೇಶಿಸಿ

" ಪಾಪ. ಹೆಣ್ಣು ಹೆಂಗಸು ಓಡಿ ಬರುತ್ತಿದ್ದಾಳೆ. ಊರು ಬಾಗಿಲವರೆಗೆ ಬಂದಿದ್ದಾಳೆ. ಸಖತ್ ಕಾಹಿಲೆಯಿರುವ ಮಗುವಿಗೇನಾಗುತ್ತದೆ ಎಂದು ಕೇಳುವುದಕ್ಕೆ. ಆಕೆ ಇಲ್ಲಿಗೆ ತಲುಪುವ ಹೊತ್ತಿಗೆ ಮಗು ಸ್ವಾಮಿಪಾದ ಸೇರಿರುತ್ತದೆ"

ಎಂದು ನುಡಿಯುತ್ತಿದ್ದ. ಅವನು ಭವಿಷ್ಯ ಹೇಳಿದಂತೆ ಪಕ್ಕದ ಹಳ್ಳಿಯಿಂದ ಯಾವಳೊ ಹೆಂಗಸು ಬರುತ್ತಿದ್ದಳು, ತನ್ನ ಮಗಳ ಬಗ್ಗೆ ಪ್ರಶ್ನೆ

ಕೇಳುತ್ತಿದ್ದಳು. ವಿಚಾರಮಾಡುವಲ್ಲಿ ಸಾಂಬ ಹೇಳಿದ ಹೊತ್ತಿಗೆ ಸರಿಯಾಗಿ ಮಗು ಸ್ವಾಮಿಪಾದ ಸೇರಿರುತ್ತಿತ್ತು.

ಜನಗಳಿಗೆ ಸಾಂಬನ ಮೇಲೆ ಭಕ್ತಿ ದಿನದಿನಕ್ಕೆ ಬೆಳೆಯುತ್ತ ಹೋಯಿತು. ಅವನು ಸಾಕ್ಷಾತ್ ಈಶ್ವರನ ಅವತಾರ ಎಂದು ಭಾವಿಸುವುದಕ್ಕಾರಂಭಿಸಿದರು. ಅವನ ಕೀರ್ತಿ ಬೆಳೆದಷ್ಟು ಜನ ಬರುವುದು ಹೆಚ್ಚಾಗುತ್ತಿತ್ತು. ಜನ ಹೆಚ್ಚು ಬಂದಷ್ಟೂ ನಾರಾಯಣಶಾಸ್ತ್ರಿಗಳ ತಾಪತ್ರಯ ಹೆಚ್ಚುತ್ತಿತ್ತು.

ಐದು ತಿಂಗಳ ಕಾಲ ಸತತವಾಗಿ ಸಾಂಬನ ಲೀಲೆ ನಡೆಯಿತು. ಸೀತಮ್ಮ ಒಣಗಿದ ಕಾಷ್ಠದಂತಾದಳು. ಇನ್ನು ಹೆಚ್ಚು ಕಾಲ ಈ ಸ್ಥಿತಿಯನ್ನು ನಡೆಯಬಿಟ್ಟರೆ ಸೊಸೆ ಕೈಬಿಟ್ಟು ಹೋಗುವಳೆಂದು ಶಾಸ್ತ್ರಿಗಳಿಗೆ ಖಚಿತವಾಯಿತು.

ಒಂದು ಅಮಾವಾಸ್ಯೆ ಬಂದಿತು. ಅಂದಂತೂ ಸಾಂಬನ ಪೂಜೆ ಅಳತೆ ಮೀರಿತು. ಜನ ಎಂದಿಗಿಂತಲೂ ಹೆಚ್ಚಾಗಿ ಸೇರಿದ್ದರು. ಅಮಾವಾಸ್ಯೆ ಮಧ್ಯರಾತ್ರಿಯ ಪೂಜೆಯಾನಂತರ ಸಾಂಬ ಕೊಡುವ ವೀಭೂತಿ ಪ್ರಸಾದ ತೆಗೆದುಕೊಂಡವರಿಗೆ ಸಕಲ ಅನಿಷ್ಟ ನಿವಾರಣೆಯಾಗಿ ಮಂಗಳವಾಗುವುದೆಂದು ಪ್ರತೀತಿ ಹಬ್ಬಿತ್ತು. ಜನ ಮಧ್ಯರಾತ್ರಿಯನ್ನು ಕಾಯುತ್ತ ಕುಳಿತಿದ್ದರು.

ಇಂದು ಈ ವಿಷಯ ಇತ್ಯರ್ಥವಾಗಿ ಬಿಡಬೇಕೆಂದು ಶಾಸ್ತ್ರಿಗಳು ನಿರ್ಧರಿಸಿದರು. ಮಧ್ಯರಾತ್ರಿ ಪೂಜೆ ಮುಗಿಸಿಕೊಂಡು ಸಾಂಬ ಜಗುಲಿಯ ಮೇಲೆ ತನ್ನ ಸ್ಥಾನದಲ್ಲಿ ಬಂದು ಕುಳಿತ. ನಾರಾಯಣ ಶಾಸ್ತ್ರಿಗಳು ಸ್ನಾನಮಾಡಿ ಒದ್ದೆಯಲ್ಲಿ ಬಂದು ನಮಸ್ಕರಿಸಿ ಕೈಕಟ್ಟಿ ನಿಂತರು.

"ಏನು ನಾರಾಯಣ, ಏನೋ ಹೇಳಬೇಕೆಂದು ಬಂದ ಹಾಗೆ ಕಾಣುತ್ತದೆ."

"ಹೌದು ಗುರುಗಳೇ."

"ಹೇಳು–ಧೈರ್ಯವಾಗಿ ಹೇಳು"

"ತಾವು ದೊಡ್ಡವರು ನಾನು ತುಂಬ ಬಡವ."

" ಅದಕ್ಕೇನು ಮಾಡುವುದು. ವಿದ್ಯೆಯಲ್ಲಿ ನೀನು ಬಡವನಲ್ಲವಲ್ಲಾ."

" ತಮ್ಮ ಶಿಷ್ಯನಾಗಿ ಆ ಮಾತು ಆಡಿದರೆ ತಪ್ಪಾಗುತ್ತದೆ. ನನ್ನ ಪ್ರಾಪಂಚಿಕ ಸ್ಥಿತಿ ಅಷ್ಟು ಉತ್ತಮವಾಗಿಲ್ಲವೆಂದು ಅರಿಕೆ ಮಾಡಿಕೊಂಡೆ. "

" ನಿನಗೆ ಸಂಪತ್ತು ಬೇಕೇನು ? "

" ಅನರ್ಘ್ಯವಾದ ವಿದ್ಯಾಸಂಪತ್ತು ತಾವು ಅನುಗ್ರಹಿಸಿರುವಿರಿ. ಇನ್ನು ಕ್ಷಣಭಂಗುರವಾದ ಸಂಪತ್ತನ್ನು ಏಕೆ ಆಶಿಸಲಿ ? "

" ಸಂತೋಷವಾಯಿತು. ನನ್ನ ಶಿಷ್ಯನಾದದಕ್ಕೂ ಸಾರ್ಥಕವಾಯಿತು–ಇನ್ನೇನು ಚಿಂತೆ ನಿನಗೆ. "

" ಸಾಂಬ ಏನು ಅರಿಯದ ಮಗು. ಅವನಿಗಿನ್ನೂ ಮದುವೆಯಾಗಬೇಕು. ತಾವು ಅವನ ಮೇಲೆ ಅವತರಿಸಿದರೆ ನಿಭಾಯಿಸುವುದು ನನ್ನ ಚೈತನ್ಯವಲ್ಲ. ನನ್ನ ಸೊಸೆ ಪಾಡು ಏನಾಗುತ್ತಿದೆಯೆಂದು ತಾವು ಬಲ್ಲಿರಿ. "

" ನೀನು ಹೇಳುವುದೇನು ನಾನು ಹೋಗಬೇಕೆಂದೆ. "

" ನನ್ನ ಕಷ್ಟ ಬಿನ್ನವಿಸಿಕೊಂಡಿದ್ದೇನೆ. ಇದರ ಮೇಲೆ ಗುರುಚಿತ್ತ."

ಸಾಂಬ ಕ್ಷಣಕಾಲ ಆಲೋಚಿಸಿ

" ನಾರಾಯಣ–ನಾನು ನಿನಗಾಗಲಿ, ನಿನ್ನ ಮನೆಗಾಗಲಿ ಕೇಡು ಮಾಡುವುದಕ್ಕೆ ಬಂದಿಲ್ಲ ಕಣೋ ? "

" ಅದನ್ನು ನಾನು ಬಲ್ಲೆ ಗುರುಗಳೇ. ತಮ್ಮ ಪಾದಧೂಳಿಯಿಂದ ನನ್ನ ಮನೆ ಪವಿತ್ರವಾಯಿತು.

" ಹೂ ಹೋಗಲಿ ಬಿಡು ನಿನಗೇಕೆ ಕಷ್ಟ. ಅನುಷ್ಠಾನದ ಪ್ರಸಾದಕ್ಕೆ ಜನ ಬಂದಿದ್ದಾರೆ. ಅವರಿಗಷ್ಟು ಪ್ರಸಾದ ವಿನಿಯೋಗಮಾಡಿ ನಾನು ಹೊರಟು ಹೋಗುತ್ತೇನೆ. ಆಗಬಹುದೋ ? "

" ತಮ್ಮ ಚಿತ್ತ "

ಸಾಂಬ ಎಲ್ಲರಿಗೂ ಪ್ರಸಾದ ಹಂಚಿ ಮತ್ತೆ ಸ್ನಾನಕ್ಕೆ ಎದ್ದು ಹೋದ.

ಹಗ್ಗಕ್ಕೆ ಬಿಂದಿಗೆ ಕಟ್ಟಿ ಮೂರು ನಾಲ್ಕು ಬಿಂದಿಗೆ ನೀರು ಹುಯಿದುಕೊಂಡ. ಐದನೆಯ ಸಲ ಕೈಯ್ಯಿಂದ ಬಿಂದಿಗೆ ಕಳಚಿ ಬಿದ್ದುಬಿಟ್ಟಿತು. ಸಾಂಬ ಸ್ಮೃತಿತಪ್ಪಿ ನೆಲದ ಮೇಲೆ ದೊಪ್ಪನೆ ಬಿದ್ದುಬಿಟ್ಟ.

ಶಾಸ್ತ್ರಿಗಳು, ವಿಶ್ವೇಶ್ವರ ಸಾಂಬನನ್ನೆತ್ತಿಕೊಂಡು ಬಂದು ಒಳಗೆ ಮಲ ಗಿಸಿ ಶಿಶ್ರೂಷೆ ಮಾಡಿದರು. ಸಾಂಬನಿಗೆ ಮೈ ಸಿಡಿಯುವಷ್ಟು ಜ್ವರವೇರಿತು.

ರಾತ್ರಿಯೆಲ್ಲಾ ತಂದೆ, ಮಗ, ಸೊಸೆ ಸಾಂಬನ ಹಾಸಿಗೆಯ ಬಳಿ ಜಾಗರಣೆ ಮಾಡಿದರು.

ಮೂರು ದಿವಸ ಬಂದ ಜ್ವರ ಬಿಡಲಿಲ್ಲ. 'ನಾನೇನು ಅಪಚಾರ ಮಾಡಿದೆನೋ?' ಎಂದು ಶಾಸ್ತ್ರಿಗಳು ಮರುಗಿದರು.

ನಾಲ್ಕನೆಯ ದಿನದಿಂದ ಜ್ವರ ಆರುತ್ತ ಬಂತು. ಅಷ್ಟಮಿ ಹೊತ್ತಿಗೆ ಸಾಂಬ ಎದ್ದು ಓಡಾಡುವಂತಾದ. ತನಗೆ ಜ್ವರ ಬಂದಿದ್ದ ವಿಷಯ ಬಿಟ್ಟು ಅವನಿಗೇನೂ ಗೊತ್ತಿಲ್ಲ. ಸೀತಮ್ಮ ಒಂದು ದಿನ ಸಾಂಬನನ್ನು ಕೂಡಿಸಿ ಕೊಂಡು ಅವನ 'ಅವತಾರದ' ಕಥೆಯನ್ನುಸುರಿದಳು. ಸಾಂಬನಿಗೆ ಪರಮಾಶ್ಚರ್ಯವಾಯಿತು.

ಸಾಂಬನ ನಡೆವಳಿಕೆಯಲ್ಲಿ ಎಳ್ಳಷ್ಟೂ ಬದಲಾವಣೆ ತೋರಲಿಲ್ಲ. ಜನ ಜಂಗುಳಿ ನಿಂತು ಹೋಯಿತು. ಸಾಂಬ ತನ್ನ ನಿತ್ಯಗೆಲಸಗಳನ್ನು ಎಂದಿ ನಂತೆ ಪೂರಯಿಸಿಕೊಂಡು ಹೋಗುತ್ತಿದ್ದ.

ಕಾಲಕ್ರಮೇಣ ಅವನಿಗಾಗಿದ್ದ ಸ್ಥಿತಿಯನ್ನು ಜನ ಮರೆಯುತ್ತ ಬಂದರು.

ಆದರೆ ಅದನ್ನು ಮರೆಯದಿದ್ದವನು ಸಂತೇಹಳ್ಳಿ ನಾಗಪ್ಪನೊಬ್ಬನೇ! ಅವನ ಮನಸ್ಸಿನಲ್ಲಿ ಸಾಂಬನ ಮೂರ್ತಿ ಅವನಿಗಾದ ಅನುಭವ ಅಚ್ಚಳಿಯದೆ ಮನೆ ಮಾಡಿಕೊಂಡಿತು.

೨

ಕಾಳಾಚಾರಿಯ ಹೆಸರು ಕೇಳಿದರೇ ಜನ ಗಡಗಡನೆ ನಡಗುತ್ತಿದ್ದರು. ಮಕ್ಕಳು ರಚ್ಚೆ ಹಿಡಿದರೆ ಹಿರಿಯರು 'ಕಾಳಾಚಾರಿ ಬರ್‍ತಾನೆ ನೋಡು. ಹಿಡಿದುಕೊಂಡು ಹೋಗುತ್ತಾನೆ' ಎಂದು ಹೆದರಿಸುತ್ತಿದ್ದರು. ಮರುಕ್ಷಣ ತಾವೇ ಅಂಜಿ ದೇವರಿಗೆ ಮುಡಿಪು ಕಟ್ಟಿಡುತ್ತಿದ್ದರು.

ಕಾಳಾಚಾರಿಯನ್ನು ನೋಡಿದರೆ ಯಾರಿಗಾದರೂ ಸ್ವಭಾವಿಕವಾಗಿ ಭಯ ಹುಟ್ಟುತ್ತಿತ್ತು. ಆರಡಿ ಎತ್ತರದ ಆಳು. ಅಚ್ಚ ಕೃಷ್ಣವರ್ಣ. ಮುಖದ ಮೇಲೆ ಕೆಲವು ದೊಡ್ಡ ಸಿಡುಬಿನ ಕಲೆಗಳು. ತುಟಿಯ ಮೇಲೆ ತೀಡಿದ ಗಿರಿಜಾ ಮೀಸೆ. ರಕ್ತಕಾರುತಿದ್ದ ಗೆಡ್ಡೆಗಣ್ಣುಗಳು. ತಲೆಯ ಮೇಲೆ ನಾಟಕದ ಸ್ತ್ರೀ ಪಾರ್ಟಿನವರು ಧರಿಸುವಂಥ ಮುಡಿಗಂಟು. ಹಣೆಯ ತುಂಬ ವೀಭೂತಿ – ಅದರ ಮೇಲೆ ದೊಡ್ಡದಾಗಿ ಕುಂಕುಮ. ಅವನು ಸದಾ ಉಡುತ್ತಿದ್ದುದು ದಟ್ಟೀಪಂಚೆ. ಮೈಮೇಲೆ ಸಿಲ್ಕ್ ಷರ್ಟು, ಕೈಗಳೆರಡಕ್ಕೂ ಚಿನ್ನದ ಕಾಪುಗಳು. ಎಡಗೈ, ಬಲಗೈಯ ಎರಡೆರಡು ಬೆರಳುಗಳಿಗೆ ಉಂಗುರ ಗಳು. ಕೈಯಲ್ಲಿ ಬೆಳ್ಳಿಯ ಕೆಲಸ ಮಾಡಿದ ಭುಜದೆತ್ತರದ ಅಂಕೋಲೆ ದೊಣ್ಣೆ.

ಅವನು ಬೀದಿಯಲ್ಲಿ ಹೊರಟುಬಿಟ್ಟರೆ ಹೊರಗೆ ನಿಂತಿದ್ದ ಹೆಣ್ಣು ಮಕ್ಕಳು ಒಳಕ್ಕೆ ಹಾರಿಹೋಗುತ್ತಿದ್ದರು. ಆಡುತ್ತಿದ್ದ ಮಕ್ಕಳನ್ನು ಎಳೆದು ಕೊಳ್ಳುತ್ತಿದ್ದರು.

ಕಾಳಾಚಾರಿಯ ರೂಪವೆಷ್ಟು ಭಯಂಕರವಾಗಿತ್ತೋ ಗುಣವೂ ಅಷ್ಟೇ ಭಯಂಕರವಾಗಿತ್ತು. ಜನ ಅವನಿಗೆ ಹೆದರುವುದಕ್ಕೆ ಅವನ ರಾಕ್ಷಸರೂಪ ವಲ್ಲದೆ ರಾಕ್ಷಸಗುಣವೂ ಕಾರಣವಾಗಿತ್ತು.

ಕಾಳಾಚಾರಿ ಮಹಾಗಣಪತಿಯ ಔಪಾಸಕನೆಂದು ಪ್ರಸಿದ್ಧನಾಗಿದ್ದ. ಅವನ ಬಗ್ಗೆ ನೂರಾರು ಊಹಾಪೋಹೆಗಳೂ ಕಥೆಗಳೂ ಹುಟ್ಟಿಕೊಂಡಿದ್ದವು. ಯಾರಿಗೂ ಅವನ ನಿಜಸ್ಥಿತಿ ಗೊತ್ತಿರಲಿಲ್ಲ. ಮಲಯಾಳಕ್ಕೆ ಹೋಗಿ ಮಂತ್ರವಿದ್ಯೆ ಕಲಿತು, ಅದರಲ್ಲಿ ಅದ್ಭುತಸಿದ್ಧಿಯನ್ನು ಪಡೆದಿದ್ದನೆಂದು ಜನ ನಂಬಿದ್ದರು.

ಜನ ಹೆಚ್ಚಾಗಿ ಅವನ ಬಳಿ ಸುಳಿಯುತ್ತಿರಲಿಲ್ಲ. ಒಡ್ಡರ ಬಯಲಿನ ಓಬಯ್ಯ ಅವನ ಪರಮಶಿಷ್ಯ. ಅವನ ಪರಿವಾರದವರು ಕಾಳಾಚಾರಿಯನ್ನು ಗುರುವಂತೆ ಮಾನಿಸುತ್ತಿದ್ದರು.

ಕಾಳಾಚಾರಿ ಸಮೀಪದಲ್ಲಿದ್ದವನು ಹನುಮ. ಉತ್ತರೋತ್ತರ ಕಾಳಾ ಚಾರಿಯ ಪೀಠಕ್ಕೆ ತಾನು ಏರಬೇಕೆಂಬ ಬಯಕೆಯಿಂದ ಕಾಳಾಚಾರಿ ಆಜೂಜುವಾರಿ ಮಾಡಿಕೊಂಡು, ಅವನು ಹೇಳಿದ ಕೆಲಸಮಾಡಿಕೊಂಡು,

ಹಾಕಿದ ಹಿಟ್ಟು ತಿಂದುಕೊಂಡು ಮನೆಯ ನಾಯಿಯ ಹಾಗೆ ಬಿದ್ದಿದ್ದ. ಕಾಳಾಚಾರಿ ಅವನನ್ನು ನಾಯಿಯ ಹಾಗೇ ಕಾಣುತ್ತಿದ್ದ.

ಸಂಪಿಗೆ ಕಾಳಾಚಾರಿ ಊರಾದರೂ ಸುತ್ತಮುತ್ತ ಸುಮಾರು ಹದಿನೈದು ಮೈಲಿ ಆವರಣದಲ್ಲಿದ್ದ ಹಳ್ಳಿಗಳನ್ನೆಲ್ಲಾ ಅವನು ತನ್ನ ಪ್ರಭಾವಕ್ಕೆ ಸಿಕ್ಕಿಸಿ ಕೊಂಡಿದ್ದ. ಅವನ ಮಾತೆಂದರೆ ಆ ಪ್ರದೇಶಗಳ ಜನರಿಗೆ ಸುಗ್ರೀವಾಜ್ಞೆ ಯಾಗಿತ್ತು.

ಸಂಪಿಗೆ ಬಹಳ ದಿವಸಗಳಿಂದ ಶಿಲ್ಪಿಗಳ ತೌರೂರೆಂದು ಪ್ರಸಿದ್ಧ ವಾಗಿತ್ತು. ಕಾಳಾಚಾರಿಯ ಪೂರ್ವಜರೇ ಪ್ರಸಿದ್ಧ ಮೂರ್ತಿಶಿಲ್ಪಿಗಳಾಗಿದ್ದರು. ಹಾಸನ, ಶಿವಮೊಗ್ಗೆ, ತುಮಕೂರು, ಬೆಂಗಳೂರು ಜಿಲ್ಲೆಗಳಿಂದ ಜನ ಬಂದು ಅವರ ಕೈಯಲ್ಲಿ ದೇವತಾಮೂರ್ತಿಗಳನ್ನು ಮಾಡಿಸಿಕೊಂಡು ಹೋಗುತ್ತಿದ್ದರು.

ಕಾಳಾಚಾರಿ ಮನೆತನದಷ್ಟೇ ರಾಮಲಿಂಗಾಚಾರಿ ಚಲುವಾಚಾರಿ ಮನೆತನಗಳೂ ಪ್ರಸಿದ್ಧವಾಗಿದ್ದವು. ಚಲುವಾಚಾರಿ ತಲೆಮಾರಿಗೆ ಮೂರ್ತಿ ಶಿಲ್ಪ ಆಗಿಬರಲಿಲ್ಲವೆಂದು ಬಿಟ್ಟು ಒಡವೆ ಮಾಡುವುದರಲ್ಲಿ ಅವನ ಮನೆಯವರು ತೃಪ್ತರಾಗಿದ್ದರು.

ಚಲುವಾಚಾರಿಗೆ ಮೊದಲಿನಿಂದಲೂ ಹುಲ್ಲೂರು ಶಾಸ್ತ್ರಿಗಳ ಮೇಲೆ ಭಕ್ತಿ. ಶಾಸ್ತ್ರಿಗಳ ಮನೆಯಲ್ಲಿ ಯಾವ ಒಡವೆಯಾಗಬೇಕಾದರೂ ಚಲುವಾಚಾರಿಯೇ ಬರಬೇಕು, ಅವನೇ ಮಾಡಿಕೊಡಬೇಕು. ಚಲುವಾಚಾರಿ ಮನೆಯಲ್ಲಿ ಯಾವ ಮಂಗಳ ಕೆಲಸವಾಗಬೇಕಾದರೂ ಶಾಸ್ತ್ರಿಗಳೇ ಮಹೂರ್ತ ಇಟ್ಟುಕೊಡಬೇಕು.

ಕಾಳಾಚಾರಿ ಮಲಯಾಳದಿಂದ ಹಿಂದಿರುಗಿ ಸಂಪಿಗೆಯಲ್ಲೇ ನೆಲಸಿದ ಮೇಲೆ ಹುಲ್ಲೂರಿನವರಿಗೂ ಸಂಪಿಗೆಯವರಿಗೂ ಇದ್ದ ಮಧುರ ಸಂಬಂಧ ಮಾಸುತ್ತ ಬಂತು. ತನ್ನ ಸ್ವಜಾತಿ ಜನಗಳನ್ನು ಕಾಳಾಚಾರಿ ಕೈಯಲ್ಲಿ ಹಿಡಿದು ಅವರ ಮೇಲೆ ದರ್ಪ ತೋರಿಸುತ್ತಿದ್ದಂತೆ ಸುತ್ತಮುತ್ತ ಇದ್ದ ಇತರರ ಮೇಲೂ ಪ್ರಭಾವ ಬೀರತೊಡಗಿದ. ಏನೇ ಆದರೂ ಚಲುವಾಚಾರಿ ಮನಸ್ಸು ತಡೆಯದು. ತಿಂಗಳಿಗೊಮ್ಮೆಯಾದರೂ ಕದ್ದುಹೋಗಿ ಶಾಸ್ತ್ರಿ ಗಳನ್ನು ಕಂಡುಬರಬೇಕು. ಒಮ್ಮೆ ಇದು ಪತ್ತೆಯಾಗಿ ಕಾಳಾಚಾರಿ ಅವನಿಗೆ

'ತಾಕೀತು' ಮಾಡಿ ಇನ್ನು ಮುಂದೆ ಹುಲ್ಲೂರಿಗೆ ಅಲೆದರೆ ಸ್ಥಿತಿ ನೆಟ್ಟಗಾಗುವುದಿಲ್ಲವೆಂದು ಹನುಮನಿಂದ ಬೆದರಿಕೆ ಹಾಕಿಸಿದ್ದ. ಇದನ್ನು ಚೆಲುವಾಚಾರಿ ಸೂಕ್ಷ್ಮವಾಗಿ ಶಾಸ್ತ್ರಿಗಳಿಗೆ ತಿಳಿಸಿ ಅವರ ಕ್ಷಮೆ ಬೇಡಿದ್ದ. ಶಾಸ್ತ್ರಿಗಳು

"ನೀನು ಯಾವ ತೊಂದರೆಗೂ ಸಿಕ್ಕಿಕೊಳ್ಳಬೇಡಪ್ಪಾ. ಕೆಲಸಬಿದ್ದರೆ ನಾನೇ ಯಾರನ್ನಾದರೂ ಸಂಪಿಗೆಗೆ ಕಳುಹಿಸುತ್ತೇನೆ. ದೇಹ ದೂರವಿದ್ದರೇನು ವಿಶ್ವಾಸ ಹೋಗುತ್ತದೆಯೇ?"

ಎಂದು ಸಮಾಧಾನ ಹೇಳಿದ್ದರು.

ಸಂತೇಹಳ್ಳಿ ಬಿಟ್ಟು ಎರಡು ಮೈಲು ಬಂದರೆ ಪೂರ್ವಕ್ಕೆ ಒಂದು ರಸ್ತೆ ಹೊರಳುತ್ತಿತ್ತು ಅದೇ ಸಂಪಿಗೆಹಳ್ಳಿ. ಸಂಪಿಗೆಹಳ್ಳಿಗೆ ಸ್ವಲ್ಪದೂರದಲ್ಲಿ ಒಂದು ಮಾವಿನ ತೋಪು-ತೋಪಿನಾಚೆ ಕಾಳಾಚಾರಿಯ ಒಂದೇ ಮನೆ. ಅದು ಮೊದಲು ಹಾಳು ಮಂಟಪವಾಗಿತ್ತು. ದೆವ್ವಗಳು ಬಂದು ಸೇರಿಕೊಂಡಿವೆಯೆಂದು ಜನ ಮುಚ್ಚಂಜೆಯಾದ ಮೇಲೆ ಅತ್ತ ಹೋಗಲು ಹೆದರುತ್ತಿದ್ದರು. ಕಾಳಾಚಾರಿ ಅದನ್ನು ಆಕ್ರಮಿಸಿಕೊಂಡು, ಅಕ್ಕಪಕ್ಕದಲ್ಲಿದ್ದ ಕಲ್ಲುಚಪ್ಪಡಿಗಳನ್ನೆಲ್ಲಾ ಉಪಯೋಗಿಸಿಕೊಂಡು ತನ್ನ ವಾಸಕ್ಕೆ ಮನೆ ಕಟ್ಟಿಕೊಂಡಿದ್ದ. ಅವನ ಮನೆಗೆ ಸ್ಮಶಾನ ತುಂಬ ಸಮೀಪವಾಗಿತ್ತು.

ಹನುಮನನ್ನು ಬಿಟ್ಟರೆ ಕಾಳಾಚಾರಿ ಮನೆಯಲ್ಲಿದ್ದವಳು ಭದ್ರಮ್ಮ. ಅವಳು ಕಾಳಾಚಾರಿಯ ಹೆಂಡತಿಯಲ್ಲವೆಂದು ಎಲ್ಲರಿಗೂ ಗೊತ್ತು. ಆದರೆ ಅದನ್ನು ಹೇಳಲು ಯಾರಿಗೂ ಬಾಯಿಲ್ಲ.

ಕಾಳಾಚಾರಿಯ ಈಡಿಗೆ ತಕ್ಕ ಹೆಂಗಸು ಭದ್ರಮ್ಮ. ಕಣ್ಣು ಕುಕ್ಕಿಸುವ ಎತ್ತರ, ರೂಪು ಎರಡೂ ಅವಳಲ್ಲಿತ್ತು. ಮಾಟವಾದ ಮೈಕಟ್ಟು-ಚುಚ್ಚುವ ಕಣ್ಣುಗಳು ಅವಳನ್ನು ಸುಂದರಿಯರ ಗುಂಪಿಗೆ ಸೇರಿಸಿದ್ದವು.

ಜನ ಕಾಳಾಚಾರೀಗೆ ಹೆದರುವುದು ಹಾಗಿರಲಿ. ಭದ್ರಮ್ಮ ಅವನ ಹೆಸರು, ಧ್ವನಿ ಕೇಳಿದರೆ ನಡುಗುತ್ತಿದ್ದಳು. ಆಚಾರಿ ಏನು ಆಡಿದರೂ ಎದುರು ನುಡಿಯುವ ಧೈರ್ಯ ಅವಳಿಗಿಲ್ಲ; ಏನು ಮಾಡಿದರೂ ಪ್ರತಿ ಹೇಳುವ ಗುಂಡಿಗೆಯಿಲ್ಲ.

ಆಚಾರಿ ಇಬ್ಬರಿಗೆ ಮಾತ್ರ ತನ್ನ ಜನ್ಮದಲ್ಲಿ ಹೆದರುತ್ತಿದ್ದ. ನಾಗಪ್ಪ; ನಾರಾಯಣ ಶಾಸ್ತ್ರಿಗಳು. ನಾಗಪ್ಪನ ಕಥೆ ಮುಗಿಸಿ, ಅವನ ಕೈಕಾಲು ಮುರಿದು ಮನೆಯಲ್ಲಿ ಮುದರಿಕೊಳ್ಳುವಂತೆ ಮಾಡಿದ. ಆದರೆ ಸಾತ್ವಿಕರಾದ ಶಾಸ್ತ್ರಿಗಳ ಮುಂದೆ ಅವನ ಪುಂಡಾಟ, ದುರ್ವಿದ್ಯೆ ಎರಡೂ ನಿರರ್ಥಕವಾಗಿದ್ದವು. ಪ್ರತೀಕಾರದ ದಳ್ಳುರಿ ಅವನ ಮನಸ್ಸಿನಲ್ಲಿ ಹೊಗೆಯಾಡುತ್ತಿತ್ತು. ಅಸಹಾಯಕತೆ ಅವನ ಕೋಪಾಗ್ನಿಗೆ ಮತ್ತಷ್ಟು ಆಜ್ಯ ಸುರಿದಿತ್ತು.

ನಾಗಪ್ಪನಿಗಾದ ಪರಾಭವ ಸತ್ಯದ ಮುಖಕ್ಕೆ ಮಸಿ ಬಳಿದಂತಾಗಿತ್ತು. ಎಲ್ಲರೂ ನಾಗಪ್ಪನಿಗಾಗಿ ಕನಿಕರಗೊಂಡಿದ್ದರು. ಕಾಳಾಚಾರಿಯ ದೌರ್ಜನ್ಯಕ್ಕೆ ಇಡೀ ಪ್ರಾಂತ್ಯವೇ ಕಿಡಿಕಿಡಿಯಾಗಿತ್ತು. ಆದರೆ ಯಾರೂ ಕಾಳಾಚಾರಿಯ ಕಿರುಬೆರಳನ್ನು ಅಲುಗಾಡಿಸಲು ಸಾಧ್ಯವಾಗಿರಲಿಲ್ಲ. ನಾಗಪ್ಪನಿಗಾದ ಗತಿಕಂಡು ಎಲ್ಲರಿಗೂ ಸಿಡಿಲು ಬಡಿದಂತಾಗಿತ್ತು

ಮೊದಮೊದಲು ಕಾಳಾಚಾರಿ, ನಾಗಪ್ಪ ಇಬ್ಬರೂ ಸ್ನೇಹಿತರಾಗಿ ವಿಶ್ವಾಸದಿಂದಲೇ ಇದ್ದರು. ಇಬ್ಬರು ವಾಮಾಚಾರ ಪರಾಯಣರು. ಕಾಳಾಚಾರಿ ಮಹಾಗಣಪತಿಯನ್ನಾಶ್ರಯಿಸಿದ್ದರೆ, ನಾಗಪ್ಪ ಮಹಾಕಾಳಿಯನ್ನು ಆಶ್ರಯಿಸಿದ್ದ.

ಸಂಪಿಗೆ ಶ್ರೀಕಂಠಪ್ಪ ಇವರಿಬ್ಬರ ಸ್ನೇಹಿತನಾಗಿದ್ದ. ಆ ಹಳ್ಳಿಯಲ್ಲಿ ಸ್ವಲ್ಪ ಒಳ್ಳೆಯ 'ಕುಳ' ಅನಿಸಿಕೊಂಡಿದ್ದ. ಹತ್ತಾರು ಎಕರೆ ಹೊಲ, ನಾಲ್ಕು ಎಕರೆ ಗದ್ದೆಯಿತ್ತು. ಮನೆಯಲ್ಲಿ ಮೂರು ಜತೆ ಎತ್ತು ಕಟ್ಟಿದ್ದ. ಸ್ವಂತ ಆರಂಭ ಮಾಡಿಕೊಂಡು ನೆಮ್ಮದಿಯಾಗಿದ್ದ.

ಶ್ರೀಕಂಠಪ್ಪ ಲಗ್ನವಾಗಿ ಭದ್ರಮ್ಮನನ್ನು ಮನೆಗೆ ಕರೆದುಕೊಂಡು ಬಂದ. ಅವಳ ಮೇಲೆ ಕಾಳಾಚಾರಿ ಕಣ್ಣುಹಾಕಿ, ಒಳಗೊಳಗೇ ಮಸಲತ್ತು ಮಾಡಲಾರಂಭಿಸಿದ. ಭದ್ರಮ್ಮ ಯಾವದಕ್ಕೂ ಅವಕಾಶಕೊಡದೆ ಗಂಡನನ್ನೇ ನಂಬಿಕೊಂಡು ಅವನ ವಿಚಾರದಲ್ಲಿ ಸತ್ಯವಾಗಿ ನಡೆದುಕೊಳ್ಳುತ್ತಿದ್ದಳು. ಕಾಳಾಚಾರಿ, ನಾಗಪ್ಪ ಇಬ್ಬರೂ ಆಗಾಗ್ಗೆ ಶ್ರೀಕಂಠಪ್ಪನ ಮನೆಗೆ ಬಂದು ಸಾವಕಾಶವಾಗಿ ಕುಳಿತು ಹರಟೆ ಹೊಡೆದು, ರೊಟ್ಟಿಯೋ ಗುಗ್ಗರಿಯೋ

ತಿಂದು ಹೋಗುವುದು ವಾಡಿಕೆಯಾಗಿತ್ತು. ಭದ್ರಮ್ಮ ಅವರಿಬ್ಬರನ್ನೂ ಅಣ್ಣಂದಿರೆಂದು ಭಾವಿಸಿಕೊಂಡು ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದಳು.

ಒಂದು ದಿನ ಶ್ರೀಕಂಠಪ್ಪ ಇನ್ನೂ ಹೊಲದಿಂದ ಹಿಂದಿರುಗಿರಲಿಲ್ಲ. ಕೆರೆಗೆ ಹೋದ ಭದ್ರಮ್ಮ ಸಾಲೆ ಕಸಕಿಕೊಂಡು ನೀರು ತರಲು ಸ್ವಲ್ಪ ವೇಳೆ ಹಿಡಿಯಿತು. ಸಂಜೆಗತ್ತಲೆ ಇಣಕು ಹಾಕುವುದಕ್ಕಾರಂಭಿಸಿತು. ಅವಳು ನೆನೆದ ಸಾಲೆಗಳನ್ನು ಹೆಗಲಮೇಲೆ ಹಾಕಿಕೊಂಡು, ಒಂದರ ಮೇಲೊಂದು ನೀರಿನ ಪಾತ್ರೆ ತಲೆಯ ಮೇಲೆ ಹೊತ್ತು ಬರುತ್ತಿರುವಾಗ್ಗೆ ಎದುರಿಗೆ ಕಾಳಾಚಾರಿ ಕಾಣಿಸಿಕೊಂಡು

"ಏನು ಭದ್ರಾ, ಕೆರೆಗೆ ಹೋಗಿದ್ದೆಯಾ" ಎಂದ.

"ಹೌದು ಆಚಾರ್ರೆ, ಮನೇಲಿ ಕೆಲಸವಿತ್ತು. ಬೇಗ ಹೋಗುವುದಕ್ಕಾಗಲಿಲ್ಲ. ಸಂಜೆಯಾಗಿ ಹೋಯ್ತು."

"ಒಳ್ಳೆಯದಾಯಿತು ಬಿಡು"

ಎಂದು ವಿಕಟವಾಗಿ ನಕ್ಕ. ಅವನ ಇಂಗಿತವನ್ನು ಅರ್ಥಮಾಡಿಕೊಂಡ ಭದ್ರಮ್ಮ ಜೇಗ ಜೇಗ ಕಾಲು ಹಾಕುವುದಕ್ಕಾರಂಭಿಸಿದಳು. ಆಚಾರಿ ಅವಳ ರಟ್ಟೆಹಿಡಿದ. ಅವನು ಹಿಡಿದ ರಭಸಕ್ಕೆ ತಲೆಯ ಮೇಲಿದ್ದ ಪಾತ್ರೆಗಳು ಕೆಳಗೆ ಬಿದ್ದು ನೀರು ಚೆಲ್ಲಿ ಹೋಯಿತು.

"ಇದೇನಪ್ಪಾ ಹುಡುಗಾಟ" ಎಂದು ಭದ್ರಮ್ಮ ಕೇಳಿದಳು.

"ಮನೆಗೆ ಬಂದು ಹೋಗು ಭದ್ರಾ, ಮಾತನ್ನಾಡಬೇಕಾಗಿದೆ."

"ಅಂಥ ಮಾತಿದ್ರೆ ನಾಳೆ ಅವರನ್ನು ಕರ್‍ಕೊಂಡು ಬರ್ತೀನಿ. ರಸ್ತೇಲಿ ನನ್ನ ರಟ್ಟೆ ಹಿಡಿಯೋದು ಯಾವ ಮರ್ಯಾದೆ."

"ಇರಲಿ ಬಾರೆ...."

ಎಂದು ಪೀಡಿಸತೊಡಗಿದ. ಭದ್ರಮ್ಮ ಅವನ ಹಿಡಿತದಿಂದ ತಪ್ಪಿಸಿಕೊಂಡು, ಕೆಳಗೆ ಬಿದ್ದಿದ್ದ ಪಾತ್ರೆಗಳನ್ನು ಬಿಟ್ಟು ಮನೆಗೆ ಓಡಿಬಿಟ್ಟಳು.

ಗಂಡ ಮನೆಗೆ ಬಂದಕೂಡಲೆ ಕಾಳಾಚಾರಿಯ ನಡತೆಯನ್ನವನಿಗೆ ತಿಳಿಸಿ, ಗೋಳೋ ಎಂದು ಅತ್ತಳು.

"ಬೆಳಗಾಗಲಿ ಸುಮ್ಮನಿರು. ನಾಗಪ್ಪನಿಗೆ ಹೇಳಿ ಆಚಾರೀಗೆ ತಕ್ಕದ್ದು ಮಾಡಿಸೋಣ"

ಎಂದು ಶ್ರೀಕಂಠಪ್ಪ ಹೆಂಡತಿಯನ್ನು ಸಮಾಧಾನ ಮಾಡಿದ.

ಮೂರನೆಯ ಬೆಳಿಗ್ಗೆ ನಾಗಪ್ಪನಿಗೆ ಸುದ್ದಿ ಮುಟ್ಟಿಸಿದ.

ಶ್ರೀಕಂಠಪ್ಪನ ವೃತ್ತಾಂತ ಕೇಳಿ ನಾಗಪ್ಪ ಅವಾಕ್ಕಾದ.

"ಎಲ್ಲಾದರೂ ಉಂಟೇ? ಸ್ನೇಹಿತನ ಹೆಂಡತಿಯಂದರೆ ತಾಯಿ ಸಮಾನವಲ್ಲವೇ. ಕಾಳಾಚಾರೀಗೇನು ಬಂತು ದುರ್ಬುದ್ಧಿ"

ಎಂದು ಪರಿತಾಪಪಟ್ಟ.

ಅಂದೇ ಅವನು ಕಾಳಾಚಾರಿ ಮನೆಗೆ ಹೋದ. ನಾಗಪ್ಪ ಬಂದಿದ್ದ ಉದ್ದೇಶ ಊಹಿಸುವುದರಲ್ಲಿ ಕಾಳಾಚಾರೀಗೆ ತಡವಾಗಲಿಲ್ಲ. ನಾಗಪ್ಪನಿಗೆ ದ್ರಾವಿಡ ಪ್ರಾಣಾಯಾಮ ಮಾಡುವ ಉದ್ದೇಶವೂ ಇರಲಿಲ್ಲ.

"ಇದೆಲ್ಲಾ ಚೆನ್ನಾಗಿಲ್ಲ ಆಚಾರೀ?"

"ಏನಯ್ಯಾ ಚೆನ್ನಾಗಿಲ್ಲದೆ ಇರೋದು."

"ನೀನು ಭದ್ರಮ್ಮನ ಕೆಣಕಿದ ವಿಷಯ. ಶ್ರೀಕಂಠಪ್ಪ ನಮ್ಮ ಸ್ನೇಹಿತ. ಅವನ ಮರ್ಯಾದೆ, ನಮ್ಮ ಮರ್ಯಾದೆ. ನಾವು ಮೂವ್ವರೂ ಅಣ್ಣತಮ್ಮಂದಿರ ಹಾಗೆ ಇದ್ದೇವೆ. ನಮ್ಮ ಮಧ್ಯೆ ಇಂಥ ಅವಿವೇಕ ಸಂಭವಿಸಬಾರದು."

"ನಾಗಪ್ಪ, ನನ್ನ ಸ್ವಂತ ವಿಷಯಕ್ಕೆ ಯಾರು ಕೈಹಾಕಿದರೂ ನಾನು ಸಹಿಸುವುದಿಲ್ಲ. ಇದು ನಿನಗೆ ಸಂಬಂಧಪಟ್ಟ ಮಾತಲ್ಲ. ಕಂಡವರ ಮಾತಿಗೆ ನೀನು ಬಾಯಿ ಹಾಕಿಕೊಂಡು ಬರಬೇಡ."

"ಹೀಗೆ ಮಾತಾಡೋದು ನ್ಯಾಯವೇನೋ ಆಚಾರಿ. ಇದು ಸ್ನೇಹ ಧರ್ಮವೇನೋ?"

"ಹೋಗಯ್ಯ ಹೋಗು. ಮಹಾಧರ್ಮ ಕಂಡೋನು"

ಎಂದು ಅವನನ್ನು ತಿರಸ್ಕರಿಸಿಬಿಟ್ಟ.

ತನಗಾದ ಪಾಡನ್ನು ನಾಗಪ್ಪ ಶ್ರೀಕಂಠಪ್ಪನಿಗೆ ತಿಳಿಸಿ

"ನಾರಾಯಣ ಶಾಸ್ತ್ರಿಗಳಲ್ಲಿ ದೂರು ಹೇಳದೆ ನಿರ್ವಾಹವಿಲ್ಲ. ಆಚಾರಿ ಅವರ ಮಾತಿಗೆ ಸ್ವಲ್ಪ ಬೆಲೆ ಕೊಡುತ್ತಾನೆ"

ಎಂದು ಹೇಳಿದ. ಅಂದೇ ಅವನೂ ಶ್ರೀಕಂಠಪ್ಪ ಕೂಡಿ ಹುಲ್ಲೂರಿಗೆ ಹೋಗಿ ಶಾಸ್ತ್ರಿಗಳಿಗೆ ದೂರು ಹೇಳಿದರು.

"ಏನು ಪಾಪಭೂಯಿಷ್ಠವಾಗುತ್ತಿದೆ ಹಾಳು ಪ್ರಪಂಚ"

ಎಂದು ಶಾಸ್ತ್ರಿಗಳು ವಿಷಾದಗೊಂಡು ಕಾಳಾಚಾರಿಗೆ ಬುದ್ಧಿ ಹೇಳುವುದಾಗಿ ಆಶ್ವಾಸನ ಕೊಟ್ಟರು.

ಶಾಸ್ತ್ರಿಗಳು ವಿಳಂಬಮಾಡದೆ ಕಾಳಾಚಾರಿಯನ್ನು ಕರೆಸಿ ಚೆನ್ನಾಗಿ ಛೀಮಾರಿ ಮಾಡಿ ಕಳಿಸಿದರು.

ಶಾಸ್ತ್ರಿಗಳ ಮಾತಿಗೆ ಪ್ರತಿ ಹೇಳಲಾಗದೆ ತನಗಾದ ಅಪಮಾನಕ್ಕೆ ತಲೆ ತಗ್ಗಿಸಿ ಕಾಳಾಚಾರಿ ಒಳಗೇ ಕುದಿಯತೊಡಗಿದ. ಅಂದಿನಿಂದ ಅವನಿಗೂ ನಾಗಪ್ಪನಿಗೂ, ಬದ್ಧದ್ವೇಷ ಆರಂಭವಾಯಿತು.

ಕಾಳಾಚಾರಿ ಭದ್ರಮ್ಮನ ಮೇಲಿನ ಹಂಬಲು ತೊರೆಯಲಿಲ್ಲ. ಹದಿನೈದು ದಿನಗಳು ಕಳೆದವು. ಒಂದು ದಿನ ಹೊಲದಿಂದ ಮನೆಗೆ ಬಂದ ಶ್ರೀಕಂಠಪ್ಪ ಮೈಕೈ ನೋವು ಎಂದು ಹೇಳಿ ಮಲಗಿದ. ರಾತ್ರಿ ವಿಪರೀತ ಜ್ವರ ಬಂದುಬಿಟ್ಟಿತು.

ಮಾರನೆಯ ದಿನ ಶ್ರೀಕಂಠಪ್ಪ ಏಳಲು ಪ್ರಯತ್ನಿಸುತ್ತಾನೆ. ಸಾಧ್ಯವಾಗದು. ಪಾರ್ಶ್ವವಾಯು ಬಡಿದಂತೆ ಬಲಭಾಗ ಸಂಪೂರ್ಣವಾಗಿ ಬಿದ್ದು ಹೋಗಿತ್ತು. ಬಲಗೈ, ಬಲಗಾಲು ಮರದ ಕೊರಡಿನಂತೆ ಬಿದ್ದಿದ್ದವು. ಬಲದ ಕಣ್ಣು ಮೇಲಕ್ಕೆ ಸಿಕ್ಕಿಕೊಂಡಿತು. ಭದ್ರಮ್ಮ ಅಳುತ್ತಾ ನಾಗಪ್ಪನನ್ನು ಹೇಳಿಕಳುಹಿಸಿ ಬರಮಾಡಿಕೊಂಡಳು.

ಶ್ರೀಕಂಠಪ್ಪನಿಗೆ ಬಂದ ಅವಸ್ಥೆ ಕಂಡು ನಾಗಪ್ಪ ಮಮ್ಮಲ ಮರುಗಿದ.

"ನೀನು ಹೆದರಬೇಡ ಭದ್ರಮ್ಮ. ನಾನು ನೋಡಿಕೊಳ್ಳುತ್ತೇನೆ. ಇದೆಲ್ಲಾ ಕಾಳಾಚಾರಿ ಕೈವಾಡ"

ಎಂದು ಭದ್ರಮ್ಮನಿಗೆ ಧೈರ್ಯ ಹೇಳಿದ.

ನಾಗಪ್ಪ ಶ್ರೀಕಂಠಪ್ಪನ ಹಾಸಿಗೆಯ ಸುತ್ತ ಬಣ್ಣ ಬಣ್ಣದ ಅಕ್ಕಿಗಳಲ್ಲಿ ರಂಗವಲ್ಲಿ ಹಾಕಿ, ನಿಂಬೆಯಹಣ್ಣು ಮಂತ್ರಿಸಿ ಅವನ ಸುತ್ತ ಚೆಲ್ಲಿದ. ಅವನೆದುರಿಗೆ ಒಂದು ಚಕ್ರ ಬರೆದು ಅದಕ್ಕೆ ಪೂಜೆಮಾಡಿದ.

ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಶ್ರೀಕಂಠಪ್ಪನ ಪರಿಸ್ಥಿತಿ ಸುಧಾರಿಸಿತು. ಕಣ್ಣು ನೆಟ್ಟಗಾಯಿತು. ಕೈಕಾಲು ಸ್ವಲ್ಪ ಚಲಿಸುವಂತಾಯಿತು. ನಾಗಪ್ಪ ಪೂಜೆಯನ್ನು ಮತ್ತಷ್ಟು ಹೆಚ್ಚಿಸಿ ನಿಂಬೆಯ ಹಣ್ಣು ಮಂತ್ರಿಸಿ ಮನೆಯ ಎಂಟು ಮೂಲೆಗೂ ಚೆಲ್ಲಿದ.

ಮಾರನೆಯ ದಿನ ಶ್ರೀಕಂಠಪ್ಪನ ಸ್ಥಿತಿ ವಿಚಿತ್ರಅವಸ್ಥೆಗೊಳಗಾಯಿತು. ಅವನ ಹಾಸಿಗೆಯ ಬಳಿ ಕುಳಿತು ನಾಗಪ್ಪ ತಾನು ಕಲಿತಿದ್ದ ಮಂತ್ರವಿದ್ಯೆಯನ್ನೆಲ್ಲಾ ಪ್ರಯೋಗಿಸಿದ. ಶ್ರೀಕಂಠಪ್ಪನಿಗೆ ನರಕಯಾತನೆಯಾಗುತ್ತಿತ್ತು.

ಹಾಗೂ ಹೀಗೂ ಬೆಳಗ್ಗೆ ಕಳೆಯಿತು. ರಾತ್ರಿಯೇನುಗತಿ ಎಂದು ಭದ್ರಮ್ಮ, ನಾಗಪ್ಪ ಬಾಯಿಗೆ ಅಕ್ಕೀಕಾಳು ಹಾಕಿಕೊಂಡು ಕುಳಿತಿದ್ದರು.

ಒಂಭತ್ತು ಗಂಟೆಯ ಸುಮಾರಿಗೆ ಶ್ರೀಕಂಠಪ್ಪ ಸಿಡಿದೆದ್ದು ನಿಂತು ನಾಗಪ್ಪನ ಮೇಲೆ ಕಣ್ಣು ಕೆರಳಿಸಿ, ಹಲ್ಲು ಹಲ್ಲು ಕಡಿಯುವುದಕ್ಕಾರಂಭಿದ. ನಾಗಪ್ಪ ಪ್ರಯೋಗಿಸಿದ ಪ್ರತಿಮಂತ್ರ ನಿಷ್ಪ್ರಯೋಜಕವಾಯಿತು. ಶ್ರೀಕಂಠಪ್ಪ ಕೆಟ್ಟ ಧ್ವನಿಯಲ್ಲಿ ಚೀರುತ್ತ ಕೆಳಗೆ ಬಿದ್ದ. ಅವನ ಪ್ರಾಣ ಹಾರಿಹೋಗಿತ್ತು.

ಭದ್ರಮ್ಮ ನಿಶ್ಚೇಷ್ಠಿತಳಾಗಿ ಬಿದ್ದುಬಿಟ್ಟಳು. ನಾಗಪ್ಪ ಅವಳ ಶಿಶ್ರೂಷೆ ಮಾಡಿದ.

ಮಾರನೆಯ ದಿನ ಊರಿನವರು ಕೂಡಿ ಪಶ್ಚಾತ್ತಾಪ ವ್ಯಕ್ತಮಾಡಿ ಶ್ರೀಕಂಠಪ್ಪನನ್ನು ಮಣ್ಣುಮಾಡಿದರು. ನಾಗಪ್ಪ ಭದ್ರಮ್ಮನಿಗೆ ಸಮಾಧಾನದ ಮಾತು ಹೇಳಿ ಮನೆಗೆ ಹಿಂದಿರುಗಿದ.

ಗಂಡ ತೀರಿಕೊಂಡ ಮೂರು ದಿನ ಭದ್ರಮ್ಮ ಮನೆಬಿಟ್ಟು ಹೊರಗೆ ಕದಲಲಿಲ್ಲ. ನಾಲ್ಕನೆಯ ದಿನ ತಾನೇ ಬೇಗ ಎದ್ದು ಕೆರೆಗೆ ಹೋಗಿ ಸ್ನಾನ ಮಾಡಿ ಬಂದು, ಅಡಿಗೆಮಾಡಿ ಊಟ ತೀರಿಸಿಕೊಂಡು, ಬಾಯಿ ತುಂಬ ತಾಂಬೂಲ ಹಾಕಿಕೊಂಡು, ಹೊಸ ಸೀರೆ ಉಟ್ಟುಕೊಂಡು, ಮನೆಯಲ್ಲಿದ್ದ

ಆಭರಣವನ್ನೆಲ್ಲಾ ಹೇರಿಕೊಂಡು, ತಲೆ ಬಾಚಿ ಹೂ ಮುಡಿದುಕೊಂಡು ನಸುನಗುತ್ತಾ ಹಾಡು ಹಗಲಿನಲ್ಲಿ, ಎಲ್ಲರೆದುರಿಗೆ ಕಾಳಾಚಾರಿ ಮನೆಗೆ ಹೊರಟುಹೋದಳು.

ಊರಿನವರು ಆ ದೃಶ್ಯ ಕಂಡು ತಲ್ಲಣಗೊಂಡರು. ನಾಗಪ್ಪನಿಗೂ ಸುದ್ದಿ ಮುಟ್ಟಿತು. ಶಾಸ್ತ್ರಿಗಳಿಗೂ ಸುದ್ದಿ ತಲುಪಿತು.

ಅಂದಿನಿಂದ ಭದ್ರಮ್ಮ ಕಾಳಾಚಾರಿಯ ಮನೆಯಲ್ಲೇ ಇರತೊಡಗಿದಳು. ಶ್ರೀಕಂಠಪ್ಪನ ಚರ, ಸ್ಥಿರ ಸಮಸ್ತ ಸ್ವತ್ತನ್ನೂ ಕಾಳಾಚಾರಿ ಕೈವಶಪಡಿಸಿಕೊಂಡ.

ಊರಿಗೆ ಹಿಂದಿರುಗಿದ ನಾಗಪ್ಪನ ಪಾಡು ಚಿಂತಾಜನಕವಾಯಿತು. ಅವನ ಅಂಗಾಂಗಗಳ ಶಕ್ತಿ ಉಡುಗುತ್ತ ಬಂತು. ಕಣ್ಣು ಮಂಜಾಗುತ್ತ ಬಂತು. ಎದ್ದರೆ ಕೂಡಲಾಗುತ್ತಿರಲಿಲ್ಲ, ಕುಳಿತರೆ ಏಳಲಾಗುತ್ತಿರಲಿಲ್ಲ.

ಕೆಲವು ದಿವಸಗಳ ತರುವಾಯ ನಾಗಪ್ಪನ ಬಾಯಲ್ಲಿನ ಹಲ್ಲುಗಳು ಒಂದೊಂದಾಗಿ ಉದುರಲಾರಂಭಿಸಿದವು.

ಕಾಳಾಚಾರಿಯ ಪ್ರಯೋಗಕ್ಕೆ ನಾಗಪ್ಪ ನಡೆಸಿದ ಮರುಪ್ರಯೋಗ ಯಾವ ಪ್ರಯೋಜನಕ್ಕೂ ಬರಲಿಲ್ಲ.

"ನನ್ನ ಶಕ್ತಿ ಹೀರಿ, ನನ್ನ ಕೊಂದುಬಿಟ್ಟ ಪಾಪಿ"

ಎಂದು ನಾಗಪ್ಪ ಗೋಳಾಡಿದ.

ಕಾಳಾಚಾರಿಯ ಮೇಲೆ ಕೈಮಾಡಿ ನಾಗಪ್ಪ ಮೂಲೆಗುಂಪಾದ ಎಂದು ಜನ ತಿಳಿದರು. 'ನಾಗಪ್ಪನಿಗೇ ಈಗತಿಯಾದ ಮೇಲೆ ಇನ್ನು ನಮ್ಮ ಪಾಡೇನು' ಎಂದು ಅವರು ಮತ್ತಷ್ಟು ಭಯಗ್ರಸ್ತರಾದರು.

ನಾಗಪ್ಪನ ಪತನಾನಂತರ ಕಾಳಾಚಾರಿಯನ್ನು ಹಿಡಿಯುವವರೇ ಇರಲಿಲ್ಲ. ಅವನ ಹಾವಳಿ ಸಹಿಸುವುದು ಜನಕ್ಕೆ ದುಸ್ಸಾಧ್ಯವಾಗಿತ್ತು. ಆದರೆ ಅದಕ್ಕೆ ಪ್ರತಿಮಾಡಲಾಗದೆ ಅವರು ತೊಳಲಾಡುತ್ತಿದ್ದರು.

೩

ಒಡ್ಡರ ಬಯಲಿಗೆ ನಾಲ್ಕು ಮೈಲಿ ದೂರದಲ್ಲಿ ರೇವತಿ ನದಿ ಹರಿಯು ತ್ತಿತ್ತು. ರೇವತಿಗೆ ಅಣೆಕಟ್ಟು ಹಾಕಿದರೆ ಸುಮಾರು ಇಪ್ಪತ್ತು ಸಾವಿರ ಎಕರೆ ಭೂಮಿ ಬೇಸಾಯಕ್ಕೊದಗುವುದೆಂದು ಸರ್. ಎಂ. ವಿಶ್ವೇಶ್ವರಯ್ಯನ ವರು ಚೀಫ್ ಇಂಜನಿಯರಾಗಿದ್ದಾಗ ಸೂಚಿಸಿದ್ದರು.

ಅನೇಕ ವರ್ಷಗಳ ತರುವಾಯ ಸರ್ಕಾರ ಅಣೆಕಟ್ಟಿನ ಕೆಲಸಕ್ಕೆ ಕೈಹಾಕಿತು. ಕೂಲಿಗಳನ್ನು ಬೇರೆ ಬೇರೆ ಕಡೆಗಳಿಂದ ಆಮದುಮಾಡಿ ಕೊಳ್ಳುತ್ತಿತ್ತು. ಸರ್ಕಾರ ಕೊಡುತ್ತಿದ್ದ ಸೌಲಭ್ಯ, ಕೈತುಂಬ ಕೂಲಿಗೆ ಮಾರುಹೋಗಿ ಎಲೆಮಂಚಹಳ್ಳಿಯಿಂದ ಒಡ್ಡರ ಇಪ್ಪತ್ತು ಸಂಸಾರ ಅಣೆ ಕಟ್ಟಿನ ಕೆಲಸಕ್ಕೆ ಬಂದಿತು. ಅವರನ್ನು ಚಿತ್ತೂರು ಜಿಲ್ಲೆಯಿಂದ ಕರೆತಂದವನು ಮೇಸ್ತ್ರಿ ಹಮೀದ. ಹಮೀದನ ಮೇಲೆ ಇಲ್ಲದಸಲ್ಲದ ದೂರುಹೇಳಿ ಅವನನ್ನು ಹೊರಗೆ ಹಾಕಿ ಓಬಯ್ಯ ಮೇಸ್ತ್ರಿಪಟ್ಟ ಕಟ್ಟಿಕೊಂಡ.

ಒಡ್ಡರ ಇಪ್ಪತ್ತು ಸಂಸಾರ ಎಲೆಮಂಚಹಳ್ಳಿ ಬಿಡುವುದಕ್ಕೆ ಅನ್ನದ ಪ್ರಶ್ನೆ ಕಾರಣವಾಗಿತ್ತು. ಸುತ್ತಮುತ್ತ ಅವರಿಗೆ ಕೆಲಸವಿಲ್ಲ. ಕಟ್ಟುಮುಟ್ಟು ಬೆಳದ ಆಳುಗಳು, ಚೆನ್ನಾಗಿ ತಿನ್ನಬೇಕು. ತಿನ್ನುವುದಕ್ಕಿಂತ ಹೆಚ್ಚಾಗಿ ಅವರು ಕುಡಿಯಬೇಕು. ಹಮೀದ ಬಂದು ಕರೆದ ತಕ್ಷಣ ಇಪ್ಪತ್ತು ಸಂಸಾರ ಅವನ ಜತೆ ಬಂದು ಒಡ್ಡರ ಬಯಲಿನಲ್ಲಿ ಗುಡಿಸಲು ಹಾಕಿಕೊಂಡು ನಿಂತರು.

ಒಡ್ಡರು ಎಲೆಮಂಚಹಳ್ಳಿ ಬಿಡುವುದಕ್ಕೆ ಇನ್ನೂ ಒಂದು ಕಾರಣವಿತ್ತು. ಎಲೆಮಂಚಹಳ್ಳಿಯಲ್ಲಿ ಒಟ್ಟು ನಲತ್ತೈದು ಒಡ್ಡರ ಸಂಸಾರಗಳಿದ್ದವು. ಅವರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಗಳು, ಜ್ಞಾತಿಗಳು. ಹಳ್ಳಿ ಎರಡು ಭಾಗವಾಗಿ ಒಡೆದುಹೋಗಿತ್ತು. ಒಡ್ಡರ ಪುಲ್ಲಯ್ಯನ ಕಡೆ ಕೆಲವರು, ಒಡ್ಡರ ಓಬಯ್ಯನ ಕಡೆ ಕೆಲವರು. ಈ ಗುಂಪುಗಳಿಗೆ ಆಗಿಂದಾಗ್ಗೆ ಜಗಳ, ಘರ್ಷಣೆ ಒದಗುತ್ತಲೇ ಇತ್ತು. ಯಾದವರಂತೆ ಎರಡು ಪಂಗಡದವರೂ ಹೊಟ್ಟೆ ತುಂಬ ಕುಡಿದು, ಮನಸ್ಸು ತುಂಬ ಬಡಿದಾಡುತ್ತಿದ್ದರು.

ಓಬಯ್ಯನಿಗಿಂತ ಪುಲ್ಲಯ್ಯ ಸ್ವಲ್ಪ ಅನುಕೂಲಸ್ಥ. ಅವನಿಗೆ ಸ್ವಲ್ಪ ಹೊಲ ಗದ್ದೆಯೂ ಇತ್ತು, ಕೈಯಲ್ಲಿ ನಾಲ್ಕು ಕಾಸೂ ಓಡಿಯಾಡುತ್ತಿತ್ತು.

ಇದರ ಹಮ್ಮಿನಲ್ಲಿ ಅವನು ಇಳಿ ವಯಸ್ಸಿನಲ್ಲಿ ಮೂರನೆಯ ಸಾರಿ ಲಗ್ನ ವಾಗಿ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬಂದಿದ್ದ.

ಒಡ್ಡರಲ್ಲಿ ನಿಸರ್ಗದತ್ತವಾದ ಸೌಂದರ್ಯವಿರುತ್ತದೆ. ಲಚ್ಮಕ್ಕ ಒಡ್ಡರ ಜಾತಿಗೇ ಕಳಶಪ್ರಾಯಳಾಗಿದ್ದಳು. ಅವಳುಡುತ್ತಿದ್ದುದು ಒಂದು ಬಿಳೀ ಸೀರೆಯಾದರೂ, ಅವಳ ನೀಳವಾದ ಕೇಶರಾಶಿ ದಿವ್ಯಾಭರಣದಂತಿತ್ತು.

ಅವಳು ನಕ್ಕರೆ ಮಲ್ಲಿಗೆ ಹರಡಿದಂತಾಗುತ್ತಿತ್ತು. ನಡೆದರೆ ಭೂಮಿ ನರ್ತಿಸುತ್ತಿತ್ತು. ಕುತ್ತಿಗೆಗೊಂದು ಸಣ್ಣ ಬೆಳ್ಳಿ ಪಟ್ಟಿ, ಕೈಗೆ ಬೆಳ್ಳಿಯ ಕಡಗ, ಕಾಲಿಗೆ ಬೆಳ್ಳಿ ರುಳಿ ಧರಿಸುತ್ತಿದ್ದಳು. ಮುಡಿಯಲ್ಲಿ ಸದಾ ಯಾವ ದಾದರೊಂದು ಕಾಡು ಹೂವು ಕಂಗೊಳಿಸುತ್ತಿರಬೇಕು.

ಲಚ್ಮಕ್ಕ ಕುಪ್ಪಸ ಧರಿಸುತ್ತಿರಲಿಲ್ಲ. ಶ್ರಮಜೀವಿಗಳಾದ ಒಡ್ಡರಲ್ಲಿ ಕುಪ್ಪಸ ಧರಿಸುವ ಸಂಪ್ರದಾಯವೂ ಇರಲಿಲ್ಲ.

ಅರ್ಧನಗ್ನೆಯಾದ ಲಚ್ಮಕ್ಕನನ್ನು ಓಬಯ್ಯನ ಮಗ ವೇಮ ನೋಡಿ ಮನಸ್ಸು ಸೋತ. ಅವಳ ಧ್ಯಾನದಲ್ಲಿ ಅವನು ದಿನದಿನಕ್ಕೆ ಸೊರಗುತ್ತ ಬಂದ.

ದುಡಿಯುವ ಮಗ ಮನೋರೋಗ ಹಚ್ಚಿಕೊಂಡು ಕಂಗಾಲಾಗುತ್ತಿರು ವುದನ್ನು ನೋಡಲಾಗದೆ ಓಬಯ್ಯ ಕೇಳಿದ.

"ಏನೋ-ಏನಾಗಿದೆಯೊ ನಿನಗೆ"

"ಏನೂ ಇಲ್ಲ."

"ಏನೂ ಇಲ್ಲದೆ ಹೀಗೆ ನವೆದುಹೋಗುತ್ತಿದ್ದೀಯಾ ?"

ವೇಮ ಉತ್ತರ ಕೊಡಲಿಲ್ಲ. ಅನುಭವಿಕನಾದ ಓಬಯ್ಯ ಯೋಚಿಸಿ

"ವಯಸ್ಸಾಯಿತು. ಹೆಣ್ಣು ಹುಚ್ಚೇನೋ?"

ವೇಮ ಮೌನವ್ರತ ಧರಿಸಿದ್ದ.

"ಯಾರು ಹೇಳು."

"ನೀನು ಹೊಡೆಯುತ್ತೀಯೇನೋ."

"ಹೇಳು – ಹೊಡೆಯಲ್ಲ."

"ಲಚ್ಮಕ್ಕ............"

"ಪುಲ್ಲಯ್ಯನ ಹೆಂಡತಿ!"

“ಹೌದು.”

“ಅವಳನ್ನು ಹೊತ್ತುಹಾಕಿದರೆ ಪುಲ್ಲಯ್ಯ ಜೀವದೊರಸೆ ಬಿಡುತ್ತಾನೆಯೇ ?”

“ಮುದಿಯ ಅವನೇನು ಮಾಡಬಲ್ಲ.”

“ಅವಳೇನನ್ನುತ್ತಾಳೆ.”

“ನನ್ನ ನೋಡಿ ನಗುತ್ತಾಳೆ.”

“ಅವಳು ಎಲ್ಲರನ್ನೂ ನೋಡಿ ನಗುತ್ತಾಳೆ.”

“ಹಾಗಲ್ಲ – ನನ್ನ ನೋಡಿ ನಗುವ ರೀತಿ ಬೇರೆ.”

“ನೀನು ಕರೆದರೆ ಬರುತ್ತಾಳೆಯೆ?”

“ನಾನು ಕರೆದಿಲ್ಲ.”

“ಕರೆದು ನೋಡು. ಅವಳ ಮನಸ್ಸಿನಲ್ಲಿ ಏನಿದೆ ತಿಳಿದುಕೋ ?”

ತಂದೆ ಕೊಟ್ಟ ಪ್ರೋತ್ಸಾಹಕ್ಕೆ ವೇಮ ಹಿರಿಹಿರಿ ಹಿಗ್ಗಿದ.

ಅವನ ಮಂಕು ಹರಿಯುತ್ತ ಬಂತು. ಕಣ್ಣಲ್ಲಿ ಚಾಪಲ್ಯ, ಚಮತ್ಕಾರ ಮಿನುಗಹತ್ತಿದವು. ಪುಲ್ಲಯ್ಯನ ಕಣ್ಣು ತಪ್ಪಿಸಿ ಲಚ್ಮಕ್ಕನನ್ನು ಕಾಣುವ ಹಂಚಿಕೆ ಹೂಡುವುದರಲ್ಲಿ ಅವನ ಹೊತ್ತು ಸುಖವಾಗಿ ಕಳೆದುಹೋಗುತ್ತಿತ್ತು.

ವೇಮ ಕರ್‍ರಗಿದ್ದರೂ ಲಕ್ಷಣವಾಗಿದ್ದ. ಒಳ್ಳೆಯ ವಯಸ್ಸು, ಒಳ್ಳೆಯ ಮೈಕಟ್ಟು. ತೋಳಿನಲ್ಲಿ ಬಲವೂ ಇತ್ತು, ಬಲವಿದೆಯೆಂದು ಗೊತ್ತೂ ಇತ್ತು.

ಲಚ್ಮಕ್ಕನಿಗೂ ವೇಮನ ಮೇಲೆ ಮನಸ್ಸಿತ್ತು. ಅವನು ಪುಲ್ಲಯ್ಯ ಊರಿನಲ್ಲಿಲ್ಲದ ಸಮಯ ಸಾಧಿಸಿ ಲಚ್ಮಕ್ಕನನ್ನು ಮಾತನಾಡಿಸಿದ. ಗಂಡನಿಗೆ ಹೆದರುವುದಾಗಿ ಅವಳು ತಿಳಿಸಿದಳು. ತಾನೂ, ತನ್ನ ತಂದೆ ಇರುವಾಗ ಭಯವೇನೆಂದು ವೇಮ ಧೈರ್ಯ ಹೇಳಿದ.

ತಂದೆ, ಮಗ ಇಬ್ಬರೂ ಸನ್ನಾಹಮಾಡಿ ಒಂದು ರಾತ್ರಿ ಲಚ್ಮಕ್ಕನನ್ನು ಹೊತ್ತುಹಾಕಿ, ಮದನಪಲ್ಲೀಗೆ ತಮ್ಮ ಹತ್ತಿರದ ಸಂಬಂಧಿಗಳೊಬ್ಬರ ಮನೆಗೆ ಸಾಗುಹಾಕಿ ಬಂದರು.

ಪುಲ್ಲಯ್ಯ, ಅವನ ಕಡೆಯವರು ಲಚ್ಮಕ್ಕನನ್ನು ಕಾಣದೆ ಕಾತರಿಸಿದರು. ಸುತ್ತಮುತ್ತಲಿನ ಹಳ್ಳಿಗಳು, ಮನೆಗಳು, ಕಾಡು, ಭಾವಿ, ಕೆರೆ ಎಲ್ಲಾ ಹುಡುಕಿಬಿಟ್ಟರು. ಲಚ್ಮಕ್ಕನ ಪತ್ತೆ ಸಿಗಲಿಲ್ಲ. ಓಬಯ್ಯ, ವೇಮ ಊರು ಬಿಟ್ಟು ಕದಲಲಿಲ್ಲ. ಈ ಕೃತ್ಯ ಓಬಯ್ಯನದೇ ಇರಬೇಕೆಂದು ಪುಲ್ಲಯ್ಯನಿಗೆ ಅನುಮಾನ. ಆದರೆ ರುಜುವಾತಿಲ್ಲ. ಓಬಯ್ಯನನ್ನು ಎದುರಿಸಿ ಆಕ್ಷೇಪಿಸುವಂತಿರಲಿಲ್ಲ.

ಪುಲ್ಲಯ್ಯನಿಗೆ ಮನೋರೋಗ ಹತ್ತಿತು. ಅವನ ಮಕ್ಕಳು, ಪರಿವಾರ ತಮಗಾದ ಅಪಮಾನಕ್ಕೆ ಕುದಿಯುತ್ತಿದ್ದರು.

ಓಬಯ್ಯನ ಅದೃಷ್ಟಕ್ಕೆ ಸರಿಯಾಗಿ ಹಮೀದಖಾನ್ ಕೂಲಿಗಳ ಶೇಖರಣೆಗೆ ಎಲೆಮಂಚಹಳ್ಳಿಗೆ ಬಂದ. ಓಬಯ್ಯ ಅವನ ಪರಿವಾರದವರು ತಮ್ಮ ಹೆಬ್ಬೆಟ್ಟಿನ ಗುರುತು ಹಾಕಿ ಹಮೀದನ ಜತೆ ಹೋಗಲು ಒಪ್ಪಿಕೊಂಡರು.

ಓಬಯ್ಯನ ಗುಂಪು ಎಲೆಮಂಚಹಳ್ಳಿ ಬಿಡುವುದನ್ನು ನಿಶ್ಚಯಿಸಿದ ಮೇಲಂತೂ ಪುಲ್ಲಯ್ಯನ ಕಡೆಯವರಿಗೆ ಅನುಮಾನ ಪ್ರಬಲವಾಯಿತು. ಅವರ ಮೇಲೆ ಸರ್ಪಕಾವಲಿಟ್ಟರು.

ಓಬಯ್ಯ, ಅವನ ಜನ ಬಂದು ಒಡ್ಡರ ಬಯಲಿನಲ್ಲಿ ನೆಲಸಿದ ಕೆಲವು ದಿನಗಳ ಮೇಲೆ ಗುಪ್ತವಾಗಿ ಲಚ್ಮಕ್ಕನನ್ನು ಮದನಪಲ್ಲಿಯಿಂದ ಕರೆಸಿಕೊಂಡರು. ಅವಳು ಸುಖವಾಗಿ ವೇಮನ ಜತೆ ಸಂಸಾರ ಮಾಡುವುದಕ್ಕಾರಂಭಿಸಿದಳು.

ಪುಲ್ಲಯ್ಯನ ಕಡೆಯವರು ಪೋಲೀಸಿಗೆ ದೂರುಕೊಟ್ಟರು. ಮದರಾಸು ಪೋಲೀಸ್ ಖಾತೆಯವರು ವಿಷಯವನ್ನು ಮೈಸೂರು ಪೋಲೀಸ್ ಖಾತೆಯವರಿಗೆ ಒಪ್ಪಿಸಿದರು.

ಓಬಯ್ಯ ಬಂದು ಒಡ್ಡರ ಬಯಲಲ್ಲಿ ನೆಲಸಿದ ಕೆಲವು ದಿವಸಗಳಲ್ಲಿ ಅವನಿಗೂ ಕಾಳಾಚಾರೀಗೂ ಪರಿಚಯವಾಗಿ, ಸ್ನೇಹವಾಗಿ ಮಾರ್ಪಟ್ಟಿತು. ಓಬಯ್ಯನಿಗೂ ಕಾಳಾಚಾರಿಯಂಥ ಬಲಿಷ್ಠನ ಸಹಾಯ ಬೇಕಾಗಿತ್ತು.

ಕಾಳಾಚಾರೀಗೆ ಓಬಯ್ಯ ಸರಬರಾಯಿ ಮಾಡುತ್ತಿದ್ದ ಕಳ್ಳಭಟ್ಟಿ ಸಾರಾಯಿ, ಹಸೀ ಮಾಂಸ ಬೇಕಾಗಿತ್ತು.

ಮೈಸೂರು ಪೋಲೀಸಿನವರು ಸ್ವಲ್ಪ ಲವಲವಿಕೆ ತೋರಿಸಲಾರಂಭಿಸಿದರು. ಒಬ್ಬ ಸಿ. ಐ. ಡಿ. ಬೇದಿರ್ಸಿನಲ್ಲಿ ಬಂದು ವಿಷಯಸಂಗ್ರಹ ಮಾಡಲೆತ್ನಿಸಿದ. ಓಬಯ್ಯ ಆ ಪ್ರಾಂತ್ಯಕ್ಕೆ ಹೊಸಬನಾದುದರಿಂದ ಯಾರಿಗೂ ಅವನ ಬಗ್ಗೆ ಸರಿಯಾದ ತಿಳುವಳಿಕೆ ಕೊಡಲು ಸಾಧ್ಯವಾಗಲಿಲ್ಲ.

ಆದರೆ ಆಗಾಗ್ಗೆ ಪೋಲೀಸಿನವರು ಒಡ್ಡರ ಬಯಲಿಗೆ ಹೋಗಿ ಅಲ್ಲಿ ಸಿಕ್ಕಿದವನನ್ನು ಹಿಡಿದುಕೊಂಡು ತನಿಖೆ ನಡೆಸಿ ಚಿಲ್ಲರೆ ಕಾಸು ಕಿತ್ತುಕೊಂಡು, ಸಾರಾಯಿ ಕುಡಿದು ಬರುತ್ತಿದ್ದರು. ಓಬಯ್ಯನಿಗೆ ಪೋಲೀಸಿನವರ ಕಿರುಕುಳ ಸಾಕುಸಾಕಾಗಿಹೋಯಿತು.

" ಇದನ್ನು ಏನಾದರೂ ಮಾಡಿ ನಿಲ್ಲಿಸಬೇಕಲ್ಲಾ ಆಚಾರ್ರೇ "

ಎಂದು ಕಾಳಾಚಾರಿಯ ಮರೆಹೊಕ್ಕ.

ಕಾಳಾಚಾರಿ ವಿಚಾರಮಾಡಿ

" ಇದು ನನ್ನ ಕೈಮೀರಿದ ಕೆಲಸ ಓಬ. ನನಗೆ ಸರ್ಕಾರಿ ಅಧಿಕಾರಿಗಳ ಸ್ನೇಹವಿಲ್ಲ, ಅವರನ್ನು ಹಿಡಿದ ಹೊರತೂ ಈ ಕೆಲಸ ಸಾಧಿಸುವುದಿಲ್ಲ. "

" ಏನು ಮಾಡಬೇಕು, ನೀವೇ ಹೇಳಿ ಸೋಮಿ."

" ಹುಲ್ಲೂರು ನಾರಾಯಣಶಾಸ್ತ್ರಿ ಇದ್ದಾನೆ ಗೊತ್ತೋ? "

" ಗೊತ್ತು. "

" ಅವನ ಮನೆಗೆ ಅಧಿಕಾರಿಗಳು ಬಂದು ಬಂದು ತಿಂದು ಹೋಗುತ್ತಾರೆ. ಆ ಶಾಸ್ತ್ರೀನ ಹಿಡಿದರೆ ನಿನ್ನ ಕೆಲಸವಾಗುತ್ತದೆ ನೋಡು. "

" ನೀವೂ ಜತೆಗೆ ಬಂದರೆ ಉತ್ತಮ. "

" ನಾನು ಜತೆಯಲ್ಲಿ ಬಂದರೆ ಆಗುವ ಕೆಲಸವೂ ನಿಂತು ಹೋಗುತ್ತದೆ. ನೀನೇ ಹೋಗು ಶಾಸ್ತ್ರೀನ ಬಾಯಿತುಂಬ ಹೊಗಳು, ಕೆಲಸವಾಗುತ್ತದೆ. "

ಓಬಯ್ಯನ ಮುಖ ಗೆಲುವಾಯಿತು. ತನ್ನ ಸಂಕಷ್ಟ ಇಷ್ಟು ಬೇಗ, ಇಷ್ಟು ಸುಲಭವಾಗಿ ಪರಿಹಾರವಾಗುವುದೆಂದು ಅವನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ.

ಮಾರನೆಯ ದಿನ ಒಂದು ಗೊನೆ ಬಾಳೆಯಹಣ್ಣು, ಒಂದು ಚೀಲ ಹಲಸಿನಕಾಯಿ, ನೂರು ನಿಂಬೇಹಣ್ಣು ವೀಳೆಯದೆಲೆ ಕಟ್ಟು ತೆಗೆದುಕೊಂಡು ಹೋಗಿ ಶಾಸ್ತ್ರಿಗಳ ಪಾದಕ್ಕೆ ಅಡ್ಡಬಿದ್ದ.

" ಏನು ಓಬಯ್ಯಾ, ಇಷ್ಟು ದೂರ ಬಂದು ಬಿಟ್ಟೆ. ಹುಲ್ಲೂರ ದಾರಿ ತಿಳಿಯಿತೇ ? "

" ತಮ್ಮನ್ನಾ ನೋಡಬೇಕು ಅನಿಸಿತು. ಬಂದೆ ದ್ಯಾವರಾ ? ಒಪ್ಪಿಸ್ಕೋಬೇಕು "

" ಏನು ಇದೆಲ್ಲಾ? "

" ಸ್ವಲ್ಪ ಹಣ್ಣು, ಎಲೆ. "

ಓಬಯ್ಯ ಏನೋ ಮಹತ್ತ್ವದ ಕೆಲಸಕ್ಕಾಗಿಯೇ ಬಂದಿದ್ದಾನೆಂದು ಶಾಸ್ತ್ರಿಗಳು ಊಹಿಸಿಕೊಂಡು

" ನಾವು ಇವುಗಳನ್ನೆಲ್ಲಾ ತೆಗೆದುಕೊಳ್ಳುವ ಪದ್ಧತಿಯಿಲ್ಲ ಓಬಯ್ಯ. ಇರಲಿ ನೀನು ಬಂದ ಕೆಲಸವೇನು ಹೇಳು. "

" ತಾವೂ ಏನೂ ಅನ್ಕೋಬಾರದು ದ್ಯಾವರಾ. ಬಡವರು, ನಿಮ್ಮ ಪಾದ ನಂಬಿ ಬದಕೋರು. "

" ಹೇಳಪ್ಪಾ – ಪರವಾಗಿಲ್ಲ."

" ನಮ್ಮ ಹುಡುಗ – ವೇಮ, ಅವನ ಮೇಲೆ ದೊಡ್ಡ ಅಪವಾದ ಬಂದಿದೆ ದ್ಯಾವರಾ ? "

" ಹೂ – ನಾನೂ ಕೇಳಿದೆ. ಎಲೆಮಂಚಹಳ್ಳಿ ಪುಲ್ಲಯ್ಯನ ಹೆಂಡತಿಯನ್ನು ವೇಮ ಹಾರಿಸಿಕೊಂಡು ಬಂದಿದ್ದಾನಂತೆ! "

" ಸುಳ್ಳು ದ್ಯಾವರಾ, ಅವನು ಏನೂ ಅರೀದ ಹುಡುಗ. ಪುಲ್ಲಯ್ಯನಿಗೂ ನಮಗೂ ಲಾಗಾಯಿತ್ತಿನಿಂದ ವ್ಯಾಜ್ಯ. ಸುಮ್ಮನೆ ಜಗಳ ಯಾಕೇಂತ ನಾವು ಆ ಊರೇ ಬಿಟ್ಟು ಇಲ್ಲೀಗೆ ಬಂದೆವು. ಅಲ್ಲೀಗೂ ಅವನು ದ್ವೇಷ ಬಿಡಲಿಲ್ಲ. ಅವನ ಹೆಂಡತೀನ ಯಾರೊ ಹೊಡೆದುಕೊಂಡು ಹೋದರೆ, ವೇಮನ ಮೇಲೆ ಗುಮಾನಿಯಿಟ್ಟು ಪೋಲೀಸಿನವರನ್ನು ಛೂ ಬಿಟ್ಟಿದ್ದಾನೆ."

"ಅದಕ್ಕೆ ನಾನೇನು ಮಾಡುವುದಕ್ಕಾಗುತ್ತದಯ್ಯಾ?"

"ಪೋಲೀಸಿನೋರಿಗೆ ನಮ್ಮ ತರಫೆ ಶಿಫಾರಸ್ಸು ಹೇಳಿ ಈ ಕಾಟ ತಪ್ಪಿಸ್ಬೇಕು ದ್ಯಾವರಾ."

"ನಿಜ ಹೇಳು ಓಬಯ್ಯ, ನಿನ್ನ ಮಗ ಅಂಥ ಕೆಲಸಮಾಡಿಲ್ವೇ?"

"ತಮ್ಮತಾವ ಸುಳ್ಳು ಬೊಂಕತೇನಾ ಬುದ್ಧಿ. ನಮಪ್ಪರಾಣೆಗೂ ವೇಮ ಅಂಥ ಕೆಲಸಕ್ಕೆ ಕೈಹಾಕಿಲ್ಲ."

ಶಾಸ್ತ್ರಿಗಳಿಗೆ ಓಬಯ್ಯನ ಮಾತಿನಲ್ಲಿ ನಂಬಿಕೆ ಹುಟ್ಟಲಿಲ್ಲ.

"ಸರಿ ಹಾಗಾದರೆ, ದೇವರ ಪ್ರಸಾದ ಕೊಡುತ್ತೇನೆ. ಕೈಯಲ್ಲಿ ಹಿಡಿದು ಪ್ರಮಾಣ ಮಾಡಿಬಿಡು."

"ಅದೆಲ್ಲಾ ಯಾಕೆ ದ್ಯಾವರಾ?"

"ನೀನು ಹೇಳುತ್ತಿರುವುದು ಸತ್ಯವಾದರೆ ಭಯವೇತಕ್ಕಯ್ಯಾ?"

"ಸತ್ಯವೋ ಅಸತ್ಯವೋ ನೀವು ಉಪಕಾರ ಮಾಡುತ್ತೀರೋ ಇಲ್ಲವೊ ಬುದ್ಧಿ."

"ಅಸತ್ಯಕ್ಕೆ ಮಣೆಯಾಕುವುದು ನನ್ನ ಜಾಯಮಾನಕ್ಕೆ ಬಂದಿಲ್ಲ ಓಬಯ್ಯ. ನೀನು ಸತ್ಯ ಹೇಳಿದರೆ ಯೋಚನೆಮಾಡಿ ಇದನ್ನು ಹೇಗಾದರೂ ಬಗೆಹರಿಸಬಹುದು"

ಓಬಯ್ಯನಿಗೆ ವಿಪರೀತ ಕಷ್ಟಕ್ಕಿಟ್ಟುಕೊಂಡಿತು.

"ಹೇಳ್ತೀನಿ, ಆದರೆ ವಿಷಯ ನಮ್ಮಿಬ್ಬರಲ್ಲೇ ಇರಬೇಕು ದ್ಯಾವರಾ. ಪೋಲೀಸಿನವರ ತಾವ ನೀವು ಬಾಯಿಬಿಡಬಾರದು."

"ನನ್ನಲ್ಲಿ ನಂಬಿಕೆ ಇದ್ದರೆ ಹೇಳು, ಅದನ್ನು ಕೇಳಿ ತಿಳಿದುಕೊಳ್ಳುವ ಕುತೂಹಲ ನನಗೇನೂ ಇಲ್ಲ."

ನಡೆದ ನಿಜ ಸಂಗತಿಯನ್ನು ಓಬಯ್ಯ ಶಾಸ್ತ್ರಿಗಳಿಗೆ ಒಪ್ಪಿಸಿದ.

"ಈಗ ಹುಡುಗಿ ಎಲ್ಲಿದ್ದಾಳೆ."

"ಇಲ್ಲೇ – ನಮ್ಮ ತಾವಾನೇ ಇದ್ದಾಳೆ."

"ನಾನು ರಾಜಿಮಾಡಿಸುತ್ತೇನೆ, ಆ ಹುಡುಗಿಯನ್ನು ಗಂಡನಿಗೆ ಒಪ್ಪಿಸಿಬಿಡು."

"ಅದು ಹೆಂಗಾಗತ್ತೆ ದ್ಯಾವರಾ, ನಮ್ಮಸೇಗೆ ಬಂದ ಹುಡುಗೀನ ನಾವು ಕಳಿಸಿದರೆ ನಮ್ಮ ಮರ್ವಾದೆ ಏನಾಗತ್ತೆ? ಒಂದು ಮಗೂಗೆ ನಮ್ಮ ಮನೇಲಿ ಒಂದು ತುತ್ತು ಅನ್ನ ಇಲ್ವಾ?"

"ಅನ್ನದ ಪ್ರಶ್ನೆಯಲ್ಲವೋ ಇದು ಅವಿವೇಕಿ, ಧರ್ಮಾಧರ್ಮಗಳ ಪ್ರಶ್ನೆ-ಕಂಡವರ ಹೆಂಡತಿಯನ್ನು ಅಪಹರಿಸುವುದು ಯಾವ ಧರ್ಮವೋ?"

"ಅವೆಲ್ಲಾ ನಮಗೆ ತಿಳಿಯಾಕಿಲ್ಲ ಬುದ್ಧಿ, ಹುಡುಗೀನ ನಮ್ಮ ಮನೆ ಬಿಟ್ಟು ಕಳಿಸೋದು ಸಾಧ್ಯವಿಲ್ಲ."

"ಈ ಮಾತು ಖಂಡಿತವೋ?"

"ಖಂಡಿತ."

"ಬೇಡಿ, ಇದರಿಂದ ಒಳ್ಳೆಯದಾಗುವುದಿಲ್ಲ."

"ನನಗೆ ಬೆದರಿಕೆ ಹಾಕುತ್ತೀಯಾ?"

"ಮುಂದಕ್ಕೆ ನೀವೇ ನೋಡೋರಂತೆ."

"ದೇವರು ಒಬ್ಬನ್ನ ಬಿಟ್ಟು ನಾನು ಯಾವದಕ್ಕೂ ಹೆದರುವುದಿಲ್ಲ. ಹೋಗು- ನಿನ್ನ ಹಣ್ಣು ಎಲೆ ತೆಗೆದುಕೊಂಡು ಹೋಗು."

ಎಂದು ಶಾಸ್ತ್ರಿಗಳು ಅಲ್ಲಿ ನಿಲ್ಲದೆ ಒಳಗೆ ಬಂದುಬಿಟ್ಟರು.

ಓಬಯ್ಯನ ಮುಖ ಅರೆಕಾಸಿನಷ್ಟಾಯಿತು, ಶಾಸ್ತ್ರಿಗಳಿಗೆ ಹಿಡಿ ಶಾಪ ಹಾಕುತ್ತಾ ತಾನು ತೆಗೆದುಕೊಂಡು ಹೋಗಿದ್ದ ಹಣ್ಣು, ತರಕಾರಿ, ಎಲೆಯನ್ನು ಆಳುಗಳ ಕೈಯಲ್ಲಿ ಹೊರಸಿಕೊಂಡು ಕಾಳಾಚಾರಿಯನ್ನು ಕಾಣಲು ಬಂದ.

ಕಾಳಾಚಾರಿಯನ್ನು ಕಾಣುವುದಕ್ಕೆ ಓಬಯ್ಯನಿಗೆಷ್ಟು ಆತುರವಿತ್ತೋ ಓಬಯ್ಯನ ಸಂಧಾನದ ಫಲ ತಿಳಿಯುವುದಕ್ಕೆ ಕಾಳಾಚಾರಿಯೂ ಅಷ್ಟೇ ಆತುರಗೊಂಡಿದ್ದ.

ಓಬಯ್ಯನ ಮುಖ ನೋಡಿದಕೂಡಲೆ "ಏನಾಯ್ತು ಓಬಯ್ಯ" ಎಂದು ಕೇಳಿದ.

"ಆದ್ದೇನು ಸೋಮಿ- ಮುಖಕ್ಕೆ ಮಂಗಳಾರತಿ."

"ಶಾಸ್ತ್ರಿ ಒಪ್ಪಲಿಲ್ಲವೇ?"

"ಬಯ್ದು ಆಚೆಗಟ್ಟಿದರು."

"ಏಕೆ ನೀನೇನು ಹೇಳಿದೆ?"

"ಎಲ್ಲಾ ಪುಲ್ಲಯ್ಯನ ಕಡೆಯವರ ಮೋಸ ಎಂದು ಹೇಳಿದೆ. ಶಾಸ್ತ್ರಿಗಳು ಒಪ್ಪಲಿಲ್ಲ. ಪ್ರಮಾಣಮಾಡು ಎಂದರು, ನಾನು ಹಿಂದೆಗೆದೆ. ಸಹಾಯ ಸಾಧ್ಯವಿಲ್ಲ ಎಂದರು. ನಿಜಸ್ಥಿತಿ ಹೇಳಿ ಬೇಡಿಕೊಂಡೆ. ಹೆಣ್ಣು ಪುಲ್ಲಯ್ಯನಿಗೆ ಒಪ್ಪಿಸಿದರೆ ಸಹಾಯ ಮಾಡುತ್ತೇನೆಂದರು. ಅದು ಹೆಂಗೆ ಸಾಧ್ಯ ಕಾಳಾಚಾರಪ್ಪ?"

"ಅದು ಹೇಗೆ ಸಾಧ್ಯ? ನಿಜಸ್ಥಿತಿ ಯಾಕೋ ಹೇಳೋದಿಕ್ಕೆ ಹೋದೆ."

"ಏನು ಮಾಡಲಪ್ಪಾ – ಸಂದರ್ಭ ಹಾಗೆ ಬಂತು."

"ಇನ್ನೇನಂದ ಶಾಸ್ತ್ರಿ."

"ಯಾರು ನಿನ್ನ ಕಳಿಸಿದೋರು ಎಂತಾ ಕೇಳಿದರು. ಕಾಳಾಚಾರ್ರು ಎಂದು ಹೇಳಿದೆ"

"ಅದಕ್ಕೆ................"

"ನಿಮ್ಮ ಹೆಸರೆತ್ತಿಕೊಂಡು ಹೀನಾಮಾನ ಬಯ್ದರು. ನನ್ನ ಬೇಕಾದರೆ ಬಯ್ಯಿರಿ, ಕಾಳಾಚಾರ್ರನ್ನ ಏತಕ್ಕೆ ಬಯ್ಯುತ್ತೀರೆಂದೆ. ಶಾಸ್ತ್ರಿಗಳಿಗೆ ಇನ್ನಷ್ಟು ಕೋಪ ಬಂತು. ನನಗೆ ಅವಮಾನ ಮಾಡಿ ಹೊರಗಟ್ಟಿದರು."

"ನನ್ನ ಮೇಲೆ ನಾಲಿಗೆ ಬಿಚ್ಚೋ ಅಷ್ಟು ಗಟ್ಟಿಗನಾದನೇ ಶಾಸ್ತ್ರಿ. ಇರಲಿ ಮಾಡ್ತೇನೆ."

"ಆ ಶಾಸ್ತ್ರಿಗಳ ಬಾಲ ಕೊಯ್ದು ಹಾಕಿಬಿಡಬೇಕು ಕಾಳಾಚಾರಪ್ಪ."

"ಆ ವಿಷಯ ನನಗೆ ಬಿಡು. ಮಹಾ ಗಣಪತಿ ನೋಡಿಕೊಳ್ತಾನೆ."

"ನನ್ನ ಗತಿ ಏನು ಮಾಡ್ತೀಯಪ್ಪಾ?"

"ಪುಟ್ಟ ಗಂಟು ಎಷ್ಟಿದೆ ಓಬಯ್ಯಾ ನಿನ್ನ ಹತ್ತಿರ."

"ಎಷ್ಟು ಬೇಕಾಗಿತ್ತು."

"ಐದುನೂರು ಬಿಚ್ಚುತ್ತೀಯಾ?"

"ಏಕಪ್ಪಾ."

"ಪೋಲೀಸಿನವರ ಕೈ ಬೆಚ್ಚಗೆಮಾಡಿ ಬಾಯಿ ಮುಚ್ಚಿಸುವುದೊಂದೇ ದಾರಿ."

“ ಅಲ್ಲಿಗೇ ಮುಗಿಯಲ್ಲಪ್ಪ. ಪುಲ್ಲಯ್ಯನೇನು ಮಾಡುತ್ತೀ ? ”

“ ಏನು ಮಾಡಲಿ ಹೇಳು.”

“ಹಳೀರಾಗಿ ತರುವುದಕ್ಕೆ ಕಳಿಸೋದಿಕ್ಕಾಗುವುದಿಲ್ಲವೇ ?”

“ ಅದಕ್ಕೆ ತುಂಬ ವ್ರತ ಪೂಜೆಯಾಗಬೇಕು.”

“ ಎಷ್ಟು ಖರ್ಚಾಗತ್ತೆ ?”

“ ಇನ್ನೂರು ರೂಪಾಯಿ.”

“ ಪೂಜೆ ಷುರುಮಾಡಿಬಿಡು ಕಾಳಾಚಾರಪ್ಪ. ಹಣ ಮುಟ್ಟಿಸುತ್ತೇನೆ – ಕುರ್ತೇಟಾಗಬೇಕು ನೋಡು.”

“ ಕಾಳಾಚಾರ್ರ ಪ್ರಭಾವ ನೀನಿನ್ನೂ ಕಾಣೆ.”

“ ನಾನು ಕಾಣನಾ ನಮ್ಮಪ್ಪ ”

ಎಂದು ಒಳ್ಳೆಯ ಅಭಿಮಾನದಿಂದ ಓಬಯ್ಯ ನುಡಿದ.

ಶಾಸ್ತ್ರಿಗಳ ಮೇಲೆ ಮಹಾಗಣಪತಿಯನ್ನು ಪ್ರಯೋಗಿಸುವುದಾಗಿ ಕಾಳಾಚಾರಿ ಜಂಬ ಹೊಡೆದುಕೊಂಡಿದ್ದ. ಆದರೆ ಅವನ ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಓಬಯ್ಯ ಹೇಳಿದ ಮಾತು ಜ್ಞಾಪಿಸಿಕೊಂಡರೆ ಅವನ ಮೈಮೇಲೆ ಮುಳ್ಳೇಳುತ್ತಿತ್ತು.

“ ಈ ಶಾಸ್ತ್ರಿ ಒಬ್ಬ ನನಗೆ ಎಲ್ಲಾದಕ್ಕೂ ಅಡ್ಡಿ ”

ಎಂದು ಸಿಡಿಮಿಡಿಗೊಂಡ.

ಅಂದೇ ಮಧ್ಯರಾತ್ರಿ ಕಾಳಾಚಾರಿ ವಿಶೇಷ ಪೂಜಾ ಕಾರ್ಯಕ್ರಮವನ್ನು ತನ್ನ ಪೂಜಾಮಂದಿರದಲ್ಲಿ ಆರಂಭಿಸಿದ.

ಕಾಳಾಚಾರಿ ಮನೆಯಲ್ಲಿ ಒಂದು ಭಾಗ ಅವನ ಪೂಜಾಮಂದಿರವಾಗಿತ್ತು. ಅದಕ್ಕೆ ಯಾರಿಗೂ ಪ್ರವೇಶವಿಲ್ಲ. ಆಚಾರಿ ಸದಾ ಅದರ ಬೀಗ ಮೊಹರು ಮಾಡಿ, ಬೀಗದ ಕೈಯನ್ನು ತನ್ನ ಕುತ್ತಿಗೆಯಲ್ಲಿದ್ದ ರೇಷ್ಮೆ ದಾರಕ್ಕೆ ಬಿಗಿಯುತ್ತಿದ್ದ.

ಆಚಾರಿ ಪೂಜಾಮಂದಿರವನ್ನು ಸೇರಿದನೆಂದರೆ ಭದ್ರಮ್ಮನ ಮೈ ನಡಗುತ್ತಿತ್ತು.

ಕೃಷ್ಣಪಕ್ಷದ ಒಂದು ಮಧ್ಯರಾತ್ರಿ. ಆಚಾರಿ ಪೂಜೆ ಮುಗಿಸಿ, ಎರಡು

ಕಳಶಗಳನ್ನೂ ಕೈಯಲ್ಲಿ ಹಿಡಿದು ಗಾಢಾಂಧಕಾರದಲ್ಲಿ ಸ್ಮಶಾನಾಭಿಮುಖನಾದ.

ಆಚಾರಿ ಪೂಜೆಯಿಟ್ಟ ದಿನವೇ ಸೀತಮ್ಮನಿಗೆ ಜ್ವರ ಕಾಣಿಸಿಕೊಂಡಿತು. ಅಡಿಗೆ ಕೆಲಸದಪಾಳಿ ಸಾಂಬನ ತಲೆಯ ಮೇಲೆ ಒರಗಿತು. ಕಷಾಯವಾಯಿತು, ಮಾತ್ರೆಯಾಯಿತು ಜ್ವರ ಇಳಿಮುಖವಾಗಲಿಲ್ಲ. ವಿಶ್ವೇಶ್ವರ ಹೆಂಡತಿಯ ಶಿಶ್ರೂಷೆಗೆ ನಿಂತ.

ಸೀತಮ್ಮ ಇದ್ದಕ್ಕಿದ್ದಂತೆ ಮಲಗಿದುದನ್ನು ಕಂಡು ನಾರಾಯಣ ಶಾಸ್ತ್ರಿಗಳು ಬೆದರಿದರು. ಸೀತಮ್ಮನ ಸ್ಥಿತಿ ಅವರ ಗಾಬರಿಯನ್ನು ಹೆಚ್ಚಿಸಿತು.

ಸೀತಮ್ಮ ಇದ್ದಕ್ಕಿದ್ದಂತೆ ಚೀರುತ್ತಿದ್ದಳು. ಅವಳ ಕಣ್ಣಿಗೆ ಬಗೆಬಗೆಯ ಭಯಾನಕ ದೃಶ್ಯಗಳು ಬೀಳುತ್ತಿದ್ದವು.

"ಅಗೋ ಮಾರಿ ಬಂದಿದ್ದಾಳೆ."

"ಆನೆ – ಆನೆ ತುಳಿಯತ್ತೆ."

"ನೆರಳು – ದೆವ್ವದ ನೆರಳು"

ಎಂದು ಕೂಗಿಕೊಳ್ಳುತ್ತಿದ್ದಳು.

ಅತ್ತಿಗೆಯ ಸ್ಥಿತಿ ನೋಡಿ ಸಾಂಬ ಕಣ್ಣೀರು ಹಾಕುತ್ತಾ ಒಂದೆಡೆ ನಿಲ್ಲುತ್ತಿದ್ದ. ವಿಶ್ವೇಶ್ವರನ ಸ್ಥೈರ್ಯ ಹಾರಿಹೋಗಿತ್ತು.

ಸೀತಮ್ಮನ ಸ್ಥಿತಿ ಉಲ್ಬಣಾವಸ್ಥೆಗೇರುತ್ತ ಬರಲು ಶಾಸ್ತ್ರಿಗಳು ಮಗನನ್ನು ಕರೆದು, ಓಬಯ್ಯನಿಗೂ ತಮಗೂ ಆದ ವಾದವಿವಾದವನ್ನು ತಿಳಿಸಿದರು. ವಿಶ್ವೇಶ್ವರ ಮತ್ತಷ್ಟೂ ಭಯಾಕ್ರಾಂತನಾದ.

"ವಿಶ್ವೇಶ್ವರಾ - ಇದು ಕಾಳಾಚಾರಿ ಕಾಟವೆಂದು ಕಾಣುತ್ತದಪ್ಪಾ. ಅದಕ್ಕೆ ಚಿಕಿತ್ಸೆ ಮಾಡಬಲ್ಲ ನಾಗಪ್ಪನಿಗೂ ದುಃಸ್ಕಾಲ ಪ್ರಾಪ್ತವಾಗಿದೆ."

"ಮುಂದೇನು ಗತಿ ಅಣ್ಣಯ್ಯ."

"ದೇವರ ಮೇಲೆ ಭಾರ ಹಾಕುವುದೊಂದೇ ಮಾರ್ಗ. ನಾಳೆಯಿಂದ ಒಂದು ಕೆಲಸ ಮಾಡು. ಬೆಳಗಾಗೆದ್ದು ಸೂರ್ಯನಮಸ್ಕಾರ ಮಾಡು. ಭಕ್ತಿಯಿಂದ ಮಾಡು."

ವಿಶ್ವೇಶ್ವರ ಮಾರನೆಯ ದಿನದಿಂದಲೇ ಸೂರ್ಯನಮಸ್ಕಾರ ಆರಂಭಿಸಿದ. ನಿತ್ಯ ನಮಸ್ಕಾರ ಹಾಕಿ ತೀರ್ಥ ತಂದು ಸೀತಮ್ಮನಿಗೆ ಕುಡಿಸುತ್ತಿದ್ದ.

ಒಂದು ವಾರದೊಳಗಾಗಿ ಸೀತಮ್ಮನ ಭಯ ಭೀತಿ ಇಳಿಮುಖವಾಯಿತು. ಇನ್ನೊಂದು ವಾರದೊಳಗಾಗಿ ಅವಳು ಎದ್ದು ತನ್ನ ಕೆಲಸ ಕಾರ್ಯಕ್ಕೆ ಸಿದ್ಧಳಾದಳು.

ಆದರೆ ಪುಲ್ಲಯ್ಯ ಇಷ್ಟು ಬೇಗ ಕಾಳಾಚಾರಿಯ ಪ್ರಭಾವದಿಂದ ಬಿಡುಗಡೆಯಾಗಲಿಲ್ಲ.

ಮೊದಲೇ ನಿಶ್ಶಕ್ತನಾಗಿದ್ದ ಪುಲ್ಲಯ್ಯ ಹಾಸಿಗೆ ಹತ್ತಿ ಮಲಗಿಬಿಟ್ಟ. ಅವನ ಮಕ್ಕಳು ಒಬ್ಬ ಮಾಂತ್ರಿಕನನ್ನು ಕರೆದುಕೊಂಡು ಬಂದು ಯಂತ್ರ ಕಟ್ಟಿಸಿದರು. ಪುಲ್ಲಯ್ಯನಿಗೆ ಗುಣಮುಖವಾಗಲಿಲ್ಲ. ದಿನಕ್ಕೆ ಒಂದೊಂದು ರೋಗ ಕಾಣಿಸಿಕೊಳ್ಳುತ್ತಿತ್ತು. ಇದು ಮಹಾಗಣಪತಿಯ ವರಪ್ರಸಾದವೆಂದು ಮಾಂತ್ರಿಕ ಸ್ಪಷ್ಟವಾಗಿ ಹೇಳಿಬಿಟ್ಟಿದ್ದ. ಪುಲ್ಲಯ್ಯನ ಕಡೆಯವರು ಲಚ್ಮಕ್ಕನ ಯೋಚನೆಯನ್ನು ಬಿಡುತ್ತಬಂದರು.

ಶಾಸ್ತ್ರಿಗಳ ಮನೆಯಲ್ಲಿ ತನ್ನ ಆಟ ಸಾಗದಿದ್ದುದನ್ನು ತಿಳಿದು ಕಾಳಾಚಾರಿ ವ್ಯಗ್ರನಾಗಿದ್ದ. ಓಬಯ್ಯ ಕಳಿಸಿದ ಹೊಸ ಹೆಂಡ ಕೂಡ ಅವನಿಗೆ ರುಚಿಸಲಿಲ್ಲ.

೪

ಕಾಳಾಚಾರಿಯಿಂದ ತನಗಾದ ಪರಿಭವಕ್ಕೆ ನಾಗಪ್ಪ ಹಣ್ಣಾಗಿ ಹೋಗಿದ್ದ. ಉಭಯರ ಸ್ನೇಹಿತನ ಮನೆ ಹಾಳುಮಾಡಿದ್ದಲ್ಲದೆ ವಿನಾ ಕಾರಣವಾಗಿ ತನ್ನ ಕೈಕಾಲು ಮುರಿದು ಕೂಡಿಸಿದ ಆಚಾರಿಯನ್ನು ಒಂದಲ್ಲ ಒಂದು ದಿನ ಆಹುತಿ ತೆಗೆದುಕೊಳ್ಳಬೇಕೆಂದು ಅವನು ನಿರ್ಧರಿಸಿದ. ಆದರೆ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಮಾರ್ಗ ಹೊಳೆಯಲಿಲ್ಲ. ಅಂಗವಿಕಾರವಾದ ಮೇಲೆ ತಾನು ಅನುಷ್ಠಾನಮಾಡಿ ಗತಶಕ್ತಿಯನ್ನು

ಪುನರಾರ್ಜಿಸಿಕೊಂಡು ಕಾಳಾಚಾರಿಯ ಮೇಲೆ ಯುದ್ಧಕ್ಕೆ ಹೊರಡುವುದು ಕನಸಿನ ಮಾತಾಯಿತು. ಇದಕ್ಕೇನು ಮಾರ್ಗ ಎಂದು ಅವನು ದೀರ್ಘವಾಗಿ ಯೋಚಿಸತೊಡಗಿದ.

ನಾರಾಯಣ ಶಾಸ್ತ್ರಿಗಳು ಸತತವಾಗಿ ಇಪ್ಪತ್ತುನಾಲ್ಕು ವರ್ಷಗಳಿಂದ ರಾಮೋತ್ಸವ ನಡೆಸಿಕೊಂಡು ಬಂದಿದ್ದರು. ಹತ್ತು ದಿವಸ ಏಕಪ್ರಕಾರವಾಗಿ ಭಜನೆ, ಹರಿಕಥೆ, ಉಪನ್ಯಾಸ, ಸಂಗೀತ ಸೇವೆ ನಡೆಯುತ್ತಿತ್ತು. ಪಟ್ಟಾಭಿಷೇಕದ ದಿನ ಸರ್ವಮತಸ್ಥರಿಗೂ ಭೂರಿ ಭೋಜನ. ಸಾಕಷ್ಟು ಧನಾಢ್ಯರಲ್ಲದ ಶಾಸ್ತ್ರಿಗಳು ಏಕಾಂಗಿಯಾಗಿ ರಾಮೋತ್ಸವ ನಡೆಸುತ್ತಿದ್ದುದು ಎಲ್ಲರೂ ಪರಮಾಶ್ಚರ್ಯಕರವಾದ ವಿಷಯವಾಗಿತ್ತು.

ರಾಮೋತ್ಸವ ಕಾಲದಲ್ಲಿ ಒಂದು ತಿಂಗಳು ಶಾಸ್ತ್ರಿಗಳ ಮನೆಯಲ್ಲಿ ಯಾರಿಗೂ ಬಿಡುವಿಲ್ಲ. ಪಟೇಲ್ ಪುಟ್ಟೇಗೌಡ, ಅಡಿಕೆಯ ಮರ ಕಡಿದು ತಂದು ಭವ್ಯ ಚಪ್ಪರಹಾಕಿ, ಅದರ ಮೇಲೆ ತೆಂಗಿನಗರಿ ಹೊದೆಸುತ್ತಿದ್ದ. ತಳವಾರ ರಾಮು ಪಂಜುಗಳನ್ನು ತಯಾರಿಸಿ ಬೆಳಕಿನ ವ್ಯವಸ್ಥೆ ಮಾಡುತ್ತಿದ್ದ. ಸಾಂಬ ಅತ್ತಿಗೆಗೆ ನೆರವಾಗಿ ಅಡಿಗೆಯ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ. ಅಕ್ಕಪಕ್ಕದ ಹಳ್ಳಿಗಳಿಂದ ಜನ ಬಂದು ಶಾಸ್ತ್ರಿಗಳಿಗೆ ನೆರವಾಗುತ್ತಿದ್ದರು.

ಶಾಸ್ತ್ರಿಗಳ ರಾಮೋತ್ಸವಕ್ಕೆ ಕಾಲಿಡದೆ, ಅವರ ಮೇಲೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದವನು ಮೃತ್ಯುಂಜಯಶಾಸ್ತ್ರಿ. ಶಾಸ್ತ್ರಿಗಳ ಕೀರ್ತಿಗೆ ರಾಮೋತ್ಸವ ಕಳಶಪ್ರಾಯವಾಗಿತ್ತು. ಅವರು ಉತ್ಸವ ನಡೆಸುತ್ತಿದ್ದ ಬಗೆ, ಸಮಾರಾಧನೆಯ ವೈಭವ, ಜನರ ಉತ್ಸಾಹ ಅಭಿಮಾನ ಕಂಡು ಮೃತ್ಯುಂಜಯ ಶಾಸ್ತ್ರಿ ಹೊಟ್ಟೆಕಿವುಚಿಕೊಳ್ಳುತ್ತಿದ್ದ.

ಆ ಭಾಗಕ್ಕೆ ಹೊಸದಾಗಿ ಬಂದ ಅಮಲ್ದಾರ್ ವಸುಪಾಲಯ್ಯನವರು ಶಾಸ್ತ್ರಿಗಳನ್ನು ಕೇಳಿದರು

"ಶಾಸ್ತ್ರಿಗಳೇ, ರಾಮೋತ್ಸವವೆಂದರೆ ಸಾವಿರಾರು ರೂಪಾಯಿ ಮಾತು. ಇಷ್ಟು ಖರ್ಚು ನೀವೊಬ್ಬರೇ ಹೇಗೆ ನಿಭಾಯಿಸುತ್ತೀರಿ."

"ನಿಭಾಯಿಸುವುದಕ್ಕೆ ನಾನು ಯಾರು ಸ್ವಾಮಿ.........ಒಬ್ಬ ಬಡ ಬ್ರಾಹ್ಮಣ."

"ಡೆಪ್ಯುಟಿ ಕಮಿಶನರ್ ಸಾಹೇಬರು ಸರ್ಕೀಟು ಬಂದರೆ ಅವರಿಗೂ ಅವರ ಪರಿವಾರಕ್ಕೂ ಸರಬರಾಯಿ ಮಾಡುವುದಕ್ಕೇ ನಮ್ಮ ಜೀವ ತಣ್ಣಗಾಗುತ್ತದಲ್ಲಾ—ನೀವು ಇಂಥ ಮಹಾಕಾರ್ಯ ಹೇಗೆ ನಿರ್ವಹಿಸುವಿರಿ."

"ನಾನು ಮಾಡುತ್ತೇನೆ ಎಂದು ತಿಳಿದುಕೊಂಡೇ ಇಲ್ಲ. ರಾಮ ನಿಂತುಕೊಂಡು ಎಲ್ಲಾ ಮಾಡಿಸುತ್ತಾನೆ."

"ಇದು ಅದ್ಭುತ ನಂಬಿಕೆ ಶಾಸ್ತ್ರಿಗಳೇ!"

"ಸ್ವಾಮೀ........ನಂಬಿಕೆಯೇ ಜೀವನದ ಕ್ರತುಶಕ್ತಿ. ತಾನು ಮಾಡುವ ಕೆಲಸದಲ್ಲಿ ಮನುಷ್ಯನಿಗೆ ಆಳವಾದ ನಂಬಿಕೆಯಿರಬೇಕು. ಅದನ್ನು ನಿರಪೇಕ್ಷಾ ಬುದ್ಧಿಯಿಂದ ಮಾಡಬೇಕು. ಇಷ್ಟಕ್ಕೆ ಅವನು ಸಿದ್ಧನಾದರೆ ಬೆಟ್ಟವನ್ನು ಬೇಕಾದರೆ ಹುಲ್ಲಿನಂತೆ ಎತ್ತಿ ಬಿಡಬಹುದು."

"ನಂಬಿಕೆ ಬರುವುದು ಹೇಗೆ ಶಾಸ್ತ್ರಿಗಳೇ."

"ಶ್ರದ್ಧೆಯಿಂದ, ಋಜುಮಾರ್ಗ ಅನುಸರಿಸುವುದರಿಂದ."

"ಅಜ್ಞಾನ, ಮೌಢ್ಯಗಳೇ ಮನುಷ್ಯನನ್ನು ಆವರಿಸಿರುವಾಗ ಋಜುಮಾರ್ಗ ಇಂಥದೆಂದು ತಿಳಿಯುವುದಾದರೂ ಹೇಗೆ?"

"ನಮ್ಮ ಧರ್ಮ ಹಾಗೆ ಹೇಳುವುದಿಲ್ಲ ಸ್ವಾಮಿ. ಮನುಷ್ಯ ಭಗವಂತನ ಸ್ವರೂಪ. ಅವನಲ್ಲಿ ದೈವೀ, ಆಸುರೀ ಶಕ್ತಿಗಳೆರಡೂ ಅಡಕವಾಗಿರುತ್ತವೆ. ಆತ್ಮಜ್ಞಾನ ಪಡೆದ ಮಾನವ ಆಸುರೀಶಕ್ತಿಯನ್ನು ದಮನಮಾಡಿ ದೈವೀ ಶಕ್ತಿಯ ಬೆಳವಳಿಗೆಗೆ ಇಂಬುಗೊಡುತ್ತಾನೆ. ಅಜ್ಞಾನ, ಮೌಢ್ಯ ಆವರಿಸಿರುತ್ತವೆ—ನಿಜ. ಆದರೆ ಅದಕ್ಕಾಗಿ ಜ್ಞಾನಖಡ್ಗವನ್ನೂ ಕೊಟ್ಟಿರುತ್ತಾನೆ. ಆದರೆ ಮನುಷ್ಯ ಅದನ್ನುಪಯೋಗಿಸದೆ ತುಕ್ಕುಹಿಡಿಯಲು ಬಿಡುತ್ತಾನೆ."

"ಕರ್ಮಕಾಸಾರದಲ್ಲಿ ಬಿದ್ದಿರುವ ನಮಗೆ ಮುಕ್ತಿಯಿದೆಯೇ ಶಾಸ್ತ್ರಿಗಳೇ?"

"ನಮಗೆ ಎಂದರೆ?"

"ಸರ್ಕಾರಿ ಗುಲಾಮಗಿರಿ ಮಾಡುತ್ತಿರುವ ನನ್ನಂಥವರಿಗೆ"

"ಜಗತ್ತಿನಲ್ಲಿ ಎಲ್ಲವೂ ಒಂದು ಬಗೆಯ ಗುಲಾಮಗಿರಿಯೇ.

ಭಕ್ತನೂ ಭಗವಂತನ ಗುಲಾಮ. ಗುಲಾಮಗಿರಿ ದಾಸ್ಯದ ಚಿನ್ಹೆಯಾಗದೆ, ಆತ್ಮಾರ್ಪಣದ ಚಿನ್ಹೆಯಾಗಬೇಕು. ನಿರಪೇಕ್ಷಬುದ್ಧಿಯಿಂದ ಮಾಡುವ ಗುಲಾಮಗಿರಿಯೇ ಭಕ್ತಿ."

ಶಾಸ್ತ್ರಿಗಳು ಕೊಟ್ಟ ವ್ಯಾಖ್ಯಾನ ಕೇಳಿ ಅಮಲ್ದಾರರು ಆನಂದ ಪರವಶರಾದರು. ರಾಮೋತ್ಸವಕ್ಕೆ ಹಲವು ಬಗೆಯಲ್ಲಿ ನೆರವಾದುದಲ್ಲದೆ ಅವರೇ ಎರಡು ಮೂರು ದಿವಸ ಹುಲ್ಲೂರಿನಲ್ಲಿ ನಿಂತು ಉತ್ಸವದಲ್ಲಿ ಭಾಗಿ ಗಳಾದರು.

ಉತ್ಸವಕ್ಕೆ ಊರಿನ ಜನ, ಸುತ್ತಮುತ್ತಲಿನ ಹಳ್ಳಿಗಳ ಜನರಲ್ಲದೆ ದೂರದೇಶಗಳಿಂದಲೂ ಜನ ಬರುತ್ತಿದ್ದರು. ಕೀರ್ತನಕಾರರು, ಸಂಗೀತ ಗಾರರು, ವಿದ್ವಾಂಸರು ತಾವಾಗಿಯೇ ಬಂದು ಉತ್ಸವದಲ್ಲಿ ಭಾಗವಹಿಸು ತ್ತಿದ್ದರು. ಶಾಸ್ತ್ರಿಗಳು ಅವರೆಲ್ಲರಿಗೂ ಊಟ, ಉಪಚಾರ ವ್ಯವಸ್ಥೆಮಾಡು ತ್ತಿದ್ದುದಲ್ಲದೆ, ಅವರು ಹಿಂದಿರುಗುವಾಗ ರೈಲು ಖರ್ಚು, ಬಸ್ ಚಾರ್ಜು ಗಳನ್ನು ಕೊಡುತ್ತಿದ್ದರು.

ಶಾಸ್ತ್ರಿಗಳು ದೃಢವಾಗಿ ನಂಬಿದ್ದಂತೆ ಶ್ರೀ ರಾಮಚಂದ್ರ ಸ್ವಾಮಿಯೇ ನಿಂತುಕೊಂಡು ಉತ್ಸವ ನಡೆಸುತ್ತಿದ್ದಂತಿತ್ತು. ಯಾರೋ ಅಕ್ಕಿ ಬೇಳೆ ಒದಗಿಸುತ್ತಿದ್ದರು, ಯಾರೋ ತೆಂಗಿನಕಾಯಿ, ವೀಳೆಯದೆಲೆ ತಂದು ಹಾಕು ತ್ತಿದ್ದರು. ಯಾರೋ ಶಾಸ್ತ್ರಿಗಳ ಕೈಗೆ ಹಣ ತಂದುಹಾಕಿ 'ಶ್ರೀರಾಮಾರ್ಪಿ ತವಾಗಲಿ' ಎನ್ನುತ್ತಿದ್ದರು.

ಈ ಉತ್ಸವದ ನೆಪದಲ್ಲಿ ಶಾಸ್ತ್ರಿಗಳು ಪ್ರತಿ ವರ್ಷ ಸಾವಿರಾರು ರೂಪಾಯಿ ಗಳಿಸುತ್ತಾರೆಂದು ಮೃತ್ಯುಂಜಯಶಾಸ್ತ್ರಿ ಅಪಪ್ರಚಾರ ನಡೆಸಿದ್ದ. ತಿಳಿದವರು ಅವನ ಮಾತಿಗೆ ಬೆಲೆ ಕೊಡುತ್ತಿರಲಿಲ್ಲ.

ತುಮಕೂರಿಗೆ ಒಂದು ಮದುವೆ ಕಛೇರಿಗೆ ಬಂದಿದ್ದ ಕಣಿವೇ ಕೆಳಗಿನ ವೆಂಕಟರಾಮು ಭಾಗವತರು ಶಾಸ್ತ್ರಿಗಳ ರಾಮೋತ್ಸವದ ವೈಭವ ಕೇಳಿ ಅದನ್ನು ನೋಡಲು ಹುಲ್ಲೂರಿಗೆ ಬಂದರು. ಉತ್ಸವ ನೋಡಿದ ಮೇಲೆ ಶ್ರೀ ರಾಮಚಂದ್ರಸ್ವಾಮಿಗೆ ತಮ್ಮ ಸಂಗೀತ ಸೇವೆ ಅರ್ಪಿಸಬೇಕೆಂದು ಭಗವದ್ಭಕ್ತರಾದ ಭಾಗವತರಿಗೆ ಪ್ರೇರಣೆಯಾಯಿತು. ಅವರಿಗೆ ಪಕ್ಕವಾದ್ಯ ಒದಗಿಸುವುದೇ ಒಂದು ಸಮಸ್ಯೆಯಾಯಿತು. ಆ ಕಡೆಗೆಲ್ಲಾ ನಾಗಪ್ಪನೇ

ದೊಡ್ಡ ಮೃದಂಗ ವಿದ್ವಾಂಸ. ಅವನು ಮೃದಂಗ ಮುಟ್ಟುವ ಸ್ಥಿತಿ ಯಲ್ಲಿರಲಿಲ್ಲ.

ಶಾಸ್ತ್ರಿಗಳ ಮನಸ್ಸು ಚಿಕ್ಕದು ಮಾಡಿಕೊಂಡದ್ದು ನೋಡಿ ಭಾಗವತರು

"ಮೃದಂಗ ಇಲ್ಲದಿದ್ದರೇನಂತೆ ಶಾಸ್ತ್ರಿಗಳೇ. ತಂಬೂರಿ ಶ್ರುತಿಯಿಟ್ಟು ಕೊಂಡು ನಾಲ್ಕು ಕೀರ್ತನೆ ಹಾಡುತ್ತೇನೆ. ಭಕ್ತಿಯಿಂದ ಹೇಗೆ ಹಾಡಿದರೂ ಭಗವಂತ ಸಂಪ್ರೀತನಾಗುತ್ತಾನೆ"

ಎಂದು ಭರವಸೆಕೊಟ್ಟು ತಂಬೂರಿಯ ಶ್ರುತಿಯ ಮೇಲೇ ತಮ್ಮ ಕಛೇರಿ ಸಾಗಿಸಿಬಿಟ್ಟರು.

ಅವರು ಹಾಡುತ್ತಿದ್ದುದನ್ನು ಕೇಳಿ ಶಾಸ್ತ್ರಿಗಳು

"ಮೃದಂಗವಿದ್ದರೆ ಕಛೇರಿ ಇನ್ನೂ ಚೆನ್ನಾಗುತ್ತಿತ್ತು"

ಎಂದು ನೂರು ಸಲ ಅಂದುಕೊಂಡರು.

ಕಛೇರಿ ಮುಗಿದ ಮೇಲೆ ಪಕ್ಕದಲ್ಲಿದ್ದ ಸಾಂಬನಿಗೆ

"ನೀನಾದರೂ ಮೃದಂಗ ನುಡಿಸುವುದನ್ನು ಕಲಿತುಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು"

ಎಂದರು.

ತಂದೆಯ ಮಾತು ಸಾಂಬನ ಮನಸ್ಸಿನಲ್ಲಿ ನಾಟಿತು. ಮೃದಂಗ ವಾದ್ಯವಾದನ ಕಲಿತು ನಾಟಕವಾಡಿಸಬೇಕೆಂದು ಸಾಂಬನ ಮನಸ್ಸಿನಲ್ಲಿ ಬಹಳ ದಿವಸದಿಂದ ಮೊಳೆಯುತ್ತಿತ್ತು. ಅದಕ್ಕೆ ಶಾಸ್ತ್ರಿಗಳೇ ಪುಟ ಗೊಟ್ಟಂತಾಯಿ.

ಉತ್ಸವ ಮುಗಿಯುವ ತನಕ ಸಾಂಬ ಮಿಸುಕಾಡಲು ಪುರುಸತ್ತಿಲ್ಲ. ಪಟ್ಟಾಭಿಷೇಕವಾದ ಕೆಲವು ದಿನ ಉತ್ಸವಕ್ಕೆ ಎರವಲು ತಂದಿದ್ದ ಸಾಮಾನು ಗಳನ್ನು ಹಿಂದಿರುಗಿಸುವ ಕೆಲಸ ಸಾಗಿತು.

ಉತ್ಸವ ಸಂಬಂಧದ ಕೆಲಸವೆಲ್ಲಾ ಮುಗಿದ ಮೇಲೆ ಒಂದು ದಿನ ಸಾಂಬ ನಾಗಪ್ಪನನ್ನು ಹುಡುಕಿಕೊಂಡು ಸಂತೇಹಳ್ಳಿಗೆ ಬಂದ.

ಸಾಂಬ ದೂರದಲ್ಲಿ ಬರುತ್ತಿರುವುದನ್ನು ಕಂಡ ನಾಗಪ್ಪನ ಆಶ್ಚರ್ಯ ಸಂತೋಷಗಳಿಗೆ ಪಾರವೇ ಇಲ್ಲ. ಒಳಗಿನಿಂದ ಒಂದು ಚಾಪೆ ತಂದು ಹೊರಗೆ ಹಾಸಿ ಅವನನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡ.

“ ಇದೇನು ಸಾಂಬಪ್ಪ, ಇಷ್ಟು ದೂರ ಪಾದ ಬೆಳಸಿದೆ ? ”

“ ಊರಲ್ಲಿ ಬೇಸರವಾಯಿತು. ಹೀಗೆ ತಿರುಗಾಡಿಕೊಂಡು ಹೋಗೋಣಾಂತ ಬಂದೆ.”

“ ಐನೋರು ಚೆನ್ನಾಗಿದ್ದಾರೆಯೇ ? ”

“ ಚೆನ್ನಾಗಿದ್ದಾರೆ.”

“ ರಾಮೋತ್ಸವ ಭರ್ಜರಿಯಾಗಿ ನಡೆಯಿತಂತೆ ! ”

“ ನಡೆಯಿತು. ನೀವು ಒಂದು ದಿನವೂ ಬರಲೇ ಇಲ್ಲವಲ್ಲಾ.”

“ ಏನು ಬರಲಿ ಬಿಡಪ್ಪ. ಯಾವುದಕ್ಕೂ ಮನಸ್ಸಿಲ್ಲ.”

“ ಮೊನ್ನೇ ಸೋಮಾಪುರದಲ್ಲಿ ನಾಟಕ ಹೇಗಾಯಿತು ನಾಗಪ್ಪ.”

“ ಹಳ್ಳಿ ನಾಟಕ. ಹೇಗಾದರೂ ಜನ ಸಂತೋಷ ಪಡುತ್ತಾರೆ.”

“ ನಮ್ಮೂರಿನಲ್ಲಿ ಯಾವಾಗ ಆಡಿಸುವಿರಿ – ರಾಮೋತ್ಸವದಲ್ಲಿ ಆಡಿಸಿದ್ದರೆ.”

“ ಐನೋರು ಏನಂದುಕೊಳ್ಳುತ್ತಾರೋ ಎಂತಾ ಸುಮ್ಮನಿದ್ದೆನಪ್ಪಾ. ನನಗೂ ತುಂಬ ಮನಸ್ಸಿತ್ತು.”

“ ನೀವು ಆಡಿಸೋ ನಾಟಕ ಕಂಡರೆ ನನಗೆ ತುಂಬ ಇಷ್ಟ ನಾಗಪ್ಪ. ನಮ್ಮೂರಿನಲ್ಲಿ ಒಂದು ನಾಟಕ ಆಡಿಸಿ. ಅಲ್ಲಿ ಇಲ್ಲಿ ಆದರೆ ನಾವು ಬಂದು ನೋಡಿ ಹೋಗಬಹುದು. ನಮ್ಮ ಅತ್ತಿಗೆ ನೋಡಲಿ ಎಂದು ನನಗೆ ಆಸೆ.”

“ ಅದೇನು ದೊಡ್ಡ ವಿಷಯ ಬಿಡಪ್ಪಾ. ಹುಣ್ಣಿಮೇಗೆ ಆಡಿಸಿದರಾಯಿತು. ನಾಟಕದ ಮೇಲೆ ನಿನಗೂ ಭಾರಿ ಗೀಳು ಸಾಂಬಪ್ಪಾ.”

“ ನಾನು ಒಂದು ವಿಷಯ ಹೇಳುವ ಎಂದು ಬಂದೆ. ನೀವು ಏನೂ ತಿಳಿದುಕೊಳ್ಳಬಾರದು.”

“ತಡೀಯಪ್ಪ ಸ್ವಲ್ಪ – ಭಾಳ ದಿವಸಕ್ಕೆ ಇಲ್ಲಿಗೆ ಬಂದಿದ್ದೀ ”

ಎಂದು ನಾಗಪ್ಪ ಎದ್ದುಹೋಗಿ ಒಬ್ಬ ಹುಡುಗನ ಕೈಯಲ್ಲಿ ಬುರುಗಲು, ಕೊಬ್ಬರಿ, ಬೆಲ್ಲ, ಬಾಳೆಯ ಹಣ್ಣು, ಒಂದು ತಂಬಿಗೆ ಹಾಲು ತೆಗೆಸಿಕೊಂಡು ಬಂದು ಸಾಂಬನ ಮುಂದೆ ಇಡಿಸಿದ.

“ ಇಷ್ಟೆಲ್ಲಾ ಯಾರಿಗೆ ನಾಗಪ್ಪನವರೇ ? ”

"ತೊಗೋಳಪ್ಪಾ, ಬೆಳೆಯುವ ಹುಡುಗ. ತೊಗೋತಾ ಮಾತಾಡು."

ಸಾಂಬ ಬಾಳೆಯ ಹಣ್ಣು ತೆಗೆದುಕೊಂಡು ಸುಲಿದು ಬಾಯಿಗೆ ಹಾಕಿಕೊಳ್ಳುತ್ತಾ

"ನನಗೂ ನಾಟಕ ಆಡಿಸಬೇಕೂಂತ ಬಹಳ ಆಸೆಯಾಗಿದೆ ನಾಗಪ್ಪಣ್ಣ."

"ಆಡಿಸಬಹುದು, ಆದರೆ........"

"ಆದರೆ............?"

"ಜನೋರು ಸುಮ್ಮನಿರುತ್ತಾರೆಯೇ?"

"ಮೃದಂಗ ನುಡಿಸುವುದನ್ನಾದರೂ ಕಲಿಯಬಾರದಾಗಿತ್ತೇನೋ ಸಾಂಬ ಎಂದು ಅವರೇ ಹೇಳಿದರು."

"ನಿಜವಾಗಿ?"

"ನಾನು ಸುಳ್ಳು ಹೇಳುತ್ತೇನೆಯೇ? ಕಲಿತರೆ ನನಗೆ ಬರುತ್ತದೆಯೇ ನಾಗಪ್ಪಣ್ಣ."

"ನಿನಗೆ! ಹಸುವಿಗೆ ಹಾಯುವುದಕ್ಕೆ ಬರುತ್ತದೆಯೇ ಎಂದು ಕೇಳಿದ ಹಾಗಾಯಿತು. ನೀನು ಮನಸ್ಸುಮಾಡಿದರೆ ನಿನಗೆ ಏನು ಬರುವುದಿಲ್ಲ ಸಾಂಬಣ್ಣ?"

"ಅದೇನಪ್ಪಾ ನನ್ನ ಹೆಚ್ಚುಗಾರಿಕೆ?"

"ಇದೆ! ಭಗವಂತ ತನ್ನ ಒಂದು ಅಂಶ ತೆಗೆದು ನಿನ್ನಲ್ಲಿ ಇಟ್ಟಿದ್ದಾನೆ. ಮೊನ್ನೆ ಮೊನ್ನೆ ನರಸಿಂಹಶಾಸ್ತ್ರಿಗಳು ನಿನ್ನ ಮೇಲೆ ಬಂದದ್ದೇ ಸಾಲದೇ?"

"ಅದೇನು ನಾಗಪ್ಪಣ್ಣ ನಡೆದದ್ದು. ನನಗೊಂದೂ ನೆಪ್ಪಿಲ್ಲ. ಅಣ್ಣಯ್ಯ ನನ್ನ ಕೇಳುವಹಾಗಿಲ್ಲ. ನಾನೇನು ಮಾಡಿದೆ."

"ನಾಲ್ಕು ವೇದ ನೀರು ಕುಡಿದ ಹಾಗೆ ಹೇಳಿದೆ ಮಾರಾಯ. ಮನುಷ್ಯರ ಮನಸ್ಸನ್ನು ಕನ್ನಡಿ ನೋಡಿದ ಹಾಗೆ ನೋಡುತ್ತಿದ್ದೆ. ನೀನು ಕೊಟ್ಟರೆ ವರ, ಇಟ್ಟರೆ ಶಾಪ ಆಗಿತ್ತು."

"ಏನೋಪ್ಪ – ನನಗೊಂದೂ ಅರ್ಥವಾಗಲ್ಲ. ನನಗೆ ಮೃದಂಗ ನುಡಿಸುವುದು ಹೇಳಿಕೊಡುವಿರಾ ನಾಗಪ್ಪಣ್ಣ."

"ಇಲ್ಲಿ ನೋಡು ನನ್ನ ದೊರೆ. ನಿನ್ನಂಥ ಶಿಷ್ಯ ಸಿಕ್ಕಾನೆ ಎಂದು ನಾನು ತಪಸ್ಸು ಮಾಡುತ್ತಿದ್ದೆ. ನನ್ನ ವಿದ್ಯೆ ಹಾಳಾಗಿ ಹೋಗುತ್ತಿದೆಯಲ್ಲಾ ಎಂದು ಕಣ್ಣೀರು ಹಾಕುತ್ತಿದ್ದೆ. ನೀನು ನನ್ನ ಭಾಗ್ಯದ ದೇವರ ಹಾಗೆ ಬಂದಿರುವೆ. ಸಂತೋಷವಾಗಿ ನಿನಗೆ ವಿದ್ಯೆ ಹೇಳಿಕೊಟ್ಟು ಜೈ ಎನಿಕೊಳ್ಳು ತ್ತೇನೆ."

"ನಾನು ಎಷ್ಟು ದಿವಸ ಕಲಿಯಬೇಕು."

"ಅದು ಈಗಾಗಲೇ ನಾನು ಹೇಳಲಾರೆ. ಆದರಿಷ್ಟು ನಿಜ. ಮಿಕ್ಕವರು ಆರು ತಿಂಗಳಲ್ಲಿ ಕಲಿಯುವುದನ್ನು ನೀನು ಆರು ದಿನದಲ್ಲಿ ಕಲಿಯಬಲ್ಲೆ."

ನಾಗಪ್ಪ ತನ್ನಲ್ಲಿಟ್ಟಿದ್ದ ಅಭಿಮಾನ, ವಿಶ್ವಾಸ ಸಾಂಬನಿಗೆ ಹೊಸ ಹುರುಪನ್ನಿತ್ತಿತು. ಮೃದಂಗ ನಡಿಸುವುದನ್ನು ಕಲಿಯಬೇಕು – ಚೆನ್ನಾಗಿ ನುಡಿಸಬೇಕು. ಎನ್ನುವ ನಿರ್ಧಾರ ಅವನ ಮನಸ್ಸಿನಲ್ಲಿ ಮೂಡಿತು.

ನಾಗಪ್ಪ ಒಳಗಿನಿಂದ ಪಂಚಾಂಗ ತಂದು ಬಿಚ್ಚಿನೋಡಿ

"ಶುಕ್ರವಾರ ದಿನ ಚೆನ್ನಾಗಿದೆ. ಅಮ್ಮಾವರ ಪೂಜೆಮಾಡಿಸಿ ಪಾಠ ಆರಂಭಿಸುತ್ತೇನೆ."

"ನಾನು ಎಷ್ಟು ಹೊತ್ತಿಗೆ ಬರಲಿ."

"ಬೆಳಿಗ್ಗೆ ಸ್ನಾನಮಾಡಿ ಬಂದುಬಿಡು."

ಸಾಂಬ ತಂಬಿಗೆಯಲ್ಲಿದ್ದ ಹಾಲನ್ನೆತ್ತಿ ಬಾಯಿಗೆ ಬಸಿದುಕೊಂಡು, ನಾಗಪ್ಪನ ಅಪ್ಪಣೆ ಪಡೆದು ಊರಿಗೆ ಹೊರಟ.

ಆದೇ ಸಂಜೆ ಮುಗಿದಿತ್ತು. ಚಂದಿಕೆಯ ಬೆಳಕು ಬಿತ್ತರಿಸಿತ್ತು. ಸಾಲುಮರಗಳ ಮಧ್ಯೆ ಹೋಗುತ್ತಿದ್ದ ಸಾಂಬ ಚಂದ್ರಿಕೆ ಬೆಳಕು ನೆಳ ಳೊಂದಿಗೆ ಚಿನ್ನಾಟವಾಡುತ್ತಿದ್ದುದನ್ನು ನೋಡಿ ಸಂತೋಷಪಟ್ಟ. ಕೆರೆಯಲ್ಲಿ ಒಟಗುಟ್ಟುತ್ತಿದ್ದ ಕಪ್ಪೆಗಳ ಕರ್ಕಶರವವೂ ಅವನ ಕಿವಿಗೆ ಇಂಪಾಗಿತ್ತು. ಅವನ ಮನಸ್ಸಿನಲ್ಲಿ ಅಪೂರ್ವ ಶಾಂತಿ, ಆನಂದ ತುಂಬಿ ತುಳುಕುತ್ತಿತ್ತು. ಪ್ರಕೃತಿ ಅವನ ಆನಂದದಲ್ಲಿ ಬೆರತು ನರ್ತಿಸುತ್ತಿದ್ದಂತಿತ್ತು.

ಅದೇ ಆನಂದ, ಶಾಂತಿ ನಾಗಪ್ಪನಿಗೂ ಲಭಿಸಿತ್ತು. ಅವನ ಮನಸ್ಸಿನಲ್ಲಿ ನೂರಾರು ಭಾವನಾತರಂಗಗಳೆದ್ದಿದ್ದವು. ಯಾವುದೋ ದಿಗ್ವಿಜಯ ಮಾಡಿ ಬಂದಷ್ಟು ಹೆಮ್ಮೆ ಹುರುಪು ಅವನ ಶುಷ್ಕದೇಹವನ್ನು ತುಂಬಿದ್ದವು. ಸಾಂಬನನ್ನು ಕರತಂದ ಮಹಾತಾಯಿಯನ್ನು ಮನಸ್ಸಿನಲ್ಲಿ ಎಷ್ಟು ವಂದಿಸಿದರೂ ಅವನಿಗೆ ತೃಪ್ತಿಯಿಲ್ಲ.

೨೩

ಕಾಳಾಚಾರಿ ಮನೆ ಸೇರಿದ ಕೆಲವು ತಿಂಗಳು ಭದ್ರಮ್ಮನ ಪೂರ್ವ ಸ್ಮರಣೆಯೇ ಮರೆತುಹೋಗಿತ್ತು. ಗುರುತು ಪರಿಚಯದವರು ಯಾರು ಮಾತನಾಡಿಸಿದರೂ ಅವರನ್ನು ಬೆಕ್ಕಸಬೆರಗಾಗಿ ನೋಡುತ್ತಿದ್ದಳು. ಕಾಳಾಚಾರಿಯ ಸೇವೆ ಶುಶ್ರೂಷೆ, ಅವನ ಲಾಲಸೆಗಳನ್ನು ತೃಪ್ತಿಗೊಳಿಸುವುದರಲ್ಲಿ ಅವಳ ಮನಸ್ಸು ವಿಲೀನವಾಗಿತ್ತು.

ಅವಳ ಜೀವನವೂ ಎಲ್ಲರ ಜೀವನದಂತೆ ಸಾಗಿತ್ತು. ಮನೆಗೆಲಸ ಮಾಡಿಕೊಂಡು ಹೋಗುತ್ತಿದ್ದಳು. ನಗುವಳು, ಅಳುವಳು, ಹಾಡಿಕೊಳ್ಳುವಳು. ಹೂ ಬಿಡಿಸಿ ಕಟ್ಟಿ ಮುಡಿದುಕೊಳ್ಳುವಳು ಆದರೆ, ಅವಳ ನಡೆನುಡಿಯನ್ನೆಲ್ಲಾ ಯಾರೋ ದಿಗ್ದರ್ಶನ ಮಾಡಿದಂತಿರುತ್ತಿತ್ತು. ಪ್ರತಿಯೊಂದು ಕೆಲಸದ ಹಿಂದೂ ಒಂದು ಮಹಾಶಕ್ತಿ ನಿಂತುಕೊಂಡು, ಅವಳ ಕೈಯಲ್ಲಿ ಬಲವದ್ಬಂಧನದಿಂದ ಮಾಡಿಸುತ್ತಿದ್ದಂತಿತ್ತು.

ಊರಿನವರು ದೂರದಿಂದಲೇ ಭದ್ರಮ್ಮನನ್ನು ನೋಡುತ್ತಿದ್ದರು. ಯಾರ ಸಮೀಪಕ್ಕೂ ಅವಳು ಸುಳಿಯುತ್ತಿರಲಿಲ್ಲ; ಯಾರೂ ಅವಳ ಮನೆಯ ಬಾಗಿಲಿಗೆ ಹೋಗುವ ಹಾಗಿರಲಿಲ್ಲ.

"ಭದ್ರಮ್ಮ ಮೊದಲಿನ ಹಾಗಿಲ್ಲ"

ಎಂದು ಊರಿನವರು ಆಡಿಕೊಳ್ಳುತ್ತಿದ್ದರು.

ಹನ್ನೊಂದು ತಿಂಗಳ ತರುವಾಯ ಒಂದು ದಿನ ಭದ್ರಮ್ಮ ಬಟ್ಟೆ ಒಗೆಯುತ್ತಿದ್ದಾಗ ಇದ್ದಕ್ಕಿದ್ದಂತೆ ತಲೆ ಸುತ್ತಿಬಂತು. ಎದುರಿಗಿದ್ದ ಗಿಡಮರಗಳು,

ಮನೆ, ಪಾತ್ರೆ ಪದಾರ್ಥವೆಲ್ಲಾ ಗಿರ್ರನೆ ತಿರುಗುವಂತೆ ಕಾಣಬಂತು. ಕೈಯಲ್ಲಿದ್ದ ಸೀರೆಯನ್ನತ್ತ ಒಗೆದು ಭದ್ರಮ್ಮ ಕುಳಿತುಬಿಟ್ಟಳು.

ಎಷ್ಟು ಹೊತ್ತು ಹಾಗೇ ಕುಳಿತಳೋ ಅವಳಿಗೆ ಮೈ ಮೇಲೆ ಎಚ್ಚರ ವಿಲ್ಲ. ಎದ್ದಾಗ ನೆತ್ತಿಯ ಮೇಲೆ ಸೂರ್ಯ ಮೂಡಿದ್ದ. ಪಕ್ಕದಲ್ಲಿದ್ದ ಬಿಂದಿಗೆಯಿಂದ ನೀರು ತೆಗೆದುಕೊಂಡು ತಲೆಗೆ ತಟ್ಟಿಕೊಂಡಳು.

ಒದ್ದೆಯ ಬಟ್ಟೆಗಳನ್ನು ಇದ್ದಲ್ಲಿಯೇ ಬಿಟ್ಟು ಹಾಸಿಗೆಯ ಮೇಲೆ ಬಂದು ಮಲಗಿದಳು. ಕಾಳಾಚಾರಿ ಒಡ್ಡರ ಬಯಲಿಗೆ ಹೋಗಿದ್ದ. ಅವಳ ಏಕಾಂತ ಚಿಂತೆಗೆ ಭಂಗ ತರಲು ಹನುಮನೊಬ್ಬನೇ ಮನೆಯಲ್ಲಿದ್ದವನು.

ಅವಳ ಸ್ಥಿತಿ ಕಂಡು ಹನುಮ ಸಮೀಪಕ್ಕೆ ಬಂದು

"ಯಾಕ್ರಮ್ಮಣ್ಣೀ – ಮಲಗ್ಕೊಂಡ್ರೀ" ಎಂದ.

"ಯಾಕೋ ತಲೆ ಸುತ್ತಾಯಿದೆ, ಹನುಮಪ್ಪ."

"ಆಚಾರ‍್ರನ್ನ ಕರ‍್ಕೊಂಡು ಬರ‍್ಲಾ ?"

"ಏನೂ ಬೇಡ – ಹೋಗುತ್ತೆ. ಬಿಸಿಲು ಜೋರಾಗಿತ್ತು ಅದಕ್ಕಿರ ಬಹುದು."

ಹನುಮ ಒಳಗಿನಿಂದ ಒಂದು ನಿಂಬೆಯ ಹಣ್ಣು ತಂದು, ಅದಕ್ಕೆ ತೂತು ಕೊರೆದು

"ಇದನ್ನು ಬಾಯಲ್ಲಿ ಇಟ್ಟುಕೊಂಡು ಮಲಗ್ಕೋಳಿ ಅಮ್ಮಣ್ಣಿ. ಎಲ್ಲಾ ಸರಿಹೋಗ್ತೈತೆ. ಪಿತ್ಥವಾಗಿರಬಹುದು."

ಹನುಮ ಕೊಟ್ಟ ನಿಂಬೆಯ ಹಣ್ಣನ್ನು ಕೈಯಲ್ಲಿ ಹಿಡಿದು ಅದನ್ನೇ ದಿಟ್ಟಿಸಿ ನೋಡಿದಳು.

ಅಳಿಸಿ ಹೋಗಿದ್ದ ನೆನಪು ಅಸ್ಪಷ್ಟವಾಗಿ ಮೂಡಲಾರಂಭಿಸಿತು. ಪೂರ್ವಜನ್ಮದ ಸ್ಮರಣೆಯಾಯಿತು. ಕಣ್ಣಮೇಲೆ ಕಟ್ಟಿದ್ದ ಕರೀ ಅರಿವೆ ಯನ್ನು ಬಿಚ್ಚಿದಂತಾಯಿತು. ಕಣ್ಣು ಬಿಡಲು ಸಾಧ್ಯವಾಯಿತು. ಆದರೆ ಬಹಳ ದಿನಗಳಿಂದ ಕತ್ತಲೆಯಲ್ಲಿದ್ದ ಕಣ್ಣುಗಳಿಗೆ ಬೆಳಕು ಒಮ್ಮೆಲೇ ಸಹಿಸು ವುದು ಶಕ್ಯವಾಗಲಿಲ್ಲ. ಬೆಳಕೇ ಹೆಚ್ಚು ಕತ್ತಲೆಯೆಂಬಂತೆ ಕಂಡುಬಂದಿತು.

ಮನಸ್ಸು ತಿಳಿಯಾಗುತ್ತ ಆಗುತ್ತ ಭದ್ರಮ್ಮನ ಚಿತ್ರಫಲಕದ ಮೇಲೆ ಅವಳ ಪೂರ್ವಜೀವನದ ಚಿತ್ರಗಳು ಸುಳಿದವು.

ಶ್ರೀಕಂಠಪ್ಪ ತನ್ನನ್ನು ಲಗ್ನವಾಗಿ ಮನೆಗೆ ಕರೆದುಕೊಂಡು ಬಂದದ್ದು. ಮನೆಯ ಬೀಗದ ಕೈ ತನ್ನ ಕೈಗೆ ಒಪ್ಪಿಸಿದಾಗ

" ನನ್ನಲ್ಲೇಕೆ – ನಿಮ್ಮಲ್ಲೇ ಇರಲಿ "

" ನನ್ನ ಮನೆಯ ಬೀಗದ ಕೈಯೂ ನಿನ್ನ ಬಳಿಯಿರಬೇಕು – ನನ್ನ ಮನಸ್ಸಿನ ಬೀಗದ ಕೈಯೂ ನಿನ್ನ ಬಳಿಯಿರಬೇಕು "

ಎಂದು ಹೇಳಿದ್ದು

ಒಂದು ದಿನ ತಾನು ಎಣ್ಣೆ ಹಾಕಿಕೊಂಡು ಸ್ನಾನಮಾಡಿ, ಗಂಟೆಗೊಂದು ಹೂವು ಸಿಕ್ಕಿಸಿಕೊಂಡು ಎದುರು ಬಂದಾಗ, ಗಂಡ ನಲವಿನಿಂದ ಗಲ್ಲ ಹಿಡಿದು, ಮುಖವನ್ನು ದಿಟ್ಟಿಸಿ ನೋಡಿ

" ನೀನು ಹೇಗೆ ಕಾಣುತ್ತಿರುವೆ ಬಲ್ಲೆಯಾ ? "

" ನನ್ನ ಮುಖ ನನಗೆ ಹೇಗೆ ಕಾಣಬೇಕು ? "

" ಕನ್ನಡಿಯಲ್ಲಿ. "

" ಕನ್ನಡಿ ನನ್ನ ಎದುರಿಗೇ ಇದೆ. ನಿಮ್ಮ ಮುಖಕನ್ನಡಿಯಲ್ಲಿ ನನ್ನ ರೂಪ ನೋಡಿಕೊಳ್ಳುತ್ತೇನೆ."

" ನಿನ್ನ ರೂಪಕ್ಕೆ ಈ ಕನ್ನಡಿ ಸಾಲದು ? "

" ಯಾರಿಗೆ? ನನಗೆ ಸಾಕು? ನನ್ನ ಕನ್ನಡಿ ಏನು ಹೇಳುತ್ತದೆ ? "

" ಮೋಡಗಳನ್ನು ಭೇದಿಸಿಕೊಂಡು ಬಿದಿಗೆಚಂದ್ರ ಹೊರಗೆ ಮುಖ ವಿಡುತ್ತಾನೆ ನೋಡಿದ್ದೀಯಾ? "

" ನೋಡಿದ್ದೇನೆ "

" ಹಾಗೆ, ವಿಶಾಲವಾದ ಕೇಶರಾಶಿಯನ್ನು ಭೇದಿಸಿಕೊಂಡು ನಿನ್ನ ಬೆಳದಿಂಗಳಿನಂಥ ಮುಖ ಹೊರಗೆ ಇಣಿಕಿ ಹಾಕುತ್ತಿದೆ."

" ಪ್ರೇಮಕ್ಕೆ ಕಣ್ಣಿಲ್ಲ."

" ಕಣ್ಣಿರುವುದು ಪ್ರೇಮ ಒಂದಕ್ಕೇ? "

" ಹೋಗಿ - ನೀವು ಏನೇನೋ ಮಾತನಾಡುತ್ತಿರುವಿರಿ "
ಎಂದು ತಾನು ಹುಸಿಮುನಿಸನ್ನು ತೋರಿದ್ದು.

" ಈ ಸಾರೆ ಗೌರಿ ಹಬ್ಬಕ್ಕೆ ಕರೀ ರೇಷ್ಮೆ ಸೀರೆ ತೆಗೆದುಕೊಳ್ಳಬೇಕು ಭದ್ರಾ."

" ಏಕೆ? "

" ನಿನ್ನ ಹಾಲು ಮೈಗೆ ಕರೀ ರೇಷ್ಮೆ ಸೀರೆ ತುಂಬ ಒಪ್ಪ."

ಆ ಗೌರಿಹಬ್ಬ ತನ್ನ ಜೀವನದಲ್ಲಿ ಕಾಲಿಡದೆ ಮುಂದೆ ನಡೆದು ಹೋದುದು. ಆ ವೇಳೆಗಾದ ಕಾಳಾಚಾರಿಯ ಅತ್ಯಾಚಾರ.

ಗಂಡನ ಕೊನೆಗಾಲವನ್ನು ನೆನಸಿಕೊಂಡು ಭದ್ರಮ್ಮ ಬಿಕ್ಕಿ ಬಿಕ್ಕಿ ಅತ್ತಳು. ಹನುಮ ಗಾಬರಿಯಾಗಿ ಓಡಿಬಂದು

" ಯಾಕ್ರವ್ವಾ, ಇಂಗೆ ಅಳ್ತೀರಿ " ಎಂದು ಕೇಳಿದ.

" ತುಂಬ ತಲೆನೋವು ಹನುಮಪ್ಪ. ಅದಕ್ಕೆ ಅಳು ಬಂತು."

" ಆಚಾರ್ರನ್ನು ಕರ್ಕೊಂಡು ಬರ್ಲೇಂದ್ರೆ ಬ್ಯಾಡ ಅಂತೀರಿ."

" ಹೋಗತ್ತೆ. ಅತ್ತರೆ ತಲೆನೋವು ಕಡಿಮೆಯಾಗುತ್ತದೆ."

ಭದ್ರಮ್ಮನ ಮಾತು ಅರ್ಥವಾಗದೆ ಹನುಮ ಗಡ್ಡ ತುರಸಿಕೊಂಡು ಹೊರಗೆ ಹೋದ.

ಯಾವುದೋ ಅವ್ಯಕ್ತಶಕ್ತಿ ಭದ್ರಮ್ಮನನ್ನು ಸೂತ್ರದ ಗೊಂಬೆಯಂತಾಡಿಸುತ್ತಿತ್ತು. ಅಳಿಸಿ ಹೋಗಿದ್ದ ಅವಳ ಬಾಳುವೆಯ ಚಿತ್ರ ಮೊದಲು ಮಸಕು ಮಸಕಾಗಿ - ಅನಂತರ ಸ್ಪಷ್ಟವಾಗಿ ಅವಳ ಚಿತ್ತದ ಮೇಲೆ ಮೂಡಿ ಅದನ್ನು ಒಂದೇ ಸಮನಾಗಿ ಹಿಂಡುತ್ತಿತ್ತು.

ಭದ್ರಮ್ಮ ಹಾಸಿಗೆ ಬಿಟ್ಟಿದ್ದು ಆಚಾರಿಯ ಶಯ್ಯಾಗೃಹದಲ್ಲಿ ಬಂದು ನಿಂತಳು.

ಆಚಾರಿಯ ಮನೆಗೆ ಅವನ ಶಯ್ಯಾಗೃಹ ಮಕುಟಪ್ರಾಯವಾಗಿತ್ತು. ದೊಡ್ಡ ಕರೀಮರದ ಮಂಚ, ಅದಕ್ಕೆ ಸೊಳ್ಳೆಯ ಪರದೆ. ಮಂಚದ ಮೇಲೆ ದಪ್ಪನೆಯ ಹಾಸಿಗೆ. ಮಗ್ಗಲು ಹಾಸಿಗೆಯ ಮೇಲೆ ಸ್ಯಾಟಿನ್ ಹಾಸು. ಬಾಗಿಲಿಗೆ ಮಣಿ ತೋರಣ. ಕಿಟಕಿಯ ಅತ್ತಿತ್ತ ಹುಲಿ ಚರ್ಮ ಹಾಸಿದ

ಒಂದೊಂದು ಕುರ್ಚಿ. ಗೋಡೆಯಲ್ಲಿದ್ದ ಮಾಡದಲ್ಲಿ ಮಹಾ ಗಣಪತಿಯ ಮೃಣ್ಮೂರ್ತಿ. ಗೋಡೆಗೆ ನೇತುಹಾಕಿದ್ದ ಗೂಟದ ಮೇಲೆ ಆಚಾರಿಯ ಸಿಲ್ಕ್ ಜುಬ್ಬಗಳು, ಶಾಲು, ಉತ್ತರೀಯ.

ಆಚಾರಿಯ ಶಯ್ಯಾಗೃಹದಲ್ಲಿ ನಿಂತು ಭದ್ರಮ್ಮ ಅವನ ಹಾಸು ಮಂಚವನ್ನು ದಿಟ್ಟಿಸಿ ನೋಡಿದಳು. ತಾನು ಅಲ್ಲಿ ಮೊದಲನೆಯ ದಿನ ಕಳೆದುದು ನೆನಪಾಯಿತು. ತನ್ನ ಗಂಡನ ಗೋರಿಯ ಮೇಲೆ ಆಚಾರಿ ಹೊಗಿಡ ಬೆಳಸಿದ್ದ. ಶೀಲದ ಸಮಾಧಿಯ ಮೇಲೆ ಆಚಾರಿ ತನ್ನ ರಾಕ್ಷಸ ಪ್ರವೃತ್ತಿಯ ಸೌಧ ಕಟ್ಟಿಸಿದ್ದ.

ಹಾಸಿಗೆಯನ್ನು ನೋಡುತ್ತ ನೋಡುತ್ತ ಭದ್ರಮ್ಮನಿಗೆ ರೋಷವುಕ್ಕಿತು. ಅದನ್ನು ಹರಿದು, ಚಿಂದಿಚಿಂದಿ ಮಾಡಿ, ಬೆಂಕಿಯಿಟ್ಟು ಭಸ್ಮ ಮಾಡಿಬಿಡ ಬೇಕೆನಿಸಿತು. ಆದರೆ ಎದುರಿಗೆ ಆಚಾರಿಯ ಕರಾಳ ಮುಖ ಬಂದುನಿಂತಿತು. ಅವನ ಕಿಡಿಗಣ್ಣಿನ ಉಗ್ರನೋಟ ನೋಡಲು ಭದ್ರಮ್ಮ ತೀರ ದುರ್ಬಲಳಾ ಗಿದ್ದಳು.

ಅವಳಿಗಿದ್ದುದು ಒಂದೇ ಸಮಾಧಾನ. ಅಸಹಾಯಕ ಹೆಣ್ಣಿನ ಆಶ್ರಯಧಾಮ – ಕಣ್ಣೀರು. ಮುಖ ಮುಚ್ಚಿಕೊಂಡು ಕಣ್ಣೀರು ಸುರಿಸುತ್ತ ನಿಂತಳು.

ಹಿಂದಿನಿಂದ ಯಾರೋ ಬೆನ್ನಿನ ಮೇಲೆ ಗುದ್ದಿದಂತಾಯಿತು. ಭದ್ರಮ್ಮ ಚಕಿತಳಾಗಿ ಹಿಂದಿರುಗಿದಳು—ಆಚಾರಿ!

ಇಷ್ಟು ಹೊತ್ತಿನವರೆಗೆ ತನ್ನ ಮನಸ್ಸಿನಲ್ಲಿ ಆದ ಆಂದೋಲನವನ್ನು ಆಚಾರಿ ಅರಿತನೇನೋ ಎಂದು ಭಯಾಕ್ರಾಂತಳಾದಳು.

ಆಚಾರಿ ಸಾವಕಾಶವಾಗಿ ಹೆಗಲ ಮೇಲಿದ್ದ ಶಾಲನ್ನು ಗೂಟಕ್ಕೆ ನೇತುಹಾಕಿ, ಸಿಲ್ಕ್‌ಷರ್ಟ್ ತೆಗೆದೊಗೆದು ಕೈಯಲ್ಲಿದ್ದ ದೊಣ್ಣೆಯನ್ನು ಗೋಡೆಗೊರಗಿಸಿ ಮಂಚದ ಮೇಲೆ ಕುಳಿತು

"ಇಲ್ಲೇನು ಮಾಡುತ್ತಿದ್ದೆಯೇ?" ಎಂದು ಕೇಳಿದ.

"ತಲೆ ನೋಯುತ್ತಿತ್ತು. ಒಂದು ಗಳಿಗೆ ಮಲಗಿಕೊಳ್ಳೋಣ ಎಂದು ಬಂದೆ."

"ಅಳುತ್ತಾ ನಿಂತಿದ್ದೆ."

"ನೋವು ವಿಪರೀತವಾಗಿತ್ತು. ಕಣ್ಣಲ್ಲಿ ನೀರು ಬಂತು."

"ಸುಳ್ಳೇಕೆ ಬೊಂಕುತ್ತಿರುವೆ?"

"ಸುಳ್ಳಲ್ಲ – ನಿಜ."

ಆಚಾರಿ ಹನುಮುನನ್ನು ಕೂಗಿದ. ಹನುಮು ಬಂದು ಎದುರಿಗೆ ನಿಲ್ಲಲು ಅವನ ಕಡೆಗೆ ಹತ್ತು ರೂಪಾಯಿ ನೋಟು ಒಗೆದು

"ನಾಳೆ ರಾತ್ರೀಗೆ ಎಲ್ಲಾ ಏರ್ಪಾಟುಮಾಡು" ಎಂದು ಹೇಳಿದ.

ಭದ್ರಮ್ಮ ಅನುಮಾನಿಸುತ್ತ

"ಯಾರು ಬರುತ್ತಾರೆ" ಎಂದು ಕೇಳಿದಳು.

ಅವಳ ಪ್ರಶ್ನೆಗೆ ಆಚಾರಿ ಉತ್ತರ ಕೊಡಲಿಲ್ಲ. ಒಮ್ಮೆ ಮೊಗವೆತ್ತಿ ಅವಳನ್ನು ದುರದುರನೆ ನೋಡಿ ಹನುಮುನಿಗೆ

"ಹೋಗು – ಇಲ್ಲೇಕೆ ನಿಂತಿದ್ದೀ?"

ಎಂದು ಜಬರಿಸಿದ.

ಆಚಾರಿಯ ಬಾಯಲ್ಲಿ ಬರುತ್ತಿದ್ದ ದುರ್ವಾಸನೆ ಭದ್ರಮ್ಮನ ಮೂಗಿನ ಸೆಲೆಯೊಡೆಯುತ್ತಿತ್ತು. ದುರ್ಗಂಧವನ್ನು ಸಹಿಸಿಕೊಂಡು ಅವಳು ನಿಂತಲ್ಲಿಯೇ ನಿಂತಿದ್ದಳು.

"ಏಕೆ ನಿಂತಿದ್ದೀಯಾ – ನಿನ್ನ ಕೆಲಸಕ್ಕೆ ಹೋಗು"

ಎಂದು ಆಚಾರಿ ಎಚ್ಚರಿಸಿದ.

"ನಾಳೆ ಯಾರು ಬರುತ್ತಾರೆ?"

"ಅದನ್ನು ಕಟ್ಟಿಕೊಂಡು ನಿನಗೇನು?"

"ಹೇಳಿ – ಕೇಳಿಯಾದರೂ ಸಂತೋಷಪಡುತ್ತೇನೆ."

"ನೀನೇನು ಸಂತೋಷಪಡುವುದು."

"ಇನ್ನು ಯಾರ ಮನೆ ಹಾಳುಮಾಡುವುದಕ್ಕೆ ಹೊರಟಿದ್ದೀರೋ ಅವನ್ನು ತಿಳಿದುಕೊಳ್ಳುತ್ತೇನೆ."

ಭದ್ರಮ್ಮನ ಬಾಯಲ್ಲಿ ಇಷ್ಟು ಮಾತು ಹೊರಟುದು ಇದೇ ಮೊದಲು. ಆಚಾರಿ ಅವಾಕ್ಕಾದ. ಅವಳನ್ನೇ ದುರದುರನೆ ನೋಡುತ್ತಾ

“ ನಿನ್ನ ನಾಲಗೆ ದೊಡ್ಡದಾಯಿತು ” ಎಂದ.

“ ನನ್ನ ನಾಲಗೆಯಲ್ಲ – ನಿಮ್ಮ ಬುದ್ಧಿ ದೊಡ್ಡದಾಯಿತು.”

“ ಮುಚ್ಚೇ ಬಾಯಿ.”

“ ಎಂದೋ ಮುಚ್ಚಿಸಿಬಿಟ್ಟಿರಲ್ಲಾ! ”

“ ಇವತ್ತೇನೇ ನಿನಗೆ ಬಂದಿರುವುದು ದೊಡ್ಡ ರೋಗ ? ”

“ ನನಗೆ ದೊಡ್ಡ ರೋಗ ಬಂದು ಹನ್ನೊಂದು ತಿಂಗಳಾಯಿತು.”

ಆಚಾರಿ ಕೋಪೋದ್ದೀಪ್ತನಾಗಿ ಎದ್ದು ನಿಂತ

“ ಹೊಡೆಯುವಿರಾ ? ”

“ ಕೊಂದು ಹಾಕಿ ಬಿಡುತ್ತೇನೆ ”

“ ಅದೊಂದೇ ನಿಮಗೆ ಗೊತ್ತಿರುವುದು.”

“ ಅನಿಷ್ಟ ರಂಡೇ.........”

ಎಂದು ಕನಲಿ ಭದ್ರಮ್ಮನ ಕಪಾಳಕ್ಕೆ ಬಲವಾಗಿ ಬಿಗಿದ. ದುಃಖದ ತಾಪದಿಂದ ಮೊದಲೇ ಜೀರ್ಣವಾಗಿದ್ದ ಭದ್ರಮ್ಮನಿಗೆ ಆಚಾರಿಯ ಹೊಡೆತ ಸಿಡಿಲು ಬಡಿದಂತಾಯಿತು. ತಲೆ ಸುತ್ತುತ್ತ ಬಂತು. ಕಣ್ಣುಗತ್ತಲೆ ಕವಿಯುತ್ತ ಬಂತು. ಅಲ್ಲಿ ನಿಲ್ಲದೆ ತೂರಾಡಿಕೊಂಡು ಬಂದು ತನ್ನ ಹಾಸಿಗೆಯ ಮೇಲೆ ಪವಡಿಸಿದಳು.

ಭದ್ರಮ್ಮನ ಚಿತ್ತವೃತ್ತಿಕಂಡು ಕಾಳಾಚಾರೀಗೆ ಬೇಸರವೂ ಆಯಿತು, ಭಯವೂ ಆಯಿತು. ಇದುವರೆಗೆ ಅವಳು ತನ್ನೆದುರಿಗೆ ನಿಂತು ಮಾತನಾಡುವ ಧೈರ್ಯ ತೋರಿರಲಿಲ್ಲ. ಇಂದವಳ ಮುಖದಲ್ಲಿ ನಿರ್ಭೀತಿ ಕಂಡುಬಂದಿತ್ತು. ತನ್ನ ಚಲನವಲನ ಕೇಳುವುದಕ್ಕೆ ಅವಳು ಅಂಜಲಿಲ್ಲ. ಅವಳ ಮೇಲೆ ತನ್ನ ಪ್ರಭಾವ ಕಡಿಮೆಯಾಯಿತೆನ್ನುವುದಂತೂ ಕಾಳಾಚಾರಿಗೆ ಸ್ಪಷ್ಟವಾಯಿತು. ಅದಕ್ಕೇನು ಮಾಡಬೇಕೆಂದು ಯೋಚಿಸುತ್ತ ಮಲಗಿದ.

ಮಾರನೆಯ ದಿನದ ಮುಹೂರ್ತ ನಿಶ್ಚಯಿಸಿಕೊಂಡು, ಒಡ್ಡರ ಬಯಲಿಗೆ ಹೋಗಿ ಓಬಯ್ಯನ ಜತೆ ಕಂಠಪೂರ್ತಿ ಕುಡಿದು ಸುಖದ ಮೆಲುಕು ಹಾಕುತ್ತ ಕಾಳಾಚಾರಿ ಮನೆ ಸೇರಿದ್ದ. ಭದ್ರಮ್ಮನ ವರ್ತನೆ ಅವನ ಸುಖದ ಸುಖ ಸ್ವಪ್ನ ಮುರಿದು, ಮನಸ್ಸಿನ ಶಾಂತಿಗೆ ಭಂಗತಂದಿತ್ತು. ಅವಳ ಮೇಲೆ

ತಡೆಯಲಾಗದಷ್ಟು ಕೋಪ ಬಂತು. ಎದುರಿಗಿದ್ದ ದೊಣ್ಣೆಯನ್ನೆತ್ತಿಕೊಂಡು ಅವಳ ಸೊಂಟ ಮುರಿಯುವಂತೆ ಥಳಿಸಿ ಬರಬೇಕೆನ್ನಿಸಿತು. ಕೋಪ ಅನರ್ಥಕ್ಕೆ ಸಾಧನವಾದೀತು ಎಂದು ಮನಸ್ಸನ್ನು ಬಿಗಿಹಿಡಿದ.

ಭದ್ರಮ್ಮನ ಪ್ರತಿಭಟನೆಯನ್ನು ಮರೆಯಬೇಕೆಂದು ಕಾಳಾಚಾರಿ ಪ್ರಯತ್ನಿಸಿದ. ಅವನು ಮರೆಯಲೆತ್ನಿಸಿದಷ್ಟು ಅದು ಸ್ಪಷ್ಟವಾಗಿ ಎದುರು ನಿಲ್ಲುತ್ತಿತ್ತು.

"ಪಂಜರದ ಹಕ್ಕಿಯ ಪುಕ್ಕ ಬಲಿಯಿತೆಂದು ಕಾಣುತ್ತದೆ" ಎಂದುಕೊಂಡ.

ಹನುಮನನ್ನು ಕರೆದು

"ನಾನು ಹೊರಗೆ ಹೋಗಿದ್ದಾಗ ಭದ್ರಿ ಏನು ಮಾಡುತ್ತಿದ್ದಳೋ?" ಎಂದು ಕೇಳಿದ.

"ಏನಿಲ್ಲ ಆಚಾರ್ರೇ. ತಲೆನೋವೂಂತ ಅಳ್ತಾ ಮಲಗಿದ್ರು."

"ಏನಾದರೂ ಮಾತಾಡಿಕೊಂಡಳೇ?"

"ಏನೂ ಇಲ್ಲಪ್ಪಾ"

ಎಂದವನು ಹೇಳಿದ.

ಅವಳನ್ನು ಸಂತೈಸಿ ಕೋಪ ಶಮನಮಾಡಬೇಕೆಂದು ಆಚಾರಿ ಯೋಚಿಸಿದ. ಮರುಕ್ಷಣವೇ

"ಛೆ! ಛೆ! ಅದು ದೌರ್ಬಲ್ಯದ ಚಿನ್ಹೆಯಾಗುತ್ತದೆ. ಅಷ್ಟಕ್ಕೆ ನಾನು ಅವಕಾಶಕೊಟ್ಟರೆ ತಲೆಯೇರುತ್ತಾಳೆ"

ಎಂದು ಭಾವಿಸಿ ಯೋಚನೆಯ ಕೈಬಿಟ್ಟ.

೭

ಶುಕ್ರವಾರ ಬೆಳಿಗ್ಗೆ ಸ್ನಾನಮಾಡಿ, ಶುಭ್ರವಸ್ತ್ರ ಧರಿಸಿ, ಹಣೆಗೆ ತ್ರಿಪುಂಡ್ರ ಧರಿಸಿ ಸಾಂಬ ಹೊರಡಲಣಿಯಾದ. ಶಾಸ್ತ್ರಿಗಳು ಪೂಜೆಗೆ ಕುಳಿತಿದ್ದರು.

ಅಡಿಗೆಯ ಮನೆಗೆ ಹೋದರೆ ತಂದೆಯ ಕಣ್ಣಿಗೆ ಬೀಳಬೇಕಾಗುತ್ತ ದೆಂದು ಹೊರಗಿನ ಪಡಸಾಲೆಯಲ್ಲಿ ಸಾಂಬ ಅತ್ತಿಗೆಯನ್ನು ಕಾಯುತ್ತ ನಿಂತ.

ಸಾಂಬನನ್ನು ನೋಡಿ ಆಶ್ಚರ್ಯದಿಂದ ಸೀತಮ್ಮ

"ಇದೇನೋ ಸಾಂಬ. ಎಲ್ಲೋ ಹೊರಟಿದ್ದೀ" ಎಂದಳು.

"ಶುಶ್! ಮೆಲ್ಲಗೆ ಮಾತಾಡು ಅತ್ತಿಗೆ. ಅಣ್ಣಯ್ಯನ ಕಿವಿಯ ಮೇಲೆ ಬಿದ್ದೀತು?"

"ಏನಪ್ಪಾ ಅಂಥ ಗುಟ್ಟು."

"ನನ್ನ ಆಶೀರ್ವಾದ ಮಾಡು ಅತ್ತಿಗೆ"

ಎಂದು ಅತ್ತಿಗೆಯ ಪಾದ ಮುಟ್ಟಿ ನಮಸ್ಕರಿಸಿದ.

"ನೂರು ವರ್ಷ ಸುಖವಾಗಿ ಬಾಳು"

ಎಂದು ಆಶೀರ್ವಾದ ಮಾಡಿ

"ನಿನ್ನ ಆಟವೇ ನನಗೆ ಅರ್ಥವಾಗಲ್ಲಪ್ಪಾ. ಎಲ್ಲೀಗೆ ಹೊರಟಿದ್ದೀ ಹೇಳಬಾರದೇ?"

ಅತ್ತಿಗೆಗೆ ಸಂಕ್ಷೇಪವಾಗಿ ತನ್ನ ಮೃದಂಗ ಪಾಠದ ವಿಷಯ ತಿಳಿಸಿ

"ಇದು ನಮ್ಮಿಬ್ಬರಲ್ಲೇ ಇರಲಿ ಅತ್ತಿಗೆ. ಅಣ್ಣಯ್ಯನಿಗೆ ತಿಳಿದರೆ ಕೋಪ ಮಾಡಿಕೊಂಡಾರು?"

"ಅವರಿಗೆ ಒಂದು ಮಾತು ಹೇಳಿದ್ದರೆ ಚೆನ್ನಾಗಿತ್ತಲ್ಲಪ್ಪಾ."

"ನಾನು ಪಾಠ ಕಲಿತು ಚೆನ್ನಾಗಿ ನುಡಿಸಿ ಊರಿಗೆ ಆಶ್ಚರ್ಯವುಂಟು ಮಾಡಬೇಕೆಂದಿದ್ದೇನೆ."

ಎಂದು ಹೇಳಿದ.

ಸಾಂಬನ ಮುಗ್ಧಮಾತಿಗೆ ಏನು ಹೇಳಬೇಕೋ ಸೀತಮ್ಮನಿಗೆ ತೋರಲಿಲ್ಲ.

"ಹೋಗಿ ಬಾಪ್ಪ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ಸಮಯ ನೋಡಿ ನೀನೇ ಮಾವನವರಿಗೆ ಹೇಳಿಬಿಡು. ತಿಳಿದೂ ತಿಳಿದೂ ತಮಗೆ ಹೇಳಲಿಲ್ಲವೆಂದು ನನ್ನಮೇಲೆ ಕೋಪಿಸಿಕೊಂಡಾರು."

"ಹಾಗೇ ಆಗಲಿ ಅತ್ತಿಗೆ."

“ ಫಲಹಾರ ಮಾಡಿಕೊಂಡು ಹೋಗೋ ”

“ ಏನೂ ಬೇಡ ಅತ್ತಿಗೆ.”

“ ಒಂದು ಲೋಟ ಹಾಲಾದರೂ ಕುಡಿದು ಹೋಗು. ಹಿಂದಿರುಗಿ ಬರುವ ಹೊತ್ತಿಗೆ ನೆತ್ತಿಯ ಮೇಲೆ ಸೂರ್ಯ ಬಂದಿರುತ್ತಾನೆ.”

“ ಇವತ್ತು ಪಾಠದ ಆರಂಭದ ಪೂಜೆಯಿದೆ ಅತ್ತಿಗೆ.”

“ ಹಾಗಾದರೆ ನಾನು ಒತ್ತಾಯ ಮಾಡುವುದಿಲ್ಲ ”

ಎಂದಳು.

ಸಾಂಬ ಮೆಲ್ಲನೆ ಮನೆಯಿಂದ ನುಸುಳಿಕೊಂಡು ಸಂತೇಹಳ್ಳಿ ಮಾರ್ಗ ಹಿಡಿದ.

ಗುರುವಾರದಿಂದಲೂ ನಾಗಪ್ಪನಿಗೆ ಪುರಸತ್ತೇ ಇರಲಿಲ್ಲ. ಮೂಲೆಗೆ ಬಿದ್ದಿದ್ದ ತಂಬೂರಿ, ಮೃದಂಗ ಹೊರಗೆ ತೆಗೆದು ಅವುಗಳನ್ನು ಶುದ್ಧಿಮಾಡಿದ. ತಂಬೂರಿಗೆ ತಂತಿಗಳನ್ನು ಜೋಡಿಸಿದ. ಮೃದಂಗಕ್ಕೆ ಕಾರಣೆ ಹಾಕಿ, ಪಕ್ಕದ ಪಟ್ಟಿಗಳನ್ನು ಸರಿಮಾಡಿ ಶ್ರುತಿಮಾಡಿದ.

ಸಾಂಬ ಬರುವ ಹೊತ್ತಿಗೆ ನಾಗಪ್ಪ ಮನೆಯನ್ನು ಗುಡಿಸಿ, ಸಾರಿಸಿ ಶುಚಿಮಾಡಿ, ಚಾಪೆ ಹಾಸಿ ಅದರ ಮೇಲೆ ವಾದ್ಯಗಳನ್ನು ಅಣಿಮಾಡಿಟ್ಟು, ಪೂಜೆಯ ವ್ಯವಸ್ಥೆಮಾಡಿದ.

ಸಾಂಬನ ದಾರಿ ನೋಡುತ್ತಾ ನಿಂತಿದ್ದ ನಾಗಪ್ಪನಿಗೆ ಅನುಮಾನವಾಯಿತು.—‘ ಬರುತ್ತಾನೋ ಇಲ್ಲವೋ – ಶಾಸ್ತ್ರಿಗಳು ಏನು ಹೇಳಿದ್ದಾರೋ ’ ಎಂದು ಶಂಕೆಪಟ್ಟುಕೊಂಡ. ಸಾಂಬನ ಮುಖ ಕಂಡ ತಕ್ಷಣ ಅವನಿಗಾದ ಆನಂದ ಹೇಳತೀರದು.

“ ಯಾಕಪ್ಪಾ ಸಾಂಬಯ್ಯ, ಇಷ್ಟು ತಡಮಾಡಿದೆ ? ”

“ ಅಣ್ಣಯ್ಯ ಪೂಜೆಗೆ ಕೂಡಲಿ ಎಂತಾ ಕಾದಿದ್ದೆ.”

“ ಅವರಿಗೆ ಹೇಳಿ ಬರಲಿಲ್ಲವೇ ? ”

“ ಈಗಲೇ ಹೇಳುವುದು ಬೇಡ ಎಂದು ಸುಮ್ಮನಾದೆ.”

ಸಾಂಬನನ್ನು ಒಳಕ್ಕೆ ಕರೆದೊಯ್ದು ಅವನ ಕೈಗೆ ಹೂವಿತ್ತು ಸಾಂಗವಾಗಿ ಪೂಜೆ ಮಾಡಿಸಿದ. ತಂಬೂರಿ, ಮೃದಂಗಕ್ಕೂ ಪೂಜೆಯಾಯಿತು.

ನಾಗಪ್ಪ ಕೈಗೆ ತಂಬೂರಿ ತೆಗೆದುಕೊಂಡು ಶ್ರುತಿಮಾಡಿ ಸಾಂಬನಿಗೆ ಸರಳೆ ವರಸೆಯ ಪಾಠ ಹೇಳಿದ.

ಸ್ವರಪಾಠ ಮುಗಿದ ಮೇಲೆ ನಾಗಪ್ಪ ಮೃದಂಗವನ್ನು ಕೈಗೆತ್ತಿಕೊಂಡು ಅದರ ರಚನಾಕ್ರಮವನ್ನು ವರ್ಣಿಸಿ ಸ್ವಲ್ಪಹೊತ್ತು ನುಡಿಸಿ ತೋರಿಸಿ ಆದಿ ತಾಳದ ಕೆಲವು ಬೋಲುಗಳನ್ನು ಸಾಂಬನಿಗೆ ಅಭ್ಯಾಸ ಮಾಡಿಸಿದ.

ಸೂರ್ಯ ಕ್ರಮಕ್ರಮೇಣ ನೆತ್ತಿಯ ಮೇಲೆ ಬರತೊಡಗಿದ್ದ. ಗುರು, ಶಿಷ್ಯರಿಬ್ಬರಿಗೂ ಹೊತ್ತು ಗೊತ್ತಾಗಲೇ ಇಲ್ಲ. ಪಾಠದಲ್ಲಿ ಇಬ್ಬರೂ ತಲ್ಲೀನರಾದರು. ಪಾಠ ಮುಗಿಯಲು ಸಾಂಬ ಸ್ವಲ್ಪ ಕಾತುರನಾಗಿ

"ಗಂಟೆ ಹನ್ನೆರಡಾಯಿತೇನೋ?"

"ಆಗಿರಬಹುದು."

"ಅಣ್ಣಯ್ಯ ಊಟಕ್ಕೆ ಕಾದಿರುತ್ತಾರೆ, ನಾನು ಬರುತ್ತೇನೆ."

"ಬೆಳಿಗ್ಗೆ ಬೇಗ ಬಂದುಬಿಡು ಸಾಂಬಪ್ಪಾ."

"ಹಾಗೇ ಆಗಲಿ"

ಎಂದು ಹೇಳಿ ಸಾಂಬ ಮನೆಯ ದಾರಿ ಹಿಡಿದು ಓಡಿದ.

ಶಾಸ್ತ್ರಿಗಳು ಮಗನ ದಾರಿ ನೋಡುತ್ತಾ ತಲೆಬಾಗಲಿನಲ್ಲೇ ನಿಂತಿದ್ದರು. ಒಳಗೆ ಎಲೆ ಹಾಕಿ ಸೀತಮ್ಮ ಅವನ ದಾರಿ ಕಾಯುತ್ತಿದ್ದಳು. ಸಾಂಬ ಬರುತ್ತಲೆ ಶಾಸ್ತ್ರಿಗಳು

"ಯಾಕಪ್ಪಾ – ಇಷ್ಟು ಹೊತ್ತು" ಎಂದರು.

"ಸುತ್ತಾಡಿಕೊಂಡು ಸಂತೇಹಳ್ಳಿ ಕಡೆ ಹೋದೆ – ಹೊತ್ತಾಯ್ತು"

ಎಂದು ಹೇಳಿದ.

ಒಂದು ತಿಂಗಳು ಸತತವಾಗಿ ನಾಗಪ್ಪನ ಪಾಠ ಸಾಗಿತು. ಸಾಂಬ ಆದರಲ್ಲಿ ತಲ್ಲೀನನಾದ. ಬೆಳಿಗ್ಗೆ, ಸಂಜೆ ಎರಡು ಹೊತ್ತೂ ಸಂತೇಹಳ್ಳಿಗೆ ಹೋಗಿಬರುತ್ತಿದ್ದ. ಆ ದಾರಿಯಲ್ಲಿ ಅವನು ದಿನವೂ ಹೋಗುವುದನ್ನು ಕಾಣುತ್ತಿದ್ದ ಪುಟ್ಟೇಗೌಡ ಶಾಸ್ತ್ರಿಗಳಿಗೆ ತಿಳಿಸಿದ. ಶಾಸ್ತ್ರಿಗಳು ಒಂದು ರಾತ್ರಿ ಸಾಂಬ ಮನೆಗೆ ಬಂದ ಕೂಡಲೆ ಕೇಳಿದರು.

"ದಿನವೂ ಬೆಳಿಗ್ಗೆ ಸಂಜೆ ಎಲ್ಲಿಗೆ ಹೋಗುತ್ತೀಯೋ ಸಾಂಬ."

"ಮನೆಯಲ್ಲೇನೂ ಕೆಲಸವಿಲ್ಲ. ಹಳ್ಳಿಗಳ ಕಡೆ ಸುತ್ತಾಡಿಕೊಂಡು ಬರುತ್ತೇನೆ."

"ಸಾಂಬ........ಸುಳ್ಳು ಹೇಳುವುದನ್ನು ಹೊಸದಾಗಿ ಅಭ್ಯಾಸಮಾಡಿ ಕೊಳ್ಳುತ್ತಿರುವೆಯಾ ?"

"ಇಲ್ಲ ಅಣ್ಣಯ್ಯ."

"ಹಾಗಾದರೆ ನಿಜ ಹೇಳು."

"ಸಂತೇಹಳ್ಳಿಗೆ ಹೋಗಿ ಬರುತ್ತಿದ್ದೇನೆ."

"ನಾಗಪ್ಪನ ಹತ್ತಿರ."

"ಹೂ!"

"ಏಕೆ?"

"ಹೇಳಿದರೆ ಬಯ್ಯುತ್ತೀಯೇನೋ?"

"ಇಲ್ಲ ಹೇಳೋ?"

"ಮೃದಂಗ ಕಲಿಯಬೇಕೆಂದು ಆಸೆಯಾಯಿತು. ನಾಗಪ್ಪ ಹೇಳಿ ಕೊಡುತ್ತೇನೆಂದರು – ಹೋಗುತ್ತಿದ್ದೇನೆ."

"ಇದಕ್ಕೆ ಮುಚ್ಚುಮರೆ ಏಕೆ? ರಾಮನವಮಿ ದಿವಸ ನಾನೇ ಹೇಳ ಲಿಲ್ಲವೇ?"

"ಚೆನ್ನಾಗಿ ಕಲಿತು ನಿನಗೆ ಆಶ್ಚರ್ಯವನ್ನುಂಟುಮಾಡಬೇಕೆಂದು ಮುಚ್ಚುಮರೆ ಮಾಡಿದೆ – ಕ್ಷಮಿಸಿ."

"ಅಪರಾಧವೇನೂ ಆಗಲಿಲ್ಲ. ಮನಸ್ಸಿಟ್ಟು ಕಲಿ. ಅದೂ ದೊಡ್ಡ ವಿದ್ಯೆ. ವಿಶ್ವೇಶ್ವರ ಕುಣಿದರೆ ಸಾಕ್ಷಾತ್ ನಂದಿಕೇಶ್ವರನೇ ಮೃದಂಗ ನುಡಿ ಸುತ್ತಾನಂತೆ. ನಿನ್ನ ವಿದ್ಯೆಯೂ ಹಾಗೇ ಭಗವದರ್ಪಣವಾಗಬೇಕು."

ಸಾಂಬ ಮಾತನಾಡಲಿಲ್ಲ. ತಂದೆಗೆ ತಿಳಿದದ್ದೂ, ಅವರು ಆ ಬಗ್ಗೆ ಸಂತೋಷ ವ್ಯಕ್ತಮಾಡಿದ್ದೂ ಅವನ ಮನಸ್ಸಿನ ದೊಡ್ಡ ಭಾರ ಇಳುಹಿ ದಂತಾಗಿತ್ತು.

ಶಾಸ್ತ್ರಿಗಳಿಗೆ ಕೋಪ ಬರಲಿಲ್ಲವೆಂಬ ಸುದ್ದಿ ಕೇಳಿ ನಾಗಪ್ಪನಿಗೂ ತುಂಬ ಸಂತೋಷವಾಯಿತು. ತನ್ನಲ್ಲಿದ್ದ ಇನ್ನೊಂದು ಮೃದಂಗ ಸರಿಮಾಡಿ, ಶ್ರುತಿ ಮಾಡಿ ಸಾಂಬನಿಗೆ ಕೊಟ್ಟು

“ ಮನೆಯಲ್ಲಿ ಪುರಸತ್ತಾದಾಗ ಅಭ್ಯಾಸ ಮಾಡಿಕೋ ”

ಎಂದು ಹೇಳಿದ.

ಸಾಂಬಸಿಗೆ ಹಗಲಿರುಳೂ ಮೃದಂಗ ಅಭ್ಯಾಸ ಮಾಡುವುದೇ ಕೆಲಸ ವಾಯಿತು. ತನ್ನ ಜತೆ ಬರುವುದಿಲ್ಲವೆಂದು ಆಗಾಗ್ಗೆ ವಿಶ್ವೇಶ್ವರ ಅಸಮಾಧಾನ ಮಾಡಿಕೊಳ್ಳುತ್ತಿದ್ದ. ಸೀತಮ್ಮ ಮೈದುನನ ಪರ ವಹಿಸಿ

“ ಏನೋ ಕಲೀತಿದ್ದಾನೆ. ಅವನನ್ನೇಕೆ ತೊಂದರೆಮಾಡುತ್ತೀರಿ. ನಾಳೆ ಸಾಂಬ ದೊಡ್ಡ ವಿದ್ವಾಂಸನಾದರೆ ಮನೆಗೇ ಕೀರ್ತಿಯಲ್ಲವೇ ? ”

“ಸರಿ ಸರಿ ! ಅವನೂ ಏಕೆ ವಿದ್ವಾಂಸನಾಗಬಾರದು.”

“ ಹಿತ್ತಲಗಿಡ ಮದ್ದಲ್ಲ. ಮಾವನವರು ದೊಡ್ಡ ಪಂಡಿತರು. ಈ ಹಳ್ಳಿಯಲ್ಲಿ ಅವರ ವಿದ್ಯೆ ಯಾರು ಕೇಳಬೇಕು ಹೇಳಿ.”

“ ಈ ಹಳ್ಳಿಯವರ ಹಾಗೆ ನಾನೂ ಮಡ್ಡಿ ಸಾಂಬ್ರಾಣಿ ಎಂದು ಹೇಳುವೆಯೇನು ? ”

“ ಛೆ ! ಛೆ ! ಹಾಗಲ್ಲ. ನಮ್ಮ ಮನೆ ಮಗೂ ಹೇಗಾದರೂ ಮುಂದಕ್ಕೆ ಬರಲಿ ಎಂದು ನನ್ನ ವಾಂಛಲ್ಯ.”

“ ನನ್ನ ತಮ್ಮನ್ನ ಕಂಡರೆ ನನಗೆ ಆಗೋದಿಲ್ಲವೇ ? ”

“ ಎಲ್ಲಾದಕ್ಕೂ ಅಡ್ಡ ಮಾತಾಡುವಿರಲ್ಲ. ನಿಮಗೆ ತಮ್ಮ ಅಂದರೆ ಪಂಚಪ್ರಾಣ ಎಂದು ನಾನು ಕಾಣೆನೇ ? ”

“ ನೀನು ಒಳ್ಳೇ ಮಳ್ಳಿ ಕಣೇ. ಆಡೋದು ಆಡಬೇಕು. ಅದನ್ನು ಕೇಳಿ ನಾವು ಕೋಪಮಾಡಿಕೊಳ್ಳಬಾರದು. ಹಾಗೆ ಮಾಡುತ್ತೀ.”

ಸೀತಮ್ಮ ನಕ್ಕುಬಿಟ್ಟಳು. ವಿಶ್ವೇಶ್ವರ ಹೆಂಡತಿಯನ್ನು ನೋಡಿ

“ ನನ್ನ ತಮ್ಮನಿಗೇ ಇಷ್ಟು ಒದ್ದುಗೊಳ್ಳುತ್ತೇ ಈ ಜೀವ. ಇನ್ನು ತನ್ನದೇ ಒಂದು ಮಗು ಇದ್ದಿದ್ದರೆ........”

ಎಂದುಕೊಂಡ.

೭

ರಾಮಲಿಂಗಾಚಾರಿ ಮನೆಯಲ್ಲಿ ದೊಡ್ಡ ಗೋಳಿದ್ದಿತ್ತು. ಅವನ ಹೆಂಡತಿ ಹಣೆ ಹಣೆ ಚಚ್ಚಿಕೊಂಡು ತಲೆಗೂದಲು ಬಿರಿಹುಯಿದುಕೊಂಡು ಗೋಳಾಡುತ್ತಿದ್ದಳು. ಅವಳ ಬಾಯಲ್ಲಿ ಬರೀ ಶಾಪದ ಮಾತುಗಳೇ. ರಾಮಲಿಂಗಾಚಾರಿ ಮುಖ ಮುಚ್ಚಿಕೊಂಡು ಒಂದೆಡೆ ದುಃಖಿಸುತ್ತ ಕುಳಿತಿದ್ದ. ಪಾರ್ವತಮ್ಮನ ಮೇಲೆ ಮಹಾಕಾಳಿ ಅವತಾರ ಮಾಡಿದಂತಿತ್ತು. ಮೂಲೆಯಲ್ಲಿ ಮುದುರಿಕೊಂಡಿದ್ದ ಗಂಡನ ಬಳಿಗೆ ಬಂದು ಅವನನ್ನು ಬಲವಾಗಿ ಹಿಡಿದಲುಗಿಸಿ

"ಏನು ಮಾಡುವುದು ಹೇಳಿ" ಎಂದಳು.

ರಾಮಲಿಂಗಾಚಾರಿ ಸಹಾಯಶೂನ್ಯನಾಗಿ ಆರ್ತತೆಯಿಂದ ಹೆಂಡತಿಯ ಮುಖ ನೋಡಿದ.

"ಸ್ವರ್ಣನ್ನ ಹೀಗೆ ಬಲಿಕೊಡುವುದಕ್ಕಿಂತ ಕುತ್ತಿಗೆ ಹಿಸುಕಿ ಭಾವಿಯಲ್ಲಿ ಹಾಕಿದರೆ ನನಗೆ ಸಂತೋಷ"

ಎಂದು ಕೆರಳಿ ನುಡಿದಳು.

"ಇದರಲ್ಲಿ ನನಗೆ ಯಾವ ಸಂತೋಷವಿದೆ ಹೇಳು."

"ಅತ್ಯಾಚಾರ ಸಹಿಸಿಕೊಂಡು ಸುಮ್ಮನೆ ಕೂಡುವುದೇ?"

"ಇನ್ನೇನು ಮಾಡುವುದಕ್ಕೆ ಸಾಧ್ಯ."

"ಊರಿನ ಹತ್ತು ಜನರ ಸಹಾಯ ತೆಗೆದುಕೊಂಡು ಈ ಪುಂಡಾಟ ನಿಲ್ಲಿಸಬೇಕು."

"ಕಾಳಾಚಾರಿ ಎದುರು ನಿಲ್ಲುವ ಹತ್ತು ಜನ ಈ ಊರಿನಲ್ಲಿ ಯಾರಿದ್ದಾರೆ?"

"ಅಕ್ಕಪಕ್ಕದ ಊರಿನವರೂ ಸತ್ತುಹೋದರೇ?"

"ಅವರೂ ಆಚಾರಿ ಹೆಸರು ಕೇಳಿ ಗಡಗಡ ನಡುಗುತ್ತಾರೆ. ಯಾರೂ ಅವನ ವ್ಯವಹಾರಕ್ಕೆ ಕೈ ಹಾಕುವುದಿಲ್ಲ."

"ನೀವು ಸ್ವರ್ಣನ್ನ ಇವತ್ತು ಕಳಿಸಿಕೊಟ್ಟರೆ ನಾಲಗೆ ಹಿರಿದುಕೊಂಡು ನಾನು ಪ್ರಾಣ ಬಿಡುತ್ತೇನೆ."

"ಮಾರಿ ನಮ್ಮ ಮನೆ ಹೊಕ್ಕಿದ್ದಾಳೆ. ನಮ್ಮ ಊರು ಹೊಕ್ಕಿದ್ದಾಳೆ. ಏನೇನು ಆಗುವುದೊ ಆಗಿಹೋಗಲಿ. ನೀನೂ ಪ್ರಾಣ ಬಿಡು – ನಿನ್ನ ಹಿಂದೆ ನಾನೂ ಬರುತ್ತೇನೆ."

ತನಗಾಗಿದ್ದಷ್ಟೇ ಸಂಕಟ ಗಂಡನಿಗೂ ಆಗಿದೆಯೆಂದು ಪಾರ್ವತಮ್ಮ ಬಲ್ಲಳು. ಆದರೂ ತಾಯಿಯ ಕರುಳು. ಮಗಳಿಗೆ ಒದಗಿದ್ದ ವಿಪತ್ತಿಗೆ ತಲ್ಲಣಗೊಂಡಿತ್ತು. ಯಾವದಾದರೂ ಪವಾಡ ಜರುಗಿ ಈ ವಿಪತ್ತು ನಿವಾರಣೆ ಯಾಗುತ್ತದೆಯೇನೋ ಎಂದು ಬಯಸುತ್ತಿದ್ದಳು.

ಸ್ವರ್ಣನಿಗೆ ಅದೇ ಹದಿನೇಳು ವರ್ಷ ತುಂಬಿತ್ತು. ವಯಸ್ಸಿಗೆ ತಕ್ಕ ಲೋಕಾನುಭವವಿಲ್ಲ. ಮನೆಯಲ್ಲಿ ಮುದ್ದಿನಿಂದ ಬೆಳೆದ ಕೂಸು ಕನ್ಯೆಯಾದ ಮೇಲೂ ಕೂಸಿನಂತೆಯೇ ಇತ್ತು. ತಾಯಿ ತಂದೆಯ ಉಮ್ಮಳ ಕಂಡು ಆಶ್ಚರ್ಯಗೊಂಡಿದ್ದಳು. ಅವರು ಆಗಾಗ್ಗೆ ತನ್ನ ಹೆಸರು ತೆಗೆದುಕೊಳ್ಳು ತ್ತಿದ್ದರು. ಆದರೆ ಅದರ ಅರ್ಥ ಅವಳಿಗೆ ಹೊಳೆಯಲೊಲ್ಲದು.

ಸ್ವರ್ಣನಿಗೆ ವಯಸ್ಸು ಹದಿನೇಳು ಆಗಿದ್ದರೂ ಅವಳು ತುಂಬು ಪ್ರಾಯದ ಯುವತಿಯ ಹಾಗೆ ಕಾಣುತ್ತಿದ್ದಳು. ಬಟ್ಟ ಮುಖ, ತಿದ್ದಿದ ಮೂಗು ಕಣ್ಣು, ತುಂಬಿದ ಮೈಕಟ್ಟು, ಎಣೆಗೆಂಪು ಬಣ್ಣ. ಅಂದೇ ಅವಳು ಋತುಸ್ನಾನಮಾಡಿ ಸ್ತ್ರೀತ್ವದ ಹೊಸಲು ಮೇಲೆ ಕಾಲಿಟ್ಟದ್ದು.

ನಾಲ್ಕು ದಿನದ ಹಿಂದೆ ಸ್ವರ್ಣ ವಯಸ್ಸಿಗೆ ಬಂದಳೆಂದು ಕೇಳಿದ ಕಾಳಾಚಾರಿ ಕೂಡಲೆ ರಾಮಲಿಂಗಾಚಾರಿಯ ಮನೆಗೆ ಬಂದಿದ್ದ. ಆಚಾರಿಯ ಮುಖ ನೋಡಿ ರಾಮಲಿಂಗಾಚಾರಿ ಎದೆ ಧಸಕ್ಕೆಂದಿತು. ಗೌರವವಾಗಿ ಒಳಗೆ ಬರಮಾಡಿಕೊಂಡು ತೊಟ್ಟಿಯಲ್ಲಿ ಮಂದಲಿಗೆ ಹಾಸಿ ಕೂಡಿಸಿದ.

"ಆಚಾರ್ರು ಬಡವರ ಮನೆಗೆ ಅಪರೂಪವಾಗಿ ಬಂದಿರಿ"

"ಹೌದು ಬಂದೆ! ಬರಬೇಕಾಯಿತು."

"ಏನೋ ಸಮಾಚಾರ?"

"ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೂ, ಅದು ಕುಡಿ ಯುತ್ತಿರುವುದು ಇತರರ ಕಣ್ಣಿಗೆ ಬೀಳುತ್ತದೆ."

"ನಾನು ತಮ್ಮಲ್ಲಿ ಅಂಥ ಅಪರಾಧವೇನು ಮಾಡಿದೆ?"

"ಏನು ಮಾಡಿದೆ? ಸ್ವರ್ಣ ದೊಡ್ಡವಳಾದ ಸುದ್ದಿ ಬಂದೇಕೆ ಹೇಳಲಿಲ್ಲ?"

ರಾಮಲಿಂಗಾಚಾರಿ ಅದಕ್ಕೆ ಉತ್ತರ ಹೇಳುವ ಸಾಹಸಕ್ಕೆ ಬೀಳಲಿಲ್ಲ.

"ನನ್ನ ಕಣ್ಣಿಗೆ ಮಣ್ಣು ಹಾಕುವುದಕ್ಕಾಗುವುದಿಲ್ಲ ರಾಮಲಿಂಗಾಚಾರಿ. ಗಣಪತಿ ಸೊಂಡಿಲನಷ್ಟೇ ಕಣ್ಣು ಉದ್ದ."

ರಾಮಲಿಂಗಾಚಾರಿ ಕಣ್ಣೀರುಗರೆಯುತ್ತ ನಿಂತ.

"ಏಕಯ್ಯಾ ಗೋಳಾಡುತ್ತಿರುವೆ?"

ರಾಮಲಿಂಗಾಚಾರಿ ಕಾಳಾಚಾರಿ ಪಾದ ಹಿಡಿದು

"ನನ್ನ ಉದ್ಧಾರ ಮಾಡಿ– ನನ್ನ ಮನೆ ಉದ್ಧಾರ ಮಾಡಿ."

"ನಿನ್ನ – ನಿನ್ನ ಮನೆಯನ್ನ ಉದ್ಧಾರ ಮಾಡಬೇಕೆಂತಲೇ ನಾನು ಬಂದಿರೋದು."

"ಸ್ವರ್ಣನ್ನ ಬಿಟ್ಟುಕೊಡಿ – ಅದರ ಬದಲಿಗೆ ನೀವು ಹೇಳುವಷ್ಟು ತಪ್ಪು ದಂಡ ಕೊಡುತ್ತೇನೆ."

ಕಾಳಾಚಾರಿ ಕಾಲುರುಳಾಡಿಸಿ, ಕೋಪೋದ್ದೀಪ್ತನಾಗಿ

"ಭ್ರಷ್ಟಾ–ಎಚ್ಚರದಿಂದ ಮಾತನಾಡು. ಕುಡಿದಿದ್ದೀಯಾ ಹೇಗೆ? ಗಣಪತಿ ಮೇಲೆ ಆಣೆಮಾಡಿದ್ದು ಜ್ಞಾಪಿಸಿಕೋ. ಮಾತಿಗೆ ತಪ್ಪಿದೆಯೆಂದರೆ ಜೀವಾವಧಿ ಕೊಳೆತು ನಾರುವ ಹಾಗೆ ಮಾಡಿಬಿಡುತ್ತೇನೆ. ನಿನ್ನ ವಂಶ ನಾಶಮಾಡಿ ಬಿಡುತ್ತೇನೆ."

"ನನ್ನ ವಂಶಕ್ಕಿರುವುದು ಅದೊಂದು ಮಗು. ಅದು ನನ್ನ ಮಗು ವಲ್ಲ – ನಿಮ್ಮ ಮಗು. ನಿಮ್ಮ ಪಾದದ ಮೇಲೆ ಹಾಕುತ್ತೇನೆ, ಕಾಪಾಡಿ. ಅದರ ಜೀವನ ಹಾಳುಮಾಡಬೇಡಿ. ನೀವು ದೊಡ್ಡವರು – ನಾನು ಬಡವ. ನನಗೆ ನೀವಲ್ಲದೆ ಇನ್ನು ಯಾರು ದಿಕ್ಕು? ನಿಮ್ಮ ಪಾದ ನಂಬಿ ಬದುಕುವ ಆಳುಮಗ ನಾನು. ನನ್ನ ಮನೆ– ಮರ್ಯಾದೆ ಉಳಿಸಿ"

ಎಂದು ಅಂಗಲಾಚಿದ. ಕಾಳಾಚಾರಿ ಶಿಲಾವಿಗ್ರಹದಂತೆ ಕುಳಿತು ರಾಮಲಿಂಗಾಚಾರಿಯ ಪ್ರಲಾಪ ಕೇಳಿ ಎದ್ದು ನಿಂತು

"ರಾತ್ರಿ ಏಳು ಗಂಟೆಗೆ ಹನುಮನ್ನ ಕಳುಹಿಸುತ್ತೇನೆ. ಅವನ ಜತೆಮಾಡಿ ಕಳಿಸು. ತಪ್ಪಿದೆಯೆಂದರೆ ಸೀಳಿಬಿಡುತ್ತೇನೆ"

ಎಂದು ಕೊನೆಯ ನಿರ್ಧಾರ ಹೇಳಿ ಅಲ್ಲಿ ನಿಲ್ಲದೆ ಹೊರಟುಬಿಟ್ಟ.

ರಾಮಲಿಂಗಾಚಾರೀಗೂ ಅವನ ಮನೆಯವರಿಗೂ ಮೂರು ದಿನ ಕಳೆಯುವುದು ಬಹು ಪ್ರಯಾಸವಾಯಿತು. ನಾಲ್ಕನೆಯ ದಿನ ಮಗಳ ತಲೆಯ ಮೇಲೆ ಕಣ್ಣೀರಿನ ಮಳೆ ಸುರಿಸಿದಳು ಪಾರ್ವತಮ್ಮ.

ಹನುಮ ಧಣಿಯ ಆಜ್ಞೆಯನ್ನು ಕಾರ್ಯರೂಪಕ್ಕೆ ತಂದಿದ್ದ. ಕಾಳಾಚಾರಿಯ ಶಯ್ಯಾಗೃಹದ ಅಲಂಕಾರದ ಕೆಲಸ ಹನುಮನಿಂದ ಸಾಗಿತ್ತು. ಮಂಚಕ್ಕೆ ಹೂವಿನ ಗೊಂಡೆಗಳು; ಮೇಜಿನ ಮೇಲೆ ಬಗೆ ಬಗೆಯ ಹಣ್ಣುಗಳು – ತಿಂಡಿ ತಿನಿಸುಗಳು. ಕೈಗೆ ಸಿಲುಕುವಂತೆ ವೀಳೇದೆಲೆ, ಅಡಿಕೆ, ಸುಣ್ಣದ ತಟ್ಟೆ. ಒಂದು ಮೂಲೆಯಲ್ಲಿ ಊದುಕಡ್ಡಿ ಹಚ್ಚಿದ ಬೆಳ್ಳಿಯ ತಟ್ಟೆ. ಇನ್ನೊಂದೆಡೆ ಬಾದಾಮಿ, ಕೇಸರಿ, ಪಚ್ಚಕರ್ಪೂರ ಹಾಕಿ ಕಾಯಿಸಿದ ಹಾಲು.

ಭದ್ರಮ್ಮ ಎಲ್ಲವನ್ನೂ ದೂರದಿಂದ ನೋಡುತ್ತಿದ್ದಳು. ಆದರೆ ಅವಳು ಶಯ್ಯಾಗೃಹದ ಕಡೆ ಸುಳಿಯಲಿಲ್ಲ, ಅಡಿಗೆಯ ಮನೆ ಬಿಟ್ಟು ಕದಲಲಿಲ್ಲ. 'ನೀನು ಯಾವ ಊರ ಒಕ್ಕಲು' ಎಂದು ಕೇಳುವ ಗೋಜಿಗೆ ಆಚಾರಿಯೂ ಹೋಗಲಿಲ್ಲ.

ಏಳು ಗಂಟೆಯ ಹೊತ್ತಿಗೆ ಕಾಳಾಚಾರಿ ಹನುಮನನ್ನು ರಾಮಲಿಂಗಾಚಾರಿ ಮನೆಗಟ್ಟಿದ.

ರಾಮಲಿಂಗಾಚಾರೀಗೂ ಅವನ ಮನೆಯವರಿಗೂ ಹನುಮನ ಮುಖ ನೋಡಿದೊಡನೆಯೇ ಮೃತ್ಯುದರ್ಶನವಾದಂತಾಯಿತು. ಪಾರ್ವತಮ್ಮ ಮಗಳನ್ನು ಬಿಗಿಯಾಗಿ ಅಪ್ಪಿ ಬಿಡುವುದಿಲ್ಲವೆಂದಳು. ರಾಮಲಿಂಗಾಚಾರಿ ಅವಳನ್ನು ಒಂದೆಡೆಗೆಳೆದುಕೊಂಡು, ಮಗಳನ್ನು ಕರೆದುಕೊಂಡು ಹನುಮನ ಜತೆ ಹೊರಟ.

ಕಾಳಾಚಾರಿಯ ಮನೆಯ ಬಾಗಿಲಿಗೆ ಮೂವ್ವರೂ ಬಂದರು. ರಾಮಲಿಂಗಾಚಾರಿ ಮಗಳಿಗೆ

"ನೀನು ಒಳಗೆ ಹೋಗು ತಾಯಿ" ಎಂದು ಹೇಳಿದ.

ಸ್ವರ್ಣಮ್ಮ ತಂದೆಯನ್ನು ಬಿಗಿಯಾಗಿ ಅಪ್ಪಿ

"ನನಗೆ ಭಯವಾಗುತ್ತದೆ ಅಪ್ಪಾಜಿ"

ಎಂದಳು. ಹನುಮ ಅವಳ ಕೈಹಿಡಿದು ದರದರನೆ ಒಳಕ್ಕೆ ಎಳೆದುಕೊಂಡು ತೆಲೆಬಾಗಿಲು ಹಾಕಿದ. ರಾಮಲಿಂಗಾಚಾರಿಗೆ ಅಲ್ಲಿ ನಿಲ್ಲಲಾಗಲಿಲ್ಲ. ಕಣ್ಣ ನೋಟಕ್ಕೆ ದುಃಖಾಶ್ರು ತೆರೆ ಹಾಕಿತ್ತು. ಆ ಮಬ್ಬು ಕತ್ತಲೆಯಲ್ಲಿ ರಸ್ತೆಯೇ ತಿಳಿಯಲೊಲ್ಲದು. ತಡಕಾಡುತ್ತ, ಅಲ್ಲಲ್ಲಿ ಎಡವುತ್ತಾ ಮನೆ ಬಂದು ಸೇರಿದ.

ಹನುಮ ಸ್ವರ್ಣಮ್ಮನನ್ನು ನೇರವಾಗಿ ಕಾಳಾಚಾರಿ ಶಯ್ಯಾಗೃಹಕ್ಕೆ ಎಳೆದುಕೊಂಡು ಹೋಗಿಬಿಟ್ಟು, ಬಾಗಿಲಿನ ಹೊರಗೆ ಅಗಳಿಹಾಕಿದ.

ಮಂಚದ ಮೇಲೆ ಕುಳಿತು ತನ್ನನ್ನೇ ದಿಟ್ಟಿಸಿ ನೋಡುತ್ತಿದ್ದ ಕಾಳಾಚಾರಿಯನ್ನೊಮ್ಮೆ ಸ್ವರ್ಣಮ್ಮ ನೋಡಿದಳು. ಆಚಾರಿ ತನ್ನ ಸ್ಥಳ ಬಿಟ್ಟಿದ್ದ. ಸ್ವರ್ಣ ಹೆದರಿ ಕೋಣೆಯ ಬೇರೆ ಪಕ್ಕಕ್ಕೆ ಹೋದಳು.

ಮೇಜಿನ ಮೇಲಿದ್ದ ಕಿತ್ತಲೆ ಹಣ್ಣನ್ನೆತ್ತಿಕೊಂಡು ಸುಲಿದು

"ಬಾ ಸ್ವರ್ಣಾ – ಹತ್ತಿರ ಬಾ – ಹೆದರಬೇಡ – ಹಣ್ಣು ತೆಗೆದುಕೋ"

ಎಂದು ಮೃದುವಾಗಿ ಅವಳನ್ನು ಕರೆದ.

ಭಯದಿಂದ ಸ್ವರ್ಣ ಅತ್ತಿತ್ತ ನೋಡಿದಳು. ಬಾಗಿಲನ್ನು ಹಿಡಿದೆಳೆದಳು.

"ಓಡಿಹೋಗಲು ಪ್ರಯತ್ನಿಸುತ್ತಿರುವೆಯಾ? ಸಾಧ್ಯವಿಲ್ಲ. ಹೊರಗೆ ಭದ್ರವಾಗಿ ಅಗಳಿ ಹಾಕಿದೆ – ಹನುಮ ಕಾವಲು ಕುಳಿತಿದ್ದಾನೆ."

"ನಿಮ್ಮ ದಮ್ಮಯ್ಯ ನನ್ನ ಬಿಟ್ಟುಬಿಡಿ" ಎಂದು ಸ್ವರ್ಣ ಚೀರಿದಳು.

"ಎಲ್ಲಿಗೆ ಹೋಗುತ್ತೀ ಸ್ವರ್ಣಾ?"

"ಮನೆಗೆ?"

"ಯಾವ ಮನೆಗೆ?"

"ತಂದೆ ಮನೆಗೆ"

"ನಿನಗೆ ಇನ್ನು ಮೇಲೆ ಇದೇ ಮನೆ. ಆ ಮನೆ ಮರೆತುಬಿಡು. ಇನ್ನು ಮೇಲೆ ನೀನು ನನ್ನವಳು."

"ದಮ್ಮಯ್ಯ – ನನ್ನ ಬಿಟ್ಟುಬಿಡಿ"

ಕಾಳಾಚಾರಿ ಅವಳ ಬಳಿ ಸರಿಯುತ್ತ

"ತಿಂಡಿಯಿದೆ – ಹಾಲಿದೆ – ಹಣ್ಣಿದೆ, ತೆಗೆದುಕೋ ಬಾ"

ಎಂದು ಅವಳ ಸಮೀಪಕ್ಕೆ ಹೋದ. ಸ್ವರ್ಣ ಬಲವಾಗಿ ಕೈಕೊಡವಿದಳು. ಆಚಾರಿ ಕೈಯಲ್ಲಿದ್ದ ಸುಲಿದ ಕಿತ್ತಲೆಹಣ್ಣು ದೂರಬಿದ್ದು ನಜ್ಜಿಗುಜ್ಜಿಯಾಯಿತು.

"ಬೇಡ, ನನಗೆ ಕೋಪ ಬರಿಸಬೇಡ. ಒಳ್ಳೆಯ ಮಾತಿನಲ್ಲಿ ಹೇಳುತ್ತಿದ್ದೇನೆ. ನನ್ನ ಮಾತು ಕೇಳು – ಹತ್ತಿರ ಬಾ. ನಿನ್ನ ಸುಖವಾಗಿಟ್ಟುಕೊಳ್ಳುತ್ತೇನೆ. ನೀನು ಬಯಸುವ ಒಡವೆ ವಸ್ತ್ರ ತಂದುಕೊಡುತ್ತೇನೆ."

"ನನಗೊಂದೂ ಬೇಡ. ಇಲ್ಲಿಂದ ಕಳಿಸಿಬಿಡಿ."

ಆಚಾರಿಯ ತಾಳ್ಮೆ ಮೀರುತ್ತ ಬಂತು. ಕಣ್ಣುಗಳು ಕೆಂಪೇರಿದವು

"ಒಳ್ಳೆಯ ಮಾತಿನಲ್ಲಿ ಬರುವೆಯೊ ಇಲ್ಲವೋ"

ಎಂದು ಆರ್ಭಟಿಸಿದ. ಸ್ವರ್ಣ ನಿಂತಲ್ಲಿಂದ ಸುಳಿಯಲಿಲ್ಲ. ಆಚಾರಿ ಅವಳ ಕೈಹಿಡಿದೆಳೆದ. ಸ್ವರ್ಣ ಅದನ್ನು ಪರಚಿದಳು. ಆಚಾರಿ ಬಲವಾಗಿ ಅವಳನ್ನು ಹಿಡಿದೆತ್ತಿಕೊಂಡು ಮಂಚದ ಮೇಲೆ ಒಗೆದ. ಸ್ವರ್ಣಮ್ಮ 'ಅಯ್ಯೋ – ಅಯ್ಯೋ' ಎಂದು ಚೀರಿದಳು. ಯಾರೂ ಮಾರ್ದನಿಗೊಡಲಿಲ್ಲ. ಅಡಿಗೆಮನೆಯಲ್ಲಿ ಕುಳಿತಿದ್ದ ಭದ್ರಮ್ಮ ನೆಲದ ಮೇಲೆ ನೆಟ್ಟಿಗೆ ಮುರಿದು 'ಅವನ ಮನೆ ಹಾಳಾಗ' ಎಂದು ಶಪಿಸಿದಳು.

ರಾಮಲಿಂಗಾಚಾರಿ ಶೂನ್ಯಸ್ಮಶಾನದಂತಿದ್ದ ಮನೆಯಲ್ಲಿ ತಲೆಯ ಮೇಲೆ ಕೈಹೊತ್ತು ಕುಳಿತ. ಪಾರ್ವತಮ್ಮ ಅರುಹುಗೆಟ್ಟು ಒಂದೆಡೆ ಬಿದ್ದಿದ್ದಳು. ಯಾರನ್ನೂ ಯಾರೂ ಸಂತೈಸುವಂತಿರಲಿಲ್ಲ. ಆಗಾಗ್ಗೆ ಗೂಬೆ ಚೀರುವ ಭಯಂಕರ ಧ್ವನಿ ಕೇಳಿಬರುತ್ತಿತ್ತು. ಮನೆಯ ಹಸು ವಿಕಾರವಾಗಿ ಅರಚಿಕೊಳ್ಳುತ್ತಿತ್ತು. ಪ್ರಕೃತಿ ಭಯಗ್ರಸ್ತವಾಗಿರುವಂತೆ ತೋರಿತು. ಹೊರಗೂ ಗಾಡಾಂಧಕಾರ – ರಾಮಲಿಂಗಾಚಾರಿಯ ಮನಸ್ಸಿನಲ್ಲಿಯೂ ಗಾಡಾಂಧಕಾರ.

ರಾತ್ರಿ ಸವೆಯುತ್ತ ಹಗಲೆಡೆಗೆ ನಡೆಯುತ್ತಿತ್ತು. ಮಧ್ಯರಾತ್ರಿ ಕಳೆದು ಒಂದೆರಡು ಗಂಟೆಗಳಾಗಿರಬಹುದು. ಹನುಮ ಧಾವಿಸಿ ಓಡಿಬಂದು

"ರಾಮಲಿಂಗಾಚಾರ್ರೇ" ಎಂದು ಕೂಗಿದ.

ರಾಮಲಿಂಗಾಚಾರಿ ಅರೆನಿದ್ರೆಯಲ್ಲಿ ಕಣ್ತೆರೆದು

"ಯಾರದು" ಎಂದ.

"ನಾನಪ್ಪ – ಹನುಮ."

"ಏನೋ ಬಂದೆ – ಇಷ್ಟುಹೊತ್ತಿನಲ್ಲಿ."

"ಆಚಾರ್ರು ಬಿರೀನ ನಿಮ್ಮನ್ನ ಕರ್‍ಕೊಂಡು ಬಾ ಅಂದ್ರು."

"ಈಗೇನು ಬರುವುದು. ಬೆಳಿಗ್ಗೆ ಬರ್‍ತೀನಿ ಹೋಗು."

"ಇಲ್ಲಪ್ಪಾ–ಈಗಲೇ ಬರಬೇಕಂತೆ."

ರಾಮಲಿಂಗಾಚಾರಿ ಕೀಲುಗೊಂಬೆಯಂತೆ ಎದ್ದು ಹನುಮನನ್ನು ಹಿಂಬಾಲಿಸಿದ.

ಹನುಮ ಅವನನ್ನು ನೇರವಾಗಿ ಆಚಾರಿಯ ಶಯ್ಯಾಗೃಹಕ್ಕೆ ಕರೆದುಕೊಂಡು ಹೋದ.

ಶಯ್ಯೆಯ ಮೇಲೆ, ಕೆದರಿದ ಕೂದಲುರಾಶಿಯಲ್ಲಿ ಮೊಗವಿಟ್ಟು ಮಲಗಿದ್ದ ತನ್ನ ಮುಗ್ಧಶಿಶುವನ್ನು ನೋಡಿ ರಾಮಲಿಂಗಾಚಾರಿ ಕರುಳು ಕಿತ್ತು ಬಂತು. ಸ್ವರ್ಣನ ಬಳಿಸಾರಿ, ಕಾಳಾಚಾರಿಯ ಮುಖ ನೋಡಿದ.

"ನಿನ್ನ ಮಗಳು ಮಹಾಗಣಪತಿ ಪಾದ ಸೇರಿದಳು"

ಎಂದು ಕಾಳಾಚಾರಿ ನುಡಿದ.

ರಾಮಲಿಂಗಾಚಾರಿ ಮಗಳ ಮುಖ ನೇವರಿಸಿದ. ಮೈಕೈ ಮುಟ್ಟಿ ನೋಡಿದ. ಎಲ್ಲವೂ ತಣ್ಣಗಾಗಿತ್ತು. ಅವಳು ಧರಿಸಿದ್ದ ಸೀರೆ ತೊಯ್ದು ಹೋಗಿತ್ತು. ಹಾಸಿದ್ದ ಹಚ್ಚಡದ ಮೇಲೆ ರಕ್ತದ ಕಲೆಗಳು ಕಂಡುಬಂದವು.

"ನನ್ನ ಮಗಳನ್ನು ಕೊಂದುಬಿಟ್ಟೆಯಾ" ಎಂದು ಚೀರಿದ.

"ಕೊಂದವರು ಯಾರು? ಸ್ವಾಮಿಗೆ ಆಹುತಿ ಬೇಕಾಗಿತ್ತು. ಅವನಿಗೆ ಪ್ರಿಯವಾದ ವಸ್ತುವನ್ನು ಸ್ವೀಕರಿಸಿದ್ದಾನೆ. ನೀನು ದುಃಖಪಡಬಾರದು ಆಚಾರಿ – ಸಂತೋಷಪಡು. ನಿನ್ನ ಮಗಳು ಮಹಾಪುಣ್ಯಶಾಲಿ."

ರಾಮಲಿಂಗಾಚಾರಿಯಲ್ಲಿ ಯಾವ ತ್ರಾಣವೂ ಉಳಿಯಲಿಲ್ಲ. ಅವನ ಗಂಟಲು ಒಣಗಿಹೋಗಿತ್ತು. ಮಾತು ಬತ್ತಿಹೋಗಿತ್ತು. ಕಾಳಾಚಾರಿ ಹನುಮನಿಗೆ

"ಮುಂದಿನ ವ್ಯವಸ್ಥೆಮಾಡು. ಬೆಳಗಾಗುತ್ತ ಬಂದಿದೆ."

ಬೆಳಗು ಹರಿಯುವ ಮುನ್ನ ಹನುಮ, ಕಾಳಾಚಾರಿ ಸ್ವರ್ಣಮ್ಮನ ಪಾರ್ಥಿವಶರೀರವನ್ನು ತೆಗೆದುಕೊಂಡು ಹೋಗಿ ಸುಟ್ಟುಬಂದರು.

ಊರಿನಲ್ಲಿ ಬೆಳಿಗ್ಗೆ ಸುದ್ದಿ ಹೊರಟಿತು.

"ರಾಮಲಿಂಗಾಚಾರಿ ಮಗಳಿಗೆ ರಾತ್ರಿ ಪ್ಲೇಗು ತಗುಲಿ ಸತ್ತು ಹೋದಳು"

ಎಂದು. ಊರಿನ ಜನ ವಿಸ್ಮಯಗೊಂಡರು. ಸಂಜೆ ತಾವು ಕಂಡಿದ್ದ ಹೆಣ್ಣಿಗೆ ಒಮ್ಮೆಲೇ ಪ್ಲೇಗು ಬಡಿಯುವುದೆಂದರೇನು ಎಂದು ತರ್ಕಮಾಡಿ ಕೊಂಡರು.

"ಪ್ಲೇಗಿನ ಲಕ್ಷಣವೇ ಹಾಗೆ – ಮಹಾಮಾರಿ ಯಾವ ಹೊತ್ತಿನಲ್ಲಿ ಹೇಗೆ ಬರುತ್ತಾಳೆಂದು ಯಾರಿಗೆ ಗೊತ್ತಾಗಬೇಕು"

ಎಂದು ಕಾಳಾಚಾರಿ ಅವರ ಬಾಯಿ ಮುಚ್ಚಿಸಿದ. ಕಾಳಾಚಾರೀಗೆ ಪ್ರತಿಹೇಳಲು ಧೈರ್ಯವಾಗಲಿಲ್ಲ. ಆದರೆ ಅವನ ಮಾತಿನಲ್ಲಿ ಅವರಿಗೆ ಸಾಕಷ್ಟು ನಂಬಿಕೆ ಹುಟ್ಟಲಿಲ್ಲ.

"ಹಂಗಾದರೆ ಊರು ಬಿಟ್ಟು ಬೇರೆಕಡೆ ಗುಡಿಸಲು ಹಾಕಬೇಕು"

ಎಂದು ಊರಿನವರು ಕೇಳಿದರು.

"ಏನೂ ಬೇಡಿ - ನಾನು ಶಾಂತಿ ಮಾಡುತ್ತೇನೆ"

ಎಂದು ಕಾಳಾಚಾರಿ ಊರಿನ ರಕ್ಷಣೆಯ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹಾಕಿಕೊಂಡ.

ರಾಮಲಿಂಗಾಚಾರಿ ಮಗಳಿಗೆ ಪ್ಲೇಗು ಬಡೆದು ಅವಳು ತೀರಿಕೊಂಡ ಸುದ್ದಿ ಸುತ್ತಮುತ್ತಲಿನ ಹಳ್ಳಿಗಳಿಗೆ ವ್ಯಾಪಿಸಿ ಜನ ಗಾಬರಿಗೊಂಡರು. ಸಂಪಿಗೆಗೆ ಹುಲ್ಲೂರು ಆರೇ ಮೈಲಿ ಇದ್ದುದರಿಂದ ಪ್ಲೇಗ್ ಮಹಾಮಾರಿ ತನ್ನ ರಕ್ತಬಾಹುಗಳನ್ನು ಅತ್ತಲೂ ಚಾಚಬಹುದೆಂದು ಹುಲ್ಲೂರಿನ ಜನ

ತಲ್ಲಣಗೊಂಡರು. ಆದರೆ ಅವರಿಗೆ ಸಂಪಿಗೆಯ ಪರಿಸ್ಥಿತಿ, ಜನಗಳ ಧೈರ್ಯ ಆಶ್ಚರ್ಯವನ್ನುಂಟು ಮಾಡಿತು. ಪ್ಲೇಗ್ ಬಂದು ಒಂದು ಜೀವ ಆದಕ್ಕೆ ಎರವಲಾಗಿದ್ದರೂ ಊರಿನ ಜನ ನಿರಾಂತಕವಾಗಿದ್ದುದೇಕೆ ಎಂಬ ವಿಷಯ ಅವರೆಲ್ಲರ ಕುತೂಹಲವನ್ನು ಕೆರಳಿಸಿತ್ತು.

ಪುಟ್ಟೇಗೌಡ ಜನಗಳ ಮಾತನ್ನು ಕೂಡಲೆ ನಂಬಲಿಲ್ಲ. ಶಾಸ್ತ್ರಿಗಳ ಹತ್ತಿರ ಮಾತನಾಡುತ್ತಾ

"ಇದರಲ್ಲೇನೋ ಮೋಸ ಇದೆ ಸ್ವಾಮಿ, ಏನಿಲ್ಲದೆಯೇ ಹಳ್ಳಿ ಜನ ಹೆದರುತ್ತಾರೆ. ಇನ್ನು ಪ್ಲೇಗ್ ಕೇಸಾದರೆ ಅವರು ಊರಿನಲ್ಲಿ ನಿಲ್ಲುವುದು ಅಸಂಭವ."

"ಅದಕ್ಕೆ ನೀನೇನು ವ್ಯಾಖ್ಯಾನ ಮಾಡುತ್ತೀ ಗೌಡ."

"ನನ್ನ ಮಾತು ಹಾಗಿರಲಿ. ಸಂಪಿಗೆಯಿಂದ ಯಾರನ್ನಾದರೂ ಕರೆಸಿ ನಿಜಸ್ಥಿತಿ ತಿಳಿಯುವುದೊಳ್ಳೆಯದು."

"ಯಾರು ಬರುತ್ತಾರಪ್ಪಾ. ಕಾಳಾಚಾರಿ ಎಲ್ಲರಿಗೂ ಅಷ್ಟದಿಗ್ಬಂಧನ ಮಾಡಿದ್ದಾನೆ. ಅದೂ ಇಲ್ಲಿಗೆ ಬರುವುದೆಂದರೆ ಸಂಪಿಗೆ ಜನ ಜವನದಾಡೆಗೆ ಹೋದಂತೆ ಎಂದು ಭಾವಿಸುತ್ತಾರೆ."

"ಚಲುವಾಚಾರಿಯನ್ನು ಬರಮಾಡಲೇ ?"

"ನೋಡು – ಸಾಧ್ಯವಾದರೆ ಬರಮಾಡು. ಅವನು ಗುಪ್ತವಾಗಿ ಬಂದು ಹೋಗಬೇಕು. ನಮ್ಮಿಂದ ಆ ಬಡಪಾಯಿಗೆ ಹಿಂಸೆಯಾಗಬಾರದು."

"ಆ ವಿಷಯ ನನಗಿರಲಿ ಸ್ವಾಮಿ"

ಎಂದು ಪುಟ್ಟೇಗೌಡ ಶಾಸ್ತ್ರಿಗಳಿಗೆ ಧೈರ್ಯ ಹೇಳಿದ.

ಶಾಸ್ತ್ರಿಗಳ ಕರೆ ಬಂದಿದೆಯೆಂದು ತಿಳಿದಕೂಡಲೆ ಚಲುವಾಚಾರಿ ರಾತ್ರಿ ಹತ್ತು ಗಂಟೆಗೆ ಸಂಪಿಗೆ ಬಿಟ್ಟು ಹುಲ್ಲೂರು ದಾರಿ ಹಿಡಿದ.

ಶಾಸ್ತ್ರಿಗಳು ದೇವರಸ್ತೋತ್ರ ಹೇಳಿಕೊಳ್ಳುತ್ತಾ ಪಡಸಾಲೆಯಲ್ಲಿ ಕುಳಿತಿದ್ದರು. ಚಲುವಾಚಾರಿ ಕಾಣಿಸಿಕೊಳ್ಳುತ್ತಲೇ ಅವನನ್ನು ಒಳಕ್ಕೆ ಕರೆದೊಯ್ದರು.

"ಬರಹೇಳಿದರಂತೆ!"

“ಹೌದು ಚಲುವಾಚಾರಿ. ಅನುಮಾನಿಸುತ್ತಿದ್ದೆ, ಪುಟ್ಟೇಗೌಡ ಕರೆಸಿ ಮಾತನಾಡುವುದು ಒಳ್ಳೆಯದು ಎಂದು ಸೂಚಿಸಿದ.”

“ಯಾವ ವಿಷಯ, ಅಪ್ಪಣೆಯಾಗಬೇಕು.”

“ರಾಮಲಿಂಗಾಚಾರಿ ಮಗಳಿಗೇನಾಗಿತ್ತು. ಹಿಂದಿನ ದಿವಸ ಅವಳು ಚೆನ್ನಾಗಿದ್ದುದನ್ನು ಊರಿನವರೆಲ್ಲಾ ನೋಡಿದ್ದರಂತೆ.”

ಚಲುವಾಚಾರಿ ಮುಖ ವಿವರ್ಣವಾಯಿತು. ದೀರ್ಘವಾಗಿ ನಿಟ್ಟುಸಿರು ಬಿಟ್ಟು ಮಾತನಾಡದೆ ಕುಳಿತ.

“ಏನಾಯಿತು ಚಲುವಾಚಾರಿ. ಏಕೆ ಹೀಗೆ ದುಃಖಪಡುತ್ತಿರುವೆ.”

“ಏನೂಂತ ಹೇಳಲಿ ಸ್ವಾಮಿ. ಯಾವ ಬಾಯಿಂದ ಅರಿಕೆಮಾಡಲಿ. ಬಹು ನಾಚಿಗೆಗೇಡಿನ ಪ್ರಸಂಗ.”

“ಪ್ಲೇಗ್ ಆಗಿದ್ದುದು ಸುಳ್ಳೇ ?”

“ಶುದ್ಧ ಸುಳ್ಳು.”

“ಹಾಗಾದರೆ........”

“ಕಾಳಾಚಾರಿ ಅರಿಯದ ಹುಡುಗಿ ಮೇಲೆ ಅತ್ಯಾಚಾರ ಮಾಡಿ ಅವಳನ್ನು ಕೊಂದುಬಿಟ್ಟ.”

“ಹಾ! ಹೀಗೂ ಉಂಟೇ ?”

“ಅವನೊಬ್ಬ ರಾಕ್ಷಸ ಸ್ವಾಮಿ. ಅವನ ದರ್ಪಕ್ಕೆ ಅಡ್ಡಿಯೇ ಇಲ್ಲ.”

“ಅವನೆದುರು ನಿಲ್ಲುವವರು ನಿಮ್ಮೂರಿನಲ್ಲಿ ಯಾರೂ ಇಲ್ಲವೇ ?”

“ಅವನ ಮಂತ್ರಶಕ್ತಿ ಮುಂದೆ ಯಾರು ನಿಲ್ಲುವುದಕ್ಕೆ ಸಾಧ್ಯ ಸ್ವಾಮಿ. ಮಾತೆತ್ತಿದ್ದರೆ ಮಹಾಗಣಪತಿ ಎನ್ನುತ್ತಾನೆ– ಜನ ಗದಗದ ನಡಗುತ್ತಾರೆ.”

“ನಡೆದ ವಿಷಯವೇನು ಸ್ಪಷ್ಟವಾಗಿ ಹೇಳು ಚಲುವಾಚಾರಿ.”

“ಕಾಳಾಚಾರಿ ನಮ್ಮ ಜನಗಳ ಮೇಲೆ ವಿಚಿತ್ರ ಪ್ರಭಾವ ಹೂಡಿದ್ದಾನೆ. ಕೆಲವು ವರ್ಷಗಳ ಹಿಂದೆ ಅವನೊಂದು ಸುಗ್ರೀವಾಜ್ಞೆ ಹೊರಡಿಸಿದ. ಅದನ್ನು ಕೇಳಿದರೇ ನಿಮ್ಮ ಮೈ ಉರಿದು ಹೋಗುತ್ತದೆ.”

“ಏನು ಆಜ್ಞೆಯಪ್ಪಾ ಅದು.”

“ ಸ್ವಜಾತೀಯವರು ಯಾರ ಮನೆಯಲ್ಲಾಗಲಿ ಹೆಣ್ಣು ದೊಡ್ಡದಾದರೆ ಮೂರು ದಿವಸ ಕಾಳಾಚಾರಿಗೆ ವಿಾಸಲು. ಅದಕ್ಕೆ ಯಾರಾದರೂ ಅಡ್ಡಿ ಬಂದರೆ ಅವರನ್ನು ತನ್ನ ಮಂತ್ರಶಕ್ತಿಯಿಂದ ಚಿತ್ರಹಿಂಸೆಗೆ ಗುರಿಪಡಿಸುತ್ತಾನೆ.”

“ ಏನನ್ಯಾಯಪ್ಪ ಇದು – ನಾನು ಇಂಥದನ್ನು ಎಲ್ಲಿಯೂ ಕೇಳಿರಲಿಲ್ಲ. ಕಲಿ ಹೆಚ್ಚಿದ ಎನ್ನುವ ಮಾತು ಸುಳ್ಳಲ್ಲ. ಸರಿ........ಮುಂದೆ ? ”

“ ಮುಂದೇನು ? ರಾಮಲಿಂಗಾಚಾರಿ ಮಗಳು ಸ್ವರ್ಣ ದೊಡ್ಡವಳಾದಳು. ಆಚಾರಿ ಸಿರೂಪ ಕಳಿಸಿದ. ಮುಂದೆ ಆದದ್ದು ತಮಗೆ ಗೊತ್ತೇ ಇದೆ. ಬೆಳಗಾಗುವ ಹೊತ್ತಿಗೆ ಹುಡುಗಿಯನ್ನು ತೆಗೆದುಕೊಂಡು ಹೋಗಿ ಸುಟ್ಟು ಬಂದರು. — ನಮಗೇನಾದರೂ ಒಂದು ದಾರಿ ತೋರಿಸಿ ನಮ್ಮನ್ನು ಕಾಪಾಡಲ್ಲವೇ ಸ್ವಾಮಿ. ನೀವೂ ಇದನ್ನು ಮನಸ್ಸಿನ ಮೇಲೆ ಹಾಕಿಕೊಳ್ಳದಿದ್ದರೆ ನಮ್ಮ ಗತಿಯೇನು ? ”

“ ನಾನೇನು ಮಾಡಲಿ ಚಲುವಾಚಾರಿ. ಅವರ ವಿದ್ಯೆ ಸಂಪರ್ಕ ನನಗಿಲ್ಲ. ನಾನೊಬ್ಬ ಹಳೇ ಕಾಲದ ಗೊಡ್ಡು ಬ್ರಾಹ್ಮಣ. ಸಂತೇಹಳ್ಳಿ ನಾಗಪ್ಪ ಮನಸ್ಸುಮಾಡಿದರೆ ಏನಾದರೂ ಮಾಡಲು ಸಾಧ್ಯ.”

“ ಅವನ ಅವತಾರ ಮುಗಿದು ಹೋಗಿದೆಯಲ್ಲಾ.”

“ ಯೋಚನೆ ಮಾಡೋಣ. ಹೊತ್ತಾಯಿತು. ನೀನು ಊರಿಗೆ ಹೋಗು. ಆಗಾಗ್ಗೆ ಬಂದು ಊರಿನ ಸಮಾಚಾರ ತಿಳಿಸುತ್ತಿರು.”

“ ಈ ವಿಷಯ ನಿಮ್ಮ ಹೊಟ್ಟೆಗೆ ಹಾಕಿಕೊಳ್ಳಿ ಸ್ವಾಮಿ. ನೀವೇ ನಮಗೆ ದಿಕ್ಕು.”

ಎಂದು ಚಲುವಾಚಾರಿ ಹೇಳಿ ಊರಿನ ಮಾರ್ಗ ಹಿಡಿದ.

ಚಲುವಾಚಾರಿಗೂ ತಂದೆಗೂ ನಡೆದ ಸಂಭಾಷಣೆ ಪೂರ್ತಿ ಸಾಂಬನ ಕಿವಿಯ ಮೇಲೆ ಬಿತ್ತು. ರಾತ್ರಿ ಅವನಿಗೆ ನಿದ್ದೆ ಬರಲಿಲ್ಲ. ಸುತ್ತ ನಾಲ್ಕು ಕಡೆಯಿಂದ ಬರುತ್ತಿದ್ದ ಕಾಳಾಚಾರಿ ದೌರ್ಜನ್ಯದ ಕಥೆ ಕೇಳಿ ಕೇಳಿ ಸಾಂಬನಿಗೆ ಸಾಕುಸಾಕಾಗಿ ಹೋಗಿತ್ತು. ಚಲುವಾಚಾರೀಗೆ ಒಂದು ಧೈರ್ಯದ ಮಾತು ತಂದೆ ಹೇಳಲಿಲ್ಲವಲ್ಲಾ ಎಂದು ಅವನು ಅಸಮಾಧಾನಗೊಂಡ.

ಸಾಂಬ ಮಲಗದೆ ತೊಟ್ಟಿಯಲ್ಲಿ ಶಥಪಥ ಸುತ್ತುತ್ತಿದ್ದುದನ್ನು ಕಂಡು ಶಾಸ್ತ್ರಿಗಳು

" ಮಲಗಲಿಲ್ಲವೇನೋ ಸಾಂಬ " ಎಂದರು.

" ಇಲ್ಲ ಅಣ್ಣಯ್ಯ. ಶಿವೆ – ನಿದ್ದೆ ಬರಲಿಲ್ಲ."

" ನಮ್ಮ ಮಾತು ಹೊಂಚುಕೇಳುತ್ತಿದ್ದೆಯೇನೋ ? "

" ಹೊಂಚುಕೇಳುತ್ತಿರಲಿಲ್ಲ. ನೀವು ಗಟ್ಟಿಯಾಗಿಯೇ ಮಾತಾಡುತ್ತಿದ್ದಿರಿ. ಆಡಿದ ಮಾತು ಕಿವಿಯ ಮೇಲೆ ಬಿತ್ತು."

" ದೊಡ್ಡವರು ಆಡುವ ಮಾತು ಕೇಳಬಾರದಪ್ಪಾ."

" ಅಣ್ಣಯ್ಯ - ಇದಕ್ಕೇನೂ ಪರಿಹಾರವಿಲ್ಲವೇ ? "

" ಇಲ್ಲದೆ ಇಲ್ಲ. ಆದರೆ ಮಾರ್ಗ ಬಹಳ ದುರ್ಗಮ."

" ಏನು ಎಂದು ನಾನು ಕೇಳಬಹುದೇ ? "

" ಸೇರಿಗೆ ಸವ್ವಾಸೇರಾಗಬೇಕು. ಕಾಳಾಚಾರೀಗಿಂತಲೂ ಬಲವಾದ ಮಂತ್ರಶಕ್ತಿ ದೊರಕಿಸಿಕೊಂಡವನು ಮಾತ್ರ ಅವನನ್ನು ಮಣಿಸಲು ಸಾಧ್ಯ."

" ಅಲ್ಲಿಯವರೆಗೆ ಅವನ ಅತ್ಯಾಚಾರ ಸಾಗತಕ್ಕದ್ದೇ ! "

" ವಿಶ್ವೇಶ್ವರನೇಚ್ಛೆ ! ಯಾರು ಏನು ಮಾಡುವುದಕ್ಕೆ ಸಾಧ್ಯ ? ಎಲ್ಲದಕ್ಕೂ ಕಾಲ ಬರಬೇಕು."

" ವಿಶ್ವೇಶ್ವರ ತನ್ನ ಕುಣಿತದಲ್ಲಿ ಲೋಕ ಮರೆತುಬಿಟ್ಟಿದ್ದಾನೆ."

" ನಾಸ್ತಿಕನ ಹಾಗೆ ಮಾತನಾಡಬೇಡವೋ ಸಾಂಬ."

" ಹೋಗಲಿ ಬಿಡಿ ಅಣ್ಣಯ್ಯ. ನಿಮಗೆ ಕೋಪ ಬರುವ ಹಾಗಿದ್ದರೆ ಆಡುವುದಿಲ್ಲ "

ಎಂದು ಹೇಳಿ ಸಾಂಬ ಮಲಗಿ ಭದ್ರವಾಗಿ ಮುಸುಗೆಳೆದುಕೊಂಡ. ಮಗನಿಗಾದ ಕಳಕಳಕಂಡು ಶಾಸ್ತ್ರಿಗಳು ವಿಷಾದಗೊಂಡರು. ಏನು ಮಾಡುವುದೆಂದು ಅವರಿಗೂ ತೋರಲಿಲ್ಲಿ. ' ದಾರಿ ತೋರು ವಿಶ್ವೇಶ್ವರಾ ' ಎಂದು ಬೇಡಿಕೊಂಡು ವಿಶ್ರಾಂತಿಗೆ ತೆರಳಿದರು.

೮

ಒಂದು ದಿನ ಶಾಸ್ತ್ರಿಗಳು ಮಧ್ಯಾಹ್ನ ಪೂಜೆ ಮುಗಿಸಿಕೊಂಡು ಊಟಕ್ಕೆ ಕೂಡುವುದರಲ್ಲಿದ್ದರು. ಯಾರೂ ಅತಿಥಿಗಳಿಲ್ಲವಲ್ಲಾ ಎಂದವರು ಯೋಚಿಸುತ್ತಿದ್ದಂತೆ ಅತಿಥಿಗಳು ಬಂದೇ ಬಂದರು. ಶಾಸ್ತ್ರಿಗಳು ಅವರನ್ನು ಜಗುಲಿಯ ಮೇಲೆ ಬರಮಾಡಿಕೊಂಡು ಯೋಗಕ್ಷೇಮ ವಿಚಾರಿಸಿದರು.

"ತಮ್ಮ ಪರಿಚಯ ನನಗಿಲ್ಲ."

"ಹೇಗೆ ಬರಬೇಕು ಶಾಸ್ತ್ರಿಗಳೇ. ನಾನು ಎಕ್ಸೈಜ್ ಇನ್ಸ್ಪೆಕ್ಟರ್ ರಾಮನಾಥಯ್ಯ. ಅಮಲ್ದಾರ್ ವಸುಪಾಲಯ್ಯನವರು ನಿಮ್ಮ ಬಳಿಗೆ ಹೋಗೆಂದು ಸೂಚಿಸಿದರು."

"ಬಹಳ ಸಂತೋಷ. ಸ್ನಾನವಾಗಿದೆಯೇ?"

"ಇನ್ನೂ ಇಲ್ಲ."

"ಏಳಿ ಸ್ನಾನ ಮಾಡಿ, ಊಟವಾಗಲಿ. ಮುಂದಿನ ವಿಚಾರ ಅನಂತರ ಯೋಚನೆ ಮಾಡೋಣ."

ಸಾಂಬ ಅತಿಥಿಗೆ ಸ್ನಾನದ ವ್ಯವಸ್ಥೆಮಾಡಿ, ಶುಚಿಯಾದ ಮಡಿಯನ್ನಿತ್ತ.

ರಾಮನಾಥಯ್ಯನವರ ಜತೆ ಬಂದಿದ್ದ ಅವರ ಪೈಗಸ್ತಿಗೆ ಹೊರಗೆ ಎಲೆ ಹಾಕ ಹೇಳಿ, ಅವರೊಂದಿಗೆ ಶಾಸ್ತ್ರಿಗಳು ಊಟಕ್ಕೆ ಕುಳಿತರು.

ಊಟ ಮುಗಿದ ಮೇಲೆ ಅತಿಥಿಗಳಿಗೆ ತಾಂಬೂಲವಿತ್ತು ಶಾಸ್ತ್ರಿಗಳು

"ಇನ್ನು ಏನಿದ್ದರೂ ಸಾವಕಾಶವಾಗಿ ಹೇಳಿ."

"ಮೃಷ್ಟಾನ್ನ ಭೋಜನ ಮಾಡಿಸಿದಿರಿ. ನಾನು ಬಂದ ಕೆಲಸ ಸ್ವಲ್ಪ ಮಾಡಿಕೊಟ್ಟರೆ ಮಹದುಪಕಾರವಾಗುತ್ತದೆ."

"ಹೇಳಿ ಸ್ವಾಮಿ. ನನ್ನ ಕೈಯಲ್ಲಿ ಸಾಧ್ಯವಾಗುವಹಾಗಿದ್ದರೆ ಪ್ರಯತ್ನಿಸಿ ನೋಡುತ್ತೇನೆ."

"ನಾನಿದೇ ಒಡ್ಡರ ಬಯಲಿನಿಂದ ಬರುತ್ತಿದ್ದೇನೆ. ಅಲ್ಲಿರುವ ಮೇಸ್ತ್ರಿ ಓಬಯ್ಯ ನಿಮಗೆ ಗೊತ್ತಿರಬಹುದು."

"ಅಲ್ಪಸ್ವಲ್ಪ ಪರಿಚಯವಿದೆ, ಏನವನ ವಿಷಯ."

"ಅವನು ಕಳ್ಳಭಟ್ಟಿ ಸಾರಾಯಿ ಇಳಿಸಿ ಕದ್ದು ವ್ಯಾಪಾರ ಮಾಡುತ್ತಾ ನೆಂದು ನಮಗೆ ಪುಕಾರು ಬಂದಿದೆ. ಸುತ್ತ ಮುತ್ತ ವಿಚಾರಿಸಿ ನೋಡಿದೆವು. ಅವನ ವಿಷಯವೆತ್ತುವುದಕ್ಕೆ ಜನ ಭಯಪಡುತ್ತಾರೆ. ಸಂಪಿಗೆಯಲ್ಲಿ ಕಾಳಾ ಚಾರಿಯಂತ ಒಬ್ಬ ಮಾಂತ್ರಿಕ ಇದ್ದಾನಂತೆ. ಅವನಿಗೂ ಓಬಯ್ಯನಿಗೂ ಪರಮಸ್ನೇಹವೆಂದು ತಿಳಿಯಿತು. ಕಾಳಾಚಾರಿನೂ ಈ ವ್ಯಾಪಾರದಲ್ಲಿ ಷಾಮಿಲು ಎಂದು ಕೇಳಿ ಬಂತು. ನಿಜಸ್ಥಿತಿ ತಮಗೇನಾದರೂ ಗೊತ್ತೇ?"

"ರಾಮನಾಥಯ್ಯನವರೇ, ನಾನು ಗೊಡ್ಡು ವೈದಿಕ ಬ್ರಾಹ್ಮಣ. ಕಳ್ಳ ಭಟ್ಟಿ ಸಾರಾಯಿ ವಿಷಯ ನನ್ನತನಕ ಹೇಗೆ ಬರಬೇಕು ಹೇಳಿ. ಕಾಳಾ ಚಾರಿ, ಓಬಯ್ಯ ಪರಮ ಸ್ನೇಹಿತರೆನ್ನುವದೇನೋ ನಿಜ. ಆದರೆ ಅವರು ಕದ್ದು ಸಾರಾಯಿ ಮಾರುವ ವಿಷಯ ನಾನು ಕಂಡೂ ಇಲ್ಲ – ಕೇಳಿಯೂ ಇಲ್ಲ."

"ಯಾರನ್ನು ಕೇಳಿದರೆ ಈ ವಿಷಯ ಪತ್ತೆಯಾಗಬಹುದು."

"ಅದನ್ನು ನಾನು ಹೇಗೆ ಹೇಳಲಿ ಸ್ವಾಮಿ."

ಶಾಸ್ತ್ರಿಗಳಿಂದ ಏನೂ ಸಹಾಯ ಸಿಗದಿದ್ದುದಕ್ಕೆ ರಾಮನಾಥಯ್ಯನ ವರಿಗೆ ವಿಷಾದವಾಯಿತು. ಆದರೆ ಅವರ ನಿಸ್ಪೃಹತೆ ಕಂಡು ಆನಂದವೂ ಆಯಿತು.

"ತಮ್ಮ ಪರಿಚಯವಾದುದು ತುಂಬ ಸಂತೋಷ ಶಾಸ್ತ್ರಿಗಳೇ."

"ನನಗೂ ಸಂತೋಷ ಸ್ವಾಮಿ. ಅಮಲ್ದಾರರಿಗೆ ನನ್ನ ವಿಶ್ವಾಸ ತಿಳಿಸಿ."

"ಅವಶ್ಯಕವಾಗಿ ಆಗಲಿ."

ಎಂದು ರಾಮನಾಥಯ್ಯ ಎದ್ದರು.

ರಾಮನಾಥಯ್ಯ ಹುಲ್ಲೂರಿಗೆ ಬರುವುದಕ್ಕೆ ಮುಂಚೆ ಸಂತೇಹಳ್ಳಿ, ಸಂಪಿಗೆ, ಒಡ್ಡರ ಬಯಲುಗಳಿಗೆ ಹೋಗಿ ತನಿಖೆ ಕ್ರಮ ನಡೆಸಿದ್ದರು. ಆದರೆ ಎಲ್ಲಿಯೂ ಅವರಿಗೆ ಸಾಕ್ಷ್ಯವೊದಗಿರಲಿಲ್ಲ.

ರಾಮನಾಥಯ್ಯ ಹುಲ್ಲೂರಿಗೆ ಹೋಗಿ ಶಾಸ್ತ್ರಿಗಳ ಮನೆಯಲ್ಲಿ ಊಟ ಮಾಡಿ ಹೋದ ಸಂಗತಿ ಓಬಯ್ಯನಿಗೆ ತಿಳಿಯಲು ತಡವಾಗಲಿಲ್ಲಿ. ಓಬಯ್ಯ ಕಾಳಾಚಾರಿ ಇಬ್ಬರೂ ಯೋಚನೆ ಮಾಡಿ ಶಾಸ್ತ್ರಿ ತಮ್ಮ ಮೇಲೆ ಏನಾದರೂ

ದೂರು ಹೇಳಿಯೇ ಇರುತ್ತಾನೆಂಬ ನಿರ್ಧಾರಕ್ಕೆ ಬಂದರು. ಕಾಳಾಚಾರಿ ರೇಗಿ ಕಿಡಿ ಕಿಡಿಯಾಗಿ ಓಬಯ್ಯನಿಗೆ

"ಏನು ಕೈಯ್ಯಲ್ಲಿ ಹರಿಯದ ಮುಠ್ಠಾಳನೋ ನೀನು" ಎಂದ

"ಏಕೆ ಸೋಮಿ."

"ಆ ಶಾಸ್ತ್ರಿ ಕೈಯೋ ಕಾಲೋ ಮುರಿಯೋಕೆ ಆಗೋದಿಲ್ವೇ ನಿನ್ನ ಕೈಯಲ್ಲಿ."

"ಹೆಂಗೆ ಮುರೀಲಿ ಸೋಮಿ. ಆವಯ್ಯ ಊರು ಬಿಟ್ಟು ಹೊರಗೇ ಬರಾಕಿಲ್ಲ."

"ಅವನ ಊರಿಗೇ ಹೋವರಾಯಿತು."

"ಜನ ನಮ್ಮನ್ನು ಜೀವದೊರಸೆ ಬಿಟ್ಟಾರಾ ?"

"ಈಗ ಶಾಸ್ತ್ರಿ ತರಲೆ ಹಚ್ಚುತ್ತಾನೆ. ಅನುಭವಿಸುವಿಯಂತೆ ಸುಮ್ಮನಿರು."

ಕಾಳಾಚಾರಿ ಚುಚ್ಚು ಮಾತು ಓಬಯ್ಯನ ಮನಸ್ಸಿನಲ್ಲಿ ನಿಂತಿತು. ಅದು ಅವನ ಗೌರವಕ್ಕೆ, ಪ್ರತಿಷ್ಠೆಗೆ ಪರಾಕ್ರಮಕ್ಕೆ ಕುಂದು ತರುವ ಪ್ರಸಂಗ ವಾಗಿತ್ತು. ಶಾಸ್ತ್ರಿಗಳಿಗೆ ಶಾಸ್ತಿ ಮಾಡಿದರೆ ತನ್ನ ಭವಿಷ್ಯ ನಿರುಪದ್ರವ ವಾಗುವುದೆಂದು ಅವನು ಭಾವಿಸಿದ.

ಒಂದು ರಾತ್ರಿ ಶಾಸ್ತ್ರಿಗಳು ಮಲಗಿದ್ದಾರೆ. ಮಧ್ಯ ರಾತ್ರಿ ಕಳೆದಿದೆ. ಇದ್ದಕ್ಕಿದ್ದಂತೆ ಹಿತ್ತಲಿನಲ್ಲಿದ್ದ ದನಗಳು ಒಟ್ಟಿಗೆ ಚೀರಲಾರಂಭಿಸಿದವು. ಶಾಸ್ತ್ರಿಗಳು ಮಲಗಿದ್ದ ಕಡೆಯಿಂದಲೇ

"ಸಾಂಬ" ಎಂದು ಕೂಗಿದರು.

"ಅಣ್ಣಯ್ಯ" ಎಂದು ಸಾಂಬ ನಿದ್ದೆಗಣ್ಣಿನಲ್ಲಿ ಉತ್ತರಿಸಿದ.

"ದನಗಳ ಕೊಟ್ಟಿಗೆ ಸ್ವಲ್ಪ ನೋಡು" ಎಂದರು

"ಹೂ" ಎಂದು ಸಾಂಬ ಮಲಗೇ ಇದ್ದ.

ಸ್ವಲ್ಪ ಹೊತ್ತಿನಲ್ಲಿ ದನಗಳ ಚೀರಾಟ ಕಿವಿ ಗಡಚಿಕ್ಕುವಂತಾಯಿತು. ಶಾಸ್ತ್ರಿಗಳು ಮತ್ತೆ ಗಟ್ಟಿಯಾಗಿ

"ಏಳಲಿಲ್ಲವೇನೋ ಸಾಂಬ"

ಎಂದು ತಾವೇ ಎದ್ದು ಲಾಟೀನು ದೊಡ್ಡದು ಮಾಡಿ ಸಾಂಬನನ್ನು ಎಬ್ಬಿಸಿದರು.

ಹಿತ್ತಲ ಬಾಗಿಲು ತೆಗೆದು ಹೊರಗೆ ನೋಡುತ್ತಾರೆ.

ಆ ದೃಶ್ಯ ಶಾಸ್ತ್ರಿಗಳ ಜಂಘಾಬಲವನ್ನೇ ಉಡುಗಿಸಿತು. ಸಾಂಬ ಓಡಿ ಹೋಗಿ ಅಣ್ಣನನ್ನು ಎಬ್ಬಿಸಿ ಕರೆತಂದ.

ಸಾಂಬ ಬರುವುದರೊಳಗಾಗಿ ಶಾಸ್ತ್ರಿಗಳು ದನದ ಕೊಟ್ಟಗೆಗೆ ನುಗ್ಗಿ ದನಗಳನ್ನು ಬಿಚ್ಚಿ ಹೊರಗೆ ಕರೆತರುತ್ತಿದ್ದರು. ವಿಶ್ವೇಶ್ವರ, ಸಾಂಬ ದನಗಳನ್ನೆಲ್ಲಾ ಹೊರಗೆ ಅಟ್ಟಿದರು. ಸೀತಮ್ಮ ಅವುಗಳ ಉಪಚಾರಕ್ಕೆ ನಿಂತಳು. ಶಾಸ್ತ್ರಿಗಳ ಕಣ್ಣು ಹಸುವಿನ ಕರು 'ಗೌರಿ'ಯ ಮೇಲೆ ಬಿತ್ತು. ಅದರ ಒಂದು ಕಾಲಿಗೆ ಸ್ವಲ್ಪ ಬೆಂಕಿ ತಾಗಿ ಗಾಯವಾಗಿತ್ತು. ಶಾಸ್ತ್ರಿಗಳು ಹೌಹಾರಿ 'ಸೀತಮ್ಮ - ಜೇನುತುಪ್ಪ ತೆಗೆದುಕೊಂಡು ಬಾ' ಎಂದರು. ಸೀತಮ್ಮ ತಂದುಕೊಟ್ಟ ಜೇನುತುಪ್ಪ ಕರುವಿನ ಕಾಲಿಗೆ ಸವರಿ ಒದ್ದೆಯ ಬಟ್ಟೆ ಸುತ್ತಿದರು.

ಸಾಂಬ ಹೊರಗೆಹೋಗಿ ಪುಟ್ಟೇಗೌಡನನ್ನೂ ಇತರರನ್ನೂ ಕರೆತಂದ. ಎಲ್ಲರೂ ಕೂಡಿ ಬೆಂಕಿಯನ್ನಾರಿಸಿ ಅಕ್ಕಪಕ್ಕಕ್ಕೆ ಅದು ಹರಡದಂತೆ ತಡೆದರು. ಪುಟ್ಟೇಗೌಡ ಶಾಸ್ತ್ರಿಗಳ ಬಳಿ ಬಂದು

"ಯೋಚನೆ ಮಾಡಬೇಡಿ ಸ್ವಾಮಿ, ಹುಲ್ಲು ಹೋದರೆ ಹೋಯ್ತು. ನಿಮ್ಮ ಮೇಲಿನ ಅನಿಷ್ಟ ಕಳೀತು" ಎಂದ

ಶಾಸ್ತ್ರಿಗಳು ಅದುವರೆಗೆ ತಡೆದುಕೊಂಡಿದ್ದ ದುಃಖ ಉಕ್ಕಿಬಂತು.

ಹುಲ್ಲಿಗೆ ನಾನು ಯೋಚನೆ ಮಾಡಲ್ಲ ಗೌಡ. ಗೌರೀನ ನೋಡು. ದನಗಳು ಸುಟ್ಟುಹೋಗಿದ್ದರೇನು ಗತಿ? ನಾನು ಯಾರಿಗೆ ಅನ್ಯಾಯಮಾಡಿದೆನೆಂದು ಈ ಪ್ರತೀಕಾರ."

"ಆ ಮಾತು ಈಗ ಬೇಡ ಸ್ವಾಮಿ, ನೀವು ಹೋಗಿ ಮಲಗಿಕೊಳ್ಳಿ. ಇದನ್ನು ಇಲ್ಲಿಗೇ ಬಿಟ್ಟರೆ ಊರು ಹಾಳಾಗಿಹೋಗುತ್ತೆ - ನಾಳೆ ನಿಧಾನವಾಗಿ ಆಲೋಚಿಸೋಣ"

ಎಲ್ಲರೂ ಹೊರಟುಹೋದ ಮೇಲೆ ಸಾಂಬ, ವಿಶ್ವೇಶ್ವರ, ಸೀತಮ್ಮನಿಗೆ 'ಮಲಗಿಕೊಳ್ಳಿ ಹೋಗಿ' ಎಂದು ಹೇಳಿ ಕಳಿಸಿ ಗೌರಿಯ ಬಳಿ ಕುಳಿತರು. ಕರುವನ್ನು ಎಷ್ಟು ನೇವರಿಸಿದರೂ ಅವರಿಗೆ ಸಮಾಧಾನವಿಲ್ಲ. ಕಣ್ಣಲ್ಲಿ ನೀರು ತಂದುಕೊಂಡು

"ನಿರ್ಭಾಗ್ಯನ ಕೈಬಿಟ್ಟು ಹೋಗಿ ಬಿಟ್ಟದ್ದೆಯಾ ತಾಯೀ ಗೌರಮ್ಮ."

ಎಂದು ಗೋಳಾಡಿದರು.

ಮಾರನೆಯ ದಿನ ಚಾವಡಿಯಲ್ಲಿ ಪುಟ್ಟೇಗೌಡ ಊರ ಪಂಚಾಯಿತಿ ಸೇರಿಸಿ, ಶಾಸ್ತ್ರಿಗಳ ಮೇಲೆ ಕೈಮಾಡಿದವರನ್ನು ಪತ್ತೆ ಹಚ್ಚಿ ತಕ್ಕ ಪ್ರತೀಕಾರ ಮಾಡಬೇಕೆಂದು ಹೇಳಿದ. ಅವನ ಸಲಹೆಗೆ ಊರಿನವರೆಲ್ಲರ ಒಪ್ಪಿಗೆಯೂ ದೊರೆಯಿತು. ಆದರೆ ಯಾರನ್ನು ಶಿಕ್ಷಿಸಬೇಕು, ಯಾರ ಕೆಲಸ ಇದೆಂದು ನಿರ್ಣಯಿಸಬೇಕು ? ಒಬ್ಬನಿಗೂ ಬಗೆಹರಿಯಲಿಲ್ಲ.

"ಇದು ನಮ್ಮೂರಿನವರ ಕೆಲಸವಲ್ಲ. ನಮ್ಮೂರಿನವರು ಯಾರೂ ಇಂಥ ನೀಚ ಕೆಲಸಕ್ಕೆ ಕೈ ಹಾಕುವುದಿಲ್ಲ – ಅದೂ ದೇವರಂಥ ಶಾಸ್ತ್ರಿಗಳ ಮೇಲೆ"

ಎಂದು ಪುಟ್ಟೇಗೌಡ ಹೇಳಿದ. ಊರಿನವರು 'ಹೌದು ಗೌಡರೇ' ಎಂದರು.

"ಸಂಜೆ ಯಾರೋ ಒಡ್ಡರ ಬಯಲಿನವರು ಇತ್ತ ಹ್ವಾದ್ದು ಕಂಡೆ"

ಎಂದು ರಂಗೇಗೌಡ ಹೇಳಿದ.

"ಅವರದೇ ಇರಬೇಕು ಈ ಕೆಲಸ. ಇನ್ನು ಯಾರು ಬರುತ್ತಾರೆ"

ಎಂದರು ಜನ.

"ಒಡ್ಡರ ಬಯಲಿನೋರಿಗೆ ಸಂಪಿಗೆ ಕಾಳಾಚಾರಿ ಷಾಮೀಲಂತಲ್ಲಾ ಗೌಡರೇ"

ಎಂದು ರಾಜಣ್ಣ ತೆಗೆದ.

ಇನ್ನು ಮಾತು ಬೆಳೆಯುವುದರಲ್ಲಿ ಸುಖವಿಲ್ಲವೆಂದು ಶಾಸ್ತ್ರಿಗಳು ಮಧ್ಯೆ ಬಾಯಿ ಹಾಕಿ

"ಸುಮ್ಮನೆ ಅವರಿವರ ಮೇಲೆ ಅನುಮಾನಪಟ್ಟರೆ ಏನು ಸಾರ್ಥಕ ? ಯಾರೋ ಅವಿವೇಕಿಳು ತಿಳಿದೋ ತಿಳಿಯದೆಯೋ ಅತ್ಯಾಚಾರ ಮಾಡಿದರು.

ನನ್ನ ಮನೆಗೆ ಬೆಂಕಿ ಹಾಕಿ ನನ್ನ, ನನ್ನ ಸಂಸಾರವನ್ನು ಸುಟ್ಟುಬಿಡಬೇಕೆಂದು ಹವಣಿಸಿದರು. ವಿಶ್ವೇಶ್ವರ ದೊಡ್ಡವನು - ಕಾಪಾಡಿದ. 'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ' ತಪ್ಪು ಮಾಡಿದವರಿಗೆ ಶಿಕ್ಷೆಯೂ ಅವನೇ ವಿಧಿಸುತ್ತಾನೆ– ಬಿಟ್ಟುಬಿಡಿ."

ಎಂದರು, ರಂಗೇಗೌಡನಿಗೆ ಶಾಸ್ತ್ರಿಗಳ ವಾದಸರಣಿ ಹಿಡಿಯಲಿಲ್ಲ.

"ಹಿಂಗಂದರೆ ಆಗತ್ತಾ ಸೋಮಿ, ಈ ಪಟಿಂಗತನ ಎಲ್ಲಾ ನಾವು ನೋಡ್ತಾ ಕುಂತರೆ ಅವರಿಗೆ ಅದೇ ಅನುಕೂಲ ಆಗ್ತೈತೆ."

"ರಂಗೇಗೌಡ, ಲೋಕದಲ್ಲಿ ದುಷ್ಕೃತ್ಯ ಸ್ವಲ್ಪ ದಿನ ನಡೆಯುತ್ತಪ್ಪಾ. ಆದರೆ ಕೊನೆಯಲ್ಲಿ ಸತ್ಯಕ್ಕೇ ಜಯ. ವಿಶ್ವೇಶ್ವರನ ಮೇಲೆ ಭಾರ ಹಾಕಿ ನೀವು ಶಾಂತರಾಗಿ

ಎಂದು ಎಲ್ಲರನ್ನೂ ಒಪ್ಪಿಸಿ ಕಳುಹಿಸಿದರು.

ಅಂದೇ ಸಂಜೆಯೊಳಗಾಗಿ ಊರಿನವರು ಕೂಡಿ ಶಾಸ್ತ್ರಿಗಳ ಮನೆ ದನದ ಕೊಟ್ಟಿಗೆ ಸರಿಮಾಡಿ, ಎರಡು ಗಾಡಿ ಹುಲ್ಲು ತಂದು ಹಾಕಿದರು. ಎಂದಿನಂತೆ ಮೇವು ತಿನ್ನುತ್ತ ನಿಂತಿದ್ದ ದನಗಳನ್ನು ನೋಡಿ ಶಾಸ್ತ್ರಿಗಳು ಸಂತೃಪ್ತರಾದರು.

ಈ ಕೆಲಸ ಒಡ್ಡರ ಬಯಲಿನ ಓಬಯ್ಯನದೇ ಎಂದು ಶಾಸ್ತ್ರಿಗಳ ಮನಸ್ಸಿಗೆ ಖಚಿತವಾಗಿತ್ತು. ಅವನನ್ನು ಯಾವಾಗಲಾದರೂ ಕರೆಸಿ ನಾಲ್ಕು ಬುದ್ಧಿ ಮಾತು ಹೇಳಬೇಕೆಂದು ಮನಸ್ಸಿನಲ್ಲಿ ಅಂದುಕೊಂಡರು.

೬

ಶಾಸ್ತ್ರಿಗಳ ಮನೆಗೆ ಬೆಂಕಿ ಬಿದ್ದ ಸಂಗತಿ ಸುತ್ತ ನಾಲ್ಕು ಕಡೆಗೂ ವ್ಯಾಪಿಸಿತು. ಅಮಲ್ದಾರರು ತನಿಖೆಗೆ ಬಂದು

"ನಿಮಗೆ ಯಾರ ಮೇಲೆ ಅನುಮಾನವಿದೆ ಶಾಸ್ತ್ರಿಗಳೇ"

ಎಂದು ಕೇಳಿದರು, ಶಾಸ್ತ್ರಿಗಳು ಸ್ಪಷ್ಟವಾಗಿ "ನನಗೆ ಯಾರ ಮೇಲೂ ಅನುಮಾನವಿಲ್ಲ ಸ್ವಾಮಿ. ವಿಶ್ವೇಶ್ವರ ಏನೋ ನಿಮಿತ್ತಕ್ಕಾಗಿ ನನಗೆ

ಅಗ್ನಿದರ್ಶನ ಮಾಡಿಸಿದ. ಪ್ರಾಯಶಃ ನಾನು ಅಗ್ನಿ ಕಾಣಬೇಕಾದ ದಿನಗಳು ಸಮಿಾಪಿಸಿದವೆಂದು ಕಾಣುತ್ತದೆ"

"ಶಾಸ್ತ್ರಿಗಳೇ - ದಯೆಮಾಡಿ ಆ ಮಾತು ಆಡಬೇಡಿ. ನಮ್ಮಂಥವರು ಇನ್ನೂ ಹತ್ತಾರು ವರ್ಷ ಇರಬೇಕಪ್ಪಾ. ಲೋಕದಲ್ಲಿ ನಮ್ಮಂಥ ಪಾಪಿಗಳು ಮಾಡೋ ಕೊಳೆ ತೊಳೆಯುವುದಕ್ಕೆ ನೀವುಗಳು ಇಲ್ಲದಿದ್ದರೆ ಆಗುತ್ತದೆಯೇ?"

"ಅಹಂಕರೋಮೀತಿ ವೃಥಾಭಿಮಾನಃ – ಅಂಥ ಮಹತ್ಕಾರ್ಯ ಮಾಡುವುದಕ್ಕೆ ನಾನು ಯಾವೂರು ದಾಸಯ್ಯ ಸ್ವಾಮಿ – ನೀವು ದಯೆ ಮಾಡಿ ಈ ತನಿಖೆ ಬಿಟ್ಟು ಶಾಂತರಾಗಿ. ಇದೇ ನಾನು ಕೇಳಿಕೊಳ್ಳುವ ಉಪಕಾರ"

ಎಂದರು.

ನಾಗಪ್ಪನಿಗೂ ಸುದ್ದಿ ಮುಟ್ಟಿತ್ತು, ಎಕ್ಸೈಜ್ ಖಾತೆಯವರು ತನಿಖೆಗೆ ಬಂದದ್ದು ಅವರು ಒಡ್ಡರ ಬಯಲಿಗೆ ಹೋದದ್ದು, ಅನಂತರ ಶಾಸ್ತ್ರಿಗಳ ಮನೆಗೆ ಹೋದದ್ದು ಅವನಿಗೆ ಗೊತ್ತಿತ್ತು. ಎಲ್ಲಾ ಗುಣಿಸಿ ಇದರ ಕಾರಭಾರ ಕಾಳಾಚಾರೀದೇ ಎಂಬ ನಿರ್ಧಾರಕ್ಕೆ ಅವನು ಬಂದಿದ್ದ. ಸಾಂಬ ಪಾಠಕ್ಕೆ ಬರಲು ಅವನಿಗೆ ಬಿಡಿಸಿ ಹೇಳಿ ತನ್ನ ಅನುಮಾನ ಸೂಚಿಸಲು ಹಿಂಜರಿಯಲಿಲ್ಲ.

ಸಾಂಬನಿಗೆ ಅಂದು ಪಾಠ ಬೇಡವಾಯಿತು. ತಂದೆಯ ದುಃಖ, ಗೌರಿಗಾಗಿ ಅವರು ಪಟ್ಟ ಪಾಡು ಅವನ ಕರುಳನ್ನು ಹಿಂಡಿಬಿಟ್ಟಿತ್ತು.

"ಹೀಗಾದರೆ ಏನು ಗತಿ ನಾಗಪ್ಪಣ್ಣ" ಎಂದ.

"ದೇವರೇ ಗತಿಯಪ್ಪಾ."

"ಅಣ್ಣಯ್ಯನೂ ಅದೇ ಹೇಳುತ್ತಾರೆ."

"ದೇವರು ನಮಗೆ ಸಹಾಯ ಮಾಡಬೇಕಾದರೆ, ಅವನಿಗೆ ನಾವೂ ಸ್ವಲ್ಪ ಬೆಂಬಲ ಕೊಡಬೇಕು ಸಾಂಬಣ್ಣ."

"ಇದಕ್ಕೆ ಪರಿಹಾರವೇ ಇಲ್ಲವೇ?"

"ಇಲ್ಲವೆಂದು ಯಾರು ಹೇಳಿದರು."

" ಏಕೆ ಯಾರೂ ಏನೂ ಮಾಡುವುದಿಲ್ಲವಲ್ಲಾ."

" ಮಾಡಬಲ್ಲ ಕರ್ತ ಇನ್ನೂ ಮನಸ್ಸು ಮಾಡಿಲ್ಲ."

" ಅವನು ಯಾರು ಹೇಳಿ, ಅವನ ಕಾಲಿಗೆ ಬಿದ್ದು ಬೇಡಿಕೊಳ್ಳೋಣ."

"ಹೇಳುತ್ತೇನೆ, ಆ ಕಾಲ ಬರುತ್ತದೆ ಸಾಂಬಯ್ಯ. ಸ್ವಲ್ಪ ತಡೆದುಕೋ. ಪಾಠ ಆರಂಭಿಸೋಣವೇ ?"

" ನನಗೆ ಇವತ್ತು ಪಾಠದ ಮೇಲೆ ಮನಸ್ಸಿಲ್ಲ. ಈ ಕುತ್ತು ಪರಿಹಾರವಾಗುವರೆಗೆ ನನ್ನ ಮನಸ್ಸಿಗೆ ಶಾಂತಿಯಿಲ್ಲ"

" ನೀನು ಪಾಠ ನಿರ್ಲಕ್ಷ್ಯ ಮಾಡಬೇಡ. ಅದರಿಂದಲೇ ಬಹಳ ಕೆಲಸವಾಗುತ್ತದೆ."

" ಹಾಗಂದರೆ ? "

" ನಾಳೆ ಕರ್ತನಿಗೆ ಅದರ ಸಹಾಯ ಬೇಕಾಗುತ್ತದೆ."

" ನನ್ನ ಸಹಾಯ !"

" ಹೌದು ! ನಿನ್ನ ಸಹಾಯ ! "

" ಅದಕ್ಕೆ ನಾನೀಗಲೇ ಸಿದ್ಧನಾಗಿದ್ದೇನೆ."

" ಈಗ ನಿನ್ನಿಂದ ಏನೂ ಆಗುವುದಿಲ್ಲ."

" ಯಾವಾಗ ಆಗುತ್ತದೆ ?"

" ಅದನ್ನು ನಾನು ಕಾಲೋಚಿತವಾಗಿ ಹೇಳುತ್ತೇನೆ. ಅಲ್ಲಿಯವರೆಗೆ ನೀನು ನಿನ್ನ ಮೃದಂಗಾಭ್ಯಾಸದಲ್ಲಿ ತಲ್ಲೀನನಾಗಬೇಕು."

" ಸದ್ಯಕ್ಕೆ ಯಾವ ಪ್ರಸ್ತಾಪವೂ ಬೇಡವೆನ್ನುತ್ತೀರಾ ?"

" ಹೌದು – ಅದೇ ನನ್ನ ಅಭಿಪ್ರಾಯ."

" ತಿಳಿದವರು ನೀವು, ನಿಮ್ಮ ಮಾತಿಗೆ ಪ್ರತಿ ಹೇಳುವುದಿಲ್ಲ"

ಎಂದು ಸಾಂಬ ಉತ್ತರವಿತ್ತ.

ಅಂದಿನಿಂದ ಸಾಂಬನ ಉತ್ಸಾಹ, ಶ್ರದ್ಧೆ ಇಮ್ಮಡಿಸಿತು. ಹಗಲಿರುಳೂ ಅವನಾಯಿತು – ಮೃದಂಗವಾಯಿತು.

ಹನ್ನೆರಡು ಹುಣ್ಣಿಮೆ ಕಳೆಯುವ ವೇಳೆಗೆ ಸಾಂಬ ಮೃದಂಗ ವಿದ್ಯೆಯಲ್ಲಿ ಒಂದು ಘಟ್ಟಕ್ಕೆ ಬಂದಿದ್ದ. ಪ್ರಧಾನವಾದ ಸಪ್ತ ತಾಳಗಳ ಪಾಠ

ವಾಗಿತ್ತು. ಅವುಗಳ ಬೆಳವಳಿಗೆಯ ಕ್ರಮ ಮುಂದುವರಿದಿತ್ತು. ಮೃದಂಗ ಪಾಠದ ಜತೆಗೆ ನಾಟಕದ ಪಾಠವೂ ಅವನಿಗಾಗುತ್ತಿತ್ತು. ತನ್ನ ಹತ್ತಿರವಿದ್ದ ನಾಟಕ ಗ್ರಂಥಗಳ ಬಾಯಿಪಾಠಮಾಡಿಸಿ, ಪಾತ್ರಗಳನ್ನು ಹೇಗೆ ಸಿದ್ಧಗೊಳಿಸುವುದೆನ್ನುವುದನ್ನು ನಾಗಪ್ಪ ಸಾಂಬನಿಗೆ ಕ್ರಮವಾಗಿ ತಿಳಿಸಲಾರಂಭಿಸಿದ.

ಸುಗ್ಗಿ ಉತ್ಸವಕ್ಕೆ ನಾಟಕವಾಡಿಸಬೇಕೆಂದು ಸಮೀಪದಲ್ಲಿದ್ದ ಶಾಂತಿ ಗ್ರಾಮದವರು ನಿಶ್ಚಯಿಸಿ, ನಾಗಪ್ಪನಲ್ಲಿ ಬಂದರು.

" ನಾನು ನಾಟಕ ಆಡಿಸೋದು ಬಿಟ್ಟುಬಿಟ್ಟಿದ್ದೀನಲ್ಲಪ್ಪಾ"

ಎಂದ ನಾಗಪ್ಪ.

" ಈ ಬಾರಿ ಎಂಗಾದರೂ ಮಾಡಿ ಸೋಮಿ, ಅಮುಲ್ದಾರನ್ನ ಕರಸ ಬೇಕೂಂತ ಮಾಡಿಕೊಂಡಿದ್ದೀವಿ"

ಎಂದು ಹಳ್ಳಿಯವರು ಅಂಗಲಾಚಿದರು.

" ನಾನು ನಾಟಕ ಮಾಡಿಸೋ ಕಾಲ ಆಗಿಹೊಯ್ತು. ನಿಮಗೆ ಬೇಕಾದರೆ ನಮ್ಮ ಸಾಂಬಯ್ಯನ ಕರೆದುಕೊಂಡು ಹೋಗಿ. ಅವನನ್ನು ಒಪ್ಪಿಸೋ ಭಾರ ನಿಮ್ಮದು."

" ಏನು ಸೋಮಿ–ಸಾಂಬಪ್ನೋರೆ–ನೀವೇನಂತೀರಿ ಸೋಮಿ."

" ನನ್ನ ಕೈಯಲ್ಲಿ ಸಾಧ್ಯವೇ ನಾಗಪ್ಪಣ್ಣ."

" ಪ್ರಯತ್ನ ಮಾಡಿನೋಡು, ಮಹಾಕಾಳಿ ಹೇಗಾದರೂ ದಾರಿ ತೋರಿಸುತ್ತಾಳೆ."

" ನೀವು ಧೈರ್ಯ ಕೊಟ್ಟರೆ ಪ್ರಯತ್ನ ಮಾಡುತ್ತೇನೆ."

" ಸಾಂಬಪ್ನೋರು ಬರ್‍ತಾರೆ - ಹೋಗ್ರಯ್ಯ - ಯಾವ ನಾಟಕ ಬೇಕು ನಿಮಗೆ ?"

" ವಾಲೀ ಸುಗ್ರೀವನ ಕಾಳಗ."

" ಹೂ ! ಅದೇ ಮಾಡಿಸ್ತಾರೆ ಹೋಗಿ"

ಎಂದು ನಾಗಪ್ಪ ಅವರಿಗೆ ಆಶ್ವಾಸನ ಕೊಟ್ಟು ಕಳುಹಿಸಿದ.

ಪ್ರತಿ ಸಂಜೆ ಸಾಂಬ ತನ್ನ ಪಾಠ ಮುಗಿಸಿಕೊಂಡು ಶಾಂತಿಗ್ರಾಮಕ್ಕೆ ಹೋಗಿ 'ವಾಲೀ ಸುಗ್ರೀವ ಕಾಳಗ' ಅಭ್ಯಾಸ ಮಾಡಿಸಿ ಬರುತ್ತಿದ್ದ.

ನಾಗಪ್ಪ ನಾಟಕದ ರೂಪರೇಷೆ ಹಾಕಿಕೊಟ್ಟು, ಅದನ್ನು ಅಭ್ಯಾಸ ಮಾಡಿಸುವ ರೀತಿಯನ್ನು ಬಿಡಿಸಿ ಸಾಂಬನಿಗೆ ತಿಳಿಸುತ್ತಿದ್ದ. ಅವನ ಸಲಹೆಯಂತೆ ಅಭ್ಯಾಸ ನಿರ್ವಹಿಸಿ ಸಾಂಬ ನಾಟಕ ಸಿದ್ಧಗೊಳಿಸುತ್ತಿದ್ದ.

ನಾರಾಯಣ ಶಾಸ್ತ್ರಿಗಳ ಮೇಲೆ ಕತ್ತಿ ಮಸೆಯುತ್ತಿದ್ದ ಮೃತ್ಯುಂಜಯ ಶಾಸ್ತ್ರಿಗೆ ಸಾಂಬ ನಾಟಕದವರ ಸಹವಾಸ ಮಾಡುವ ವಿಷಯ ಅನುಕೂಲ ವಾಗಿ ಒದಗಿತು. ಅದನ್ನೇ ಆದಷ್ಟು ಬೆಳಸಿ, ಪ್ರಸಾರಮಾಡಿ ಶಾಸ್ತ್ರಿಗಳ ಮುಖಕ್ಕೆ ಮಸಿ ಬಳಿಯಬೇಕೆಂದು ಅವನು ನಿರ್ಧರಿಸಿ, ಶಾಸ್ತ್ರಿಗಳಲ್ಲಿಗೆ ರಾಯಭಾರಿಯಾಗಿ ತಮ್ಮಯ್ಯ ಶಾಸ್ತ್ರಿಯನ್ನು ಕಳಿಸಿಕೊಟ್ಟ.

ಅಪರೂಪವಾಗಿ ಬಂದ ತಮ್ಮಯ್ಯ ಶಾಸ್ತ್ರಿಯನ್ನು ಆದರದಿಂದ ಬರ ಮಾಡಿಕೊಂಡು ನಾರಾಯಣ ಶಾಸ್ತ್ರಿಗಳು ಎಲ್ಲರ ಯೋಗಕ್ಷೇಮ ವಿಚಾರಿಸಿ ದರು. ತಮ್ಮಯ್ಯ ಊರಿನ ಸುದ್ದಿಯೆಲ್ಲಾ ಮಾತನಾಡಿದ, ಆದರೆ ಮುಖ್ಯ ವಿಷಯ ಮಾತ್ರ ಎತ್ತಲಿಲ್ಲ.

ಯಾವದೋ ಕಾರ್ಯಾರ್ಥಿಯಾಗಿ ತಮ್ಮಯ್ಯ ಬಂದಿದ್ದಾನೆಂದು ಶಾಸ್ತ್ರಿಗಳ ಮನಸ್ಸಿಗೆ ಖಚಿತ. ಊಟ ಉಪಚಾರವಾದ ಮೇಲೆ

"ಇನ್ನೇನು ವಿಷಯ ತಮ್ಮಯ್ಯ, ಅಪರೂಪವಾಗಿ ಬಂದಿದ್ದೀ ಎರಡು ದಿವಸವಿದ್ದು ಹೋಗು" ಎಂದರು.

"ಇಲ್ಲ ಮಾವಯ್ಯ, ಸಂಜೆಗೆ ನಾನು ಊರು ತಲುಪಬೇಕಾಗಿದೆ. ನಾಳೆ ತಾಯಿ ವೈದೀಕ. ಮನೆಯಲ್ಲಿ ಏನಿದೆಯೋ ಏನಿಲ್ಲವೋ ನೋಡಿ ಕೊಳ್ಳಬೇಕು."

"ಹಾಗಾದರೆ ನಿನ್ನ ತಡೆಯುವುದಿಲ್ಲಪ್ಪಾ."

"ಸಾಂಬ ಎಲ್ಲಿ? ಕಾಣಲೇ ಇಲ್ಲ."

"ಶಾಂತಿಗ್ರಾಮದ ರೈತರು ಸುಗ್ಗೀಗೆ ನಾಟಕವಾಡುತ್ತಾರಂತೆ. ಅವರಿಗೆ ಸಹಾಯ ಮಾಡುವುದಕ್ಕೆ ಹೋಗಿದ್ದಾನೆ. ಇನ್ನೇನು ಬರಬಹುದು?"

"ಸಾಂಬ ನಾಟಕಕ್ಕೆ ಬಿದ್ದನೇ?"

"ಅದನ್ನೇನವನು ವೃತ್ತಿ ಮಾಡಿಕೊಂಡಿಲ್ಲ, ಜನ ಕೇಳಿಕೊಂಡರು ಹೋಗಿದ್ದಾನೆ."

" ಮೃದಂಗ ನುಡಿಸುತ್ತಾನಂತೆ!"

" ಹೂ! ನಾಗಪ್ಪನ ಹತ್ತಿರ ಕಲಿಯುತ್ತಿದ್ದಾನೆ."

" ಇದೇನು ಮಾವಯ್ಯ - ಇದೆಲ್ಲಾ ವಿಪರೀತವಾಗಿದೆಯಲ್ಲಾ - ಶ್ರೋತ್ರೀಯರ ಮನೆ ಹುಡುಗ - ಅದರಲ್ಲಿಯೂ ನಿಮ್ಮ ಮಗ - ನಟುವರ ಹಾಗೆ ಮೃದಂಗ ನುಡಿಸಿಕೊಂಡು ನಾಟಕದವರ ಜತೆ ಕುಣಿಯುವುದೆಂದರೆ ನಮ್ಮ ವಂಶಕ್ಕೇ ಬಹಳ ಹೀನಾಯ."

" ಇದರಲ್ಲಿ ಹೀನಾಯವೇನು ಬಂತು ತಮ್ಮಯ್ಯ. ವಿದ್ಯೆಗೆ ಮುಟ್ಟು ಚಿಟ್ಟು ಎಲ್ಲಿಂದ ಬಂತು? ವಿಶ್ವೇಶ್ವರನೇ ನರ್ತಕನಾಗಿರುವಾಗ ಅವನ ಭಕ್ತರು ಮೃದಂಗ ನುಡಿಸುವುದು ತಪ್ಪೇ?"

" ಅದು ಪುರಾಣದ ಮಾತಾಯಿತು. ನಮ್ಮಲ್ಲಿ ಈ ಸಂಪ್ರದಾಯ ಬರಲಿಲ್ಲ."

" ವಿದ್ಯೆ ಕಲಿಯುವ ಸಂಪ್ರದಾಯ ಬರಲಿಲ್ಲವೇ?"

" ದುರ್ವಿದ್ಯೆ ಕಲಿಯುವ ಸಂಪ್ರದಾಯವೇ?"

" ಮೃದಂಗ ವಿದ್ಯೆ ದುರ್ವಿದ್ಯೆಯೇ?"

" ದೊಡ್ಡವರು ಏನು ಮಾಡಿದರೂ ತಪ್ಪಾಗುವುದಿಲ್ಲ."

" ಇದು ವಿತ್ತಂಡವಾದವಾಯಿತು. ಮೃದಂಗ ಕಲಿಯುವುದು ತಪ್ಪು ಎಂದು ನೀನು ಸಿದ್ಧಾಂತ ಮಾಡಿ ತೋರಿಸಲಿಲ್ಲ. ಆದಲೆ ಕಲಿಯಬಾರದು ಎಂದು ಖಂಡಿತವಾಗಿ ಹೇಳುತ್ತಿರುವೆ."

" ಇದು ಸ್ವಲ್ಪವೂ ಚೆನ್ನಾಗಿಲ್ಲ ಶಾಸ್ತ್ರಿಗಳೇ."

" ಖಂಡಿತವಾಗಿ ಚೆನ್ನಾಗಿಲ್ಲ, ನಿಮಗೆ ಸಂಬಂಧಪಡದ ವಿಷಯಗಳಿಗೆ ನೀವು ಬಾಯಿ ಹಾಕುವುದೂ ಚೆನ್ನಾಗಿಲ್ಲ."

" ನೀವು........ಎಂದರೆ?"

" ನೀವು ಎಂದರೆ, ನೀನು, ಮೃತ್ಯುಂಜಯ, ಯಜ್ಞನಾರಾಯಣ ಮತ್ತಿತರರು."

" ಎಲ್ಲರನ್ನೂ ಒಟ್ಟಿಗೆ ಸೇರಿಸಿ ಆಕ್ಷೇಪಿಸುತ್ತಿರುವಿರಲ್ಲಾ."

" ತಮ್ಮಯ್ಯ, ಒಣ ಸೌಜನ್ಯದಿಂದೇನು ಪ್ರಯೋಜನ. ನಿಮಗೆ ನನ್ನ ಮೇಲಿರುವ ಅಭಿಮಾನ, ವಿಶ್ವಾಸ ನಾನು ಚೆನ್ನಾಗಿ ಬಲ್ಲೆ. ನನ್ನ

ಮೇಲಿರುವ ಅಸೂಯೆ ವ್ಯಕ್ತಪಡಿಸುವುದಕ್ಕೆ ದಾರಿ ಹುಡುಕುತ್ತಿರುವಿರಿ. ಸಾಂಬ ಮೃದಂಗ ಕಲಿಯುವ ವಿಷಯ ಅನುಕೂಲವಾಗಿ ನಮ್ಮ ಕೈಗೆ ಸಿಕ್ಕಿತು."

"ದೊಡ್ಡವರು - ನೀವು ಹೀಗೆ ಆಡುವುದು ಸರಿಯಲ್ಲ."

"ನಾನು ಯಾವ ವಿಷಯ ಆಡಬೇಕಾದರೂ - ಅದೂ ಬೇರೆಯವರಿಗೆ ಸಂಬಂಧಪಟ್ಟದಾದರೆ ನೂರು ಸಲ ಯೋಚನೆ ಮಾಡಿರುತ್ತೇನೆ. ನೀವೂ ಯೋಚನೆ ಮಾಡಿ. ಇಲ್ಲಸಲ್ಲದ ಮನಸ್ತಾಪ ತಂದು ಹಾಕಬೇಡಿ."

ಶಾಸ್ತ್ರಿಗಳ ಮುಂದೆ ತನ್ನ ಬೇಳೆ ಬೇಯದಿದ್ದುದಕ್ಕೆ ತಮ್ಮಯ್ಯನಿಗೆ ತಂಬ ಜಿಗುಪ್ಸೆಯಾಯಿತು. ಅಸಮಾಧಾನ ವ್ಯಕ್ತಪಡಿಸುವುದಕ್ಕೆ ಅವನು ಹಿಂಜರಿಯಲಿಲ್ಲ. ಹೊರಡಲನುವಾಗಿ ಎದ್ದು ನಿಂತ. ಶಾಸ್ತ್ರಿಗಳು

"ಕೋಪಮಾಡಿಕೊಂಡು ಹೋಗಬೇಡಪ್ಪಾ" ಎಂದರು.

"ಹೂ! ಹಾಗೇ ಆಗಲಿ"

ಎಂದು ಒರಟಾಗಿ ಉತ್ತರ ಹೇಳಿ ತಮ್ಮಯ್ಯಶಾಸ್ತ್ರಿ ಹೊರಟುಬಿಟ್ಟ.

ವಿನಾಕಾರಣ ತಮ್ಮ ಮೇಲೆ ಕವಿಯುತ್ತಿದ್ದ ಆಕ್ಷೇಪಣೆ, ವೈಮನಸ್ಯದ ಕಾರ್ಮೋಡ ಕಂಡು ಶಾಸ್ತ್ರಿಗಳು ಮರುಗಿದರು. 'ಸಾಂಬನಿಗೆ ಹೇಳಿ ಮೃದಂಗ ಪಾಠ ಬಿಡಸಲೇ' ಎಂದು ಯೋಚಿಸಿದರು. 'ಛೆ! ಛೆ! ಹುಡುಗ ಆಸಕ್ತಿಯಿಂದ ಒಂದು ವಿದ್ಯೆ ಕಲಿಯುತ್ತಿದ್ದಾನೆ. ಅವಿವೇಕಿಗಳು ಒಡಕು ಮಾತಾಡಿದರೆಂದು ಹುಡುಗನ ವಿದ್ಯಾಭ್ಯಾಸ ಹಾಳುಮಾಡುವುದೇ? ಸರಸ್ವತೀಗೆ ದ್ರೋಹಮಾಡುವುದೇ? ನಟುವರು ಮೃದಂಗ ವಿದ್ಯೆ ಕಲಿಯುತ್ತಾರೆ; ನಟುವರಲ್ಲದವರು ಕಲಿಯಬಾರದೆಂದು ಕಡ್ಡಾಯವುಂಟೇನು?' ಎಂದು ಸಮಾಧಾನ ತಂದುಕೊಳ್ಳಲೆತ್ನಿಸಿದರು.

ಅದೇ ರಾತ್ರಿ ಮನೆಯ ಮುಂದೆ ಯಾರೋ ಸುಳಿದು, ಮನೆಯ ಹಿಂದೆ ಹೋದಂತಾಯಿತು. ಶಾಸ್ತ್ರಿಗಳು ವಿಶ್ವೇಶ್ವರನಿಗೆ ಸೂಚಿಸಿದರು. ಅವನು ಹೋಗಿ ನೋಡಿ ಯಾರೂ ಇಲ್ಲವೆಂದು ಬಂದು ಹೇಳಿದ. ಹಿತ್ತಲಲ್ಲಿದ್ದ ಹುಲ್ಲು ಮೆದೆಗೆ ಬೆಂಕಿ ಬಿದ್ದಮೇಲೆ ರಾತ್ರಿಯ ಹೊತ್ತು ಶಾಸ್ತ್ರಿಗಳಿಗೆ ಬಡಪೆಟ್ಟಿಗೆ ನಿದ್ರೆ ಹತ್ತುತ್ತಿರಲಿಲ್ಲ. ಮನಸ್ಸಿನಲ್ಲಿ ಕಳವಳ. ಅಂದು ಕಳವಳ

ಸ್ವಲ್ಪ ಹೆಚ್ಚಾಗಿತ್ತು. ತಮ್ಮಯ್ಯಶಾಸ್ತ್ರಿ ಹೋದ ರೀತಿ ನೋಡಿ ಅವನೂ ಅವನ ಸಂಗಡಿಗರೂ ಏನಾದರೂ ಕಿತಾಪತಿ ಮಾಡಬಹುದೆಂದು ಶಾಸ್ತ್ರಿಗಳು ನಿರೀಕ್ಷಿಸಿದರು.

ಲಾಟೀನ್ ದೊಡ್ಡದು ಮಾಡಿಕೊಂಡು ಹೋಗಿ ಶಾಸ್ತ್ರಿಗಳೇ ಒಂದೆರಡು ಸಲ ನೋಡಿ ಬಂದರು. ತಂದೆಯ ಧಾವಂತ ನೋಡಿ ವಿಶ್ವೇಶ್ವರ

"ಮಲಗಿಕೊಳ್ಳಬಾರದೇಪ್ಪ - ಯಾರು ಇಲ್ಲ. ಸುಮ್ಮನೇಕೆ ತೊಳಲಾಡುವೆ" ಎಂದ.

"ಇಲ್ಲ ವಿಶ್ವೇಶ್ವರ, ಯಾರೋ ಹೊಂಚುಕಾಯುತ್ತಿದ್ದಾರೆ. ಯಾರು ಇಲ್ಲವೆಂದರೂ ನನ್ನ ಮನಸ್ಸ ಒಪ್ಪುವುದಿಲ್ಲ."

ತಂದೆಯ ಸಮಾಧಾನಕ್ಕಾಗಿ ವಿಶ್ವೇಶ್ವರ ಲಾಟೀನು ಹಿಡಿದು ಹೊರಟ. ಅವನು ಹೋಗಿ ಹತ್ತು ಹದಿನೈದು ನಿಮಿಷಗಳಾದರೂ ಹಿಂದಿರುಗಲಿಲ್ಲ. ಶಾಸ್ತ್ರಿಗಳು ಕಕ್ಕಾಬಿಕ್ಕಿಯಾದರು. ಮನಸ್ಸಿನ ದುಗುಡ ವಿಶೇಷವಾಯಿತು.

"ಸಾಂಬ-ವಿಶ್ವೇಶ್ವರ ಹೋದವನು ಬರಲಿಲ್ಲ. ನೀನು ಸ್ವಲ್ಪ ನೋಡು"

ಎಂದರು.

ಸಾಂಬ ಹೋದವನೂ ಕೂಡಲೆ ಬರಲಿಲ್ಲ. ಶಾಸ್ತ್ರಿಗಳು ತಾವೇ ಹೊರಡಲೆದ್ದರು. ಸಾಂಬ, ವಿಶ್ವೇಶ್ವರ ಹಿಂದಿರುಗುತ್ತಿರುವುದನ್ನು ಕಂಡು

"ಎಷ್ಟು ಹೊತ್ತು ಹೋಗಿಬಿಟ್ಟಿರಪ್ಪಾ"

ಎಂದು ಕೇಳಿದರು.

ವಿಶ್ವೇಶ್ವರ ತಂದೆಯ ಸಮೀಪಕ್ಕೆ ಬಂದು ಪಿಸುಮಾತಿನಲ್ಲಿ

"ಸಂಪಿಗೆ ಚಲುವಾಚಾರಿ ಬಂದಿದ್ದಾನೆ. ನಿನ್ನ ಹತ್ತಿರ ಗೋಪ್ಯವಾಗಿ ಮಾತನಾಡಬೇಕಂತೆ."

"ಹಾಗೇನು? ಹಿತ್ತಲ ಬಾಗಿಲು ತೆಗೆ. ಆಕಡೆಯೇ ಅವನನ್ನು ಬಾ ಎಂದು ಹೇಳು"

ಎಂದೆದ್ದು ಹಿತ್ತಲ ಕಡೆ ಹೋದರು.

ವಿಶ್ವೇಶ್ವರ ಹಿತ್ತಲ ಕಡೆ ಬಾಗಿಲು ತೆಗೆದು ಚಲುವಾಚಾರಿಯನ್ನು ಒಳಗೆ ಕರೆದುಕೊಂಡು ಬಂದ.

ಚಲುವಾಚಾರಿಯ ಭಯಗ್ರಸ್ತ ಮುಖ ನೋಡಿ ಶಾಸ್ತ್ರಿಗಳು ಗಾಬರಿ ಯಾಗಿ

"ಏನಾಯಿತಪ್ಪಾ - ಚಲುವಾಚಾರಿ"

ಎಂದರು.

ಆಚಾರಿಯ ಬಾಯಲ್ಲಿ ಕೂಡಲೆ ಮಾತು ಹೊರಡಲಿಲ್ಲ. ಸ್ವಲ್ಪ ಹೊತ್ತು ಕುಳಿತು ವಿಶ್ರಮಿಸಿಕೊಂಡ. ಅವನ ಅವಸ್ಥೆ ನೋಡಲಾರದೆ ಸಾಂಬ ಒಂದು ತಂಬಿಗೆಯಲ್ಲಿ ಕುಡಿಯುವ ನೀರು ತಂದುಕೊಟ್ಟ. ಚಲುವಾಚಾರಿ ನೀರು ಕುಡಿದು ಸುದಾರಿಸಿಕೊಂಡು

"ನನ್ನ ಕಾಪಾಡಬೇಕು ಸ್ವಾಮಿ. ನಿಮ್ಮನ್ನು ಬಿಟ್ಟರೆ ನನಗೆ ಬೇರೆ ಯಾರೂ ದಿಕ್ಕಿಲ್ಲ."

"ಆದದ್ದೇನು ಹೇಳು. ಸಮಾಧಾನ ತಂದುಕೋ. ಇಷ್ಟು ಧಾವಂತ ಮಾಡಿಕೊಂಡರೆ ಹೇಗೆ?"

ಚಲುವಾಚಾರಿ ಗಂಟಲು ಸರಿಮಾಡಿಕೊಂಡು

"ನನ್ನ ಹುಡುಗಿ ರಾಜಿಯನ್ನು ನೀವು ನೋಡಿದ್ದೀರಲ್ಲಾ ಸ್ವಾಮಿ."

"ನಾನು ಕಾಣೆನೆ, ನನ್ನ ಕಣ್ಣು ಮುಂದೆ ಬೆಳೆದ ಮಗುವಲ್ಲವೇ?"

"ದೊಡ್ಡವಳಾಯಿತು."

"ಒಳ್ಳೆಯದು, ಪ್ರಸ್ತದ ಏರ್ಪಾಟು ಮಾಡು."

"ಏನು ಮಾಡಲಿ ಶಾಸ್ತ್ರಿಗಳೇ, ಕಾಳಾಚಾರಿ ನಿರೂಪ ಬಂದಿದೆ. ಹನುಮ ಬಂದು ಸೂಚನೆ ಕೊಟ್ಟು ಹೋದ........ಏನು ಮಾಡಲಿ ದೇವರೂ."

"ಈ ಪ್ರಾಂತ್ಯದಲ್ಲಿ ಯಾರೂ ಮರ್ಯಾದೆಯಾಗಿ ಬಾಳುವ ಹಾಗೆ ಇಲ್ಲವೇ?"

"ಕಾಳಾಚಾರಿ ಮನೆಗೆ ಕಳಿಸಲೇ ಬೇಕಾದ ಸಂದರ್ಭ ಬಂದರೆ ಮಗುವಿಗೆ............"

"ವಿಷ ಕೊಡಬೇಕೆಂದಿರುವೆಯಾ?"

ಚಲುವಾಚಾರಿ ದುಃಖಿಸುತ್ತ ಕುಳಿತುಬಿಟ್ಟ. ಅವನ ಮುಖದಲ್ಲಿ ಜೀವ ಕಳೆಯಿರಲಿಲ್ಲ.

"ಹುಚ್ಚಪ್ಪಾ.......ದುಃಖದ ಭರದಲ್ಲಿ ಅವಿವೇಕ ಮಾಡುವುದಕ್ಕೆ ಹೋಗಬೇಡ. ಇವಕ್ಕೆ ಏನಾದರೂ ಪರಿಹಾರ ಯೋಚಿಸೋಣ"

ಎಂದು ಶಾಸ್ತ್ರಿಗಳು ಸ್ವಲ್ಪ ಹೊತ್ತು ಸ್ತಬ್ಧರಾಗಿ

"ಸಾಂಬ, ಪುಟ್ಟೇಗೌಡನನ್ನೂ ರಂಗೇಗೌಡನನ್ನೂ ಸ್ವಲ್ಪ ಕರೆದು ಕೊಂಡು ಬಾ"

ಎಂದರು.

"ಅವರು ಬಂದೇನು ಮಾಡಬಲ್ಲರು ಸ್ವಾಮಿ"

ಎಂದು ಚಲುವಾಚಾರಿ ಕೇಳಿದ.

"ಬರಲಿ ತಡಿ – ನಿನಗೇ ಗೊತ್ತಾಗುತ್ತದೆ."

ಮಲಗಿದ್ದ ಪುಟ್ಟೇಗೌಡ, ರಂಗೇಗೌಡ ಹೆಗಲ ಮೇಲೆ ಕಂಬಳಿ ಹಾಕಿ ಕೊಂಡು ಸಾಂಬನ ಜತೆ ಕೂಡಲೆ ಬಂದರು.

ಶಾಸ್ತ್ರಿಗಳು ಸೂಕ್ಷ್ಮವಾಗಿ ಅವರಿಬ್ಬರಿಗೂ ಚಲುವಾಚಾರಿಗೆ ಬಂದಿದ್ದ ವಿಪತ್ತನ್ನು ತಿಳಿಸಿ

"ಈ ಸಾರೆ ಧೈರ್ಯ ಮಾಡುತ್ತೀರಾ"

ಎಂದರು.

"ಹೇಳಿ ಸೋಮಿ - ನಾವೇನು ಮಾಡಬೇಕು."

"ಪುಟ್ಟೇಗೌಡ, ನಿನ್ನ ಎತ್ತುಗಳು ಹೇಗಿವೆ?"

"ಭರ್ಜರಿಯಾಗಿವೆ ಬುದ್ದಿ, ಮೊನ್ನೆ ಹಾಸನದ ಪರಿಶೆಯಲ್ಲಿ ತಂದವು."

"ರಂಗೇಗೌಡನದು."

"ಅವನದೂ ಸೊಗಸಾಗಿವೆ."

"ನೀವಿಬ್ಬರೂ ಗಾಡಿ ಕಟ್ಟಿಕೊಂಡು ಈ ಕೂಡಲೆ ಹೊರಟು ಬರಬೇಕು. ಜತೆಗೆ ಕುಮ್ಮಕ್ಕಿಗೆ ಒಂದೆರಡು ಆಳಿರಲಿ."

ಚಲುವಾಚಾರೀಗೆ ಶಾಸ್ತ್ರಿಗಳ ಲೆಕ್ಕಾಚಾರ ಅರ್ಥವಾಗಲಿಲ್ಲ. ಅವನು ಬೆಕ್ಕಸಬೆರಗಾಗಿ ಶಾಸ್ತ್ರಿಗಳ ಮುಖ ನೋಡುತ್ತ ಕುಳಿತ.

"ಚಲುವಾಚಾರಿ - ನಿಮ್ಮ ಮನೆಯಲ್ಲಿ ಎಷ್ಟು ಜನರಿದ್ದಾರೆ?"

" ನಾನೂ, ನನ್ನ ಮಗಳು, ಹೆಂಡತಿ, ನಮ್ಮಪ್ಪ - ನಮ್ಮ ಆಳು."

" ನೀನು ಊರಿಗೆ ಹೋಗಿ ಬಟ್ಟೆಬರೆ ಕಟ್ಟಿಕೊಂಡು, ಮನೆಯವರನ್ನು ಕರೆದುಕೊಂಡು ಹೊರಟುಬಿಡು."

" ಎಲ್ಲಿಗೆ ಸ್ವಾಮಿ ? "

" ಸರಗೂರಿಗೆ – ನಿಮ್ಮ ಬೀಗರ ಮನೆಗೆ."

" ಇಲ್ಲಿಂದಲೇ ಹನ್ನೆರಡು ಮೈಲಿಯಾಗುತ್ತೆ ಒಳದಾರಿಯಲ್ಲಿ. ಸಂಪಿಗೆಗೆ ಸರಗೂರು ಹತ್ತು ಮೈಲಿ."

" ಹೊತ್ತು ಕಳೆಯುವುದಕ್ಕೆ ಸಾಧ್ಯವಿಲ್ಲ. ಜತೆಗೆ ಬೇಕಾದರೆ ವಿಶ್ವೇಶ್ವರ ಸಾಂಬ ಇಬ್ಬರನ್ನೂ ಕರೆದುಕೊಂಡು ಹೋಗು. ನೀನು ಕೆರೆಯೇರಿಗೆ ಬರುವ ವೇಳೆಗೆ ಪುಟ್ಟೇಗೌಡ, ರಂಗೇಗೌಡ ಗಾಡಿ ಹೊಡೆದುಕೊಂಡು ಬಂದಿರುತ್ತಾರೆ. ಅವರ ಗಾಡಿಯಲ್ಲಿ ಹೊರಟು ಬೆಳಗಾಗುವುದರೊಳಗಾಗಿ ಸರಗೂರು ಸೇರ ಬೇಕು."

" ಮನೆಯಲ್ಲಿರುವ ದನ."

" ಗೌಡನ ಜತೆ ಆಳು ಬಂದಿರುತ್ತಾನೆ. ಅವುಗಳನ್ನು ಅವನ ವಶ ಮಾಡು. ಗೌಡನ ಮನೆಯಲ್ಲಿ ನಿನ್ನ ದನ ಜೋಪಾನವಾಗಿರುತ್ತವೆ."

ಗೌಡರಿಬ್ಬರೂ ಗಾಡಿ ವ್ಯವಸ್ಥೆ ಮಾಡುವುದಕ್ಕೆ ಹೊರಟರು.

ಚಲುವಾಚಾರಿ ಶಾಸ್ತ್ರಿಗಳಿಗೆ ಅಡ್ಡಬಿದ್ದು " ನೀವೇ ನನ್ನ ಭಾಗದ ದೇವರು "

ಎಂದ. ಶಾಸ್ತ್ರಿಗಳು ವಿಶ್ವೇಶ್ವರ, ಸಾಂಬನಿಗೆ " ಚಲುವಾಚಾರಿ ಜತೆ ಹೋಗಿ, ಅವನಿಗೇನು ಸಹಾಯ ಬೇಕೋ ಒದಗಿಸಿ. ಅವನೂ ಅವನ ಸಂಸಾರ ಗಾಡಿ ಹತ್ತಿ ಹೊರಟಮೇಲೆ ಸ್ವಲ್ಪ ದೂರ ಹೋಗಿ ಕಳಿಸಿಬನ್ನಿ"

ಎಂದರು. ವಿಶ್ವೇಶ್ವರ, ಸಾಂಬ ಚಲುವಾಚಾರಿಯ ಜತೆಯಲ್ಲಿ ಹೊರಟರು.

ಶಾಸ್ತ್ರಿಗಳ ಮನಸ್ಸಿಗೊಂದು ಬಗೆಯ ತೃಪ್ತಿ. ಅದರ ಜತೆಗೆ ಭೀತಿ ಅಂಕುರಿಸಿತ್ತು. ತಾವು ಯೋಚಿಸಿದಂತೆ ಎಲ್ಲಾ ನಡೆಯದೆ ಹೋದರೆ– ಕಾಳಾಚಾರೀಗೆ ಸುಳುವು ಗೊತ್ತಾದರೆ– ಮಧ್ಯೆ ಏನಾದರೂ ಅಡಚಣೆ ಬಂದರೆ ಏನು ಗತಿ? ಎಂದು ಯೋಚಿಸುತ್ತಾ ಕುಳಿತರು.

ಮಧ್ಯರಾತ್ರಿ ಕಳೆಯಿತು ಒಂದು ಗಂಟೆ ಹೊಡೆಯಿತು. ಶಾಸ್ತ್ರಿಗಳು ಎದ್ದೆದ್ದು ಹೋಗಿ ಸಂಪಿಗೆಯ ರಸ್ತೆ ಕಡೆ ಮುಖಮಾಡಿ ನಿಲ್ಲುತ್ತಿದ್ದರು. ಮಾವನವರ ಆತಂಕ ನೋಡುತ್ತ ಸೀತಮ್ಮ ತೊಟ್ಟಿಯಲ್ಲಿ ಹಣತೆ ಉರಿಸುತ್ತ ಕುಳಿತಿದ್ದಳು.

ಎರಡು ಗಂಟೆ ಹೊಡೆಯಿತು ಸಾಂಬ, ವಿಶ್ವೇಶ್ವರನ ಸುಳಿವಿರಲಿಲ್ಲ. ಶಾಸ್ತ್ರಿಗಳ ಮನಸ್ಸಿಗೆ ಸ್ವಲ್ಪ ಸಮಾಧಾನ ಬೇಕಾಗಿತ್ತು. ಸೀತಮ್ಮನನ್ನು ನೋಡಿ

"ಈವೇಳೆಗೆ ಹುಡುಗರು ಬರಬೇಕಾಗಿತ್ತಲ್ಲವೇ ?"

"ಸಂಪಿಗೆ ಇಲ್ಲಿಗೆ ಆರು ಮೈಲಿ – ಅಲ್ಲಿಗೆ ಹೋಗಿ ಬರಬೇಕಾದರೆ ನಾಲ್ಕು ಗಂಟೆಯಾದರೂ ಬೇಡವೇ? ನೀವು ಹಾಯಾಗಿ ಮಲಗಿಕೊಳ್ಳಬಾರದೇ? ಅವರು ಬಂದಕೂಡಲೇ ಎಬ್ಬಿಸುತ್ತೇನೆ."

"ನನಗೆ ನಿದ್ರೆ ಬರುವುದಿಲ್ಲ ತಾಯಿ."

ಮೂರು ಗಂಟೆ ಹೊಡೆಯಿತು. ಕುಳಿತಿದ್ದ ಶಾಸ್ತ್ರಿಗಳು ಚಂಗನೆದ್ದು ಮತ್ತೆ ರಸ್ತೆಯ ಕಡೆ ಹೋಗಿ ನೋಡಿದರು. ನಿಶೆ ಪ್ರಶಾಂತವಾಗಿತ್ತು. ಶಾಸ್ತ್ರಿಗಳ ಮನಸ್ಸಿನಲ್ಲಿ ಉದ್ವೇಗ ಹೆಚ್ಚುತ್ತಿತ್ತು. ಸೀತಮ್ಮನನ್ನು ನೋಡಿ

"ನಾನು ಅಲ್ಲಿಯ ತನಕ ಹೋಗಿಬರಲೇ ?"

"ಚೆನ್ನಾಯಿತು. ಕಾರ್ಗತ್ತಲೆ ಕವಿದಿದೆ. ನಿಮಗೆ ಕಣ್ಣು ಚೆನ್ನಾಗಿ ಕಾಣಿಸುವುದಿಲ್ಲ. ಸುಮ್ಮನಿರಿ ಸದ್ಯ – ಇನ್ನೇನು ಅವರು ಬರುವ ಹೊತ್ತಾಯಿತು",

ಎಂದಳು. ಸೊಸೆಯ ಹಿತೋಕ್ತಿ ಶಾಸ್ತ್ರಿಗಳಿಗೆ ಸ್ವಲ್ಪ ಶಾಂತಿ ತಂದು ಕೊಟ್ಟಿತು.

ನಾಲ್ಕು ಗಂಟೆ ಹೊಡೆಯಿತು. ಶಾಸ್ತ್ರಿಗಳು "ನಾಲ್ಕಾಯಿತಲ್ಲಮ್ಮ" ಎಂದರು.

"ಇಗೋ ಎನ್ನುವುದರಲ್ಲಿ ಬರುತ್ತಾರೆ"

ಎಂದು ಸೀತಮ್ಮ ಧೈರ್ಯ ಹೇಳಿದಳು.

ಐದು ಗಂಟೆಯೂ ಹೊಡೆಯಿತು. ಬೆಳಗಿನ ಕೋಳಿ ಕೂಗಿತು. ಹುಡುಗರು ಬರದಿದ್ದುದನ್ನು ಕಂಡು ಶಾಸ್ತ್ರಿಗಳು ಅಧೀರರಾದರು.

“ ಅಮ್ಮಯ್ಯಾ - ನಾನು ಹೋಗಿಬರುತ್ತೇನೆ ತಾಯಿ. ಇನ್ನು ಕೂಡಲಾರೆ ”

ಎಂದರು. ಸೀತಮ್ಮ ರಸ್ತೆಯವರೆಗೆ ಹೋಗಿಬಂದು

“ ಯಾರೊ ಬರುವಂತಿದೆ ”

ಎಂದಳು. ಶಾಸ್ತ್ರಿಗಳು ಎದ್ದು ಹೋದರು. ಸಾಂಬ, ವಿಶ್ವೇಶ್ವರ ಅವರ ಜತೆ ಒಳಕ್ಕೆ ಬಂದರು.

ಶಾಸ್ತ್ರಿಗಳಿಗೆ ತಡೆಯಲಾರದಷ್ಟು ಆತುರ.

“ ಏನಾಯ್ತಪ್ಪಾ – ಸುಖವಾಗಿ ಪ್ರಯಾಣಮಾಡಿದರೇ? ಗಾಡಿಗಳು ಬಂದಿದ್ದವೇ ? ”

“ ಎಲ್ಲಾ ಸರಿಯಾಗಿ ಆಯ್ತು ಅಣ್ಣಯ್ಯಾ. ಇನ್ನಾದರೂ ನೀವು ನಿಶ್ಚಿಂತರಾಗಿರಿ ”.

“ ಏಕಿಷ್ಟು ತಡವಾಯಿತು ? ”

“ ಮನೆಯವರೆಲ್ಲಾ ಮಲಗಿದ್ದರು. ಅವರನ್ನೆಬ್ಬಿಸಿ ಗಂಟುಮೂಟೆ ಕಟ್ಟಿಸಿ, ದನಗಳನ್ನು ಬಿಚ್ಚಿ ಹೊರಡಬೇಕಾದರೆ ಸ್ವಲ್ಪ ಹೊತ್ತಾಯಿತು.”

“ ಆಚಾರಿ ಕಡೆಯವರು ಯಾರೂ ಎಚ್ಚರವಾಗಿರಲಿಲ್ಲವಷ್ಟೇ ? ”

“ ಇಲ್ಲ – ಸುಖನಿದ್ರೆಯಲ್ಲಿದ್ದರು.”

“ ವಿಶ್ವೇಶ್ವರ ದೊಡ್ಡವನು ”

ಎಂದು ಶಾಸ್ತ್ರಿಗಳು ಸಂತೃಪ್ತರಾದರು. ಬೆಳಗು ಹರಿಯುತ್ತ ಬಂದಿತ್ತು.

೧೦

ಶಾಸ್ತ್ರಿಗಳು ವಿಶ್ರಾಂತಿಯನ್ನೇ ಮರೆತುಬಿಟ್ಟರು. ರುದ್ರಾಭಿಷೇಕ ಅನ್ನಪೂರ್ಣಾಷ್ಟೋತ್ತರ ಪೂಜೆಗೆ ಸಿದ್ಧಗೊಳಿಸಿಕೊಳ್ಳಲಾರಂಭಿಸಿ ಸೊಸೆಯನ್ನು ಕರೆದು

“ ಅಮ್ಮಯ್ಯಾ, ಇವತ್ತು ಒಂದು ತೊವ್ವೆ ಪಾಯಸದ ಅಡಿಗೆಮಾಡು ತಾಯೀ ” ಎಂದರು.

"ಕಡಲೇಬೇಳೆ ಪಾಯಸ ಮಾಡಲೇ? ಇನ್ನೇನಾದರೂ ಭಕ್ಷ್ಯ ಮಾಡಬೇಕೋ?"

"ನಿನಗೆ ಏನು ತೋರುತ್ತೋ ಅದನ್ನು ಮಾಡು. ನಾಲ್ಕು ಜನಕ್ಕೆ ಹೆಚ್ಚು ಅಡಿಗೆ ಮಾಡು"

ಎಂದರು. 'ಆ ನಾಲ್ಕು ಜನರು ಯಾರು?' ಎಂದು ಸೀತಮ್ಮ ಕೇಳಲಿಲ್ಲ.

ಶಾಸ್ತ್ರಿಗಳು ಸ್ನಾನ ಮಾಡಿ, ಒದ್ದೆಯುಟ್ಟು ಸಾಂಗವಾಗಿ ಪೂಜೆಯಾರಂಭಿಸಿದರು. ವಿಶ್ವೇಶ್ವರನೂ ತಂದೆಯ ಜತೆ ಕುಳಿತುಕೊಂಡ. ಪೂಜೆ ಮುಗಿಯುವವೇಳೆಗೆ ಸಾಂಬ ಬಂದು

"ಪುಟ್ಟೇಗೌಡ ಬಂದಿದ್ದಾನೆ" ಎಂದ.

"ಏನಂತೆ ಸಮಾಚಾರ" ಎಂದು ಶಾಸ್ತ್ರಿಗಳು ಕೇಳಿದರು.

"ಸುಖವಾಗಿ ಸರಗೂರು ಸೇರಿಸಿ ಬಂದನಂತೆ"

ಶಾಸ್ತ್ರಿಗಳ ಮುಖ ಪ್ರಫುಲ್ಲವಾಯಿತು.

"ಸಾಂಬ – ಪುಟ್ಟೇಗೌಡ, ರಂಗೇಗೌಡ, ಅವರ ಜತೆ ಹೋಗಿದ್ದ ಆಳುಗಳನ್ನು ಇಲ್ಲಿಗೇ 'ಊಟಕ್ಕೆ ಬನ್ನಿ' ಎಂದು ಹೇಳು"

ಎಂದರು.

ಶಾಸ್ತ್ರಿಗಳ ಮನೆಗೆ ಸುದ್ದಿ ಮುಟ್ಟಿಸಿದಮೇಲೆ ಪುಟ್ಟೇಗೌಡ, ರಂಗೇಗೌಡ ಮನೆಗೆ ಹೋಗಿ ಗಾಡಿ ಬಿಚ್ಚಿ, ದನಕ್ಕೆ ಹುಲ್ಲು ನೀರುಕೊಟ್ಟು ಶಾಸ್ತ್ರಿಗಳ ಮನೆಗೆ ಹೋಗಲು ಸಿದ್ಧರಾದರು.

ಪುಟ್ಟೇಗೌಡ, ರಂಗೇಗೌಡನನ್ನೂ ಆಳುಗಳನ್ನೂ ತನ್ನ ತೋಟದಲ್ಲಿದ್ದ ಇಳಿಯುವ ಭಾವಿಗೆ ಕರೆದೊಯ್ದು ಅಲ್ಲಿ ಎಲ್ಲರೂ ಶುಭ್ರವಾಗಿ ಸ್ನಾನ ಮಾಡಿ ಶಾಸ್ತ್ರಿಗಳ ಮನೆಗೆ ಬಂದರು.

ಶಾಸ್ತ್ರಿಗಳು ಪಡಸಾಲೆಯಲ್ಲಿ ಎಲೆ ಹಾಕಿಸಿ ಅತಿಥಿಗಳ ದಾರಿ ಕೊಡುತ್ತಿದ್ದರು.

"ಇದೇನು ಸ್ವಾಮಿ – ನಮುಗೌತನ" ಎಂದ ಪುಟ್ಟೇಗೌಡ.

"ರುದ್ರಾಭಿಷೇಕ ಮಾಡಿದೆ. ನಾಲ್ಕು ಜನಕ್ಕೆ ಊಟಕ್ಕೆ ಹೇಳುವುದು ಪದ್ಧತಿ".

"ಬ್ರಾಂಬರನ ಅಲ್ವಾ ಸ್ವಾಮಿ ಕರೆಯೋದು."

"ಗುಣದಲ್ಲಿ ನೀವು ಬ್ರಾಂಬರೇ ಕಣಪ್ಪಾ........ಬನ್ನಿ. ದಣಿದು ಬಂದಿದ್ದೀರಿ. ಸಾವಕಾಶವಾಗಿ ವಿಶ್ವೇಶ್ವರನ ಪ್ರಸಾದ ಸ್ವೀಕರಿಸಿ" ಎಂದು ಉಪಚರಿಸಿದರು.

ಪುಟ್ಟೇಗೌಡ ಊಟಕ್ಕೆ ಕುಳಿತು ನಡೆದುದೆಲ್ಲವನ್ನೂ ಸಾಂಗವಾಗಿ ವಿವರಿಸಿದ.

"ದೊಡ್ಡ ಕೆಲಸ ಮಾಡಿದೆ ಗೌಡ. ನಿನ್ನ ಉಪಕಾರ ನಾನು ಮರೆಯಲು ಸಾಧ್ಯವೇ ಇಲ್ಲ."

"ಸರಿ-ಬಿಡಿ ಸ್ವಾಮಿ, ನನ್ನದೇನು ಉಪಕಾರ. ಕಾಳಾಚಾರಿ ಕಿವೀಗೆ ಸುದ್ದಿ ಮುಟ್ಟಿದಮೇಲೆ ಅವನು ನಿಮ್ಮನ್ನ ಸುಮ್ಕೆ ಬಿಟ್ಟಾನಾ?"

"ನನ್ನ ಏನುಮಾಡಬಲ್ಲನಪ್ಪಾ. ಎಷ್ಟಾದರೂ ಇದು ಮುದಿಕೊರಡು —ಬೀಳುವ ಮರ. ಎಂದು ಬಿದ್ದರೇನು ಹೇಳು."

"ಆ ಮಾತು ಬುಟ್ಬುಬಿಡಿ ಸೋಮಿ. ನೀವಿರೋ ಒತ್ಗೆ ಇದೊಂದು ಊರು-ನಾವು ಮನಸ್ರು."

ಶಾಸ್ತ್ರಿಗಳೇ ಬಡಿಸುವುದಕ್ಕೆ ನಿಂತರು. ಸೀತಮ್ಮನ ಕೈಯಿಂದ ಪಾಯಸದ ತಪ್ಪಲೇ ಸೌಟು ತೆಗೆದುಕೊಂಡು ಗೌಡರಿಗೆ ನಾಲ್ಕುನಾಲ್ಕು ದೊನ್ನೆ ಪಾಯಸ ಕುಡಿಸಿದರು. ಬರೀ ಪಾಯಸವೇಕೆಂದು ಸೀತಮ್ಮ ಲಕ್ಕೋಟಿನ ಹೋಳಿಗೆ ಮಾಡಿ ಹುಳಿಯನ್ನ ಕಲಸಿದ್ದಳು. ಶಾಸ್ತ್ರಿಗಳು ಅತಿಥಿಗಳಿಗೆ ಧಾರಾಳವಾಗಿ ಬಡಿಸಿ ಅವರು ಸಂತೋಷವಾಗಿ ಊಟಮಾಡುವುವನ್ನು 'ಕಣ್ತುಂಬ' ನೋಡಿ ತಣಿದರು.

ಗೌಡರಿಗೆ ಮಜ್ಜಿಗೆ ಬಡಿಸಿದಮೇಲೆ ಸೀತಮ್ಮ ಮಾವನವರಿಗೆ
"ಇನ್ನಾದರೂ ನೀವು ಊಟಕ್ಕೆ ಏಳಿ" ಎಂದಳು.
ಪುಟ್ಟೇಗೌಡ ಆಶ್ಚರ್ಯದಿಂದ
"ಇನ್ನೂ ಊಟ ಇಲ್ವಾ ನನ್ನೊಡೆಯಾ"
ಎಂದ.

"ನಿಮ್ಮ ಊಟವಾಗುವ ತನಕ ತಾವು ಮಾಡುವುದಿಲ್ಲವೆಂದು ಹಟ ಹಿಡಿದರಪ್ಪಾ"

ಎಂದು ಸೀತಮ್ಮ ಹೇಳಿದಳು. ಗೌಡ ಶಾಸ್ತ್ರಿಗಳ ಕಡೆ ಕರುಣಾರ್ದ್ರ ದೃಷ್ಟಿಯಿಂದ ನೋಡಿ ಕತ್ತು ತಗ್ಗಿಸಿದ. ಅವನ ಹೃದಯ ಕೃತಜ್ಞತೆಯಿಂದ ತುಂಬಿಹೋಗಿತ್ತು.

ಶಾಸ್ತ್ರಿಗಳು ಊಟಕ್ಕೆ ಹೋದರು. ಸಾಂಬ ಎಲೆ, ಅಡಿಕೆ, ಸುಣ್ಣದ ತಟ್ಟೆ ತಂದು ಗೌಡರ ಮುಂದಿಟ್ಟ.

ಪುಟ್ಟೇಗೌಡ, ರಂಗೇಗೌಡ, ಅವರ ಆಳುಗಳು ಆನಂದದಿಂದ ತಾಂಬೂಲ ಸವಿಯುತ್ತ ಕುಳಿತರು.

ಶಾಸ್ತ್ರಿಗಳು ಎರಡನೆಯ ಸಲ ಹುಳಿ ಕೇಳಿ ಹಾಕಿಸಿಕೊಂಡು, ಎರಡನೆಯ ಸಲ ಪಾಯಸ ಕೇಳಿ ಹಾಕಿಸಿಕೊಂಡದ್ದನ್ನು ನೋಡಿ ಸೀತಮ್ಮನಿಗೆ ಅಪಾರ ಆನಂದವಾಯಿತು. ಗಂಡನೆದುರಿಗೆ ಹೇಳಿದಳು

"ಮಾವನವರು ಹೀಗೆ ಊಟಮಾಡಿ ಬಹಳ ದಿವಸಗಳಾಗಿದ್ದವು."

"ಹೌದು. ಇವತ್ತು ಅವನ ಮನಸ್ಸು ಬಹಳ ಸಂತೋಷವಾಗಿದೆ."

"ಇವತ್ತು ಅಷ್ಟೋತ್ತರ ಮಾಡಿದ್ದು ನೋಡಿದಿರಾ ?"

"ನೋಡಿದೆನಲ್ಲ. ಏನು ವಿಶೇಷ ?"

"ಮಾವನವರು ಪರವಶರಾಗಿದ್ದರು."

"ಚಲುವಾಚಾರೀಗೆ ಒಳ್ಳೆಯದಾಗಲಿ ಎಂದು ಅಮ್ಮನವರನ್ನು ಪ್ರಾರ್ಥಿಸುತ್ತಿದ್ದ."

ಎಂದ. ಶಾಸ್ತ್ರಿಗಳು ಕೈತೊಳೆದುಕೊಂಡು ಅಡಿಗೆಯ ಮನೆಗೆ ಬಂದು

"ಅಮ್ಮಯ್ಯಾ, ನೀನು ಕುಳಿತುಕೊಳ್ಳಮ್ಮ. ನಾನು ಬಡಿಸುತ್ತೇನೆ" ಎಂದರು. ಸೀತಮ್ಮ ನಸುನಾಚಿ

"ಬೇಡಿ. ನೀವು ವಿಶ್ರಾಂತಿ ತೆಗೆದುಕೊಳ್ಳಿ. ನಾನು ಬಡಿಸಿಕೊಂಡು ಊಟಮಾಡುತ್ತೇನೆ"

"ನಿನ್ನ ಕೈಯಲ್ಲಿ ನೀನೇ ಬಡಿಸಿಕೊಂಡರೆ ಅನ್ನ ಸೇರುವುದಿಲ್ಲ ಕಣೇ ತಾಯೀ. ವಿಪರೀತ ಹೊತ್ತಾಗಿದೆ."

"ಇವತ್ತು ದಿನಕ್ಕಿಂತಲೂ ನಾನು ಹೆಚ್ಚು ಊಟಮಾಡುತ್ತೇನೆ. ಯೋಚನೆ ಮಾಡಬೇಡಿ".

"ಹುಚ್ಚು ಹುಡುಗಿ – ತಾನು ಹಿಡಿದಿದ್ದೇ ಹಟ. ವಿಶ್ವೇಶ್ವರಾ— ಅಮ್ಮಯ್ಯನ ಊಟವಾಗುವವರೆಗೆ ನೀನು ಜತೆಯಲ್ಲಿದ್ದು ಬಾ. ಇವತ್ತು ಅವಳು ನಾಲ್ಕು ಹೋಳಿಗೆ ತಿಂದ ಹೊರತೂ ನನಗೆ ಸಮಾಧಾನವಿಲ್ಲ."

ಎಂದು ಹೇಳಿ ಹೋದರು.

ಶಾಸ್ತ್ರಿಗಳು ಮಾಡಿದ ಸಾಹಸದ ವಿಷಯ ನಾಗಪ್ಪ ಸಾಂಬನ ಬಾಯಿಂದ ಕೇಳಿ ಆಶ್ಚರ್ಯಪಟ್ಟ.

"ಶಾಸ್ತ್ರಿಗಳನ್ನು ನಾನು ಏನೋಂತಿದ್ದೆ. ತುಂಬ ಗಟ್ಟಿಗರು....... ಆದರೆ......."

"ಏನು ಆದರೆ ಎಂದು ಮೂಗೆಳೆಯುತ್ತೀರಲ್ಲಾ ನಾಗಪ್ಪಣ್ಣ ?"

"ಇದು ಇಲ್ಲಿಗೇ ಮುಕ್ತಾಯವಾಗಲ್ಲಾ ಸಾಂಬಣ್ಣ. ಕಾಳಾಚಾರಿ ತನಗಾದ ಸೋಲನ್ನು ಮುಖ ಕೆಳಗೆ ಮಾಡಿ ಸಹಿಸುವವನಲ್ಲ."

"ಅಣ್ಣಯ್ಯನ ಮೇಲೆ ಪ್ರತೀಕಾರ ಕೈಗೊಳ್ಳುತ್ತಾನೆಯೇ ?

"ಅವನು ಹೀಗೇ ಮಾತಾಡುತ್ತಾನೆಂದು ಊಹಿಸುವುದು ಕಷ್ಟ. ಆದರೆ ಈ ವ್ಯವಹಾರದಿಂದ ಶಾಸ್ತ್ರಿಗಳಿಗೆ ತೊಂದರೆಯಾಗದಿದ್ದರೆ ಸಾಕು."

"ಅಣ್ಣಯ್ಯನಿಗೆ ಅವನು ಏನಾದರೂ ಮಾಡಿದರೆ ನಾವು ಅವನನ್ನು ಜೀವದೊರಸೆ ಬಿಡುತ್ತೇವೆಯೇ ?"

"ಈಗ ನೀವು ಯಾರೂ ಅವನನ್ನು ಏನೂ ಮಾಡಲು ಸಾಧ್ಯವಿಲ್ಲ ಸಾಂಬಣ್ಣ. ಅವನ ಶಕ್ತಿ ರಾಕ್ಷಸ ಶಕ್ತಿಯಾಗಿದೆ."

"ಈ ಮುಳ್ಳನ್ನು ಕಿತ್ತೆಗೆಯುವುದು ಹೇಗೆ ?"

"ಮುಳ್ಳನ್ನು ಮುಳ್ಳಿನಿಂದಲೇ ಕಿತ್ತೊಗೆಯಬೇಕು."

"ನೀವು ಯಾವಾಗಲೂ ಒಗಟೆಯಲ್ಲೇ ಮಾತಾಡುವಿರಿ. ಇದಕ್ಕೆ ಏನು ಮಾಡಬೇಕು ? ನಾನು ಏನಾದರೂ ಮಾಡಲು ಸಾಧ್ಯವೇ ಸ್ಪಷ್ಟ ವಾಗಿ ಹೇಳಬಾರದೇ ?"

"ಅವಸರ ಪಡುವ ವಿಷಯುವಲ್ಲ ಸಾಂಬಣ್ಣ. ತಡೀ, ಎಲ್ಲದಕ್ಕೂ ಕಾಲ ಬರಬೇಕು. ಮಹಾತಾಯಿ ಕಣ್ಣುಬಿಟ್ಟು ನೋಡುವವರೆಗೆ ಯಾರ ಪ್ರಯತ್ನವೂ ಸಫಲವಾಗುವುದಿಲ್ಲ."

'ಮಹಾತಾಯಿ ಕಣ್ಣುಬಿಟ್ಟು ನೋಡುವುದು ಯಾವಾಗ' ಎಂದು ಚಿಂತಿಸುತ್ತ ಸಾಂಬ ಮೃದಂಗಕ್ಕೆ ಕೈಹಾಕಿದ.

೧೧

ಮಾರನೆಯ ದಿನ ಮಧ್ಯಾಹ್ನ ಶಾಸ್ತ್ರಿಗಳು ಸ್ನಾನಮಾಡುತ್ತಿದ್ದರು. ಸಾಂಬ ಬಂದು

"ಚಲುವಾಚಾರ್ರು ಯಾರನ್ನೊ ಕಳಿಸಿದ್ದಾರೆ?"

"ಏನು ಸಮಾಚಾರ ವಿಚಾರಿಸು?"

"ನಿಮ್ಮಲ್ಲಿಯೇ ಹೇಳಬೇಕಂತೆ. ಆಚಾರ್ರ ಕಡೆಯವನು ಕಾದಿದ್ದಾನೆ."

"ಸ್ನಾನ ಮಾಡಿದ್ದೀನಲ್ಲೋ? ಇರಲಿ – ಕೂತುಕೋ ಹೇಳು— ಬಂದೆ."

ಎಂದು ಮಡಿಯಲ್ಲೇ ಶಾಸ್ತ್ರಿಗಳು ಹೊರಗೆ ಬಂದರು. ಚಲುವಾಚಾರ್ರ ಕಡೆಯವನು ಶಾಸ್ತ್ರಿಗಳಿಗೆ ಅಡ್ಡಬಿದ್ದೆದ್ದು ಕೈಮುಗಿದು ನಿಂತುಕೊಂಡ.

"ಏನಪ್ಪಾ ಸಮಾಚಾರ. ಆಚಾರ್ರು ಚೆನ್ನಾಗಿದ್ದಾರೆಯೇ?"

"ಚೆನ್ನಾಗವ್ರೆ."

"ನೀನೇನಾಗಬೇಕು ಅವರಿಗೆ?"

"ಆಚಾರ್ರ ಅಳಿಯನ ಸೋದರಮಾವ ನಾನು."

"ಇಷ್ಟು ಬಿಸಿಲಿನಲ್ಲಿ ಬಂದೆಯಲ್ಲಪ್ಪಾ – ಏನು ವಿಶೇಷ?"

"ಪ್ರಸ್ತದ ಏರ್ಪಾಟು ಮಾಡಿದೆವು."

"ಮುಂದೆ........?"

"ವಧೂವರರನ್ನು ಒಳಕ್ಕೆ ಕಳಿಸಿದ್ದೂ ಆಯಿತು. ಹೆಂಗಸರು ಆರತಿ ಅಕ್ಷತೆಮಾಡಿ ಹೊರಗೆ ಬಂದರು. ವಧು ವರನನ್ನು ನೋಡಿ ಹುಚ್ಚು

ಹುಚ್ಚಾಗಿ ಆಡಲಾರಂಭಿಸಿದಳು. ವರ ಗಾಬರಿಯಾಗಿ ಕೂಗಿಕೊಂಡ. ಹೊರಗೆ ಊಟದ ಏರ್ಪಾಟು ಮಾಡುತ್ತಿದ್ದ ನಾವು ಒಳಗೆ ಹೋದೆವು. ವಧು ತಲೆ ಬಿರಿಹುಯ್ದುಕೊಂಡು, ಕೆಂಗಣ್ಣು ಮಾಡಿಕೊಂಡು ರಕ್ಕಸಿಯ ಹಾಗೆ ನಿಂತಿದ್ದಳು. ಎಲ್ಲರೂ ಸಮಾಧಾನ ಹೇಳಿದೆವು. ಚಲುವಾಚಾರ್ರು ಮಗಳನ್ನು ಸಮಾಧಾನಪಡಿಸಲೆತ್ನಿಸಿದರು. ಅವರ ಮೇಲೆ ಹುಲಿಯಹಾಗೆ ಬಿದ್ದಳು. ಆಚಾರ್ರನ್ನು ಕೆಳಗೆ ಕೆಡವಿ ಅವರ ಕುತ್ತಿಗೆ ಹಿಸುಕಲಾರಂಭಿಸಿದಳು. ನಾವುಗಳೆಲ್ಲಾ ಇಲ್ಲದಿದ್ದರೆ ಆಚಾರ್ರು ಸ್ವಾಮಿಪಾದ ಸೇರುತ್ತಿದ್ದರು. ಊರಿನ ಪೂಜಾರಿ ಬರಮಾಡಿಕೊಂಡು ಪೂಜೆ ಹಾಕಿಸಿದೆವು. ಏನೂ ಸಾರ್ಥಕವಾಗಲಿಲ್ಲ. ಸುಮಾರು ಒಂದು ಗಂಟೆಯಕಾಲ ಈ ರೀತಿಯಾಯಿತು. ಹಾರಾಡುತ್ತ, ಚೀರಾಡುತ್ತ ವಧು ನೆಲದಮೇಲೆ ಬಿದ್ದುಬಿಟ್ಟಳು. ಅವಳ ಬಾಯಲ್ಲಿ ರಕ್ತದ ಕಾಲುವೆ ಹೊರಟಿತು. ಎರಡು ಕೊಡದಷ್ಟು ರಕ್ತ ಹೋಗಿರಬಹುದು. ವಧು ನಿಶ್ಯಕ್ತಳಾದಳು. ಸ್ವಲ್ಪ ಹೊತ್ತಿನಮೇಲೆ ಆಕೆಯ ಪ್ರಾಣ ಹೋಯಿತು—ಈ ಸುದ್ದಿ ತಮಗೆ ಮುಟ್ಟಿಸಿಬಾರೆಂದು ಚಲುವಾಚಾರ್ರು ಕಳಿಸಿದ್ದಾರೆ.”

ಶಾಸ್ತ್ರಿಗಳು ಅವಾಕ್ಕಾಗಿ ಕುಸಿದು ಕುಳಿತುಬಿಟ್ಟರು. ಚಲುವಾಚಾರ್ರ ಸಂಬಂಧಿಗೆ ಸಮಾಧಾನದ ಒಂದು ಮಾತು ಹೇಳುವುದೂ ಅವರಿಗೆ ಸಾಧ್ಯವಾಗಲಿಲ್ಲ.

ಸ್ವಲ್ಪ ಹೊತ್ತು ಕಳೆಯಿತು. ಶಾಸ್ತ್ರಿಗಳು ಸ್ವಲ್ಪ ಚೇತರಿಸಿಕೊಂಡು

“ದೈವಸಂಕಲ್ಪ, ಮನುಷ್ಯ ಸಂಕಲ್ಪಕ್ಕಿಂತ ದೊಡ್ಡದು”

ಎಂದರು.

“ಮುಂದೇನು ಮಾಡುವುದು ಸ್ವಾಮಿ”

ಎಂದು ಆಚಾರ್ರ ಕಡೆಯವನು ಕೇಳಿದ.

“ನಾನು ಏನು ಹೇಳಲಪ್ಪಾ. ನನ್ನ ಬುದ್ಧಿಗೆ ಬರಸಿಡಿಲು ಬಡಿದಿವೆ. ಆಚಾರ್ರನ್ನು ಇಲ್ಲಿಗೆ ಅನುಕೂಲವಾದಾಗ ಬಂದುಹೋಗಿ ಎಂದು ಹೇಳು”

ಎಂದರು. ದೂತ ಶಾಸ್ತ್ರಿಗಳ ಅಪ್ಪಣೆ ಪಡೆದು ಊರಿಗೆ ಹೊರಟ.

ತಲೆಯಮೇಲೆ ಕೈಹೊತ್ತು ದುಃಖಿಸುತ್ತ ಕುಳಿತಿದ್ದ ತಂದೆಯನ್ನು ನೋಡಿ ಸಾಂಬ

" ನೀನು ಮತ್ತೆ ಸ್ನಾನಮಾಡಬೇಕಾಯಿತು ".

" ಮಾಡುತ್ತೇನಪ್ಪಾ. ನಾನೇ ಚಲುವಾಚಾರ್ರ ಮಗಳನ್ನು ಕೈಯಾರೆ ಕೊಂದಹಾಗಾಯಿತು."

" ನೀನೇನುಮಾಡಿದೆ ಅಣ್ಣಯ್ಯಾ. ಅವರ ಹಿತಕ್ಕೆ ಎಲ್ಲ ಮಾಡಿದೆ. ಸಾರ್ಥಕವಾಗಲಿಲ್ಲ."

" ಕೊನೆಗೂ ಕಾಳಾಚಾರಿ ತನ್ನ ಕೈ ತೋರಿಸಿಯೇ ಬಿಟ್ಟ. ಅವನ ಶಕ್ತಿ ಇಷ್ಟುದೂರ ವ್ಯಾಪಿಸಬಲ್ಲುದು ಎಂದು ನಾನು ಯೋಚಿಸಿರಲಿಲ್ಲ."

" ಇವಕ್ಕೇನೂ ಪರಿಹಾರವಿಲ್ಲವೇ ? "

" ಇರಬಹುದು – ನನ್ನ ಬುದ್ಧಿಗೆ ಹೊಳೆಯುತ್ತಿಲ್ಲ. "

" ಏಳಣ್ಣಾ – ಹೊತ್ತುಮಿಾರಿತು. ಸ್ನಾನಮಾಡು ".

ಎಂದು ತಂದೆಯನ್ನು ಎಬ್ಬಿಸಿ ಸ್ನಾನಕ್ಕೆ ಕರೆದುಕೊಂಡುಹೋದ.

ಪುಟ್ಟೇಗೌಡನಿಗೆ ಸುದ್ದಿ ತಿಳಿದಕೂಡಲೇ ಅವನೂ ಬಂದು ಶಾಸ್ತ್ರಿಗಳಿಗೆ ಸಮಾಧಾನ ಹೇಳಿದ. ಯಾರು ಏನು ಹೇಳಿದರೂ ಶಾಸ್ತ್ರಿಗಳ ಮನಸ್ಸಿಗೆ ಸಮಾಧಾನವಾಗಲಿಲ್ಲ. ಪದೇಪದೆ ಅವರ ಬಾಯಿಂದ ' ನಾನೇ ಚಲುವಾಚಾರ್ರ ಮಗಳನ್ನು ಕೈಯಾರೆ ಕೊಂದಹಾಗಾಯಿತು '

ಎಂಬ ಉದ್ಗಾರ.

ತಂದೆ ಮನೋರೋಗದಿಂದ ಹಾಸಿಗೆ ಹಿಡಿದು ಮಲಗಿಬಿಡುತ್ತಾರೆಂದು ಸಾಂಬನ ಮನಸ್ಸಿಗೆ ಖಚಿತವಾಯಿತು. ಸಂಜೆಯವರೆಗೂ ಅವನು ಮನೆ ಬಿಡಲಿಲ್ಲ. ಪುಟ್ಟೇಗೌಡ ಮನೆಗೆ ಹೋಗಿದ್ದವನು ಪುನಃ ಬಂದು ಶಾಸ್ತ್ರಿಗಳ ಜತೆ ಮಾತನಾಡುತ್ತಾ ಕುಳಿತ. ವಿಶ್ವೇಶ್ವರನೂ ಮನೆಗೆ ಬರುವ ಹೊತ್ತಾಗಿತ್ತು. ಸಾಂಬ ಅತ್ತಿಗೆಗೆ ತಿಳಿಸಿ ಮನೆಯಿಂದ ಹೊರಟ.

ಮನೆಯಿಂದ ಹೊರಟ ಸಾಂಬನಿಗೆ ಸಂತೇಹಳ್ಳಿ ತಲುಪಿದ ಮೇಲೇ ಎಚ್ಚರ. ಅವನ ಉದ್ವೇಗ ಕಂಡು ನಾಗಪ್ಪ ಗಾಬರಿಯಾಗಿ

" ಏನು ಸಮಾಚಾರ ಸಾಂಬಣ್ಣ " ಎಂದ.

ಸಾಂಬನ ಬಾಯಲ್ಲಿ ಮಾತು ಹೊರಡಲಿಲ್ಲ. ಕಣ್ಣಿನಿಂದ ಪಳಪಳನೆ ಹನಿಗಳುದುರಿದವು. ಸಾಂಬ ಕಣ್ಣೀರು ಹಾಕಿದುದನ್ನು ನಾಗಪ್ಪ ಕಂಡೇ

ಇರಲಿಲ್ಲ. ಅವನನ್ನು ಇಷ್ಟು ಹಿಡಿದಲುಗಿಸಿರುವ ವಿಷಯ ಮಹತ್ವದ್ದಾಗಿ ರಬೇಕೆಂದು ನಾಗಪ್ಪ ಗ್ರಹಿಸಿ

"ಏನಾಯಿತು ಸಾಂಬಣ್ಣ."

"ಆಗಬಾರದಾಯಿತು ನಾಗಪ್ಪಣ್ಣ. ಹೇಳಿಯೇನು ಪ್ರಯೋಜನ? ತಂದೆಯವರು ಭೂಮಿಗಿಳಿದು ಹೋಗಿದ್ದಾರೆ. ಅವರಿಗೆ ಇದೇ ಮನೋ ರೋಗವಾಗಿಬಿಡುತ್ತದೋ ಏನೋ?"

"ವಿಷಯ ತಿಳಿಸಬಾರದೇ?"

ಚಲುವಾಚಾರಿ ಮಗಳ ವೃತ್ತಾಂತವನ್ನು ಸಾಂಬ ಬಹಳ ಕಷ್ಟದಿಂದು ಸುರಿದ.

"ಕಾಳಾಚಾರಿ ಮಹಾರಾಕ್ಷಸನಪ್ಪಾ. ಅವನ ಶಕ್ತಿಯ ಮುಂದೆ ಎದುರೇ ಇಲ್ಲ."

"ನಾವೆಲ್ಲಾ ಹೋಗಿ ಅವನಿಗೆ ಶರಣಾಗತರಾಗೋಣವೇ?"

"ಅಂತಹದೇನು ಬಂದಿರುವುದು?"

"ಇನ್ನು ಕಾಳಾಚಾರೀಗೆ ಯಾರ ಲಕ್ಷ್ಯ? ಕಾಳಾಚಾರಿ ಭಯಕ್ಕೆ ಚಲು ವಾಚಾರಿ ಊರು ಬಿಟ್ಟದ್ದು ತಂದೆಯವರ ಸಹಾಯದಿಂದ ಎಂದು ಎಲ್ಲರಿಗೂ ಗೊತ್ತು. ಶಾಸ್ತ್ರಿಗಳ ಬಂಡವಾಳ ಇಷ್ಟೇನೇ ಎಂದು ಜನ ಆಡಿಕೊಳ್ಳುವು ದಿಲ್ಲವೇ – ಜನದ ಮಾತು ಹಾಗಿರಲಿ – ಕಾಳಾಚಾರಿ ಏನು ಭಾವಿಸಿಕೊಳ್ಳ ಬಹುದು ಯೋಚನೆಮಾಡಿ."

"ನೀನು ಹೇಳುವುದು ಸತ್ಯ ಸಾಂಬಯ್ಯ. ನನ್ನ ಏನು ಮಾಡೂಂತ ಹೇಳುತ್ತೀ?"

"ಇದಕ್ಕೆ ಪರಿಹಾರವಿದೆ – ಪರಿಹಾರ ಮಾಡಬಲ್ಲ ಕರ್ತ ಇನ್ನೂ ಮನಸ್ಸು ಮಾಡಿಲ್ಲ ಎಂದು ಹಿಂದೊಮ್ಮೆ ಹೇಳಿದ್ದಿರಿ – ನೆನಪಿದೆಯೇ?"

"ಇದೆ."

"ಆ ಕರ್ತ ಯಾರು. ನೀವು ತಿಳಿಸಲೇಬೇಕು. ಇನ್ನವನು ತಲೆ ಮರೆಸಿಕೊಂಡು ಕೂಡಲು ಸಾಧ್ಯವಿಲ್ಲ."

"ಅವನು ದೂರವಿಲ್ಲ ಸಾಂಬಣ್ಣ – ಹತ್ತಿರದಲ್ಲೇ ಇದ್ದಾನೆ."

"ಯಾರು ಹೇಳಿ."

ನಾಗಪ್ಪ ಅನುಮಾನಿಸಿ ಅನುಮಾನಿಸಿ ಕೇಳಿದ

"ಹೇಳಲೇ ಬೇಕೇ?"

"ಇನ್ನೂ ಆ ಪ್ರಶ್ನೆ ಕೇಳುವಿರಾ?"

"ಯಾರೂ ಅಲ್ಲ ಸಾಂಬಣ್ಣ - ನೀನೇ!"

"ನಾನೇ! ನಾನೇ!!"

ಎಂದು ಸಾಂಬ ಆಶ್ಚರ್ಯಚಕಿತನಾಗಿ ಕೇಳಿದ. ನಾಗಪ್ಪ ಹೌದೆಂದು ತಲೆಯಲ್ಲಾಡಿಸಿದ.

"ನನ್ನ ಕೈಯಲ್ಲಿ ಸಾಧ್ಯವಾಗುವ ಕೆಲಸವಾಗಿದ್ದರೆ ಈವರೆಗೆ ಮಾಡಿಸದೆ ಏಕೆ ಸುಮ್ಮನಿದ್ದಿರಿ?"

"ಶಾಸ್ತ್ರಿಗಳ ಸಲುವಾಗಿ. ದೇವರಂಥ ಅವರ ಮನಸ್ಸು ನೋಯಿಸುವುದಕ್ಕೆ ನಾನು ಇಷ್ಟಪಡಲಿಲ್ಲ."

"ಈಗ ಅವರ ಮನಸ್ಸಿಗೆ ನೆಮ್ಮದಿಯಾಗಿದೆಯೇ? ಆ ಮಾತು ಹೋಗಲಿ. ಈಗ ನಾನೇನು ಮಾಡಬೇಕು ಹೇಳಿ."

"ಇದು ಅವಸರದಲ್ಲಿ ಆಗುವ ಕೆಲಸವಲ್ಲ ಸಾಂಬಯ್ಯ. ಅನೇಕ ತಿಂಗಳು ಹಿಡಿಯಬಹುದು - ವರ್ಷಗಳಾಗಬಹುದು. ಆದರೆ ಇತರರಿಗೆ ಒಂದು ತಿಂಗಳಿಗೆ ಸಾಧ್ಯವಾಗುವುದು ನಿನಗೆ ಹದಿನೈದು ದಿವಸಕ್ಕೆ ಸಾಧ್ಯವಾಗುತ್ತದೆಂದು ನಾನು ಧೈರ್ಯವಾಗಿ ಹೇಳಬಲ್ಲೆ."

"ಏನದು ಹೇಳಿ. ನಾನು ಸಿದ್ಧನಾಗಿದ್ದೇನೆ."

"ತಂದೆಯ ಅನುಮತಿ ದೊರಕಿಸುವೆಯಾ?"

"ಸದ್ಯಕ್ಕೆ ಅವರ ಕಿವಿಯಮೇಲೆ ಯಾವ ಸುದ್ದಿಯೂ ಬೀಳಕೂಡದು."

"ನಿನ್ನ ಇಷ್ಟ. ಈಗಲೂ ಯೋಚನೆ ಮಾಡು. ಮುಂದಿಟ್ಟ ಅಡಿಯನ್ನು ಹಿಂದಕ್ಕೆ ಕೀಳಲಾಗುವುದಿಲ್ಲ."

"ತಾನು ಹಿಮ್ಮೆಟ್ಟುವುದಿಲ್ಲ."

"ಮನೆ, ಮಠ, ತಂದೆ, ಅಣ್ಣ, ಅತ್ತಿಗೆ ಎಲ್ಲರನ್ನೂ ತೊರೆಯಬೇಕಾಗುತ್ತದೆ."

"ನಾನು ಸಿದ್ಧನಾಗಿದ್ದೇನೆ."

"ಉಗ್ರದೇವತೆಯ ಉಪಾಸನೆ ಮಾಡಬೇಕಾಗುತ್ತದೆ."

"ಆಗಬಹುದು."

"ಅಭಕ್ಷ್ಯಭೋಜನ, ಅಪೇಯಪಾನ ಮಾಡಬೇಕಾಗುತ್ತದೆ."

"ಏನು ಬೇಕಾದರೂ ಮಾಡಲು ಸಿದ್ಧ. ಯಾವ ದೇವರ ಮೇಲೆ ಆಣೆಮಾಡಿ ಹೇಳಲಿ ತಿಳಿಸಿ."

"ಆಣೆ ಪ್ರಮಾಣ ಬೇಕಿಲ್ಲ. ನನಗೆ ನಿನ್ನ ಮಾತೇ ಸಾಕು."

"ಎಂದಿನಿಂದ ಆರಂಭಿಸುವಿರಿ."

"ನಾಳೆ ನಾಡಿದ್ದು ಎರಡು ದಿನ ಹೋಗಲಿ. ಶುಕ್ರವಾರದಿಂದ ದೇವೀ ಪೂಜೆಗೆ ಆರಂಭಿಸುವೆಯಂತೆ."

"ಶುಕ್ರವಾರ ನಾನು ಎಷ್ಟುಹೊತ್ತಿಗೆ ಬರಬೇಕು."

"ಉಷಃಕಾಲಕ್ಕೆ ಬಂದರಾಯಿತು."

"ಒಳ್ಳೆಯದು"

ಎಂದು ಹೇಳಿ ನಾಗಪ್ಪನಿಂದ ಬೀಳ್ಕೊಂಡು ಮನೆ ಮುಟ್ಟಿದ.

ಶಾಸ್ತ್ರಿಗಳು ಪುಟ್ಟೇಗೌಡನೊಂದಿಗೆ ಮಾತನಾಡುತ್ತಾ ಜಗುಲಿಯ ಮೇಲೆ ಕುಳಿತಿದ್ದರು. ಸಾಂಬ ಬಂದುದನ್ನು ಕಂಡು

"ಎಲ್ಲಿಗೆ ಹೋಗಿದ್ದೆಯಪ್ಪಾ" ಎಂದರು.

"ಹೀಗೇ ತಿರುಗಾಡಿಕೊಂಡು ಬರುವುದಕ್ಕೆ."

"ಇವತ್ತು ಮೃದಂಗ ಮುಟ್ಟಲೇ ಇಲ್ಲ."

"ಏನೋ ಬೇಡವಾಯಿತು."

"ಹೋಗಲಿ ಬಿಡು. ವಿಶ್ವೇಶ್ವರನನ್ನು ಸ್ನಾನಮಾಡು ಎಂದು ಹೇಳು. ನಾನೂ ಬರುತ್ತೇನೆ"

ಎಂದರು. ವಿಶ್ವೇಶ್ವರನಿಗೆ ಸುದ್ದಿ ತಲುಪಿಸುವುದಕ್ಕೆ ಸಾಂಬ ಒಳಕ್ಕೆ ಹೋದ.

೧೨

ರಾತ್ರಿ ಊಟ ಮುಗಿಸಿ ಮಲಗಿದ ಮೇಲೆ ಸಾಂಬನಿಗೆ ಸ್ವಲ್ಪವೂ ನಿದ್ರೆ ಹತ್ತಲಿಲ್ಲ. ಕಳವಳ. ಅತಿಯಾದ ದುಃಖ ಅವನ ಮನಸ್ಸನ್ನು ಹಿಂಡಿ ಬಿಟ್ಟಿತ್ತು. ಮೂರು ನಾಲ್ಕು ಬಾರಿ ಎದ್ದು ಹೊರಗೆ ಹೋಗಿ ತಿರುಗಾಡಿ ಕೊಂಡು ಬಂದ. ಅವನೊಮ್ಮೆ ಎದ್ದು ಹೊರಗೆ ಹೋಗಿ ಹಿಂದಕ್ಕೆ ಬಂದು ದನ್ನು ಕಂಡು ಶಾಸ್ತ್ರಿಗಳು

“ ಏಕೋ ಸಾಂಬ, ನಿದ್ರೆ ಬರುವುದಿಲ್ಲವೇನೋ ? ”

“ ಇಲ್ಲ, ಇವತ್ತೇಕೋ ತುಂಬ ಶೆಖೆಯಾಗಿದೆ. ”

“ ಹೂ ! ಸ್ವಲ್ಪ ಶೆಖೆಯೇ ? ಮಲಗಿಕೋಪ್ಪ, ಕಣ್ಣು ಹತ್ತುತ್ತದೆ.”

ಸಾಂಬ ಹೋಗಿ ಮಲಗಿ ಬೆಳಗಾದೀತೇ ಎಂದು ಜಪಮಾಡ ತೊಡಗಿದ.

ಸಾಂಬನ ಅಸ್ತವ್ಯಸ್ತ ಸ್ಥಿತಿಯನ್ನು ಮಾರನೆಯ ದಿನ ಸೀತಮ್ಮ ಗಮನಿಸಿ, ಕೇಳಿದಳು

“ ಏನಪ್ಪಾ ಯೋಚನೆ ಸಾಂಬಣ್ಣ. ಬಹಳ ದೀರ್ಘವಾಗಿ ಆಲೋಚನೆ ಮಾಡುತ್ತಿರುವೆಯಲ್ಲಾ ? ”

“ ಏನೂ ಇಲ್ಲ ಅತ್ತಿಗೆ.”

“ ಹೇಳು. ಮದುವೆ ಯೋಚನೆ ಏನಾದರೂ ಹಿಡಿದಿದೆಯೋ ? ”

“ ನಿನಗೆ ಅದೇ ಧ್ಯಾನ.”

“ ಮದುವೆ ಯೋಚನೆಯಲ್ಲ – ಇನ್ನೇನಪ್ಪಾ.”

“ ಏನೂ ಇಲ್ಲ ಅತ್ತಿಗೆ. ಯಾರಿಗೋ ನಾಟಕವಾಡಿಸುತ್ತೇನೆ ಎಂದು ಹೇಳಿದ್ದೆ. ಹೋಗಲಿಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ.”

“ ಏಕೆ ಹೋಗಲಿಲ್ಲ.”

“ ಅವರಿಗೂ ನನಗೂ ಮಾತು ಬಂತು.”

“ ಯಾರ ಹತ್ತಿರವೂ ವ್ಯಾಜ್ಯ ಕಟ್ಟಿಕೊಳ್ಳಬೇಡ ಮಗೂ, ಕಾಲ ಚೆನ್ನಾಗಿಲ್ಲ. ಯಾರ ಯಾರ ಮನಸ್ಸಿನಲ್ಲಿ ಏನಿದೆಯೋ ಹೇಳುವುದ ಕ್ಕಾಗುವುದಿಲ್ಲ.”

"ಇಲ್ಲ ಅತ್ತಿಗೆ- ನೀನು ನಿಶ್ಚಿಂತಳಾಗಿರು"

ಎಂದು ಹೇಳಿದ.

ರಾತ್ರಿ ಶೆಖೆಯ ನೆಪಹಾಕಿ ಜಗುಲಿಯ ಮೇಲೆ ಹಾಸಿಕೊಂಡು ಮಲಗಿದ.

ಮಾರನೆಯ ದಿನವಿನ್ನೂ ಸಾಂಬ ಬಹಳ ಕಷ್ಟದಿಂದ ನೂಕಿದ.

ಶುಕ್ರವಾರ ಬೆಳಿಗ್ಗೆ ನಾಲ್ಕುಗಂಟೆಗೇ ಎದ್ದು ಊರಹೊರಗಿನ ಇಳಿಯುವ ಕೊಳದಲ್ಲಿ ಸ್ನಾನಮಾಡಿ ಉಷಃಕಾಲಕ್ಕೆ ಮುಂಚೆಯೇ ಸಂತೇಹಳ್ಳಿ ತಲುಪಿ ನಾಗಪ್ಪನ ಮುಂದೆ ನಿಂತ.

ಶುದ್ಧಸ್ನಾತನಾಗಿ, ತ್ರಿಪುಂಡ್ರ ಧರಿಸಿ, ಸಾಕ್ಷಾತ್ ಪರಮೇಶ್ವರನ ಹಾಗೆ ಎದುರು ಬಂದು ನಿಂತ ಸಾಂಬನನ್ನು ನೋಡಿ ನಾಗಪ್ಪ ಮನಸ್ಸಿನಲ್ಲಿಯೇ ವಂದಿಸಿದ.

"ನಾನು ಬರುವುದಿಲ್ಲವೆಂದು ಭಾವಿಸಿದ್ದಿರಾ?"

"ಇಲ್ಲ, ಖಂಡಿತ ಬರುವೆಯೆಂದು ನನಗೆ ನಂಬಿಕೆಯಿತ್ತು."

"ಇವತ್ತು ಪೂಜೆ ಆರಂಭಿಸುವುದು ತಾನೇ?"

"ಎಲ್ಲಾ ಸಿದ್ಧಮಾಡಿದ್ದೇನೆ."

ಕಳಶ ಸ್ಥಾಪನೆಯಾಗಿತ್ತು. ಅದರ ಮುಂದೆ ನಾಗಪ್ಪ ಬಗೆಬಗೆಯ ಬಣ್ಣದ ಅಕ್ಕಿಯಿಂದ ಚಕ್ರಗಳನ್ನೂ ಬೀಜಮಂತ್ರಗಳನ್ನೂ ಬರೆದಿದ್ದ. ನೈವೇದ್ಯ, ಪೂಜಾದ್ರವ್ಯಗಳು ಒಂದೆಡೆ ರಾಶಿ ಬಿದ್ದಿದ್ದವು.

ನಾಗಪ್ಪ ಸಾಂಬನನ್ನು ಕಳಶದ ಮುಂದೆ ಕೂಡಿಸಿ ಪೂಜೆಯಾರಂಭಿಸಿದ.

ಪೂಜೆ ಮುಗಿಯುವ ವೇಳೆಗೆ ಅಪರಾನ್ಹವಾಗಿತ್ತು. ನಾಗಪ್ಪ ಹೇಳಿದ

"ಸಾಂಬಯ್ಯ, ಇವತ್ತು ನೀನು ಪೂರ್ತಿ ಉಪವಾಸ ಮಾಡಬೇಕು."

"ಆಗಬಹುದು."

"ಸ್ವಲ್ಪ ಹಾಲು ಬೇಕಾದರೆ ತೆಗೆದುಕೋ."

"ಅದು ತಾನೇ ಏಕೆ?"

ಎಂದು ಹೇಳಿ ಊರು ಕಡೆ ಹೊರಟ.

ಅಂದು ಊಟ ತಪ್ಪಿಸಿಕೊಳ್ಳಬೇಕಾದರೆ ಸಾಂಬನಿಗೆ ಸಾಕುಸಾಕಾಗಿ

ಹೋಯಿತು. ಸೀತಮ್ಮ ಬಲವಂತಮಾಡಿ ಒಂದು ಪಂಚಪಾತ್ರೆ ಹಾಲು ಕುಡಿಸಿದಳು.

ಪ್ರತಿದಿನ ಹೊತ್ತಿಗೆ ಮುಂಚೆ ಎದ್ದು ಸಾಂಬ ಸಂತೇಹಳ್ಳಿಗೆ ಬಂದು ಪೂಜೆ ಮುಗಿಸಿಕೊಂಡು ಅಪರಾಹ್ನದ ವೇಳೆಗೆ ಮನೆಗೆ ಹಿಂದಿರುಗುತ್ತಿದ್ದ. ಒಂದು ಪಕ್ಷ ಹೀಗೆ ಕಳೆಯಲು ನಾಗಪ್ಪ

"ಸಾಂಬಯ್ಯ, ನಾಳೆಯಿಂದ ದೊಡ್ಡ ಪೂಜೆ ಆರಂಭಿಸಬೇಕು. ನೀನು ರಾತ್ರಿ ಬರಬೇಕಾಗುತ್ತದೆ."

"ಆಗಲಿ ಬರುತ್ತೇನೆ."

"ಶಾಸ್ತ್ರಿಗಳು ಅನುಮಾನಪಟ್ಟುಕೊಳ್ಳುವುದಿಲ್ಲವೇ ?"

"ಅದರ ಚಿಂತೆ ಬಿಟ್ಟುಬಿಡಿ. ನಾಟಕ ಕಲಿಸುವುದಕ್ಕೆ ನಾನು ಕೈದಾಳಕ್ಕೆ ಹೋಗುತ್ತೇನೆಂದು ಹೇಳಿ ನಾಳೆ ಬೆಳಿಗ್ಗೆಯೇ ಮನೆಯಿಂದ ಹೊರಟುಬಿಡುತ್ತೇನೆ"

"ನೀನು ಇರುವುದು."

"ನಿಮ್ಮೂರಿನ ಪೂರ್ವಕ್ಕೆ ಎರಡು ಮೈಲಿ ದೂರದಲ್ಲಿ ಒಂದು ಹಾಳು ಮಂಟಪವಿದೆ. ಅಲ್ಲಿ ವಾಸಮಾಡುತ್ತೇನೆ. ಅಲ್ಲಿ ಭೂತ ವಾಸವಾಗಿದೆ ಯೆಂದು ಜನ ಸುಳಿಯುವುದಿಲ್ಲ."

"ಒಳ್ಳೆಯದು. ಯಾರಿಗೂ ಅನುಮಾನ ಬರದಂತೆ ನೀನು ಎಚ್ಚರ ವಾಗಿರಬೇಕು."

"ಆ ವಿಷಯ ನನಗೆ ಬಿಡಿ. ಪೂಜೆ ಸಾಂಗವಾಗಿ ನಡೆಯಲಿ."

ಸಾಂಬನ ಮನೋದಾರ್ಢ್ಯ ಕಂಡು ನಾಗಪ್ಪ ಆಶ್ಚರ್ಯಚಕಿತನಾದ.

ಮಾರನೆಯ ಬೆಳಿಗ್ಗೆ ಗಂಟು ಮೂಟೆ ಕಟ್ಟಿಕೊಂಡು, ಹೆಗಲಿಗೆ ಮೃದಂಗ ಹಾಕಿಕೊಂಡು ಕೈದಾಳಕ್ಕೆ ಹೋಗುತ್ತೇನೆಂದು ಹೇಳಿ ಸಾಂಬ ಮನೆಬಿಟ್ಟು ಹೊರಟುಬಿಟ್ಟ. ಅಂದೇ ಅವನು ಸಂತೇಹಳ್ಳಿ ಸಮೀಪದಲ್ಲಿದ್ದ ಹಾಳು ಮಂಟಪದಲ್ಲಿ ಬಂದು ನಿಂತ.

ರಾತ್ರಿ ಭಯಂಕರ ಪೂಜೆಯ ವ್ಯವಸ್ಥೆಯಾಗಿತ್ತು. ನಾಗಪ್ಪ ಸಾಂಬನಿಗೆ

" ಸಾಂಬಯ್ಯ – ಇವತ್ತು ನೀನು ಜನಿವಾರ ವಿಸರ್ಜಿಸಬೇಕು. "

" ಆಗಬಹುದು. "

ಎಂದು ಒಪ್ಪಿಕೊಂಡ.

ಕೃಷ್ಣಪಕ್ಷ ಪೂರ್ತಿಯಾಗಿ ಸಾಂಬನ ಪೂಜಾವಿಧಿ ಸ್ಮಶಾನದಲ್ಲಿ ಮುಂದುವರೆಯಿತು.

" ಒಂದು ಮಂಡಲ ಪೂರ್ತಿಯಾಗಲಿ "

ಎಂದು ನಾಗಪ್ಪ ಹೇಳಿದ. ಸಾಂಬ ಊರಿನ ಯೋಚನೆ ಬಿಟ್ಟು ಪೂಜೆಯನ್ನು ಮುಂದುವರಿಸಿದ.

ಮಂಡಲ ಮುಗಿದ ಮೇಲೆ ಸಾಂಬ ಒಂದು ಸಂಜೆ ಮನೆಯ ಕಡೆ ಹೊರಟ. ಮನೆ ತಲುಪಿದವನು ನೇರವಾಗಿ ಒಳಗೆ ಹೋಗದೆ ಹಿತ್ತಲು ಬಾಗಿಲಲ್ಲಿ ನಿಂತು ಅತ್ತಿಗೆಯನ್ನು ಕೂಗಿದ. ಅವನ ಧ್ವನಿ ಹಿಡಿದು ಸೀತಮ್ಮ ಹೊರಗೆ ಬಂದು, ಅವನ ಆಕಾರ ನೋಡಿ ಚಕಿತಳಾಗಿ

"ಎಲ್ಲಿಂದ ಬಂದೆಯೋ ಸಾಂಬ. ಹೊರಬಾಗಿಲಿಂದ ಏತಕ್ಕೆ ಬರಲಿಲ್ಲ."

" ಅಪ್ಪ ಎಲ್ಲಿ ಅತ್ತಿಗೆ. "

" ದೇವಸ್ಥಾನಕ್ಕೆ ಹೋಗಿದ್ದಾರೆ. ಬರುವ ಹೊತ್ತು. "

"ನಾನಿಲ್ಲೇ ಇರುತ್ತೇನೆ. ಅವರು ಬಂದಕೂಡಲೆ ಇಲ್ಲಿಗೇ ಬರಹೇಳು."

" ಒಳಗೆ ಬಾಪ್ಪ. "

" ಇಲ್ಲ ಅತ್ತಿಗೆ – ಅಪ್ಪನನ್ನು ಕೇಳದೆ ನಾನು ಒಳಗೆ ಬರುವ ಹಾಗಿಲ್ಲ."

" ನಿನ್ನ ಮಾತು ವಿಚಿತ್ರವಾಗಿದೆಯಲ್ಲ ಸಾಂಬ. "

" ಅದರರ್ಥ ಮುಂದೆ ನಿನಗೆ ಗೊತ್ತಾಗುತ್ತದೆ. ವಿಶ್ವೇಶ್ವರ ಎಲ್ಲಿ? "

" ನೀನು ಊರು ಬಿಟ್ಟು ಎಷ್ಟು ದಿವಸಗಳಾದವು. ಕೈದಾಳಕ್ಕೆ ಹೋಗಿ ನೋಡಿಕೊಂಡು ಬಾ ಎಂದು ಮಾವನವರು ಕಳಿಸಿದ್ದಾರೆ.

" ಸರಿ – ನೀನು ಒಳಕ್ಕೆ ಹೋಗಮ್ಮ. "

ಎಂದು ಹೇಳಿ ಅಲ್ಲಿಯೇ ಕುಳಿತ.

ಶಾಸ್ತ್ರಿಗಳು ಮನೆ ತಲುಪಿದ ಕೂಡಲೆ ಸೀತಮ್ಮ ಅವರಿಗೆ ಸಾಂಬ ಬಂದಿರುವ ಸುದ್ದಿ ತಿಳಿಸಿದಳು. ಶಾಸ್ತ್ರಿಗಳು ಏಳುವುದು ಬೀಳುವುದನ್ನು ನೋಡದೆ

"ಸಾಂಬ – ಎಲ್ಲಿ ಹೋಗಿಬಿಟ್ಟಿದ್ದೆಯಪ್ಪಾ – ಮಗೂ"

ಎಂದು ಸಾಂಬನ ಹತ್ತಿರ ಬಂದರು. ಸಾಂಬ ತಂದೆಗೆ

"ದೂರ ನಿಂತು ಮಾತನಾಡು ಅಣ್ಣಯ್ಯ ನನ್ನ ಮುಟ್ಟಬೇಡ"

ಎಂದ. ಶಾಸ್ತ್ರಿಗಳಿಗೆ ಮತ್ತಷ್ಟು ದುಃಖವಾಯಿತು.

"ಸ್ವಲ್ಪ ಕುಳಿತುಕೋ ಅಣ್ಣಯ್ಯ"

ಎಂದು ಸಾಂಬ ತಂದೆಗೆ ಹೇಳಿದ. ಶಾಸ್ತ್ರಿಗಳು ನೆಲದ ಮೇಲೆ ಕುಳಿತರು. ಸಾಂಬ ಯಾವದನ್ನೂ ಮರೆಮಾಜದೆ ಕೂಲಂಕಷವಾಗಿ ತಾನು ನಾಗಪ್ಪನ ಹತ್ತಿರ ವಾಮಾಚಾರ ಅಭ್ಯಾಸ ಮಾಡುತ್ತಿರುವುದನ್ನು ತಂದೆಗೆ ಹೇಳಿದ.

ಮಗನ ವಿವರಣೆ ಕೇಳಿ ಶಾಸ್ತ್ರಿಗಳು ಅವಾಕ್ಕಾದರು. ಅವರ ಕಣ್ಣಲ್ಲಿ ಧಾರೆಧಾರೆಯಾಗಿ ನೀರು ಹರಿಯಿತು.

"ಶ್ರೋತ್ರೀಯನ ಮಗ – ಹೀಗೆ ಮಾಡಬಹುದೇ ಸಾಂಬ. ನನ್ನ ಗುರುಗಳೇ ನಿನ್ನ ಮೇಲೆ ಅವತರಿಸಿ ಅನುಗ್ರಹಿಸಿದರಲ್ಲೋ?"

"ಅಪ್ಪಾ ನೀನು ಜ್ಞಾನಿ. ನಾನು ನಿನಗೇನು ಹೇಳಲು ಸಾಧ್ಯ. ಆದರೆ ಒಂದು ವಿಷಯ ಆಲೋಚಿಸು – ಕಾಳಾಚಾರಿ ಪ್ರಾಬಲ್ಯ ಮುರಿಯಬೇಕಾದುದು ನಮ್ಮ ಧರ್ಮವಲ್ಲವೇ? ಅವನ ರಾಕ್ಷಸ ವಿದ್ಯೆಗೆ ಇನ್ನೆಷ್ಟು ಜನ ಬಲಿಯಾಗಬೇಕು."

"ಅವನಿಗೆ ಪ್ರತಿಮಾಡಲು ನೀನೂ ಅದೇ ರಾಕ್ಷಸ ವಿದ್ಯೆಯನ್ನು ಅಭ್ಯಾಸ ಮಾಡುವುದೇ?"

"ನಾನು ಅಭ್ಯಾಸ ಮಾಡಿದ ವಿದ್ಯೆಯನ್ನು ರಾಕ್ಷಸ ರೀತಿಯಲ್ಲಿ ಉಪಯೋಗಿಸುವುದಿಲ್ಲ, ಆದರಿಂದ ನಾನು ಯಾರಿಗೂ ಹಿಂಸೆ ಮಾಡುವುದಿಲ್ಲವೆಂದು ನಿನ್ನ ಪಾದಮುಟ್ಟಿ ಪ್ರಮಾಣ ಮಾಡುತ್ತೇನೆ."

"ಒಳಗೆ ಬಾರೋ ಅಪ್ಪ."

"ನಾನು ಒಳಗೆ ಬರಬಾರದು. ನನಗೆ ಅಪ್ಪಣೆಕೊಡು. ವಿದ್ಯೆ ಮುಗಿಸಿ ಬಂದು ಕಾಣುತ್ತೇನೆ."

"ಎಷ್ಟು ದಿವಸಕ್ಕೆ."

"ಪ್ರಾಯಶಃ ಇನ್ನು ಆರು ತಿಂಗಳಿಗೆ."

"ಅಲ್ಲಿಯವರೆಗೆ ನಿನ್ನ ಬಿಟ್ಟು ನಾನು ಹೇಗೆ ಬಾಳಲಿ ಸಾಂಬ."

"ಅಣ್ಣಾ – ನಿನಗೂ ಮೋಹ ಹೋಗಿಲ್ಲವೇ?"

"ಹೋಗಿಲ್ಲ ಮಗೂ – ಹೋಗಿಲ್ಲ."

"ಈ ದೇಹವೆಲ್ಲಿದ್ದರೇನು. ಇದರ ಸಮಸ್ತ ಚೇತನವೂ ನಿನ್ನ ಪಾದಕ್ಕೆ ಮೀಸಲು. ನನ್ನ ಆಶೀರ್ವದಿಸಿ ಸಂತೋಷವಾಗಿ ಕಳಿಸಿಕೊಡು."

"ಹೋಗಿ ಬಾಪ್ಪ ...ವಿಶ್ವೇಶ್ವರ ನಿನಗೆ ಮಂಗಳವನ್ನುಂಟುಮಾಡಲಿ."

ಸಾಂಬ ಅತ್ತಿಗೆಯನ್ನು ಕೂಗಿದ. ಸೀತಮ್ಮ ಹೊರಗೆ ಬರಲು

"ನಾನು ಕೆಲವು ದಿವಸ ಹೋಗಿ ಬರುತ್ತೇನೆ. ಅಣ್ಣನಿಗೆ ಹೇಳಿಬಿಡು." ಎಂದ.

"ಎಲ್ಲಿಗೋ ಸಾಂಬ" ಎಂದು ಸೀತಮ್ಮ ಕೇಳಿದಳು.

"ಅದನ್ನೆಲ್ಲಾ ಅಣ್ಣಯ್ಯ ಹೇಳುತ್ತಾನೆ."

ಎಂದು ಹೇಳಿ ಒಂದು ಕ್ಷಣ ನಿಂತ.

ಅಭಿಮಾನ ಕಾಡುತ್ತಿತ್ತು. ತಂದೆಗೂ ಅತ್ತಿಗೆಗೂ ಕಾಲುಮುಟ್ಟಿ ನಮಸ್ಕಾರ ಮಾಡಬೇಕೆಂದು ಮನಸ್ಸು ತವಕಪಡುತ್ತಿತ್ತು. ಆದರೆ ನಮಸ್ಕಾರ ಮಾಡುವ ಹಾಗಿರಲಿಲ್ಲ.

ಸಾಂಬ ಹೆಚ್ಚು ಹೊತ್ತು ನಿಲ್ಲಲಿಲ್ಲ. ತಂದೆಯನ್ನೊಮ್ಮೆ ಕಣ್ತುಂಬ ನೋಡಿ ಅಲ್ಲಿಂದ ಹೊರಟುಬಿಟ್ಟ.

ಮಗ ಹೋದ ದಾರಿ ನೋಡುತ್ತ ಶಾಸ್ತ್ರಿಗಳು ನಿಂತರು. ಸೊಸೆ ಎಚ್ಚರಿಸಿದಳು

"ಒಳಕ್ಕೆ ಬನ್ನಿ"

ಬರುತ್ತೇನಮ್ಮ - ಬರುತ್ತೇನೆ."

ಎಂದು ಶಾಸ್ತ್ರಿಗಳು ಪಡಸಾಲೆಗೆ ಬಂದು ಕುಳಿತುಬಿಟ್ಟರು. ಅವರ ಶೋಚನೆಗೆ ಮಿತಿಯೇ ಇರಲಿಲ್ಲ. ದುಃಖಕ್ಕೆ ಪಾರವಿರಲಿಲ್ಲ; ಶಾಸ್ತ್ರಿಗಳ ಬಾಳಿನೊಳಗೆ ಕಾಲಿಡಲು ಅಂಜುತ್ತಿದ್ದ ಮುಪ್ಪು ಬಂದು ಅವರ ದೇಹವನ್ನು ಸೇರಿತು.

೧೩

ಕೈದಾಳಕ್ಕೆ ಹೋಗಿದ್ದ ವಿಶ್ವೇಶ್ವರ ಸಪ್ಪೆಮುಖ ಹಾಕಿಕೊಂಡು ಹಿಂದಿರುಗಿದ. ಅಲ್ಲಿ ಗುರುತಿನವರ ಮನೆಯನ್ನೆಲ್ಲಾ ಹುಡುಕಾಡಿದ. 'ಸಾಂಬ ಇಲ್ಲಿಗೆ ಬರಲೇ ಇಲ್ಲ' ಎಂದು ಅವರು ಹೇಳಿದರು. ವಿಶ್ವೇಶ್ವರನಿಗೆ ಇದು ಒಂದು ಸೋಜಿಗವಾಯಿತು. ಪುನಃ ಯಾವದಾದರೂ ಭೂತ, ಪ್ರೇತ ಸಾಂಬನನ್ನೇನಾದರೂ ಹೊತ್ತುಕೊಂಡು ಹೋಯಿತೋ ಎಂದು ಅವನು ಯೋಚಿಸಿದ.

ಮನೆಗೆ ಬಂದವನೇ ತಂದೆಯ ಬಳಿ ಬಂದು

"ಸಾಂಬ ಸಿಕ್ಕಲಿಲ್ಲ. ಅವನು ಕೈದಾಳಕ್ಕೆ ಹೋಗಿಲ್ಲವಂತೆ."

"ಹೌದು ವಿಶ್ವೇಶ್ವರ, ಹೋಗಿಲ್ಲ. ವೃಥಾ ನಿನಗೆ ತೊಂದರೆಯಾಯಿತು."

"ಸಾಂಬನ ಗತಿಯೇನಾಯಿತು?"

"ಏನಾಯಿತು ಎಂದು ಹೇಳಲಪ್ಪಾ. ಕೆಲವು ದಿವಸದ ಹಿಂದೆ ಇಲ್ಲಿಗೆ ಬಂದಿದ್ದ."

"ಬಂದಿದ್ದನೇ!"

ಶಾಸ್ತ್ರಿಗಳು ಮುಂದಿನ ಕಥೆ ವಿವರಿಸಿದರು. ವಿಶ್ವೇಶ್ವರನಿಗೆ ಪರಮಾಶ್ಚರ್ಯವಾಯಿತು.

"ಅದೆಲ್ಲಾ ಬೇಡವೆಂದು ನೀವು ಬಿಡಿಸಬಾರದಾಗಿತ್ತೇ?"

"ಈಶ್ವರ ಸಂಕಲ್ಪ ಹಾಗಿದ್ದರೆ ಯಾರೇನು ಮಾಡುವುದಕ್ಕಾಗುತ್ತದೆ ವಿಶ್ವೇಶ್ವರ. ನಮ್ಮ ಮನೆಯಲ್ಲಿ ಇವನೊಬ್ಬ ಅಡ್ಡದಾರಿ ಹಿಡಿದಹಾಗಾಯಿತು."

"ಇದರ ಪರಿಣಾಮ ಏನಾಗುತ್ತದೋ? ಕಾಳಾಚಾರಿ ಮಹಾ ಪ್ರಬಲ. ನಾಗಪ್ಪನಂಥ ಖದೀಮನೇ ಅವನ ಮುಂದೆ ನಿಲ್ಲಲಾಗಲಿಲ್ಲ. ಈಗಾಗಲೇ ನಮಗೂ ಕಾಳಾಚಾರಿ ಬಿಸಿ ತಟ್ಟಿದೆ. ಅವನ ಮುಂದೆ ಸಾಂಬ ಏನುಮಾಡಲು ಸಾಧ್ಯ?"

"ಏನು ಮಾಡುತ್ತಾನೋ ನಾನು ಕಾಣೆನಪ್ಪಾ. ಎಲ್ಲಾ ನಾಗಪ್ಪನ ಧೈರ್ಯ. ನಾಗಪ್ಪನೂ ಇಂಥ ವಿಶ್ವಾಸಘಾತುಕ ಕೆಲಸ ಮಾಡುತ್ತಾನೆಂದು ನಾನು ಕನಸು ಮನಸಿನಲ್ಲಿಯೂ ತಿಳಿದಿರಲಿಲ್ಲ."

"ಅವನ ಹತ್ತಿರ ಮಾತನಾಡಿದಿರಾ?"

"ಮಾತನಾಡಿ ಏನು ಪ್ರಯೋಜನ?"

"ಹಾಗಲ್ಲ. ನೀವು ಮಾತನಾಡಿ. ನಾನು ಅವನನ್ನು ಬರಮಾಡುತ್ತೇನೆ."

ಅಂದೇ ರಾತ್ರಿ ಬರುವ ಹಾಗೆ ನಾಗಪ್ಪನಿಗೆ ವಿಶ್ವೇಶ್ವರ ಗೋಪ್ಯವಾಗಿ ಸುದ್ದಿ ಕಳಿಸಿದ.

ಶಾಸ್ತ್ರಿಗಳ ಕರೆಗಾಗಿ ನಾಗಪ್ಪ ನಿತ್ಯ ನೋಡುತ್ತಿದ್ದ. ನೂರೆಂಟು ಸಲ ಯೋಚನೆಮಾಡಿ ಶಾಸ್ತ್ರಿಗಳು ಕೇಳಬಹುದಾದ ಪ್ರಶ್ನೆ, ಅದಕ್ಕೆ ತಾನು ಹೇಳಬೇಕಾದ ಉತ್ತರಗಳನ್ನು ಹೊಂದಿಸಿಕೊಂಡಿದ್ದ. ರಾತ್ರಿ ಕತ್ತಲು ಕವಿದ ಮೇಲೆ ಊರುಬಿಟ್ಟು ಹುಲ್ಲೂರಿಗೆ ಹೊರಟ.

ನಾಗಪ್ಪನನ್ನು ನೋಡಿದ ಕೂಡಲೆ ಶಾಸ್ತ್ರಿಗಳ ಮನಸ್ಸಿನಲ್ಲಿ ತುಂಬಿದ್ದ ದುಃಖ ಕಟ್ಟೆಯೊಡೆದುಕೊಂಡು ಬಂತು.

"ಇಂಥ ಅನ್ಯಾಯ ಮಾಡಬಹುದೇ ನಾಗಪ್ಪ. ಅರಿಯದ ಕಂದನ್ನ ಮಹಾಮಾರೀಗೆ ಬಲಿಕೊಡಬಹುದೇ? ನಾನು ನಿನಗೇನು ಅನ್ಯಾಯ ಮಾಡಿದ್ದೆ"

ಎಂದರು. ಸ್ವಲ್ಪಹೊತ್ತು ನಾಗಪ್ಪನ ಬಾಯಲ್ಲಿ ಮಾತು ಹೊರಡಲಿಲ್ಲ. ಪಾಠಮಾಡಿಕೊಂಡು ಬಂದಿದ್ದ ಪ್ರಶ್ನೋತ್ತರ ತಂದೆಯ ಹೃದಯ ವೇಧಕ ದುಃಖಾವೇಗದಲ್ಲಿ ಮರೆಯಾಯಿತು.

"ಸ್ವಾಮಿ, ನಿಮಗೆ ಮುಖ ತೋರಿಸುವುದಕ್ಕೆ ನಾಚಿಯೇ ನಾನು

ಇಷ್ಟು ದಿವಸ ಇಲ್ಲಿಗೆ ಬರಲಿಲ್ಲ. ನೀವು ಸಮಾಧಾನ ತಂದುಕೊಂಡರೆ ನಡೆದ ಸಂಗತಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ."

"ಹೇಳಪ್ಪಾ - ಹೇಳು"

ಎಂದರು. ಚಲುವಾಚಾರಿ ಮಗಳ ಮೇಲೆ ಕಾಳಾಚಾರಿ ಕಣ್ಣು ಹಾಕಿದ ದಿನದಿಂದ ಆರಂಭಿಸಿ ಸಾಂಬ ದೀಕ್ಷೆ ವಹಿಸುವವರೆಗೆ ನಡೆದ ಎಲ್ಲ ವಿಷಯಗಳನ್ನೂ ವಿವರಿಸಿ

"ನಾನು ತುಂಬ ಅನುಮಾನಿಸಿದೆ ಬುದ್ಧಿ. ಸಾಂಬಯ್ಯನೇ ಬಲವಂತ ಮಾಡಿ ದೀಕ್ಷೆ ತೆಗೆದುಕೊಂಡ. ನಾನು ಅವನ ಮಾತಿಗೆ ಒಪ್ಪದಿದ್ದರೆ ಅವ ನೇನು ಸುಮ್ಮನಿರುತ್ತಿರಲಿಲ್ಲ. ಬೇರೆ ಎಲ್ಲಿಯಾದರೂ ಹೋಗಿ ಮಂತ್ರವಿದ್ಯೆ ಕಲಿತೇ ಬರುತ್ತಿದ್ದ. ಅಂದು ಅವನ ಮುಖದಲ್ಲಿ ಮೂಡಿದ್ದ ನಿರ್ಧಾರ, ಕೋಪ ನೋಡಿದ್ದರೆ ನೀವೇನು ಹೇಳುತ್ತಿದ್ದರೋ?"

"ಅವನು ಕಲಿಯುವ ಮಂತ್ರವಿದ್ಯೆ ಕಾಳಾಚಾರಿ ಮುಂದೆ ನಿಲ್ಲುತ್ತ ದೆಯೇ ನಾಗಪ್ಪ"

ಎಂದು ವಿಶ್ವೇಶ್ವರ ಕೇಳಿದ.

"ನನ್ನ ಮಂತ್ರವಿದ್ಯೆ ಸಾಧಾರಣವಾದದ್ದಲ್ಲ ವಿಶ್ವೇಶ್ವರ ಶಾಸ್ತ್ರಿಗಳೇ. ಅಂಗಹೀನವಾಗಿ ಅದು ನಿಷ್ಪ್ರಯೋಜಕವಾಗಿದೆ. ನನ್ನ ವಿದ್ಯೆಯನ್ನು ಸಾಂಬಪ್ಪನಿಗೆ ಧಾರೆಯೆರೆಯುವುದು ಮಾತ್ರವೇ ಅಲ್ಲ. ಅವನನ್ನು ನನ್ನ ಗುರುಗಳ ಮನೆಗೂ ಕಳಿಸಿಕೊಟ್ಟು ವಜ್ರಕಾಯನನ್ನಾಗಿ ಮಾಡುತ್ತೇನೆ. ಆ ಬಗ್ಗೆ ನೀವು ನಿಶ್ಚಿಂತರಾಗಿರಿ. ಸಾಂಬಪ್ಪ ಬರಲಿ ನೋಡುವಿರಂತೆ, ಕಾಳಾಚಾರಿ ಏನಾಗುತ್ತಾನೆಂಬುದನ್ನು."

"ಶ್ರೋತ್ರೀಯನನ್ನು ವಾಮಾಚಾರಿ ಮಾಡಿ ಕೂರಿಸಿದೆಯಲ್ಲಾ — ಮುಂದೆ ಅವನ ಗತಿ."

"ನಿಮ್ಮ ಸತ್ವಗುಣದ ಮುಂದೆ ಯಾರ ರಜೋಗುಣವೂ ನಿಲ್ಲುವುದಿಲ್ಲ ಶಾಸ್ತ್ರಿಗಳೇ. ಸಾಂಬಯ್ಯನನ್ನು ಮತ್ತೆ ಪೂರ್ವಾಚಾರಕ್ಕೆ ಬರಮಾಡಿಕೊಳ್ಳು ವುದು ನಿಮಗೆ ದೊಡ್ಡ ವಿಷಯವಲ್ಲ."

"ಸಾಂಬನ ಪ್ರಾಣಕ್ಕೆ ಭಯವಿಲ್ಲವೇ?"

"ಅದಕ್ಕೆ ನನ್ನ ಪ್ರಾಣ ಒತ್ತೆ ಮಾಸಲು."

"ಅದನ್ನು ಯೋಚಿಸಿ ಪ್ರಯೋಜನವಿಲ್ಲ ನಾಗಪ್ಪ. ಹುಡುಗನಿಗೇನೂ ಅಪಾಯವಾಗದ ಹಾಗೆ ನೋಡಿಕೋ – ಅಷ್ಟೇ ನಾನು ಕೇಳಿಕೊಳ್ಳುವುದು"

ಎಂದು ಶಾಸ್ತ್ರಿಗಳು ಹೇಳಿದರು.

ನಾಗಪ್ಪನ ವಿವರಣೆಯಿಂದ ಶಾಸ್ತ್ರಿಗಳ ಮನಸ್ಸಿಗೆ ಸ್ವಲ್ಪ ಸಮಾಧಾನ ವಾಗಿತ್ತು. ಮಾರನೆಯ ದಿನದಿಂದ ಸಾಂಬನ ಹೆಸರಿನಲ್ಲಿ ಮೃತ್ಯುಂಜಯ ಜಪವನ್ನಾರಂಭಿಸಿದರು.

ಸಾಂಬ ಎಲ್ಲಿಗೆ ಹೋದ ಎಂದು ಊರಿನವರು ಸ್ವಲ್ಪ ಗುಸಗುಸ ಮಾಡ ಲಾರಂಭಿಸಿದರು. ನಿಜಸ್ಥಿತಿ ತಿಳಿಸುವುದು ಸಾಧ್ಯವಿರಲಿಲ್ಲ. ವಿಶ್ವೇಶ್ವರ ಊರಿನವರಿಗೆ ಸಮಾಧಾನ ಹೇಳುವ ಹೊಣೆ ಹೊತ್ತು

"ಬೆಂಗಳೂರಿನಲ್ಲಿ ನಮಗೆ ಬಹಳ ಆಪ್ತರಾದ ಒಬ್ಬ ಅಧಿಕಾರಿಗಳಿದ್ದಾರೆ. ಅವರ ಮನೆಯಲ್ಲಿ ಪೂಜೆ ಪುರಸ್ಕಾರ ಮಾಡಿಕೊಂಡಿರಲು ಒಬ್ಬ ಬ್ರಾಹ್ಮಣ ಬೇಕು ಎಂದು ಹೇಳುತ್ತಿದ್ದರು. ಬೆಂಗಳೂರಿನಲ್ಲಿ ಸ್ವಲ್ಪ ದಿನ ವಿರಲು ಇಷ್ಟಪಟ್ಟು ಸಾಂಬ ತಾನೇ ಹೋಗುತ್ತೇನೆಂದು ಹೇಳಿದ. ಇಲ್ಲಿಯೇ ನಾಗಪ್ಪನ ಸಹಾಯದಿಂದ ಸಾಂಬ ಹಾಗೂ ಹೀಗೂ ಸ್ವಲ್ಪ ಮೃದಂಗ ವಿದ್ಯೆ ಅಭ್ಯಾಸಮಾಡಿಕೊಂಡಿದ್ದಾನೆ. ಅದನ್ನು ಯಾರಾದರೂ ಸರಿಯಾದ ವಿದ್ವಾಂಸರಲ್ಲಿ ಮುಂದುವರಿಸಬೇಕೆಂದು ಆಸೆಪಡುತ್ತಿದ್ದ. ಬೆಂಗಳೂರಿನಲ್ಲಿ ಅವಕಾಶವಿದೆಯೆಂದು ಹೋಗಿ ಬಾ ಎಂದು ತಂದೆಯವರು ಅಪ್ಪಣೆಕೊಟ್ಟರು"

ಎಂದು ಒಂದು ಕಥೆ ಹುಟ್ಟುಹಾಕಿ ಪ್ರಸಾರಮಾಡಿದ.

೧೪

ಸಾಂಬನ ಸಾಧನೆ ನಿರರ್ಗಳವಾಗಿ ಸಾಗಿತು. ಸಾಧನಾಪಥದಲ್ಲಿ ಸಾಂಬ ಧಾವಿಸುತ್ತಿದ್ದ ರೀತಿ, ವೇಗ ನಾಗಪ್ಪನಿಗೆ ಭಯ, ಆಶ್ಚರ್ಯಗಳನ್ನುಂಟುಮಾಡಿತ್ತು. ನಾಗಪ್ಪ ನಾಲ್ಕು ವರ್ಷದ ಸಾಧನೆಯಲ್ಲಿ ದೊರಕಿಸಿಕೊಂಡಿದ್ದ ಶಕ್ತಿಯನ್ನು ಸಾಂಬ ಆರೇ ತಿಂಗಳಲ್ಲಿ ದೊರಕಿಸಿಕೊಂಡಿದ್ದ.

ದುರ್ಗಾಷ್ಟಮಿಗೆ ಒಂದೇ ತಿಂಗಳು ಉಳಿಯಿತು. ಅಷ್ಟಮಿಯ ಮಹಾಪೂಜೆಯಾದ ಮೇಲೆ ಸಾಂಬ ಸ್ವತಂತ್ರ.

ಪೂಜೆಯು ಸಿದ್ಧತೆಯಾಗತೊಡಗಿತು. ಸಾಂಬನನ್ನೂ ಅವನ ಸಾಧನೆಯನ್ನೂ ಗೋಪ್ಯವಾಗಿಡುವುದರಲ್ಲಿ ನಾಗಪ್ಪನಿಗೆ ಸಾಕುಸಾಕಾಗಿ ಹೋಗಿತ್ತು. ಊರಿನವರಿಗೆ ಎಚ್ಚರಕೊಟ್ಟು ಈ ಸುದ್ದಿ ಕಾಳಾಚಾರಿ ಕಿವಿಯ ಮೇಲೆ ಬೀಳದಂತೆ ತಡೆದಿದ್ದ.

ಅಷ್ಟಮಿ ರಾತ್ರಿ ಮಹಾಪೂಜಾ ಸಮಾರಂಭ ನಡೆಯಿತು. ಪೂಜೆ ಮುಗಿಯುವ ವೇಳೆಗೆ ಬೆಳಕು ಹರಿದಿತ್ತು.

ಬೆಳಿಗ್ಗೆ ಸಾಂಬನ ಮುಖ ನೋಡಿ ನಾಗಪ್ಪ

" ಸಾಂಬಯ್ಯ - ಮಹಾತಾಯಿ ನಿನ್ನ ಮೇಲೆ ಪೂರ್ಣಾನುಗ್ರಹ ಮಾಡಿದ್ದಾಳೆ. ನಾನು ಒಂದು ಜೀವನಾವಧಿಯಲ್ಲಿ ದೊರಕಿಸಿಕೊಂಡ ಶಕ್ತಿಯನ್ನು ನೀನು ಆರೇ ತಿಂಗಳಲ್ಲಿ ದೊರಕಿಸಿಕೊಂಡಿರುವೆ. ಈಗ ಒಂದು ಎಚ್ಚರದ ಮಾತು ಹೇಳುತ್ತೇನೆ....ಅದನ್ನು ಅಕ್ಷರಶಃ ಪಾಲಿಸಿಕೊಂಡು ಬರಬೇಕು."

" ನಾನು ಸಿದ್ಧನಾಗಿದ್ದೇನೆ."

" ಎಂಥ ಪರಿಸ್ಥಿತಿ – ವಿಲೋಭನೆ ಬಂದರೂ ಸ್ತ್ರೀಸಂಗ ಮಾಡಬೇಡ. ಮಾಡಿದ ತಕ್ಷಣವೇ ರಕ್ತಕಾರಿ ಪ್ರಾಣ ಬಿಟ್ಟುಬಿಡುತ್ತೀ."

" ಅದೇನು ನನಗೆ ಕಷ್ಟವಲ್ಲ ನಾಗಪ್ಪಣ್ಣ. ಪ್ರತಿಯೊಂದು ಹೆಣ್ಣಿನ ಮುಖವೂ ನನಗೆ ನನ್ನ ಅತ್ತಿಗೆಯ ಮುಖವಾಗಿ ಕಾಣುತ್ತದೆ. ನಾನು ಮುಂದೇನು ಮಾಡಬೇಕು?"

" ಈಗ ಇಲ್ಲಿಂದ ಹೊರಡಬೇಕು. ನಾನು ವಿಳಾಸ ಕೊಡುತ್ತೇನೆ. ಕಾಗದ ಬರೆದು ಕೊಡುತ್ತೇನೆ. ಅಲ್ಲಿಗೆ ಹೋಗಿ ಅವರು ಹೇಳಿದಂತೆ ಇದ್ದು, ಅವರು ಅಪ್ಪಣೆ ಕೊಟ್ಟಾಗ ಹಿಂದಿರುಗಿ ಬಾ. ಪ್ರಯಾಣದ ಖರ್ಚಿಗೆ ಹಣವನ್ನೂ ಜತೆ ಮಾಡಿಟ್ಟದ್ದೇನೆ."

" ಆಗಬಹುದು. ನಾನು ಹೊರಡುವ ಮುನ್ನ ತಂದೆ, ಅಣ್ಣ, ಅತ್ತಿಗೆಯನ್ನೊಮ್ಮೆ ನೋಡಿ ಹೋಗಬಹುದೇ?"

" ಅದು ಸಾಧ್ಯವಿಲ್ಲ. ಉಪಶಮನವಿದ್ಯೆ ನಿನಗಿನ್ನೂ ಪೂರ್ಣ ಲಭಿ

ಸಿಲ್ಲ. ನೀನು ಪ್ರವಾಸ ಮುಗಿಸಿಕೊಂಡು ಬಂದ ಮೇಲೆ ಮಾತ್ರ ಮನೆಗೆ ಹೋಗಬಹುದು."

"ತಂದೆಯವರು ಕೋಪಮಾಡಿಕೊಂಡಿದ್ದಾರೆಯೇ?"

"ನಿನ್ನ ಮೇಲೆ ಕೋಪವಿಲ್ಲ. ನನ್ನ ಮೇಲೆ ಸ್ವಲ್ಪ ಕೋಪವಿತ್ತು. ನಾನು ಸಮಾಧಾನ ಹೇಳಿ ಬಂದಿರುವೆ."

"ಅವರನ್ನು ನಾಳೆ ಕಂಡು ನನ್ನ ಯೋಗಕ್ಷೇಮ ತಿಳಿಸಿ."

"ಅವಶ್ಯಕವಾಗಿ ಆಗಲಿ."

"ನಾನು ಅಲ್ಲಿಗೆ ಹೋದ ಮೇಲೆ ಕಾಗದ ಬರೆಯಲೇ?"

"ಬರೆಯಬೇಡ. ನೀನೇನು ಮಾಡುತ್ತಿರುವೆಯೆಂದು ನನಗೆ ಗೊತ್ತಾಗುತ್ತದೆ."

"ಹಾಗಾದರೆ ಸರಿ – ನಾನು ಇವತ್ತೇ ಹೊರಟುಬಿಡುತ್ತೇನೆ."

"ಒಳ್ಳೆಯದು"

ಎಂದು ಹೇಳಿ ನಾಗಪ್ಪ ಸಾಂಬನ ಪ್ರಯಾಣಕ್ಕೆ ಬೇಕಾದ ಅನುಕೂಲ ಮಾಡಿಕೊಟ್ಟು ಅವನನ್ನು ಕಳುಹಿಸಿಕೊಟ್ಟ.

ಸರ್ಕಾರದ ದೊಡ್ಡರಸ್ತೆಗೆ ಬರಬೇಕಾದರೆ ಸಾಂಬ ಹದಿಮೂರು ಮೈಲಿ ನಡೆಯಬೇಕಾಯಿತು. ಸಂಜೆಯ ವೇಳೆಗೆ ರಸ್ತೆ ತಲುಪಿ ಬೆಂಗಳೂರಿಗೆ ಹೋಗುತ್ತಿದ್ದ ಒಂದು ಬಸ್ ಹತ್ತಿ ಬೆಂಗಳೂರು ಬಂದು ಸೇರಿದ.

ದೊಡ್ಡ ಊರಿಗೆ ಸಾಂಬ ಬಂದುದು ಅದೇ ಮೊದಲು. ಬಸ್ ಕಂಡಕ್ಟರ್ ಸಲಹೆ ಪಡೆದು ರೈಲ್ವೇ ಸ್ಟೇಷನ್ ಬಳಿಯಿದ್ದ ಒಂದು ಛತ್ರಕ್ಕೆ ಬಂದು ಇಳಿದುಕೊಂಡ. ರಾತ್ರಿ ಒಂಬತ್ತು ಗಂಟೆಗೆ ಮದರಾಸಿಗೆ ಗಾಡಿಯಿದೆಯೆಂದು ಗೊತ್ತಾಯಿತು. ಸ್ನಾನ ಮುಗಿಸಿ, ಹಣ್ಣು ಹಾಲು ಸ್ವೀಕರಿಸಿ ಮದರಾಸಿಗೆ ಟಿಕೆಟ್ ಕೊಂಡು ಗಾಡಿ ಹತ್ತಿದ.

ಅವನು ಗಾಡಿ ಹತ್ತಿದಾಗ ಅಸಹ್ಯಪಟ್ಟುಕೊಂಡ ಪ್ರಯಾಣಿಕರೇ ಸ್ಥಳಮಾಡಿಕೊಟ್ಟರು. ಸಾಂಬ ನೆಲದ ಮೇಲೆ ತನ್ನ ಧೋತ್ರ ಹಾಸಿ ಸುಖವಾಗಿ ಮಲಗಿ ನಿದ್ರಿಸಿದ.

ಕಣ್ಣು ಬಿಡುವ ವೇಳೆಗೆ ಮದರಾಸಿಗೆ ರೈಲು ಬಂದಿತ್ತು.

ನಾಗಪ್ಪ ಕೊಟ್ಟಿದ್ದ ವಿಳಾಸ ಹುಡುಕಿಕೊಂಡು ಸಾಂಬ ಮದರಾಸಿನಲ್ಲಿ ಹೊರಟ.

ಸಾಂಬ ಹೊರಟುಹೋದ ಮೂರನೆಯ ದಿನವೇ ನಾಗಪ್ಪ ಹುಲ್ಲೂರಿಗೆ ಬಂದು ಶಾಸ್ತ್ರಿಗಳನ್ನು ಕಂಡು ಸಾಂಬ ಪ್ರಯಾಣಮಾಡಿದ ಸಂಗತಿ ತಿಳಿಸಿದ.

" ಅರಿಯದ ಹುಡುಗ, ದೂರದೇಶಕ್ಕೆ ಹೋಗಿ ಏನು ಮಾಡುತ್ತಾನೆ, ಹೇಗೆ ನಿರ್ವಹಿಸುತ್ತಾನೆ? "

ಎಂದು ಶಾಸ್ತ್ರಿಗಳು ಕೇಳಿದರು.

" ಅವನ ಸಹಾಯಕ್ಕೆ ಮಹಾತಾಯಿ ಇದ್ದಾಳೆ ಶಾಸ್ತ್ರಿಗಳೆ! ನೀವೇಕೆ ಯೋಚನೆ ಮಾಡುವಿರಿ. ನಿಮ್ಮ ಮಗ ಸುಖವಾಗಿ ಹಿಂದಿರುಗುತ್ತಾನೆ."

" ಯಾವಾಗ ಬರುತ್ತಾನೆ ನಾಗಪ್ಪ?"

" ಆರೆಂಟು ತಿಂಗಳಲ್ಲಿ."

" ಹಿಂದಿರುಗಿದ ಮೇಲಾದರೂ ಮನೆಗೆ ಬರಬಹುದೋ?"

" ಖಂಡಿತವಾಗಿ, ನೀವೇ ನೋಡುವಿರಂತೆ."

" ಏನೇನು ನೋಡುವುದು ನನ್ನ ಹಣೆಯಲ್ಲಿ ಬರೆದಿದೆಯೊ – ಆಗಲಿ – ವಿಶ್ವೇಶ್ವರನ ಇಚ್ಛೆ."

ಎಂದು ಶಾಸ್ತ್ರಿಗಳು ದುಃಖಗೊಂಡು ಹೇಳಿದರು.

೧೫

ತಿಂಗಳಾಗುತ್ತಲೇ ತಿಂಗಳು ಬರುತ್ತಿತ್ತು. ಕೃಷ್ಣಪಕ್ಷ ಕಳೆದಮೇಲೆ ಶುಕ್ಲಪಕ್ಷ ಬರುತ್ತಿತ್ತು. ಶಾಸ್ತ್ರಿಗಳ ಪಾಲಿಗೆ ಎಲ್ಲಾ ತಿಂಗಳೂ, ಎಲ್ಲಾ ಪಕ್ಷಗಳೂ ಒಂದೇ ಆಗಿದ್ದವು. ನಾಗಪ್ಪ ಆಗಾಗ್ಗೆ ಬಂದು ಸಾಂಬನ ಯೋಗಕ್ಷೇಮ ತಿಳಿಸುತ್ತಿದ್ದ. ಸಾಂಬ ಒಂದು ಕಾಗದವೂ ಬರೆದಿರಲಿಲ್ಲ.

ಶಾಸ್ತ್ರಿಗಳೊಮ್ಮೊಮ್ಮೆ ನಿರ್ವಿಣ್ಣರಾಗಿ ನಾಗಪ್ಪನನ್ನು ಕೇಳುತ್ತಿದ್ದರು

" ಸಾಂಬ ಬರುತ್ತಾನೋ ಇಲ್ಲವೋ ನಾಗಪ್ಪ."

" ಬರುತ್ತಾನೆ ಸ್ವಾಮಿ. ಪೌರ್ಣಮಿ ಸೂರ್ಯನ ಹಾಗೆ ಬರುತ್ತಾನೆ. ಅವನ ತೇಜಸ್ಸು ನೋಡಿ ನೀವೇ ಆಶ್ಚರ್ಯಪಡುವಿರಿ."

ನಾಗಪ್ಪನನ್ನು ಶಾಸ್ತ್ರಿಗಳು ಆಕ್ಷೇಪಿಸುತ್ತಿರಲಿಲ್ಲ. ವಿಶ್ವೇಶ್ವರ ಆಗಾಗ್ಗೆ ಕೋಪಮಾಡಿಕೊಂಡು ನಾಗಪ್ಪನ ಬಗ್ಗೆ ಭರ್ತ್ಸನೆಯ ಮಾತಾಡಿದರೆ ಶಾಸ್ತ್ರಿಗಳು ಅವನಿಗೆ

"ವಿಶ್ವೇಶ್ವರನ ಆಟ ವಿಚಿತ್ರವಾದುದಪ್ಪಾ. ಯಾರ ಯಾರ ಕೈಯಲ್ಲಿ ಅವನು ಏನೇನು ಮಾಡಿಸುತ್ತಾನೋ? ಅವನ ಲೀಲೆ ಅಲ್ಪರಾದ ನಮಗೆ ಹೇಗೆ ಅರ್ಥವಾಗಬೇಕು"

ಎಂದು ಸಮಾಧಾನ ಹೇಳುತ್ತಿದ್ದರು.

ಸಾಂಬ ಹುಲ್ಲೂರು ಬಿಟ್ಟುಹೋದ ಸಂಗತಿಯನ್ನು ಹನುಮ ಕಾಳಾಚಾರಿ ಕಿವಿಗೆ ಮುಟ್ಟಿಸಿದ್ದ.

"ಯಾಕೆ ಹೋದ ಪತ್ತೆಮಾಡಿದೆಯಾ?"

ಎಂದು ಆಚಾರಿ ಕೇಳಿದ.

"ಬೆಂಗಳೂರಲ್ಲಿ ಯಾರದೋ ಮನೇಲಿ ಗಂಟೆ ಬಾರಿಸೋಕೆ ಹೋಗನ್ನಂತೆ. ಮೃದಂಗ ಬಡಿಯೋದ ಕಲ್ತು ಬರ್ತಾನಂತೆ."

"ಇದರಲ್ಲಿ ನಾಗಪ್ಪನ ಕೈವಾಡ ಏನಾದರೂ ಇದೆಯೋ ವಿಚಾರ ಮಾಡಬೇಕಾಗಿತ್ತು ಹನುಮ."

"ಸಂತೇಹಳ್ಳಿಯೆಲ್ಲಾ ಸೋದಿಸ್ಬುಟ್ಟೆ ಆಚಾರ್ರೇ. ಅಂಥಾದ್ದೇನೂ ಇರೋಹಂಗೆ ಕಾಣ್ಲಿಲ್ಲ."

"ಶಾಸ್ತ್ರಿ ಹೆದರಿಬಿಟ್ಟ ಕಾಣ್ಲೇ. ಮಗನಿಗೇನಾದರೂ ಆದೀತು ಎಂದು ಊರು ಬಿಟ್ಟು ಬೆಂಗಳೂರಿಗೆ ಹೊತ್ತುಹಾಕಿದ್ದಾನೆ."

"ಅವರಿಗೇನು ಭಯ ಆಚಾರ್ರೇ?"

"ಭಯವೇ? ಹೋಗಿ ಕೇಳು. ರಾಮಲಿಂಗಾಚಾರಿ ಪ್ರಕರಣದಲ್ಲಿ ಶಾಸ್ತ್ರೀಗೆ ಬಿದ್ದ ಪೆಟ್ಟನ್ನು ಅವನು ಮರೆಯುವ ಹಾಗೇ ಇಲ್ಲ."

"ಅಂಗಾದರೆ ನಿಮ್ಮ ಸುದ್ದೀಗೆ ನರಪ್ರಾಣಿ ಬರೋ ಅಂಗಿಲ್ಲ."

"ನನ್ನ ಮೇಲೆ ಕೈಯೆತ್ತುವವನು ಯಾವನೊ ಗಂಡಸು ಈ ಪ್ರಾಂತ್ಯದಲ್ಲಿ. ಲೇ ಹನುಮಾ - ಶಾಸ್ತ್ರಿ ಮಗ ಸಾಂಬ ನಾಟಕ ಆಡಿಸ್ತಾನಂತೆ. ನೀನು ನೋಡಿದ್ದೀಯೋನೋ?"

"ಎಲ್ಲೋ ಒಂದು ಸಲ ನೋಡಿದ್ದೀನಪ್ಪಾ?"

"ಹೆಂಗಿರತ್ರ್ಯೋ?"

"ಇರತ್ತೈತಪ್ಪಾ, ಪಾಪ ಹುಡುಗ-ಅವನೇನು ನಾಟಕ ಆಡಿಸ್ತಾನೆ."

"ಯಾವಾಗಲಾದರೂ ನೀನು ಮೃತ್ಯುಂಜಯ ಶಾಸ್ತ್ರೀನ ಕಂಡರೆ ಇತ್ತ ಬರಹೇಳು."

"ಯಾಕೇಂತ ಅವರು ಕೇಳಿದರೆ?"

"ನಾನು ನೋಡಬೇಕೂಂವೆ ಎಂತಾ ಹೇಳು. ಹೆಚ್ಚು ಪ್ರಸಂಗ ಮಾಡಬೇಡ."

ಮಾತು ಬೆಳಸುವುದಕ್ಕೆ ಹನುಮನಿಗೆ ಧೈರ್ಯವಾಗಲಿಲ್ಲ. ಕತ್ತು ತಗ್ಗಿಸಿಕೊಂಡು ಹೊರಕ್ಕೆ ಬಂದ.

ಆಶ್ವಯುಜ ಮಾಸ ಕಳೆದುಹೋಯಿತು. ಅದರ ಹಿಂದೆ ಕಾರ್ತೀಕ ಮಾಸ ಬಂತು. ಸಾಂಬನ ಸುಳಿವಿಲ್ಲ. ಹಳ್ಳಿಗಳ ನಾಟಕ ಮಂಡಳಿಯವರು ಸಾಂಬನಿಗಾಗಿ ಶಾಸ್ತ್ರಿಗಳ ಮನೆ ಯಾತ್ರೆ ಮಾಡಿಮಾಡಿ ಬೇಸತ್ತಿದ್ದರು.

ಮೃತ್ಯುಂಜಯ ಶಾಸ್ತ್ರೀಗೆ ಹನುಮನ ವರಾತ ಹೆಚ್ಚಾಯಿತು. ಕಾಳಾಚಾರಿ ಹೇಳಿಕಳಿಸಿದ್ದಾನೆಂದು ಕೇಳಿದಕೂಡಲೆ ಶಾಸ್ತ್ರಿಯ ಜಂಘಾಬಲವೇ ಉಡುಗಿಹೋಯಿತು. 'ನನ್ನ ಮೇಲೆ ಯಾವ ಶನಿ ಒಕ್ಕರಿಸಿದೆಯಪ್ಪಾ' ಎಂದುಕೊಂಡು ಕಾಲತಳ್ಳುತ್ತ ಬಂದ. ಒಂದು ದಿನ ಹನುಮ ಶಾಸ್ತ್ರೀಗೆ ಒಂದೇ ಸಮನಾಗಿ ಗಂಟುಬಿದ್ದು ಅವನನ್ನು ಸಂಪಿಗೆಗೆ ಕರೆದುಕೊಂಡು ಹೋದ.

ಕಾಳಾಚಾರಿ ಮೃತ್ಯುಂಜಯಶಾಸ್ತ್ರಿಯನ್ನು ವಿಶೇಷ ಮರ್ಯಾದೆಯಿಂದ ಬರಮಾಡಿಕೊಂಡು

"ಏನು ಶಾಸ್ತ್ರಿಗಳೇ, ಇಷ್ಟು ತಾತ್ಸಾರಮಾಡಿಬಿಟ್ಟರಿ. ಹನುಮ ಬಂದು ಹತ್ತು ಸಲ ಕರೆದರೂ ಇತ್ತ ಒಂದು ಗಳಿಗೆ ಬರುವುದಕ್ಕೆ ಪುರಸತ್ತಾಗಲಿಲ್ಲವೇ?"

"ಇರತ್ತಲ್ಲಪ್ಪಾ, ಸಂಸಾರ ತಾಪತ್ರಯ. ನಾಳೆ ಖಂಡಿತ ಹೋಗೋಣ ಎಂದುಕೊಳ್ಳುತ್ತಿದ್ದೆ. ಹೊತ್ತಿಗೆ ಸರಿಯಾಗಿ ಏನಾದರೂ ಒದಗುತ್ತಿತ್ತು.

ಏನು ಸಮಾಚಾರ ಎಂದು ಹನುಮಯ್ಯನನ್ನು ಕೇಳಿದೆ - ನನಗೆ ಗೊತ್ತಿಲ್ಲ ಎಂದು ಹೇಳಿದ."

"ನಿಜ. ಅವನಿಗೇನೂ ಗೊತ್ತಿಲ್ಲ. ನಮ್ಮ ರಹಸ್ಯ ಆಳುಕಾಳುಗಳಿಗೆಲ್ಲಾ ತಿಳಿಸುವದಕ್ಕಾಗುತ್ತದೆಯೇ ಶಾಸ್ತ್ರಿಗಳೇ?"

"ಅದೇನು ರಹಸ್ಯ - ಕೇಳಬಹುದೇ?"

"ಹೇಳುವುದಕ್ಕೇ ನಿಮ್ಮನ್ನು ಬರಮಾಡಿಕೊಂಡದ್ದು. ನಿಮ್ಮ ಹುಲ್ಲೂರು ನಾರಾಯಣಶಾಸ್ತ್ರೀನ ಊರು ಬಿಡಿಸುವುದಕ್ಕಾಗುವುದಿಲ್ಲವೇ?"

"ಆ ಪುಣ್ಯಾತ್ಮ ಸದ್ಯ ಊರುಬಿಟ್ಟು ಹೋದರೆ ನಾವು ನೆಮ್ಮದಿಯಾಗಿ ಬಾಳಬಹುದು."

"ನಿಮಗೂ ಶಾಸ್ತ್ರೀಗೂ ಅಷ್ಟಷ್ಟೇ ಎಂದು ನಾನು ಬಲ್ಲೆ."

"ನೀನು ಬಿಡಪ್ಪಾ ಸರ್ವಾಂತರ್ಯಾಮಿ. ನಿನಗೆ ಗೊತ್ತಿಲ್ಲದ ವಿಷಯವೇ ಇಲ್ಲ. ಮಹಾಶಕ್ತ ನೀನು. ನೀನು ಮನಸ್ಸುಮಾಡಿದರೆ ಇದೇನು ದೊಡ್ಡ ವಿಷಯವಲ್ಲ."

"ನಾನು ಮನಸ್ಸುಮಾಡಿದ್ದೇನೆ. ಅದಕ್ಕೆ ನಿಮ್ಮ ಸಹಾಯ ಸ್ವಲ್ಪ ಬೇಕು."

"ನಾನು ಸಿದ್ಧನಾಗಿದ್ದೇನೆ."

"ಮೃದಂಗ ಕಲಿಯುವುದಕ್ಕೆ ಸಾಂಬ ಬೆಂಗಳೂರಿಗೆ ಹೋಗಿದ್ದಾನಂತೆ."

"ನಾನೂ ಕೇಳಿದೆ."

"ಇನ್ನು ಆರೇಳು ತಿಂಗಳಿಗೆ ಹಿಂದಿರುಗುತ್ತಾನೆ. ನಾಟಕವೇ ಅವನ ವೃತ್ತಿ. ಹಳ್ಳಿಯವರನ್ನು ಎತ್ತಿಕಟ್ಟಿ ಕರೀಭಂಟನ ಕಾಳಗ ಕುಣಿಸುತ್ತಾನೆ"

"ಉದರ ನಿಮಿತ್ತಂ ಬಹುಕೃತ ವೇಷಂ."

"ನಾರಾಯಣಶಾಸ್ತ್ರಿ ಪೊಗರು ಮುರಿಯುವುದಕ್ಕೆ ಅದೇ ಕಾರಣ ಸಾಕು."

"ಹೇಗೆ ಸಾಧ್ಯ ಆಚಾರಿ?"

"ನೋಡಿ ಶಾಸ್ತ್ರಿಗಳೇ - ವೈದಿಕ ಬ್ರಾಹ್ಮಣ ನಟುವರ ಹಾಗೆ ಮೃದಂಗ

ಬಾರಿಸಿಕೊಂಡು ನಾಟಕ ಕುಣಿಸೋದು ಧರ್ಮಬಾಹಿರ ಹೌದೋ ಅಲ್ಲವೋ ?"

"ನಿಸ್ಸಂದೇಹವಾಗಿ ಧರ್ಮಬಾಹಿರ. ಸಾಂಬ ಬ್ರಾಹ್ಮಣ ಕುಲಕ್ಕೇ ಕಳಂಕ ತಂದಿದ್ದಾನೆ. ಅವನಿಂದ ನಾವೆಲ್ಲಾ ತಲೆಯೆತ್ತಿಕೊಂಡು ಬಾಳುವುದು ಕಠಿಣವಾಗಿದೆ."

"ಸಾಂಬನ ಕುಣಿತಕ್ಕೆ ಅವರಪ್ಪ ಶಾಮೀಲಾಗಿದ್ದಾನೆಯೋ ಇಲ್ಲವೋ ?"

"ತಂದೆ ಒಪ್ಪಿಗೆಯಿಲ್ಲದಿದ್ದರೆ ಮಗ ನಾಟಕಕ್ಕಿಳಿಯುವುದು ಸಾಧ್ಯವೆ ?"

"ನೀವು ಸುತ್ತುಮುತ್ತ ಪ್ರಚಾರಮಾಡಿ ನಾರಾಯಣ ಶಾಸ್ತ್ರಿಗೆ ಬಹಿಷ್ಕಾರ ಹಾಕಿಸುವ ಏರ್ಪಾಡು ಮಾಡಬೇಕು."

"ಅದನ್ನೇನೋ ಮಾಡಬಹುದು. ಆದರೆ, ದೊಡ್ಡ ದೊಡ್ಡ ಅಧಿಕಾರಿಗಳೆಲ್ಲಾ ಅವರ ಪಕ್ಷ ಹಿಡಿಯುತ್ತಾರಲ್ಲಾ."

"ಅದು ನನಗೆ ಬಿಡಿ. ಅಧಿಕಾರಿಗಳನ್ನು ಹದಮಾಡುವುದು ಎಷ್ಟರಲ್ಲಿದೆ ?"

"ನಾನು ಮನಃಪೂರ್ವಕವಾಗಿ ಪ್ರಯತ್ನಿಸುತ್ತೇನೆ."

"ಪ್ರಯತ್ನಿಸಿದರೆ ಸಾಲದು – ಸಾಧಿಸಬೇಕು. ಶೃಂಗೇರಿ ಮಠಕ್ಕೆ ಒಂದು ಅರ್ಜಿ ಬರೆದು ಹಾಕಿ."

"ಅರ್ಜಿ ಬರೆಯೋಕೆ ಮುಂಚೆ ಜನ ಕಟ್ಟಬೇಕು ಆಚಾರಿ."

"ಒಳ್ಳೆಯದು – ಬ್ರಾಹ್ಮಣ ವರ್ಗದಲ್ಲಿ ನೀವು ಪ್ರಸಾರ ಮಾಡಿ. ಉಳಿದ ವಿಷಯ ನನಗಿರಲಿ."

"ಈ ವಿಷಯ ಗುಟ್ಟಾಗಿರಬೇಕು. ನೀನೂ ನಾನೂ ಕೂಡಿದ್ದೇವೆಂದು ಹೊರಗೆ ತಿಳಿದರೆ ಕೆಲಸ ಕೆಡುತ್ತದೆ."

"ನನ್ನ ಗುಟ್ಟು ಭೇದಿಸೋಕೆ ಬ್ರಹ್ಮನಿಂದಲೂ ಸಾಧ್ಯವಿಲ್ಲ."

"ನಾರಾಯಣಶಾಸ್ತ್ರಿಗಳು 'ಶ್ರೀರಾಮನವಮಿ' ನಡೆಸದ ಹಾಗೆ ಮಾಡಿಬಿಟ್ಟರೆ ಅವರ ಕಥೆ ಮುಗಿಯುತ್ತೆ ನೋಡು ಆಚಾರಿ."

"ಅದರಲ್ಲೇನಿದೆ ಸ್ವಾಮಿ."

"ಹಾಗನ್ನಬೇಡ. ಬಡಬ್ರಾಹ್ಮಣ – ಏಕಾಂಗಿಯಾಗಿ ನಿಂತುಕೊಂಡು ರಾಮೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿ, ನೂರಾರು ಜನರ ಸಂತರ್ಪಣೆ ಮಾಡುತ್ತಾನೆಂದರೆ ಜನಗಳ ಮನಸ್ಸಿನ ಮೇಲೆ ಎಂಥ ಪರಿಣಾಮವಾಗುತ್ತದೆ ನೀನೇ ವಿಚಾರಮಾಡು."

"ಉತ್ಸವ ನಿಲ್ಲಿಸಿದರೆ ಪ್ರಯೋಜನವಿಲ್ಲ ಶಾಸ್ತ್ರಿಗಳೇ. ಉತ್ಸವದ ಹೊತ್ತಿಗೆ ಸರಿಯಾಗಿ ನೀವು ಬಹಿಷ್ಕಾರದ ಬೊಬ್ಬಾಟ ಎಬ್ಬಿಸಬೇಕು. ಶಾಸ್ತ್ರಿ ರಾಮೋತ್ಸವಕ್ಕೆ ವಿರುದ್ಧವಾಗಿ ಒಂದು ರಾಮೋತ್ಸವ ಹುಟ್ಟಿಹಾಕಬೇಕು. ಅಲ್ಲಿಗೆ ಯಾರೂ ಕಾಲಿಡದಂತೆ ಮಾಡಬೇಕು. ಇದಕ್ಕೆ ಬೇಕಾದ ಕುಮ್ಮಕ್ಕು ನಾನು ಕೊಡುತ್ತೇನೆ."

"ಆ ವಿಷಯ ನಾನು ನಾಲ್ಕು ಜನರನ್ನು ಕೇಳಿ ವಿಚಾರಮಾಡಿ ತಿಳಿಸುತ್ತೇನೆ."

"ಹಾಗೇ ಮಾಡಿ. ವೇಳೆ ಬೇಕಾದಷ್ಟಿದೆಯಲ್ಲಾ."

ಎಂದು ಹೇಳಿದ.

ಮೃತ್ಯುಂಜಯಶಾಸ್ತ್ರಿಗೆ ಮಹದಾನಂದವಾಯಿತು. ಕಾಳಾಚಾರಿಯಂಥ ಪ್ರಬಲನ ಸಹಾಯದಿಂದ ನಾರಾಯಣಶಾಸ್ತ್ರಿಗಳ ಪ್ರಭಾವ ಮುರಿದು ಅವರನ್ನು ಊರಿಂದ ಹೊರಗಟ್ಟುವುದು ಬಹಳ ದೊಡ್ಡವಿಷಯವಲ್ಲವೆಂದು ಅವನು ಭಾವಿಸಿಕೊಂಡ.

೧೬

ಚೈತ್ರಮಾಸ ಸಮಾಪಿಸುವ ವೇಳೆಗೆ ಮೃತ್ಯುಂಜಯಶಾಸ್ತ್ರಿಯ ಪ್ರಚಾರಕಾರ್ಯ ಒಂದು ರೂಪಕ್ಕೆ ಬಂದಿತ್ತು. ವಿಶ್ವೇಶ್ವರನ ಪೌರೋಹಿತ್ಯಕ್ಕೆ ಪ್ರಬಲವಾದ ಧಕ್ಕೆ ತಗುಲಿತ್ತು. ಸಣ್ಣಪುಟ್ಟ ಮಂಗಳ ಕಾರ್ಯಕ್ಕೂ ಅವನನ್ನೇ ಬರಮಾಡಿಕೊಳ್ಳುತ್ತಿದ್ದವರು ಅವನಿಗೆ ಈಗ ಆಮಂತ್ರಣ ಕೂಡ ಕಳುಹಿಸುತ್ತಿರಲಿಲ್ಲ. ಸ್ವಜಾತೀಯರು ಯಾರು ಸಿಕ್ಕಿದರೂ ಮುಖ ತಪ್ಪಿಸುತ್ತಿದ್ದರು.

ಸ್ವಜಾತೀಯರ ಹೆಣ್ಣುಮಕ್ಕಳು ಸೀತಮ್ಮನಿಗೆ 'ನಿನ್ನ ಮೈದುನನ ನಾಟಕ ಯಾವಾಗಮ್ಮಾ' ಎಂದು ಕೇಳಲಾರಂಭಿಸಿದರು.

ಅವಮಾನದ ಪ್ರಸಂಗಗಳು ನೂರು ಬಂದರೂ ವಿಶ್ವೇಶ್ವರ ಅವುಗಳನ್ನು ತಂದೆಯ ಕಿವಿಯಮೇಲೆ ಹಾಕುತ್ತಿರಲಿಲ್ಲ. ಆದರೆ ಅವು ಹೇಗೋ ಶಾಸ್ತ್ರಿಗಳ ಕಿವಿ ಮುಟ್ಟುತ್ತಿದ್ದುವು. ಶಾಸ್ತ್ರಿಗಳು ಒಳಗೊಳಗೇ ದುಃಖದ ಜೇಗೆಯಲ್ಲಿ ಬೇಯುತ್ತಿದ್ದರು.

ವಾತಾವರಣ ಬಿಗಡಾಯಿಸಿರುವುದನ್ನು ಕಂಡು ವಿಶ್ವೇಶ್ವರ

"ಈ ವರ್ಷ ಶ್ರೀರಾಮನವಮಿ ಮನೆಯ ಪೂರ್ತಕ್ಕೆ ಮಾಡಿಕೊಂಡು ಬಿಡೋಣ."

ಎಂದು ಹೇಳಿದ.

"ಏಕಪ್ಪಾ ?"

ಎಂದು ಶಾಸ್ತ್ರಿಗಳು ಕೇಳಿದರು.

"ನಾವು ಎಲ್ಲರಿಗೂ ಬೇಡವಾಗಿದ್ದೇವೆ. ಉತ್ಸವಕ್ಕೆ ಯಾರ ಸಹಾಯ ಕೇಳುವುದು ?"

"ಎಲ್ಲರಿಗೂ ಬೇಡವಾಗಿರಬಹುದು. ಶ್ರೀರಾಮಚಂದ್ರಸ್ವಾಮಿಗೆ ಬೇಡವಾಗಿದ್ದೇವೆಯೇ? ಯಾರ ಸಹಾಯ ಒದಗದಿದ್ದರೂ ಶ್ರೀರಾಮಚಂದ್ರನ ಸಹಾಯ ಒದಗುತ್ತದಲ್ಲಾ."

"ಇಷ್ಟು ಜನ ನಮ್ಮಮೇಲೆ ಕತ್ತಿ ಮಸೆಯುತ್ತಿರುವಾಗ ನಾವು ಉತ್ಸವ ಇಟ್ಟುಕೊಳ್ಳುವುದು ಜಾಣತನವಲ್ಲ. ನಾಳೆ ಯಾರಾದರೂ ಚಪ್ಪರಕ್ಕೆ ಬೆಂಕಿ ಹಾಕಿದರೆ ?"

"ಪುಟ್ಟೆಗೌಡನ್ನ ಒಂದು ಮಾತು ಕೇಳೋಣ. ಅವನೇನು ಹೇಳುತ್ತಾನೋ ನೋಡಿಕೊಂಡು ಮುಂದಿನ ವಿಚಾರ ಮಾಡೋಣ."

"ಹಾಗೇ ಆಗಲಿ."

"ಅಮ್ಮಯ್ಯ ಏನು ಹೇಳುತ್ತಾಳೆ."

"ನಾನು ಅವಳನ್ನು ಕೇಳಿಲ್ಲ. ಕರೆಯುತ್ತೇನೆ. ನೀವೇ ಕೇಳಿ."

ಎಂದು ವಿಶ್ವೇಶ್ವರ ಹೆಂಡತಿಯನ್ನು ಕೂಗಿದ.

ಶಾಸ್ತ್ರಿಗಳು ಸೊಸೆಗೆ

"ಶ್ರೀರಾಮನವಮಿ ಉತ್ಸವ ನಿಲ್ಲಿಸಿಬಿಡೋಣ ಎಂದು ವಿಶ್ವೇಶ್ವರ ಹೇಳುತ್ತಿದ್ದಾನೆ. ನೀನೇನು ಹೇಳುತ್ತೀಯೆ ತಾಯಿ."

"ಏಕಂತೆ!"

"ಜನಗಳ ಬೆಂಬಲವಿಲ್ಲ. ಈಗ ಬಹಳ ಜನ ನಮಗೆ ವಿರೋಧಿಗ ಳಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಉತ್ಸವ ಇಟ್ಟುಕೊಂಡು ಆಭಾಸ ಮಾಡಿಕೊಳ್ಳುವುದೇತಕ್ಕೆ ಎಂದು ವಿಶ್ವೇಶ್ವರ ಹೇಳುತ್ತಿದ್ದಾನೆ."

"ಎಲ್ಲಿಯಾದರೂ ಉಂಟೇ? ಅನೇಕ ವರ್ಷಗಳಿಂದ ನಡಸಿಕೊಂಡು ಬಂದಿರುವ ಉತ್ಸವ ನಿಲ್ಲಿಸೋಣಾಂದ್ರೇನು? ಬೇಕಾದದ್ದಾಗಲಿ ಉತ್ಸವ ನಡೆಯಲೇಬೇಕು."

"ನೀನು ಈ ಮಾತೇ ಹೇಳುತ್ತೀ ಎಂದು ನನಗೆ ಧೈರ್ಯವಾಗಿತ್ತು ಸೀತಮ್ಮ."

"ಪುಟ್ಟೇಗೌಡನನ್ನು ಬರಹೇಳಲೇ ಬೇಡವೋ?"

"ಬರಹೇಳಪ್ಪಾ."

ಎಂದರು ಶಾಸ್ತ್ರಿಗಳು.

ಪುಟ್ಟೇಗೌಡ ಬಂದವನು ಒಂದು ವಿಶೇಷ ಸುದ್ದಿಯನ್ನೂ ತಂದ.

"ಮೃತ್ಯುಂಜಯಶಾಸ್ತ್ರಿ, ತಮ್ಮಯ್ಯ ಸೇರಿಕೊಂಡು ಬೇರೆ ಉತ್ಸವ ಹುಟ್ಟಹಾಕಿದ್ದಾರೆ ಸ್ವಾಮಿ. ನೀವು ಈಸಲ ಉತ್ಸವ ಹೇಗೆ ಮಾಡುತ್ತೀರೋ ನೋಡುತ್ತೇವೆಂದು ಊರಿನಲ್ಲೆಲ್ಲಾ ಜಂಬ ಹೊಡೆದುಕೊಂಡಿದ್ದಾರೆ."

"ಉತ್ಸವ ನಿಲ್ಲಿಸಿಬಿಡೋಣ ಎಂದು ವಿಶ್ವೇಶ್ವರ ಹೇಳುತ್ತಿದ್ದಾನೆ ಗೌಡ. ನೀನೇನು ಅಭಿಪ್ರಾಯಪಡುವೆ?"

"ಯಾಕ್ಸಾಮಿ. ನಾವೆಲ್ಲಾ ಕೈಗೆ ಬಳೆ ತೊಟ್ಟುಕೊಂಡು ಬಿಟ್ಟೆವಾ?"

"ಹಾಗಂದರೆ?"

"ಮೃತ್ಯುಂಜಯಶಾಸ್ತ್ರಿ ಉತ್ಸವ ಮಾಡಿದರೆ ಮಾಡಿಕೊಳ್ಳಲಿ. ಮಾಮೂಲಾಗಿ ನಾವು ಮಾಡೋ ಉತ್ಸವ ಮಾಡೋಣ."

"ಜನ ಬರದಿದ್ದರೆ."

"ಬರದಿದ್ದರೆ ಬಿಡಲಿ. ನಾನು ಹತ್ತು ಗಾಡಿ ಕಟ್ಟಿಸಿ ಸುತ್ತುಮುತ್ತಲ ಹಳ್ಳಿಯವರನ್ನೆಲ್ಲಾ ಕರೆಸಿಕೊಡುತ್ತೇನೆ. ಪ್ರತಿವರ್ಷಕ್ಕಿಂತ ಈ ವರ್ಷ

ಉತ್ಸವ ಚೆನ್ನಾಯ್ತು ಅನ್ನಿಸಬೇಕು. ಸೋಮಿ – ಚಿಕ್ಕ ಶಾಸ್ತ್ರಿಗಳೇ, ನೀವು ನಾಳೇನೆ ಬೆಂಗಳೂರಿಗೆ ಹೋಗಿ ಹರಿಕಥೆ ಅಯ್ನೋರು, ಸಂಗೀತದೋರು ಎಲ್ಲಾರ್ನೂ ಗೊತ್ತುಮಾಡಿಕೊಂಡು ಬಂದುಬಿಡಿ."

"ದುಡ್ಡೆಲ್ಲಿಂದ ತರುವುದು ಗೌಡ?"

"ದೊಡ್ಡ ಶಾಸ್ತ್ರಿಗಳು ಇರೋತನಕ ದುಡ್ಡಿನ ಯೋಚನೆ ಬಿಡಿ ಸ್ವಾಮಿ. ಹಿಂದೆಲ್ಲ ಕೈಯ್ಯಲ್ಲಿ ದುಡ್ಡಿಟ್ಟುಕೊಂಡೇ ಉತ್ಸವ ಆರಂಭಿಸಿದಿರಾ?"

"ವಿಶ್ವೇಶ್ವರಾ, ಇನ್ನು ಮೀನ ಮೇಷ ಎಣಿಸಿ ಪ್ರಯೋಜನಲ್ಲ. ಗೌಡ ಹೇಳಿದಮೇಲೆ ಮುಗಿದುಹೋಯಿತು. ಮುಂದಿನ ಕೆಲಸಕಾರ್ಯ ನೋಡಿಕೋ. ನಾಳೆಯೇ ಬೆಂಗಳೂರಿಗೆ ಹೋಗಿ ಬಂದುಬಿಡು."

ವಿಶ್ವೇಶ್ವರಶಾಸ್ತ್ರಿ ನಿರ್ವಾಹವಿಲ್ಲದೆ ತಂದೆಯ ಮಾತಿಗೆ ಒಪ್ಪಿಗೆಗೊಟ್ಟ.

ಪುಟ್ಟೇಗೌಡ, ಅವನ ಜನ, ಶಾಸ್ತ್ರಿಗಳು, ರೈತರು ಉತ್ಸವದ ವ್ಯವಸ್ಥೆಗೆ ನಿಂತರು. ಗೌಡ ತುಮಕೂರಿಗೆ ಹೇಳಿಕಳುಹಿಸಿ ಹನ್ನೆರಡು ಪೆಟ್ರೋಮಾಕ್ಸ್ ದೀಪಗಳನ್ನು ತರಿಸಿದ.

ಉತ್ಸವಕ್ಕೆ ಎಂಟು ದಿವಸಕ್ಕೆ ಮೊದಲೇ ಊರಿನ ಅಲಂಕಾರ ಆರಂಭವಾಯಿತು. ರಸ್ತೆಗಳೆಲ್ಲಾ ಶುಚಿಯಾದವು - ಪ್ರತಿಯೊಬ್ಬರೂ ಮನೆಗೆ ಸುಣ್ಣ ಬಣ್ಣ ಮಾಡಿಸಬೇಕೆಂದು ಗೌಡ ನಿರೂಪ ಹೊರಡಿಸಿದ. ಊರ ಹೊರಗಿನ ತೋಟಗಳ ಬಾಳೆಯ ಕಂಬಗಳು, ಮಾವಿನೆಲೆ ಊರಿನಲ್ಲೆಲ್ಲಾ ತೋರಣಗಳಾಗಿ ವಿರಾಜಿಸಿದವು.

ಶಾಸ್ತ್ರಿಗಳು ರಾಮೋತ್ಸವ ಉಟ್ಟುಕೊಂಡ ವಿಷಯ ಕೇಳಿ ಮೃತ್ಯಂಜಯಶಾಸ್ತ್ರಿ ಹಲ್ಲುಹಲ್ಲು ಕಡಿದ. ಕೊನೆಗೂ ತನ್ನ ಪ್ರಯತ್ನ ನಿಷ್ಫಲವಾಯಿತಲ್ಲಾ ಎಂದು ಅವನ ಹೃದಯದಲ್ಲಿ ದುಳ್ಳುರಿ ಎದ್ದಿತು.

ಪುಟ್ಟೇಗೌಡ ಹತ್ತು ಗಾಡಿ ಕಟ್ಟಿಸಿ ಸುತ್ತುಮುತ್ತಲಿನ ಹಳ್ಳಿಗರನ್ನು ಬರಮಾಡಿಕೊಂಡ. ಅವರಿಗೆ ಊಟದ ವ್ಯವಸ್ಥೆಮಾಡಿಸಿದ. ರಾಮೋತ್ಸವ ಒಂದು ದೊಡ್ಡ ಜಾತ್ರೆಯ ಸ್ವರೂಪ ತೆಗೆದುಕೊಂಡಿತು.

ಪುಟ್ಟೇಗೌಡ ಉತ್ಸವದ ವೈಭವದಲ್ಲಿ ಮೈಮರೆಯಲಿಲ್ಲ. ಕಾಪಿನ ಭಟರ ಎರಡು ತುಕ್ಕಡಿ ಏರ್ಪಡಿಸಿ ಮಂಟಪದ ಕಾವಲಿನ ಜವಾಬ್ದಾರಿ ಅವರಿಗೆ ವಹಿಸಿದ.

ರಾಮೋತ್ಸವ ಹಿಂದಿನ ವರ್ಷಕ್ಕಿಂತಲೂ ವಿಜೃಂಭಣೆಯಿಂದ ಸಾಗಿತು. ಎಲ್ಲಿಂದಲೋ ಅಕ್ಕಿ ಬಂತು, ಯಾರೋ ಜೆಲ್ಲ, ತರಕಾರಿ, ವೀಳೆಯದೆಲೆ ತಂದು ಹಾಕಿದರು. ಎರಡು ರೂಪಾಯಿಯಿಂದ ನೂರು ರೂಪಾಯಿಯ ವರೆಗೆ ಕಾಣಿಕೆ ದ್ರವ್ಯ ಮನಿಯಾರ್ಡರು ಮೂಲಕ ಬಂತು.

ಮೃತ್ಯುಂಜಯಶಾಸ್ತ್ರಿ ಮಾತುಕೇಳಿಕೊಂಡು ಉತ್ಸವವನ್ನು ಬಹಿಷ್ಕರಿಸಬೇಕೆಂದಿದ್ದವರೂ ತಾವೇ ಬರಲಾರಂಭಿಸಿದರು.

ಪಟ್ಟಾಭಿಷೇಕದ ದಿವಸ ಊರಿನವರಿಗೆಲ್ಲಾ ಶಾಸ್ತ್ರಿಗಳು ಸಂತರ್ಪಣೆ ಮಾಡಿಸಿ, ಸಂಗ್ರಹವಾಗಿದ್ದ ದವಸ, ಧಾನ್ಯವನ್ನು ಮುಗಿಸಿಬಿಟ್ಟರು. ಕಾಣಿಕೆ ಸ್ವರೂಪದಲ್ಲಿ ಬಂದಿದ್ದ ಹಣದ ಪ್ರತಿಯೊಂದು ಕಾಸನ್ನೂ ವಿದ್ವಾಂಸರಿಗೆ ಸಂಭಾವನೆಯಾಗಿ ಹಂಚಿಬಿಟ್ಟರು.

ತನ್ನ ರಾಮೋತ್ಸವದಲ್ಲಿ ಪಟ್ಟಾಭಿಷೇಕದ ಶಾಸ್ತ್ರ ಮುಗಿಸಿ ಮೃತ್ಯುಂಜಯಶಾಸ್ತ್ರಿ ಏನೋ ನೆಪ ಹೇಳಿ ಊರಿನಲ್ಲಿ ನಿಲ್ಲದೆ ಹೊರಟುಹೋದ.

ಶಾಸ್ತ್ರಿಗಳ ಮನಸ್ಸಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಆದರೆ ಅವರಿಗೊಂದೇ ಕೊರಗು –'ಸಾಂಬ ಇಲ್ಲವಲ್ಲಾ ಅವನಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದು ನೂರು ಸಲ ಆಡಿದರು.

೧೭

ಆಷಾಢಮಾಸ ಆರಂಭವಾಯಿತು. ಹುಲ್ಲೂರು ಅದರ ಸುತ್ತಮುತ್ತಲಿನ ಪ್ರಾಂತ್ಯ ಗಾಳಿಗೆ ಪ್ರಸಿದ್ಧವಾಗಿತ್ತು. ಆಷಾಢಮಾಸದ ಗಾಳಿಗೆ ಮರಗಳು ಬುಡಮೇಲಾಗುತ್ತಿದ್ದುವು. ಮನೆಯ ಹೆಂಚುಗಳು ಹಾರಿಹೋಗಿ ಬಯಲನ್ನು ಮುಚ್ಚುತ್ತಿದ್ದವು. ಗಾಳಿಯ ಭಯಂಕರ ಶಬ್ದಕ್ಕೆ ದನಕರುಗಳು ರಾತ್ರಿಯೆಲ್ಲಾ ಅರಚಿಕೊಳ್ಳುತ್ತಿದ್ದವು.

ಕೃಷ್ಣಪಕ್ಷದ ರಾತ್ರಿ – ನಾಗಪ್ಪ ತನ್ನ ಪೂಜಾವಿಧಿಗಳನ್ನು ಮುಗಿಸಿಕೊಂಡು, ಹಣತೆಯ ಬೆಳಕಿನಲ್ಲಿ ಯಾವದೋ ಮೂರ್ತಿಗೆ ಮೆರಗುಹಾಕುತ್ತ ಕುಳಿತಿದ್ದ. ಕಿವಿ ಗಡಚಿಕ್ಕುವಂತೆ ಕೇಳಿಬರುತ್ತಿದ್ದ ಗಾಳಿಯ ಧ್ವಾನವನ್ನು ಕೆಲಸದಲ್ಲಿ ಮರೆಯಲು ಪ್ರಯತ್ನಿಸುತ್ತಿದ್ದ.

ಯೊರದೋ ನೆರಳು ಬಿದ್ದಂತಾಯಿತು. ಭೀರುವಲ್ಲದ ನಾಗಪ್ಪನ ಹೃದಯವೂ ಸ್ವಲ್ಪ ವೇಗವಾಗಿ ಬಡಿದುಕೊಳ್ಳಲಾರಂಭಿಸಿತು. ಕತ್ತೆತ್ತಿ ನೋಡಿದ– ಎದುರಿಗೆ ತ್ರಿಪುಂಡ, ಕುಂಕುಮ ಧರಿಸಿದ ಒಬ್ಬ ವ್ಯಕ್ತಿ. ಹಣತೆ ಮಿಾಟಿ ನಾಗಪ್ಪ ದಿಟ್ಟಿಸಿ ನೋಡಿ

"ಸಾಂಬಪ್ಪ!" ಎಂದ.

"ಏಕೆ ನಾಗಪ್ಪಣ್ಣ, ನನ್ನ ಗುರುತು ಸಿಕ್ಕಲಿಲ್ಲವೇ?"

"ಬಾಪ್ಪ– ಕೂತುಕೋ. ಖಂಡಿತ ನಿನ್ನ ಗುರುತು ಸಿಕ್ಕಲಿಲ್ಲ. ಜಟಾಜೂಟಧಾರಿಯಾಗಿ ಪರಮೇಶ್ವರನ ಹಾಗೆ ಬಂದುಬಿಟ್ಟಿರುವೆ?"

"ಎಲ್ಲಾ ನಿಮ್ಮ ಆಶೀರ್ವಾದ."

ಎಂದು ಸಾಂಬ ಹೆಗಲಮೇಲಿದ್ದ ಬಟ್ಟೆಯ ಗಂಟನ್ನೂ ಮೃದಂಗ ವನ್ನೂ ಕೆಳಗಿಳಿಸಿ ಕುಳಿತುಕೊಂಡ.

"ಹೋದ ಕೆಲಸವೇನಾಯಿತು?"

"ಏನಾಯಿತು ಎಂದು ನಿಮಗೆ ಗೊತ್ತೇ ಇದೆಯಲ್ಲಾ."

"ಗೊತ್ತಿದೆ. ನಿನ್ನ ಬಾಯಲ್ಲಿ ಕೇಳಿ ಸಂತೋಷಪಡುವುದಕ್ಕಾಗಿ ಕೇಳಿದೆ."

"ಮಹಾಗುರು ಪೂರ್ಣಾಶೀರ್ವಾದ ಮಾಡಿದರು. 'ನಿನ್ನ ವಿದ್ಯೆ ಯಿಂದ ಲೋಕ ಕಲ್ಯಾಣವಾಗಲಿ– ಆದರಿಂದ ಯಾರಿಗೂ ಹಿಂಸೆಯಾಗದಂತೆ ಎಚ್ಚರವಾಗಿರು ಎಂದು ಸಂದೇಶವಿತ್ತರು."

"ನೀನು ಧನ್ಯನಪ್ಪಾ."

"ಇನ್ನು ಮುಂದಿನ ಕೆಲಸ."

"ನಾಳೆ ಮೊದಲು ಕ್ಷೌರಮಾಡಿಸಿಕೊಂಡು ಸ್ನಾನಮಾಡಿ ಮನೆಗೆ ಹೋಗು. ಶಾಸ್ತ್ರಿಗಳು ಒಂದೇ ಸಮನಾಗಿ ಕೊರಗುತ್ತಿದ್ದಾರೆ."

"ಆರೋಗ್ಯವಾಗಿದ್ದಾರಷ್ಟೇ?"

"ಸೌಖ್ಯವಾಗಿದ್ದಾರೆ. ಮೊನ್ನೆ ರಾಮೋತ್ಸವದಲ್ಲಿ ಒಂದು ಗಂಡಾಂತರ ಪಾರಾದರು. ಮೃತ್ಯುಂಜಯಶಾಸ್ತ್ರಿ ಜೇರೆ ಅವರಮೇಲೆ ಕತ್ತಿಕಟ್ಟಿದ್ದಾನೆ."

"ಏಕೆ? ಅವನಿಗೇನು ಅಪರಾಧ ಮಾಡಿದರು."

"ಶ್ರೋತ್ರೀಯ ನೀನು ಮೃದಂಗ ಕಲಿಯುವುದು ಮಹಾಪರಾಧವಂತೆ"

"ಸರಿ - ಇದೂ ಕಾಳಾಚಾರಿ ಪ್ರಭಾವ ಎಂದು ಕಾಣುತ್ತದೆ."

"ಸಂದೇಹವೇನು?"

"ಅವನನ್ನು ಯಾವಾಗ ವಿಚಾರಿಸಿಕೊಳ್ಳಲಿ."

"ಸ್ವಲ್ಪ ತಡೆದುಕೋ. ಇದೇ ಊರಿಗೆ ಬರುತ್ತಿರುವೆ. ಇಲ್ಲಿನ ಸಮಯ ಸಂದರ್ಭ ಮೊದಲು ನೋಡಿಕೋ."

"ಹಾಗೇ ಆಗಲಿ."

"ಊಟಕ್ಕೇನುಮಾಡಿದೆ."

"ದಾರಿಯಲ್ಲಿ ನಾಲ್ಕು ಬಾಳೇಹಣ್ಣು ತಿಂದೆ. ನನಗೆ ಹಸಿವಿಲ್ಲ."

"ಸ್ವಲ್ಪ ಹಾಲಿದೆ. ಕುಡಿದು ಮಲಗಿಕೋ."

ನಾಗಪ್ಪ ಮನೆಯಲ್ಲಿದ್ದ ಹಾಲು, ಒಂದು ಚೂರು ಬೆಲ್ಲ ತಂದಿತ್ತ. ಅವುಗಳನ್ನು ಸೇವಿಸಿ ಸಾಂಬ ಮಲಗಿಕೊಂಡ.

ಬೆಳಿಗ್ಗೆ ಬೇಗ ಎದ್ದು ನಾಗಪ್ಪ ನಾಯಿಂದನನ್ನು ಬರಮಾಡಿದ. ಸಾಂಬನಿಗೆ ಗಾಢನಿದ್ರೆ. ಮಗುವಿನಂತೆ ಮಲಗಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ ಸಾಂಬನನ್ನು ಪ್ರೇಮಾದರಗಳಿಂದ ನೋಡಿದ. ನಿದ್ರೆ ಕೆಡಿಸಬೇಕಲ್ಲಾ ಎಂದು ಪಶ್ಚಾತ್ತಾಪ ಆಯಿತು. ಚಿಂತೆಯಿಲ್ಲವೆಂದುಕೊಂಡು ಸಾಂಬನನ್ನು ಎಬ್ಬಿಸಿದ.

ಸಾಂಬ ಕ್ಷೌರಮಾಡಿಸಿಕೊಂಡು ಸ್ನಾನಮಾಡಿ ಶುಭ್ರವಸ್ತ್ರಗಳನ್ನು ಧರಿಸಿದ. ಅವನು ಕುಡಿಯುವುದಕ್ಕೆ ನಾಗಪ್ಪ ಸ್ವಲ್ಪ ಹಾಲು ತಂದುಕೊಟ್ಟ. ಹಾಲು ಕುಡಿದಮೇಲೆ ಸಾಂಬ

"ನನ್ನ ಮುಂದಿನ ಕೆಲಸವೇನು ತಿಳಿಸಲಿಲ್ಲವಲ್ಲಾ."

"ಒಡ್ಡರ ಬಯಲಿನ ಓಬಯ್ಯನ ಮಗನ ವಿಚಾರ ಜ್ಞಾಪಕವಿದೆಯೋ ಸಾಂಬಯ್ಯ"

"ಜ್ಞಾಪಕವಿದೆ."

"ಅದನ್ನು ಸರಿಪಡಿಸಲು ಸಾಧ್ಯವಾಗುತ್ತದೆಯೋ ನೋಡು."

"ಕಳೆದುಹೋದ ಕಥೆಯನ್ನು ಮತ್ತೇಕೆ ಕೆಣಕಬೇಕು?"

"ಕೆಣಕುವ ವಿಷಯವಲ್ಲ. ಇದರಲ್ಲಿ ಬಹಳ ಸೂಕ್ಷ್ಮತತ್ತ್ವ ಅಡಕವಾಗಿದೆ. ಓಬಯ್ಯನಿಗೆ ನಿನ್ನ ಶಕ್ತಿ ಸ್ವಲ್ಪ ಗೊತ್ತಾದರೆ ಕಾಳಾಚಾರಿ ಬಲ

ಅರ್ಥ ಮುರಿದುಹೋಗುತ್ತದೆ. ಓಬಯ್ಯನ ಜ್ಞಾತಿ ಪುಲ್ಲಯ್ಯನಿಗಾಗಿರುವ ಅನ್ಯಾಯ ಸರಿಪಡಿಸಿದರೆ ಪ್ರಾಂತ್ಯದಲ್ಲಿ ಎಲ್ಲರಿಗೂ ಧೈರ್ಯ ಬರುತ್ತದೆ. ಮರ್ಯಾದಸ್ಥ ಹೆಣ್ಣುಮಕ್ಕಳು ಬದುಕಿಕೊಳ್ಳುತ್ತಾರೆ. ಯೋಚನೆ ಮಾಡು – ಪುಟ್ಟೇಗೌಡನನ್ನು ಒಂದು ಮಾತು ಕೇಳು. ಅವನು ಆಗಲಿ ಎಂದರೆ ಮುಂದಿನ ಕಾರ್ಯಕ್ರಮದ ನಿಯೋಜನೆಯಾಗಲಿ.''

"ಒಳ್ಳೆಯದು. ಹಾಗೇ ಮಾಡುತ್ತೇನೆ"

ಎಂದು ಹೇಳಿ ಹೆಗಲಿಗೆ ಮೃದಂಗವೇರಿಸಿ ಹುಲ್ಲೂರಿನ ಕಡೆ ಸಾಂಬ ನಡೆದ.

ಶಾಸ್ತ್ರಿಗಳು ಮನೆ ಜಗುಲಿಯ ಮೇಲೆ ಕುಳಿತುಕೊಂಡು ಮುತ್ತುಗದ ಎಲೆ ಜೋಡಿಸುತ್ತಿದ್ದರು. ಸಾಂಬ ಹೋಗಿ ಎದುರಿಗೆ ನಿಂತಾಗ ತಮ್ಮ ಕಣ್ಣನ್ನು ತಾವೇ ನಂಬಲಾರದಾದರು.

"ಸಾಂಬ!"

"ಹೌದು ಅಣ್ಣಯ್ಯ – ನಾನೇ ಸಾಂಬ"

ಎಂದು ಹೇಳಿ ಮೃದಂಗವಿಳಿಸಿ ತಂದೆಯ ಪಕ್ಕದಲ್ಲಿ ಹೋಗಿ ಕುಳಿತ.

ಶಾಸ್ತ್ರಿಗಳ ಕಣ್ಣು ತುಂಬಿಹೋಯಿತು. ಬಾಯಲ್ಲಿ ಮಾತು ಹೊರಡಲಿಲ್ಲ. ಸಾಂಬನ ತಲೆ ಮೈದಡವಿದರು. ಅವನನ್ನೇ ದಿಟ್ಟಿಸಿ ನೋಡಿ

"ತುಂಬ ಬಡವಾಗಿ ಹೋಗಿದ್ದೀಯಲ್ಲಪ್ಪಾ. ಅಗಚಾಟಲು ವಿಪರೀತವಾಗಿರಬೇಕು. ಎಳೇಮೈ ತಡೆಯಬೇಕಲ್ಲ."

"ಅಂಥದ್ದೇನೂ ಆಗಿಲ್ಲ ಅಣ್ಣಯ್ಯ, ನೀನು ಚೆನ್ನಾಗಿದ್ದೀಯಾ?"

"ನೋಡು – ಹೀಗಿದ್ದೀನಿ"

ಎಂದು ಸೀತಮ್ಮನನ್ನು ಕೂಗಿದರು.

ಸೀತಮ್ಮ ಮೈದುನನನ್ನು ನೋಡಿ

"ಎಷ್ಟು ದಿವಸ ಹೋಗಿಬಿಟ್ಟೆಯಪ್ಪಾ"

ಎಂದಳು.

"ಗುರುಗಳು ಅಪ್ಪಣೆ ಕೊಡಬೇಕಲ್ಲಮ್ಮಾ"

ಎಂದ.

ಸಾಂಬನಿಗೆ ತಿಂಡಿತೀರ್ಥ ತರುವುದಕ್ಕೆ ಸೀತಮ್ಮ ಒಳಕ್ಕೆ ಹೋದಳು.

ಸಾಂಬ ಹಿಂದಿರುಗಿದ ಸುದ್ದಿ ಊರಿನಲ್ಲಿ ಅರೆಕ್ಷಣದಲ್ಲಿ ವ್ಯಾಪಿಸಿತು. ಶಾಸ್ತ್ರಿಗಳ ಮನೆಗೆ ಮೊದಲು ಓಡಿಬಂದವನು ಪುಟ್ಟೇಗೌಡ.

ಸಾಂಬ ತಾನು ಇಷ್ಟು ದಿವಸ ಕಣ್ಮರೆಯಾಗಿದ್ದುದರ ಕಾರಣಕ್ಕೆ ಒಂದು ದೊಡ್ಡ ಕಥೆ ಕಟ್ಟಬೇಕಾಯಿತು. ಬೆಂಗಳೂರಿಗೆ ಹೋಗಿ ಮೃದಂಗ ನುಡಿಸುವುದನ್ನು ಸಾಂಬ ಚೆನ್ನಾಗಿ ಕಲಿತು ಬಂದಿದ್ದಾನೆಂದು ಊರಿನ ಜನ ಭಾವಿಸಿದರು.

ಯೋಗಕ್ಷೇಮ ವಿಚಾರಿಸಿದುದಾದ ಮೇಲೆ ಊರಿನ ಜನ ಹಿಂದಿರುಗಿದರು. ಪುಟ್ಟೇಗೌಡನೂ ಎದ್ದ. ಸಾಂಬ

"ನಾನೂ ಬರುತ್ತೇನೆ ಗೌಡರೇ"

ಎಂದು ಅವನ ಜತೆ ಹೊರಟ.

ಇಬ್ಬರೂ ಮಾತನಾಡಿಕೊಂಡು ಊರ ಹೊರಗಿನ ತೋಪಿನ ಬಳಿ ಬಂದರು.

"ನೀನು ಹೋಗೋ ವಿಷಯ ನನಗೊಂದು ಮಾತು ತಿಳಿಸಬಾರದಾಗಿತ್ತೇ ಸಾಂಬಪ್ಪ. ನಾನೇನು ಅನ್ಯಾಯ ಮಾಡಿದ್ದ."

"ಸಾಧ್ಯವಾಗಲಿಲ್ಲ ಗೌಡರೇ. ಸಂದರ್ಭ ಹಾಗೆ ಬಂತು. ನಾನು ಇದ್ದಕ್ಕಿದ್ದಂತೆ ಹೊರಡಬೇಕಾಗಿ ಬಂತು."

"ದೊಡ್ಡಯ್ಯನವರು ಬಹಳ ಕೊರಗಿಬಿಟ್ಟರಪ್ಪಾ."

"ನಾನು ಬಲ್ಲೆ."

"ಹೋದವನು ಇಷ್ಟು ದಿವಸವಾದರೂ ಒಂದು ಕಾಗದ ಬರೆಯೋಕೆ ಆಗಲಿಲ್ವಾ?"

"ಆಗಲಿಲ್ಲ ಗೌಡರೇ, ನಾನು ಮೊದಲೇ ಹೇಳಿದಂತೆ ಸಂದರ್ಭ ಬಹಳ ವಿಚಿತ್ರವಾಗಿತ್ತು."

"ಹೋಗಲಿ – ಸದ್ಯ ಬಂದೆಯಲ್ಲಾ! ಪಾಠ ಎಲ್ಲಾ ಸರಿಯಾಗಿ ನಡೆಯಿತೋ? ಮೃದಂಗ ಕಲಿಯುವುದಕ್ಕೆ ಹೋದೆ ಎಂದು ವಿಶ್ವೇಶ್ವರ ಶಾಸ್ತ್ರಿ ತಿಳಿಸಿದರು."

"ಹೂ! ಅದೂ ಒಂದು ಕಾರಣ."

"ಬೇರೆ ಕಾರಣ ಯಾವದು?"

"ಗೌಡರೇ, ನಿಮ್ಮಲ್ಲಿ ಮುಚ್ಚುಮರೆಯೇಕೆ? ನೀವು ನನ್ನ ಅಣ್ಣ ತಮ್ಮಂದಿರಿಗಿಂತಲೂ ಹೆಚ್ಚಾಗಿದ್ದೀರಿ. ಬಹಳ ರಹಸ್ಯದ ವಿಷಯ; ನಿಮಗೆ ತಿಳಿಸಬೇಕೆಂದೇ ಇಲ್ಲಿಗೆ ಕರೆದುಕೊಂಡು ಬಂದೆ."

"ಹೇಳೋ ಅಯ್ಯ. ನಿನ್ನ ರಹಸ್ಯ ಗೌಡ ಹೊರಗೆ ಹಾಕುವುದಿಲ್ಲ."

"ಆ ನಂಬಿಕೆ ನನಗೆ ಸಂಪೂರ್ಣವಾಗಿದೆ ಗೌಡರೇ. ನಾನು ಹೋದದ್ದು ಬರೀ ಮೃದಂಗ ಕಲಿಯುವುದಕ್ಕಲ್ಲ – ಅದನ್ನೂ ಕಲಿತೆ – ಚೆನ್ನಾಗಿಯೂ ಕಲಿತೆ. ಇವತ್ತು ಯಾವ ವಿದ್ವಾಂಸನ ಕಛೇರಿಗಾದರೂ ನುಡಿಸಬಲ್ಲೆ."

"ಇನ್ನೇನು ಕಲಿತು ಬಂದೆ ದೊರೆ?"

"ರಾಕ್ಷಸದಮನ ವಿದ್ಯೆ."

"ಹಾಗಂದರೆ?"

"ಕಾಳಾಚಾರೀಗೆ ಸೇರಿಗೆ ಸವ್ವಾಸೇರಾಗುವುದು?"

"ಯಾರು? ನೀನೇ!!"

"ನಾನೇ. ಆಶ್ಚರ್ಯವಾಗುತ್ತದೆಯೇ?"

"ಆಗದೆ ಇರುತ್ತದೆಯೇ? ತಮಾಷೆ ಮಾಡುತ್ತಿದ್ದೀಯಾ ಸಾಂಬಣ್ಣ."

"ನಿಮ್ಮ ಕಣ್ಣುಮುಂದಿನ ಹುಡುಗ – ಇಂಥ ದೊಡ್ಡಮಾತು ಹೇಳಿದರೆ ನಂಬುವುದು ಕಷ್ಟವಲ್ಲವೇ?"

"ಕಷ್ಟವಲ್ಲವೇನು ನೀನೇ ಹೇಳಪ್ಪಾ."

"ಇಲ್ಲದುದನ್ನು ನಾನು ಹೇಳುವುದಿಲ್ಲವೆಂದು ನಂಬುವಿರೋ ಇಲ್ಲವೋ ಗೌಡರೇ?"

"ಆ ವಿಷಯದಲ್ಲಿ ನನಗೆ ಅಪನಂಬಿಕೆ ಇಲ್ಲ."

"ಇವತ್ತು ನಿಮ್ಮ ಸಾಂಬ ಕಾಳಾಚಾರಿ ಜತೆ ಹೋರಾಡುವುದಕ್ಕೆ ಸಮರ್ಥನಾಗಿದ್ದಾನೆ – ಸಿದ್ಧನಾಗಿದ್ದಾನೆ."

ಪುಟ್ಟೇಗೌಡ ಮರುಮಾತಾಡಲಿಲ್ಲ. ವಿಚಾರಪರವಶನಾದ.

"ನಿಮಗೆ ನಂಬಿಕೆ ಬರುವ ಹಾಗೆ ಒಂದು ಕೆಲಸಮಾಡಿ ತೋರಿಸು ತ್ತೇನೆ."

"ಏನದು ?"

"ಎಲೆಮಂಚಹಳ್ಳಿಗೆ ಹೋಗಿ ಪುಲ್ಲಯ್ಯನ ಕಡೆಯವರನ್ನು ಬರ ಮಾಡುವಿರಾ?"

"ಏಕೆ?"

"ಜತೆಯಲ್ಲಿ ಲಚ್ಮಕ್ಕನನ್ನು ಕರೆದುಕೊಂಡು ಹೋಗುವುದಕ್ಕೆ ?"

"ಲಚ್ಮಕ್ಕ ಎಲ್ಲಿ ಸಿಕ್ಕುತ್ತಾಳೆ ?"

"ಅವಳೆಲ್ಲಿಯೂ ಸಿಕ್ಕಬೇಕಾಗಿಲ್ಲ. ಪುಲ್ಲಯ್ಯನ ಕಡೆಯವರು ಎಲ್ಲಿರುತ್ತಾರೆಯೋ ಅಲ್ಲಿಗೇ ಬರುತ್ತಾಳೆ."

"ಸಾಧ್ಯವಾಗದಿದ್ದರೆ........?"

"ಸಾಧ್ಯವಾಗದಿದ್ದರೆ ಸಾಂಬನ ತಲೆ ಮಹಾಕಾಳಿ ಪಾದಕ್ಕೆ ಬಲಿಯಾಗುತ್ತದೆ."

ಸಾಂಬನ ಮಾತು ಕೇಳಿ ಪುಟ್ಟಯ್ಯ ಗಡಗಡನೆ ನಡುಗಿದ.

"ನಾನು ಹೋಗಿ ಪುಲ್ಲಯ್ಯನ ಕಡೆಯವರನ್ನು ಕರೆದುಕೊಂಡು ಬರಲೇ ?"

"ಖಂಡಿತವಾಗಿ."

"ದೊಡ್ಡಯ್ಯನವರಿಗೆ ತಿಳಿಸುವುದಿಲ್ಲವೇ ?"

"ಈ ಕೆಲಸ ಮುಗಿದುಹೋಗಲಿ. ಅವರಿಗೇ ತಿಳಿಯುತ್ತದೆ. ವಿಷಯ ನಮ್ಮಿಬ್ಬರಲ್ಲೇ ಇರಲಿ. ಪುಲ್ಲಯ್ಯನ ಕಡೆಯವರನ್ನು ಎಲ್ಲಿ ಇಳಿಸುತ್ತೀರಿ ?"

"ನಮ್ಮ ಮನೆಯಲ್ಲಿ."

"ಅದೇ ಒಳ್ಳೆಯದು. ಅವರು ಬಂದು ಹೋಗುವುದೂ ಯಾರಿಗೂ ಗೊತ್ತಾಗಬಾರದು."

"ಹಾಗೇ ಆಗಲಿ. ನಾನು ನಾಳೆಯೇ ಹೋಗಿ ಬರುತ್ತೇನೆ."

"ಶುಭಸ್ಯ ಶೀಘ್ರಂ."

ಸಾಂಬ ಮನೆಗೆ ಹಿಂದಿರುಗುವ ಹೊತ್ತಿಗೆ ವಿಶ್ವೇಶ್ವರನೂ ಮನೆಗೆ ಬಂದಿದ್ದ. ಶಾಸ್ತ್ರಿಗಳು ಎಲೆಹಾಕಿಸಿ ಮಗನ ದಾರಿ ಕಾಯುತ್ತಿದ್ದರು.

ಸಾಂಬ ಬಂದವನೇ ಕೇಳಿದ

"ಊಟವಾಯಿತೇ ಅಣ್ಣಯ್ಯ."

" ನಿನ್ನ ಬಿಟ್ಟು ಊಟಮಾಡುವುದೇ ? "

" ನಾನು ನಿಮ್ಮ ಜತೆ ಕೂಡುವ ಹಾಗಿಲ್ಲ."

" ಏಕೆ ಸಾಂಬ ? "

" ಯಜ್ಞೋಪವೀತ ನಾನು ವಿಸರ್ಜಿಸಿರುವುದು ನಿಮಗೆ ಗೊತ್ತಿರಬೇಕು."

ಶಾಸ್ತ್ರಿಗಳು ಸಾಂಬನ ಮುಖವನ್ನೊಮ್ಮೆ ನೋಡಿ

" ಬಟ್ಟೆ ಬಿಚ್ಚಿ ಏಳು. ಜಗನ್ಮಾತೆಯ ಅನುಗ್ರಹ ಪಡೆದವನನ್ನು ಕರ್ಮಭ್ರಷ್ಟ ಎಂದು ಭಾವಿಸಿ ರೌರವ ನರಕಕ್ಕೆ ನಾನು ಹೋಗಲೇ ? "

ಎಂದು ಹೇಳಿದರು. ಸಾಂಬನ ಹೃದಯ ಕೃತಜ್ಞತೆಯಿಂದ ತುಂಬಿ ಹೋಯಿತು.

೧೮

ಎಲೆಮಂಚಹಳ್ಳಿಯ ಕೆಲಸ ಸುಲಭವಾಗಿ ಸಾಧಿಸುವುದಿಲ್ಲವೆಂದು ತಿಳಿದೇ ಪುಟ್ಟೇಗೌಡ ಇತರರನ್ನು ಕಳಿಸಿಕೊಡದೆ ತಾನೇ ಅಲ್ಲಿಗೆ ಹೋದ.

ಪುಲ್ಲಯ್ಯ ಹಾಸಿಗೆ ಹಿಡಿದು ಮಲಗಿದ್ದ. ಪುಟ್ಟೇಗೌಡ ಹುಲ್ಲೂರಿನಿಂದ ಬಂದಿರುವ ಸುದ್ದಿ ಕೇಳಿ ಪುಲ್ಲಯ್ಯ ಎದ್ದು ಕುಳಿತ. ಪುಟ್ಟೇಗೌಡ ಸೂಕ್ಷ್ಮವಾಗಿ ತಾನು ಬಂದಿದ್ದ ಕೆಲಸ ತಿಳಿಸಿ ಸರಿಯಾದ ನಾಲ್ಕು ಆಳನ್ನು ತನ್ನ ಜತೆ ಕಳಿಸಿಕೊಡಬೇಕೆಂದು ಕೇಳಿದ.

" ಅವಳು ಅಲ್ಲಿ ಇಲ್ಲವಂತೆ. ಆಳು ಕಳಿಸಿ ಏನು ಪ್ರಯೋಜನ ಸ್ವಾಮಿ "

ಎಂದು ಪುಲ್ಲಯ್ಯ ಕೇಳಿದ.

" ನೋಡು ಪುಲ್ಲಯ್ಯ. ಈ ವ್ಯವಹಾರ ಈಗ ನಮ್ಮ ಕೈಯಲ್ಲಿಲ್ಲ. ನಮ್ಮೆಲ್ಲರಿಗೂ ದೊಡ್ಡವನಾದ ಒಬ್ಬ ಪುಣ್ಯಾತ್ಮ ಈ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾನೆ. ನಿಮ್ಮನ್ನು ಕರೆದುಕೊಂಡು ಬರುವ ಹಾಗೆ ಆತನೇ ಹೇಳಿಕಳಿಸಿದ್ದಾನೆ."

" ಕಾಳಾಚಾರಿ ಮುಂದೆ ಯಾರೇನು ಮಾಡಲು ಸಾಧ್ಯ ? ಪಾಪಿ, ನನ್ನ ಮನೆ ಹಾಳುಮಾಡಿ ನನ್ನ ಮೂಲೆಗುಂಪು ಮಾಡಿ ಕೂಡಿಸಿದ."

"ಅತ್ತೆಗೊಂದು ಕಾಲ ಸೊಸೆಗೊಂದು ಕಾಲ. ಕಾಳಾಚಾರಿ ಮಂತ್ರ ಶಕ್ತಿ ಶಾಶ್ವತವಾದುದೇ? ಅದಕ್ಕೂ ಈಗ ಕೊನೆಗಾಲ ಬಂದಿದೆ."

"ಹೋಗಿ ಸ್ವಾಮಿ – ನಮಗೆ ನಂಬಿಕೆಯಾಗುವುದಿಲ್ಲ."

"ಇದರಲ್ಲಿ ನಮ್ಮ ಸ್ವಾರ್ಥ ಏನಾದರೂ ಇದೆಯೇನಯ್ಯಾ?"

"ಅದನ್ನು ನಾವೇನು ಬಲ್ಲೆವು."

"ದೇವರ ಸಾಕ್ಷಿಯಾಗಿಯೂ ಸ್ವಾರ್ಥವಿಲ್ಲ. ನನ್ನ ಮಾತು ನಂಬು. ನಾನೂ ಸಂಸಾರಸ್ಥ. ನಿನಗಾಗಿರುವ ಅನ್ಯಾಯ ಪರಿಹಾರವಾಗಬೇಕೆಂಬುದೇ ನಮ್ಮ ಇಚ್ಛೆ. ಜತೆಗೆ ಕಾಳಾಚಾರಿಯನ್ನು ಮುರಿದು, ಪುಂಡಾಟ ಅಡಗಿಸ ಬೇಕೆಂಬುದೇ ನಮ್ಮ ಆಕಾಂಕ್ಷೆ."

"ಆಳೇನೋ ಕಳಿಸಿಕೊಡುತ್ತೇನೆ. ಅದರಿಂದ ಏನೂ ಪ್ರಯೋಜನ ವಾಗದಿದ್ದರೆ!."

"ಆಗತ್ತೆ ಎನ್ನುವ ಧೈರ್ಯ ನನಗಿದೆ. ಒಂದು ವೇಳೆ ಪ್ರಯೋಜನ ವಾಗದಿದ್ದರೆ ನಿನಗಾಗುವ ನಷ್ಟವೇನು?"

"ನಷ್ಟವಾಗಲ್ಲವೇ? ಖರ್ಚಿಗೆ ಯಾರು ಹೊಣೆ?"

"ನಿಮ್ಮ ಕೆಲಸವಾಗದಿದ್ದರೆ ಹೋಗಿ ಬರುವ ಖರ್ಚು ನಾನು ಕೈಯಿಂದ ಕೊಡಲು ಸಿದ್ಧನಾಗಿದ್ದೇನೆ."

ಪುಲ್ಲಯ್ಯ ಕೂಡಲೆ ತನ್ನ ನಿರ್ಣಯ ಸೂಚಿಸಲಿಲ್ಲ.

"ಆಗಲಿ ಸ್ವಾಮಿ. ನಮ್ಮ ಹುಡುಗರನ್ನು ಕೇಳಿ ಹೇಳುತ್ತೇನೆ."

ಎಂದ.

"ಹೊತ್ತು ಕಳೆಯುವುದು ಸಾಧ್ಯವಿಲ್ಲ ಪುಲ್ಲಯ್ಯ."

"ನೀವು ಊಟ ಮುಗಿಸಿ – ಅಷ್ಟರಲ್ಲಿ ಹೇಳುತ್ತೇನೆ"

ಎಂದು ಹೇಳಿ ತನ್ನ ಸಮೀಪದ ಬಂಧುವೊಬ್ಬನನ್ನು ಕರೆದು ಪುಟ್ಟೇ ಗೌಡನ ಊಟದ ವ್ಯವಸ್ಥೆ ಮಾಡುವಂತೆ ತಿಳಿಸಿದ.

ಪುಟ್ಟೇಗೌಡ ಊಟ ಮುಗಿಸಿಕೊಂಡು ಬರುವಷ್ಟರಲ್ಲಿ ಪುಲ್ಲಯ್ಯ ತನ್ನ ಮಕ್ಕಳ, ಸಮೀಪ ಬಂಧುಗಳ ಸಲಹೆ ಕೇಳಿ ಗೌಡನ ಮಾತಿಗೆ ಒಪ್ಪಿಗೆ ಕೊಟ್ಟ.

ಅವೇ ಸಂಜೆ ಪುಲ್ಲಯ್ಯನ ಕಡೆಯ ನಾಲ್ವರನ್ನು ಕರೆದುಕೊಂಡು ಪುಟ್ಟೇಗೌಡ ಹುಲ್ಲೂರಿಗೆ ಪ್ರಯಾಣ ಬೆಳಸಿದ.

ಪುಲ್ಲಯ್ಯನ ಜನಕ್ಕೆ ಗೌಡನ ತೋಟದ ಮನೆಯಲ್ಲಿ ಬಿಡಾರವಾಯಿತು. ಅವರು ಬಂದಿರುವ ಸುದ್ದಿಯನ್ನು ಗೌಡ ಸಾಂಬನಿಗೆ ಮುಟ್ಟಿಸಲು

“ಗೌಡರೇ, ಈ ರಾತ್ರಿ ಭರ್ಜರಿ ಎತ್ತು ಕಟ್ಟಿದ ಒಂದು ಗಾಡಿ ಸಿದ್ಧ ಮಾಡಿರಿ. ಲಚ್ಮಕ್ಕ ಬರುವುದೇ ತಡ – ಪುಲ್ಲಯ್ಯನ ಕಡೆಯವರು ಹೊರಟು ಬಿಡಬೇಕು. ಸ್ವಲ್ಪ ದೂರ ನಿಮ್ಮಲ್ಲಿ ಯಾರಾದರೂ ಜತೆಗೆ ಹೋಗಿ ಬನ್ನಿ.”

“ಆಗಬಹುದು. ಆದರೆ ಅವಳು ಬರುತ್ತಾಳೆಂದು ಯಾವ ನೆಚ್ಚಿಗೆ ಸಾಂಬಪ್ಪ.”

“ಈ ರಾತ್ರಿ ನಿಮಗೆ ಗೊತ್ತಾಗುತ್ತದೆ.”

“ಹಿಡಿದ ಕೆಲಸ ಆಗದಿದ್ದರೆ ತುಂಬ ಅಭಾಸ ಸಾಂಬಪ್ಪ.”

“ಅವನ್ನು ನಾನು ಚೆನ್ನಾಗಿ ಬಲ್ಲೆ ಗೌಡರೇ. ಹೆದರಬೇಡಿ. ಸಾಂಬ ನಿಮಗೆ ನಿರಾಶೆಯನ್ನುಂಟುಮಾಡುವುದಿಲ್ಲ. ಪುಲ್ಲಯ್ಯನಿಗೂ ಅವನ ಕಡೆಯವರಿಗೂ ಒಂದು ಮಾತು ಖಂಡಿತ ಹೇಳಿ – ಲಚ್ಮಕ್ಕ ದಾರಿ ಬಿಟ್ಟು ಹೋದಳು ಎಂದು ಅವರು ಅವಳನ್ನು ಹಿಂಸೆ ಮಾಡಕೂಡದು. ಅವಳು ಸ್ವಬುದ್ಧಿಯಿಂದ ಮಾಡಿದ ತಪ್ಪೋ ಕಂಡವರ ಚಿತಾವಣೆಯಿಂದ ಮಾಡಿದ ಅಪರಾಧವೋ ಎಂಬ ವಿಷಯ ಜಿಜ್ಞಾಸೆ ಬೇಡ. ಆದದ್ದು ಆಗಿಹೋಯಿತು. ಮುಂದೆ ಅವಳನ್ನು ಸರಿಯಾಗಿ ಬಾಳಿಸಿಕೊಳ್ಳುವುದು ಪುಲ್ಲಯ್ಯನ ಕರ್ತವ್ಯ”

“ಹೇಳ್ತೀನಪ್ಪಾ”

ಎಂದು ಪುಟ್ಟೇಗೌಡ ಆಶ್ವಾಸನ ಕೊಟ್ಟ.

ರಾತ್ರಿ ಪುಟ್ಟೇಗೌಡ, ಪುಲ್ಲಯ್ಯನ ಕಡೆಯವರು ಸಾಂಬನ ದಾರಿ ನೋಡುತ್ತ ತೋಟದ ಮನೆಯಲ್ಲಿ ಕಾದು ಕುಳಿತರು. ಮಧ್ಯರಾತ್ರಿಗೆ ಸ್ವಲ್ಪ ಮುಂಚೆ ಸಾಂಬ ಬಂದು

“ಗಾಡಿ ಸಿದ್ಧವಾಗಿದೆಯೋ?”

ಎಂದು ಕೇಳಿದ.

ಸ್ವಲ್ಪ ದೂರದಲ್ಲಿದ್ದ ಹುಣಿಸೇತೋಪಿನಲ್ಲಿ ಎತ್ತುಗಳನ್ನು ಕಟ್ಟಿ ಗಾಡಿ ಬಿಟ್ಟಿದ್ದುದನ್ನು ಪುಟ್ಟೇಗೌಡ ತೋರಿಸಿದ.

ಸಾಂಬ ಅವರನ್ನು ಬಿಟ್ಟು ತೋಪಿನಾಚೆಯಿದ್ದ ಸೀಗೆಮೆಳೆಯ ಬಳಿಗೆ ಹೋಗಿ ಭೂಶುದ್ಧಿಮಾಡಿಕೊಂಡು ಕುಳಿತ. ಕೈಯಲ್ಲಿಯೇ ಒಂದು ಚಕ್ರ ಬರೆದು, ಜತೆಯಲ್ಲಿ ತಂದಿದ್ದ ಕೆಲವು ನಿಂಬೆಯ ಹಣ್ಣುಗಳನ್ನು ಅದರಮೇಲೆ ಚೆಲ್ಲಿ, ಇನ್ನು ಕೆಲವು ನಿಂಬೆಯ ಹಣ್ಣುಗಳನ್ನು ಒಡ್ಡರಬಯಲಿನ ದಿಕ್ಕಿನಲ್ಲಿ ಚೆಲ್ಲಿ ಕುಂಕುಮ ಅರಿಶಿನಗಳಿಂದ ಚಕ್ರವನ್ನು ಪೂಜಿಸಿ ಧ್ಯಾನಾರೂಢನಾಗಿ ಕುಳಿತ.

ಆ ಕಾರಿರುಳಿನಲ್ಲಿ ಹೊತ್ತು ಜಾರುತ್ತಿದ್ದುದು ತಿಳಿದುಬರುವಂತಿರಲಿಲ್ಲ. ಸುಮಾರು ಒಂದು ಗಂಟೆ ಕಳೆದಿರಬಹುದು. ಕಣ್ಣುಮುಚ್ಚಿಕೊಂಡು ಕುಳಿತಿದ್ದ ಸಾಂಬ ಎರಡು ಸಲ 'ಲಚ್ಮಕ್ಕ– ಲಚ್ಮಕ್ಕ' ಎಂದ. ಮೂರನೆಯ ಸಲ 'ಲಚ್ಮಕ್ಕ' ಎಂದಾಗ ಯಾರೋ 'ಬುದ್ದಿ' ಎಂದ ಹಾಗಾಯಿತು. ಸಾಂಬ ಕಣ್ಣುಬಿಟ್ಟು ನೋಡಿ

"ಬಂದೆಯಾ" ಎಂದ.

"ಅಪ್ಪಣೆಯಾಯಿತು" ಎಂದಳು ಲಚ್ಮಕ್ಕ.

"ಗಂಡನ ಮನೆಗೆ ಹೋಗುತ್ತೀಯಾ?"

"ಹೋಗು ಎಂದರೆ ಹೋಗುತ್ತೇನೆ"

"ಪುನಃ ಒಡ್ಡರ ಬಯಲಿಗೆ ಬರಕೂಡದು"

"ಬರಬೇಡವೆಂದರೆ ಬರುವುದಿಲ್ಲ."

"ವೇಮನನ್ನು ಮರೆತುಬಿಡಬೇಕು."

"ಮರೆಯುತ್ತೇನೆ."

"ಪುಲ್ಲಯ್ಯ ನಿನ್ನ ಗಂಡ."

"ಹೌದು."

"ಅವನನ್ನು ನಂಬಿಕೊಂಡಿರಬೇಕು"

"ಇರುತ್ತೇನೆ."

"ಅವನಿಗೆ ಸತ್ಯವಾಗಿರಬೇಕು."

"ಇರುತ್ತೇನೆ."

"ತಪ್ಪಿದರೆ........"

"ನೀವು ಕೊಡೋ ಶಿಕ್ಷೆ ಅನುಭವಿಸುತ್ತೇನೆ"

ಸಾಂಬ ಒಂದು ನಿಂಬೆಯ ಹಣ್ಣನ್ನು ತೆಗೆದು ಲಚ್ಮಕ್ಕನ ಕೈಯಲ್ಲಿಟ್ಟು "ಪ್ರಮಾಣ ಮಾಡು" ಎಂದ.

"ಪುಲ್ಲಯ್ಯ ನನ್ನ ಗಂಡ – ಅವನಿಗೆ ಸತ್ಯವಾಗಿ ನಡೆದುಕೊಳ್ಳುತ್ತೇನೆ ವೇಮುನನ್ನು ಮರೆತುಬಿಡುತ್ತೇನೆ."

ಎಂದಳು. ಸಾಂಬ ಚಕ್ರದ ಮೇಲಿದ್ದ ಕುಂಕುಮ ತೆಗೆದು ಲಚ್ಮಕ್ಕನ ಹಣೆಗಿಟ್ಟು, ಸ್ವಲ್ಪ ಕುಂಕುಮ ತೆಗೆದು ಅವಳ ಬಾಯಿಗೆ ಹಾಕಿ

"ಬಾ" ಎಂದು ಅವಳನ್ನು ಪುಟ್ಟೇಗೌಡನ ಮನೆಯ ಬಳಿಗೆ ಕರೆತಂದ.

ಪುಲ್ಲಯ್ಯನ ಕಡೆಯವರು ಲಚ್ಮಕ್ಕನನ್ನು ನೋಡಿ ಚಕಿತರಾದರು. ಸೊಂಟ ಕಟ್ಟಿ ಸಾಂಬನಿಗೆ ಉದ್ದಂಡ ಪ್ರಣಾಮ ಮಾಡಿದರು.

"ಗೌಡರೇ – ಗಾಡಿ ಕಟ್ಟಿಸಿ"

ಎಂದು ಸಾಂಬ ಸೂಚಿಸಿದ.

ಪುಟ್ಟೇಗೌಡ ಶಿಲಾಶಿಲ್ಪದಂತಾಗಿದ್ದ. ಅವನ ಬಾಯಲ್ಲಿ ಮಾತೇ ಹೊರಡದು. ಸಾಂಬ ಹೇಳಿದುದನ್ನು ಯಂತ್ರದಂತೆ ನಿರ್ವಹಿಸಿದ.

ಲಚ್ಮಕ್ಕ ಪುಲ್ಲಯ್ಯನ ಜನರನ್ನು ಸಾಂಬ ಗಾಡಿಗೆ ತುಂಬಿ ಕಳುಹಿಸಿ ಕೊಟ್ಟ. ಗಾಡಿಯವರೆಗೆ ಅವರ ಜತೆ ಗೌಡನ ಇಬ್ಬರು ಆಳುಗಳೂ ಹೊರಟರು.

೧೯

ಬೆಳಿಗ್ಗೆ ಒಡ್ಡರ ಬಯಲಿನಲ್ಲಿ ಅಲ್ಲೋಲಕಲ್ಲೋಲವಾಯಿತು. ಹಾಸಿಗೆ ಬಿಟ್ಟಿದ್ದ ವೇಮು ಎಂದಿನಂತೆ ಮುಖ ತೊಳೆಯುವುದಕ್ಕೆ ಲಚ್ಮಕ್ಕ ನೀರು ತರದಿರಲು ರೇಗಾಡಿದ. ತಾನೇ ನೀರು ಸೇದಿಕೊಂಡು ಮುಖ ತೊಳೆದು ಕೊಂಡು ಬಂದು ಕುಳಿತ. ಸ್ವಲ್ಪ ಹೊತ್ತು ಕಳೆಯಿತು. ಲಚ್ಮಕ್ಕನ ದರ್ಶನ ವಿಲ್ಲ. ಅಕ್ಕಪಕ್ಕದ ಮನೆಗಳಲ್ಲಿ ವಿಚಾರಿಸಿದ. ಅವಳ ಸುದ್ದಿ ಸಿಕ್ಕಲಿಲ್ಲ. ಮಾತು ಮನೆಯಿಂದ ಮನೆಗೆ ದಾಟಿತು. 'ಲಚ್ಮಕ್ಕ ಇಲ್ಲ – ಇಲ್ಲ' ಎಂದು ಎಲ್ಲರೂ ಹೇಳಿದರು.

ವೇಮ ಗಾಬರಿಯಾಗಿ ತಂದೆಯ ಬಳಿಗೆ ಓಡಿಬಂದು

" ಲಚ್ಮಾ ಕಾಣಲಿಲ್ಲ " ಎಂದ.

" ಕಾಣಲಿಲ್ಲ! "

" ಹೂ ! ಎಲ್ಲಿ ನೋಡಿದರೂ ಅವಳ ಸುಳಿವಿಲ್ಲ.

" ರಾತ್ರಿ ಇದ್ದಳಲ್ಲೋ ! "

" ಹೌದು ! ಇಬ್ಬರೂ ಮಲಗಲು ಹೋದೆವು. ಮಲಗಿದೊಡನೆಯೇ ನನಗೆ ನಿದ್ರೆ ಹತ್ತಿತು. ಬೆಳಗಾಗ ಎದ್ದು ನೋಡುವಲ್ಲಿ ಅವಳು ಕಾಣಲಿಲ್ಲ. "

ಓಬಯ್ಯ ವೇಮನನ್ನೂ ಅವನ ಜನರನ್ನೂ ಕೂಡಿಕೊಂಡು ಶೋಧನೆ ನಡೆಸಿದ. ಲಚ್ಮಕ್ಕನ ಪತ್ತೆ ಸಿಗಲಿಲ್ಲ.

ಓಬಯ್ಯನಿಗೆ ಎದೆ ಹೊಡೆದುಕೊಳ್ಳಲಾರಂಭಿಸಿತು. ಮಗನನ್ನೂ ಕರೆದುಕೊಂಡು ಸಂಪಿಗೆಗೆ ಬಂದು ಗೊಳೋ ಎಂದು ಅಳುತ್ತ ಕಾಳಾಚಾರಿ ಪಾದಗಳ ಮೇಲೆ ಬಿದ್ದ.

" ಏನಾಯಿತು ಓಬಯ್ಯ, "

ವೇಮ ಲಚ್ಮಕ್ಕನ ವಿಷಯ ವಿವರಿಸುತ್ತಿದ್ದಂತೆ ಕಾಳಾಚಾರಿ ಮುಖ ವಿವರ್ಣವಾಯಿತು.

" ಇಲ್ಲ! ಏನು ಹಾಗಂದರೆ!! "

ಎಂದು ಗದರಿದ.

" ಹೊರಟು ಹೋಗಿದ್ದಾಳೆ ಆಚಾರಪ್ಪ. ಇದು ಸತ್ಯ "

ಎಂದು ಓಬಯ್ಯ ಒತ್ತಿ ಹೇಳಿದ.

ಕಾಳಾಚಾರಿ ಎದ್ದು ಹೋಗಿ ತನ್ನ ಪೂಜಾ ಮಂದಿರದಲ್ಲಿ ಕುಳಿತು ಕೆಲ ಹೊತ್ತು ಧ್ಯಾನಾಸಕ್ತನಾದ. ಧ್ಯಾನ ಮುಗಿಸಿ ಕುಂಕುಮ ಹರಡಿ ಒಂದು ಚಕ್ರ ಬರೆದು ಅದನ್ನೇ ದಿಟ್ಟಿಸಿ ನೋಡಿ ಹೊರಕ್ಕೆ ಎದ್ದು ಬಂದ.

ಓಬಯ್ಯ ಆತುರದಿಂದ

" ಏನು ಸಮಾಚಾರ ಆಚಾರಪ್ಪ. "

" ಅಚಾತುರ್ಯವಾಗಿದೆ. ಪ್ರತಿಕಕ್ಷಿ ಹುಟ್ಟಿಕೊಂಡಿದ್ದಾನೆ. "

" ಪ್ರತಿಕಕ್ಷಿ! "

" ಹೌದು – ಪ್ರಬಲ ಶತ್ರು. "

" ಲಚ್ಮಕ್ಕ "

" ಲಚ್ಮಕ್ಕನಿಗೇಕೆ ಬಡಿದುಕೊಳುತ್ತೀಯೋ? ಇಲ್ಲಿ ನನ್ನ ಪ್ರಾಣ ಹೋಗುತ್ತಿದೆ"

ಎಂದು ಆಚಾರಿ ಧ್ವನಿಯೆತ್ತರಿಸಿ ಗದರಿಕೊಂಡ.

" ನಾವೇನು ಮಾಡೋಣಪ್ಪಾ, "

" ಸುಮ್ಮನೆ ಈಗ ಊರಿಗೆ ಹೋಗಿ. ಅವಳನ್ನು ಹಿಂದಕ್ಕೆ ಕರೆಸುವ ವ್ಯವಸ್ಥೆ ನಾನು ಮಾಡಿ ಹೇಳಿ ಕಳಿಸುತ್ತೇನೆ. "

" ಅವಳು ಇಲ್ಲಿಲ್ಲವೇ ? "

" ಇಲ್ಲ – ಬಹಳ ದೂರ ಹೋಗಿದ್ದಾಳೆ. "

" ಎಲೆಮಂಚಹಳ್ಳಿಗೇ ? "

" ಅದು ಈಗಲೇ ತಿಳಿದು ಬರುವಂತಿಲ್ಲ. ನೀನು ಯಾರನ್ನಾದರೂ ಗೋಪ್ಯವಾಗಿ ಎಲೆಮಂಚ ಹಳ್ಳಿಗೆ ಕಳಿಸಿಕೊಟ್ಟು ಅಲ್ಲಿನ ಸುದ್ದಿ ಸಮಾಚಾರ ತಿಳಿದುಕೋ. "

" ಹಾಗೇ ಆಗಲಪ್ಪಾ "

ಎಂದು ನಿರುತ್ಸಾಹದಿಂದ ಓಬಯ್ಯ ಹೇಳಿ ಮನೆಗೆ ಮಗನೊಂದಿಗೆ ಹೊರಟ.

ಓಬಯ್ಯ ಹೋದಮೇಲೆ ಕಾಳಾಚಾರಿ ಹನುಮನನ್ನು ಕರೆದು

" ನೀನು ಹುಲ್ಲೂರಿಗೆ ಹೋಗಿ ಜನ ಏನು ಮಾತನಾಡಿಕೊಳ್ಳುತ್ತಿದ್ದಾರೆ ತಿಳಿದುಕೊಂಡು ಶಾಸ್ತ್ರಿ ಮಗ ಸಾಂಬ ಏನು ಮಾಡುತ್ತಿದ್ದಾನೆ ನೋಡಿಕೊಂಡು ಬಾ. ಸಂತೇಹಳ್ಳಿ ನಾಗಪ್ಪನ ಮೇಲೆ ಒಂದು ಕಣ್ಣು ಇಟ್ಟಿರು – ಅವನ ಹತ್ತಿರ ಯಾರು ಯಾರು ಬಂದು ಹೋಗುತ್ತಾರೆ ನನಗೆ ತಿಳಿಸು "

ಎಂದು ಆಜ್ಞೆ ವಿಧಿಸಿದ.

ಕಾಳಾಚಾರಿ ಮುಖ ಕಳೆಗುಂದಿದುದನ್ನು ಕಂಡು ಭದ್ರಮ್ಮ ಹರ್ಷಗೊಂಡಳು. ಓಬಯ್ಯ ಬಂದ ಮೇಲೆ ಆದ ಮಾತುಕತೆ, ಹನುಮನಿಗೆ ಆಚಾರಿ ಕೊಟ್ಟ ಸಂದೇಶ ಎಲ್ಲವನ್ನೂ ಕೇಳಿಸಿಕೊಂಡಿದ್ದಳು. ಆಚಾರಿ

ಹೇಳಿದ 'ಪ್ರತಿಕಕ್ಷಿ ಹುಟ್ಟಿಕೊಂಡಿದ್ದಾನೆ– ಪ್ರಬಲ ಶತ್ರು' ಎನ್ನುವ ಮಾತು ಅವಳ ಹೃದಯಕ್ಕೆ ಹಾಲೆರೆದ ಹಾಗಾಗಿತ್ತು.

ಲಚ್ಮಕ್ಕ ಪರಾರಿಯಾದ ಸುದ್ದಿ ಒಡ್ಡರಬಯಲಿಗೇ ಅಡಕವಾಗಲಿಲ್ಲ. ಸುತ್ತಮುತ್ತಲಿನ ಹಳ್ಳಿಗಳಿಗೆ ಅದು ಕಾಳ್ಗಿಚ್ಚಿನಂತೆ ವ್ಯಾಪಿಸಿತು.

ಸುದ್ದಿಯನ್ನು ನಾರಾಯಣಶಾಸ್ತ್ರಿಗಳು ಮೊದಲು ನಂಬಲಿಲ್ಲ. ಅದು ನಿಜವೆಂದು ಪುಟ್ಟೇಗೌಡ ಹೇಳಿದ ಮೇಲೆ ಅವರು ನಂಬಬೇಕಾಯಿತು. ಪುಟ್ಟೇಗೌಡ ಮನೆಗೆ ಬಂದಾಗ ಸಾಂಬ ಎದ್ದು ಅವನನ್ನು ಕರೆದುಕೊಂಡು ಎಲ್ಲಿಗೋ ಹೋಗುತ್ತಿದ್ದುದನ್ನು ಶಾಸ್ತ್ರಿಗಳು ನೋಡಿದ್ದರು. ಯಾವುದನ್ನೂ ಬೆದಕಿನೋಡುವ ಸ್ವಭಾವವಲ್ಲವಾದ್ದರಿಂದ ಶಾಸ್ತ್ರಿಗಳು ಅವರ ಅನ್ಯೋನ್ಯಕ್ಕೆ ಹೆಚ್ಚು ಗಮನಕೊಟ್ಟರಲಿಲ್ಲ.

ಲಚ್ಮಕ್ಕ ಪರಾರಿಯಾದುದು– ಆ ಬಗ್ಗೆ ಪುಟ್ಟೇಗೌಡ ಬಹಳ ಧೈರ್ಯದಿಂದ ಮಾತನಾಡಿದುದು ಶಾಸ್ತ್ರಿಗಳ ಮನಸ್ಸಿನಲ್ಲಿ ಅನುಮಾನ ಹುಟ್ಟಿಸಿತು.

ಒಂದು ದಿನ ಸಂಜೆ ತಾವೂ ಸಾಂಬ ಇಬ್ಬರೇ ಕುಳಿತಿದ್ದಾಗ ಲೋಕಾಭಿರಾಮವಾಗಿ

"ಲಚ್ಮಕ್ಕ ಓಡಿ ಹೋದಳಂತೆ ಕೇಳಿದೆಯಾ ಸಾಂಬ" ಎಂದರು.

"ಹೂ! ಕೇಳಿದೆ. ಎಲ್ಲಿಯಾದರೂ ಉಂಟೇ? ತಿರುಗು ಕಾಲಿನ ಹೆಣ್ಣು. ಗಂಡನನ್ನು ಬಿಟ್ಟು ಓಡಿಬಂದ ಹಾಗೆ ವೇಮನನ್ನು ಬಿಟ್ಟು ಓಡಿ ಹೋಗಿದ್ದಾಳೆ."

"ಹಾಗಲ್ಲವಂತೆ! ಗಂಡನ ಬಳಿಗೇ ಹೋಗಿದ್ದಾಳೆಂದು ಸುದ್ದಿ"

"ಯಾರು ಹೇಳಿದರು."

"ಜನ ಹಾಗೆ ಆಡಿಕೊಳ್ಳುತ್ತಾರಪ್ಪಾ."

"ಆಶ್ಚರ್ಯವಾಗಿದೆಯಲ್ಲಾ. ಕಾಳಾಚಾರಿ ಹಿಡಿತ ತಪ್ಪಿತೇ?"

"ತಪ್ಪಿತೂಂತ ಕಾಣುತ್ತದೆ."

"ನೀನೂ ಇದನ್ನು ನಂಬುವೆಯಾ ಅಣ್ಣಯ್ಯ."

"ಕೈಗನ್ನಡಿ ಹಾಗೆ ಸತ್ಯ ಸಂಗತಿ ಎದುರಿಗಿರುವಾಗ ನಂಬದಿದ್ದರೆ ಆಗುತ್ತದೆಯೇ?"

"ಅವನು ಯಾರಪ್ಪಾ ಕಾಳಾಚಾರೀನ ಎದುರಿಸೋ ಧೀರ."

" ನಮ್ಮ....ಸಾಂಬಶಾಸ್ತ್ರಿ ಇರಬಹುದೇನು ? "

" ಅಣ್ಣಯ್ಯ !....... "

" ಸಾಂಬ, ಏನಾಯಿತೋ – ನಿಜ ಹೇಳೋ ? "

" ನನಗೇನು ಗೊತ್ತಪ್ಪ. ನಾನಾಯಿತು ಮೃದಂಗವಾಯಿತು. "

" ಇರಲಿ ಹೇಳು. ಇದು ನಿನ್ನದೇ ಕಿತಾಪತಿ ಇರಬೇಕು. "

ಸಾಂಬ ಸುತ್ತ ನಾಲ್ಕು ಕಡೆ ನೋಡಿ ಸಮೀಪದಲ್ಲಿ ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಲಚ್ಮಕ್ಕನ ಸಮಸ್ಯೆ ತಾನು ಬಗೆಹರಿಸಿದುದನ್ನು ತಂದೆಗೆ ವಿವರವಾಗಿ ತಿಳಿಸಿದ.

ಶಾಸ್ತ್ರಿಗಳು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆಶ್ಚರ್ಯದ ಜತೆಗೆ ಅವರಿಗೆ ತಡೆಯಲಾಗದಷ್ಟು ದುಃಖವೂ ಉಕ್ಕಿಬಂತು.

' ಸಾಂಬ, ನಿನಗೇತಕ್ಕೆ ಗಂಟುಬಿತ್ತೋ ಈ ಬ್ರಹ್ಮೇತಿ. "

ಎಂದು ಕೇಳಿದರು.

" ಅದು ನನಗೆ ಗಂಟು ಬೀಳಲಿಲ್ಲ. ನಾನೇ ಅದಕ್ಕೆ ಗಂಟುಬಿದ್ದೆ. ನಾನೇ ಅದನ್ನು ಹುಡುಕಿಕೊಂಡು ಹೋದೆ ಅಣ್ಣಯ್ಯ. ಒಬ್ಬ ದುಷ್ಟನಿಂದ ಲೋಕ ಹಾಳಾಗುವುದನ್ನು ನೋಡಿಕೊಂಡು ಹೇಗೆ ನಾನು ತಾಮಸವೃತ್ತಿ ತಳೆಯುವುದಕ್ಕಾಗುತ್ತದೆ. "

" ಜೋಕೆಯಾಗಿರಪ್ಪಾ. ಸಹವಾಸ ಒಳ್ಳೆಯದಲ್ಲ. "

" ಭಯಕ್ಕೆ ಏನೂ ಕಾರಣವಿಲ್ಲ ಅಣ್ಣಯ್ಯ. ನಿಮ್ಮ ಆಶೀರ್ವಾದ ಇರುವತನಕ ಸಾಂಬನನ್ನು ಮುಟ್ಟಲು ಯಾರಿಗೂ ಸಾಧ್ಯವಿಲ್ಲ"

ಎಂದು ತಂದೆಗೆ ಸಮಾಧಾನ ಹೇಳಿದ.

೨೦

ಹನುಮ ಸಂತೇಹಳ್ಳಿ, ಹುಲ್ಲೂರು ಸಮಾಚಾರ ಸಂಗ್ರಹಿಸಿ ಆಚಾರಿಗೆ ಒಪ್ಪಿಸಿದ. ಸಾಂಬ ಯಾವದೊ ಉಗ್ರದೇವತೆಯ ಔಪಾಸನೆ ಮಾಡಿ ವಶಪಡಿಸಿಕೊಂಡಿದ್ದಾನೆಂದು ಆಚಾರಿಯ ಮನಸ್ಸಿಗೆ ಖಚಿತವಾಯಿತು. ಅವನ ದೇಹಾದ್ಯಂತವೂ ಕೋಪದಿಂದ ಕಂಪಿಸತೊಡಗಿತು.

ಲಚ್ಮಕ್ಕನನ್ನು ಹಿಂದಕ್ಕೆ ಕರೆಸಿಕೊಡಬೇಕೆಂದು ಓಬಯ್ಯ, ವೇಮ ವರಾತ ಹಚ್ಚಿದರು. ಆಚಾರಿಯ ಪರಿಸ್ಥಿತಿ ಶೋಚನೀಯವಾಯಿತು.

ಆಚಾರಿ ಉಗ್ರಪೂಜಾ ವಿಧಾನ ಕೈಗೊಂಡ. ಓಬಯ್ಯ ಅವನ ಪೂಜೆಗೆ ಮಡಕೆಗಟ್ಟಳೆ ಹೆಂಡ ಸರಬರಾಯಿ ಮಾಡಲಾರಂಭಿಸಿದ.

ಒಂದು ದಿನ ನಾಗಪ್ಪನೊಂದಿಗೆ ಮಾತನಾಡುತ್ತ ಕುಳಿತಿದ್ದಂತೆ ಸಾಂಬ ಗಹಗಹಿಸಿ ನಕ್ಕ. ವಿನಾಕಾರಣ ನಕ್ಕ ಸಾಂಬನ ಮನೋಭಾವ ಅರ್ಥವಾಗದೆ ನಾಗಪ್ಪ ಕೇಳಿದ

" ಏನದು ವಿನೋದ ಸಾಂಬಣ್ಣ ? "

" ಭಾರಿ ವಿನೋದ ನಡೆದಿದೆ ನಾಗಪ್ಪಣ್ಣ. ಆಚಾರಿ ತಾನು ಕಲಿತ ವಿದ್ಯೆಯನ್ನೆಲ್ಲಾ ಖರ್ಚುಮಾಡುತ್ತಿದ್ದಾನೆ. "

" ಈಗ ಯಾವ ಆಟ ಹೂಡಿದ್ದಾನೆ. "

" ಹೊಸ ಆಟ ಹೂಡಲು ಸಾಧ್ಯವಿಲ್ಲ. ಹಳೆಯ ಆಟವನ್ನು ಸರಿಪಡಿಸಲು ತಿಪ್ಪರುಲಾಗ ಹಾಕುತ್ತಿದ್ದಾನೆ. "

" ಏನು ವಿಷಯ ಸ್ಪಷ್ಟವಾಗಿ ಹೇಳು ಮಾರಾಯ. "

" ಲಚ್ಮಕ್ಕನನ್ನು ಹಿಂದಕ್ಕೆ ಕರೆಸುವ ಪ್ರಯತ್ನ ನಡೆದಿದೆ. "

ನಾಗಪ್ಪ ಚಿಂತೆ ಮಾಡುತ್ತ ಕುಳಿತುದನ್ನು ಕಂಡು ಸಾಂಬ

" ಏಕೆ ನಾಗಪ್ಪಣ್ಣ – ಮುಖ ಚಿಕ್ಕದು ಮಾಡಿಕೊಂಡಿರಿ ? "

" ಇತ್ಯರ್ಥ ಏನಾಗುತ್ತದೋ ಎಂದು ಯೋಚನೆಯಾಯಿತು. "

" ಇನ್ನೂ ಯೋಚನೆಯೇ ? ನಿಮ್ಮ ಶಿಷ್ಯನಮೇಲೆ ನಿಮಗೆ ನಂಬಿಕೆಯಿಲ್ಲವೇ ? "

" ನಂಬಿಕೆ ಇಲ್ಲವೆಂದಲ್ಲ. ಕಾಳಾಚಾರಿ ಹಳೇ ಹುಲಿ. ಅವನ ಬತ್ತಳಿಕೆಯಲ್ಲಿ ಇನ್ನೂ ಯಾವ ಬಾಣ ಉಳಿದಿದೆಯೋ ಎಂದು ಯೋಚನೆ ಮಾಡಿದೆ. "

" ಯಾವ ಬಾಣವಿದ್ದರೇನು ? ಬ್ರಹ್ಮಾಸ್ತ್ರ ನನ್ನ ಹತ್ತಿರ ಇದೆ. ? "

" ಮಹಾತಾಯಿ ಸೇವೆ ಚೆನ್ನಾಗಿ ಮಾಡಿದ್ದೀಯಪ್ಪಾ. ಪೂರ್ವಜನ್ಮದ ಪುಣ್ಯ. "

" ಅಪ್ಪಣೆ ಕೊಟ್ಟರೆ ಕಾಳಾಚಾರಿಯನ್ನು ವಿಚಾರಿಸಿಕೊಳ್ಳುತ್ತೇನೆ. "

"ಅವಸರಪಡಬೇಡ ಸಾಂಬಣ್ಣ. ದುಡುಕಿದರೆ ಪ್ರಯೋಜನವಿಲ್ಲ."

"ಈಗ ಕುಳಿತುಕೊಂಡು ಏನುಮಾಡಲಿ!"

"ನಾಟಕ ಆಡಿಸು."

"ಅದರಿಂದ ನನ್ನ ಮುಂದಿನ ಕೆಲಸಕ್ಕೆ ಏನುಪ್ರಯೋಜನವಾಗುತ್ತದೆ."

"ಆಗುತ್ತದೆ ಸಾಂಬಣ್ಣ. ಜನಕಟ್ಟಬೇಕು. ಕಾಳಾಚಾರಿ ಎಲ್ಲರ ಮೇಲೆ ಭಯಾಸ್ತ್ರಪ್ರಯೋಗಿಸಿದ್ದಾನೆ– ನೀನು ಅಭಯ ನೀಡಬೇಕು."

ನಾಗಪ್ಪನ ಸಲಹೆ ಯುಕ್ತವೆಂದು ಸಾಂಬನಿಗೆ ತೋರಿತು.

ತನ್ನ ಅತ್ತಿಗೆ ಸಲುವಾಗಿ ಸಾಂಬ ಮೊದಲನೆಯ ನಾಟಕ ಹುಲ್ಲೂರಿನಲ್ಲೇ ಆಡಿಸುವುದೆಂದು ನಿಶ್ಚಯಿಸಿದ. ಸಾಂಬನ ನಿರ್ಧಾರ ಕೇಳಿ ಪುಟ್ಟೇಗೌಡ ಹಿರಿ ಹಿರಿ ಹಿಗ್ಗಿದ. ಅವನ ತೋಟದ ಮನೆ ನಾಟಕದ ಅಭ್ಯಾಸಕ್ಕೆ ಅಣಿಯಾಯಿತು.

'ರಾಮ ರಾವಣರ ಯುದ್ಧ' ವನ್ನೇ ಸಾಂಬ ಆರಿಸಿಕೊಂಡ. ಮಾದ, ರಂಗ, ಜವರ, ಯಾಲಕ್ಕಿ, ಸಿಂಗಾರಿಗೌಡ ಮುಂತಾದವರು ನಟರಾದರು.

ಮಾದ ಸಣ್ಣಗೆ ಎಳಸಾಗಿದ್ದ. ಅವನಿಗೆ ರಾಮನ ಪಾತ್ರ ಕೊಡಲ್ಪಟ್ಟಿತು. ಯಾಲಕ್ಕಿ ಹೆಂಗಸಿನ ಹಾಗೆ ಆಡುತ್ತಿದ್ದ. ಅವನೇ ಸೀತೆ ಪಾತ್ರ ಮಾಡುವುದೆಂದು ನಿಶ್ಚಯವಾಯಿತು. ಸಿಂಗಾರಿಗೌಡ ನೋಡುವದಕ್ಕೆ ರಾವಣಾಸುರನ ಹಾಗೇ ಇದ್ದ. ರಂಗ ಸ್ತ್ರೀ ಪಾತ್ರವನ್ನು ಮಾಡಿದವನಲ್ಲ. ಯಾರೂ ದೊರೆಯದಿದ್ದುದರಿಂದ ಅವನೇ ಮಂಡೋದರೀ ಪಾತ್ರ ನಿರ್ವಹಿಸುವದೆಂದು ಗೊತ್ತಾಯಿತು.

ಎರಡು ತಿಂಗಳ ಕಾಲ ಅವಿಶ್ರಾಂತವಾಗಿ ನಾಟಕಾಭ್ಯಾಸ ಸಾಗಿತು. ನಾಟಕ ಪ್ರದರ್ಶನಕ್ಕೆ ಸಿದ್ಧವಾಯಿತು. ಪುಟ್ಟೇಗೌಡ ಸಂತೇಬಯಲಿನಲ್ಲಿ ಅಟ್ಟಣೆ ಕಟ್ಟಿಸಿ, ನಾಟಕದ ದಿನ ಗೊತ್ತುಮಾಡಿಸಿ ಸುತ್ತುಮುತ್ತ ಹಳ್ಳಿಗಳಲ್ಲೆಲ್ಲಾ ಡಂಗುರ ಸಾರಿಸಿದ.

ನಾಟಕ ನೋಡುವುದಕ್ಕೆ ಹುಲ್ಲೂರಿಗೆ ಹುಲ್ಲೂರೇ ಜಾತ್ರೆ ಸೇರಿಬಿಟ್ಟಿತು. ಸಂತೇಹಳ್ಳಿ, ಸಂಪಿಗೆ, ದುದ್ದ, ತಿಮ್ಮಸಂದ್ರ, ಶಾಂತಿಗ್ರಾಮ, ಮಾಯಕೊಂಡಹಳ್ಳಿ, ಬಿದಿರೆ ಗ್ರಾಮಗಳಿಂದಲೂ ಜನ ಗಾಡಿಕಟ್ಟಿಕೊಂಡು ಬಂದರು.

ಸೀತಮ್ಮ ಮತ್ತು ಇತರ ಹೆಣ್ಣುಮಕ್ಕಳಿಗಾಗಿ ಅಟ್ಟಣೆಯ ಬಲಮೂಲೆಯಲ್ಲಿ ಒಂದು ಜಮಖಾನ ಹಾಸಿ ಕೊಡುವ ವ್ಯವಸ್ಥೆ ಮಾಡಲಾಗಿತ್ತು. ವಿಶ್ವೇಶ್ವರನೂ ನಾಟಕ ನೋಡಲು ಬಂದಿದ್ದ. ಶಾಸ್ತ್ರಿಗಳು ಮಾತ್ರ ಮನೆ ಬಿಟ್ಟು ಕದಲಲಿಲ್ಲ.

ನಾಟಕ ಆರಂಭವಾಯಿತು. ಒಂದೆರಡು ದೃಶ್ಯ ನಡೆಯುವುದರಲ್ಲಿ ಸಿಂಗಾರಿಗೌಡ ತಾನು ಧರಿಸಿದ್ದ ರಾವಣಾಸುರನ ಒಂಭತ್ತು ತಲೆಗಳನ್ನೂ ಕೆಳಗಿಳಿಸಿ ಹೊಟ್ಟೆ ಹಿಡಿದು ಕುಳಿತುಬಿಟ್ಟ. ಅವನಿಗೆ ಮರಣಸಂಕಟವಾರಂಭವಾಯಿತು. ಸಾಂಬ ರಂಗದ ಮೇಲಿದ್ದ. ಪುಟ್ಟೇಗೌಡ ಬಿಸಿನೀರು ಕಾಯಿಸಿಸಿ ಸಿಂಗಾರಿಯ ಹೊಟ್ಟೆಗೆ ಕಾವುಟಕೊಟ್ಟ. ಚನ್ನಮಾರೇಗೌಡ ಮುತ್ತುಗದ ಎಲೆಗೆ ಕೊಬ್ಬರಿ ಎಣ್ಣೆ ಬಳಿದು ಬಿಸಿಮಾಡಿ ಸಿಂಗಾರಿಗೆ ಹೊಟ್ಟೇ ಮೇಲೆ ಕಟ್ಟಿದ. ಯಾರು ಯಾವ ಚಿಕಿತ್ಸೆ ಮಾಡಿದರೂ ಸಿಂಗಾರಿಗೌಡನ ಪರಿಸ್ಥಿತಿ ಸುಧಾರಿಸಲಿಲ್ಲ. ಅವನ ಸಂಕಟ ಉಲ್ಬಣಾವಸ್ಥೆಗೇರಿತು. ಇಷ್ಟು ಚೆನ್ನಾಗಿ ಆರಂಭವಾದ ನಾಟಕ ಸಿಂಗಾರಿಗೌಡನಿಂದ ಹಾಳಾಯಿತಲ್ಲಾ ಎಂದು ನಟರೆಲ್ಲರೂ ಪರಿತಾಪಪಟ್ಟರು. ಪುಟ್ಟೇಗೌಡ ಸಾಂಬನನ್ನು ಪಕ್ಕಕ್ಕೆ ಕರೆದು ಸಿಂಗಾರಿಗೌಡನ ಪರಿಸ್ಥಿತಿಯನ್ನರುಹಿದ.

ಸಾಂಬ ಹೆದರಲಿಲ್ಲ. ಸಿಂಗಾರಿಗೌಡನಿಗೆ ಶಿಶ್ರೂಷೆ ಮಾಡುತ್ತಿದ್ದ ಚನ್ನಮಾರೇಗೌಡನನ್ನ ಕರೆದು

"ನೀನು ರಾವಣನ ವೇಷ ಹಾಕಿಕೋ ಗೌಡ" ಎಂದ.

ಗೌಡ ಕಕ್ಕಾಬಿಕ್ಕಿಯಾಗಿ

"ನನಗೆ ಮಾತೂ – ಹಾಡೂ– ಕುಣಿತ ಒಂದೂ ಬರದಲ್ಲಪ್ಪಾ"

"ನಿನಗೇಕೆ ಅದರ ಯೋಚನೆ. ವೇಷ ಮೊದಲು ಹಾಕಿಕೋ"

ಎಂದು ಹೇಳಿ ರಂಗ ಪ್ರವೇಶ ಮಾಡಿದ.

ಅವನಿಗೆ ವೇಷ ಹಾಕಿಸಿ ರಂಗ ಹತ್ತಿಸಬೇಕಾದರೆ ಪುಟ್ಟೇಗೌಡನಿಗೆ ಸಾಕುಸಾಕಾಗಿಹೋಯಿತು. ಪುಟ್ಟೇಗೌಡ ಹೆದರಿಸಿ ಬೆದರಿಸಿ ಅವನಿಗೆ ವೇಷಹಾಕಿಸಿದ.

ರಾವಣನ ಪ್ರವೇಶ ಬಂದಿತು. ರಂಗ ಪ್ರವೇಶಮಾಡುವುದಕ್ಕೆ ಚನ್ನ

ಮಾರೇಗೌಡ ಅನುಮಾನಿಸುತ್ತ ನಿಂತ. ಪುಟ್ಟೇಗೌಡ ಅವನನ್ನು ಹಿಂದಿನಿಂದ ರಂಗದಮೇಲೆ ತಳ್ಳಿದ.

ರಂಗಪ್ರವೇಶ ಮಾಡಿದಮೇಲೆ ಚನ್ನಮಾರೇಗೌಡನ ಕಳೆಯೇ ಬದಲಾಯಿಸಿತು. ನುರಿತ ನಟನಂತೆ ಅವನು ಪಾತ್ರ ಅಭಿನಯಿಸುವುದಕ್ಕಾರಂಭಿಸಿದ. ಕುಣಿತದಲ್ಲಿ ಒಂದು ತಪ್ಪು ಹೆಜ್ಜೆ ಹಾಕಲಿಲ್ಲ. ಪ್ರೇಕ್ಷಕರು, ನಟರು ಎಲ್ಲರೂ ಪರಮಾಶ್ಚರ್ಯದಿಂದ ಚನ್ನಮಾರೇಗೌಡನನ್ನು ನೋಡುತ್ತ ನಿಂತರು.

ನಾಟಕ ಚೆನ್ನಾಯಿತೆಂದು ಜನಜನಿತವಾಗಿ ಹೊಗಳಿದರು. ರಂಗದಿಂದ ನೇಪಥ್ಯಕ್ಕೆ ಬಂದ ಚನ್ನಮಾರೇಗೌಡನನ್ನ ಎಲ್ಲರೂ ಸುತ್ತುಗಟ್ಟಿ

"ಒಳ್ಳೇ ಖದೀಮನ ಅಂಗೆ ಪಾಲ್ಟುಮಾಡಿದ್ಯಲ್ಲೋ ಗೌಡ. ನೀನು ಬಲೇ ಕಳ್ಳಾಕಣ್ಲೇ"

ಎಂದರು. ಚನ್ನಮಾರೇಗೌಡ ತನ್ನ ಸ್ತುತಿಪಾಠಕರನ್ನು ಅಚ್ಚರಿಯಿಂದ ನೋಡಿ

"ನಂಗೆ ಏನೂ ಬರ್‍ತಿರ್ಲಿಲ್ವಲ್ರೋ. ಎಲ್ಲಾ ಸಾಂಬಪ್ಪನ ಆಟ. ಮಾರಾಯ ನನ್ನ ಕೈಲೂ ಯಾಸ ಆಕಿಸಿಬಿಟ್ಟ."

ಎಂದ.

ಅಂದಿನ ನಾಟಕದ ವಿಜಯ ಸಾಂಬನಿಗೆ ಹೊಸ ಶಕ್ತಿಯ ಅರಿವನ್ನುಂಟುಮಾಡಿಕೊಟ್ಟಿತು.

ಹುಲ್ಲೂರು ನಾಟಕದ ಸುದ್ದಿ ಕೂಡಲೇ ಕಾಳಾಚಾರಿಯ ಕಿವಿಗೆ ಹೋಯಿತು.

ನಾರಾಯಣ ಶಾಸ್ತ್ರಿಗಳ ಮುಂದೆ ಸಾಂಬನನ್ನು ಎಷ್ಟು ಬಣ್ಣಿಸಿದರೂ ಪುಟ್ಟೇಗೌಡನಿಗೆ ಸಮಾಧಾನವಿಲ್ಲ. ಶಾಸ್ತ್ರಿಗಳು ಅವನು ಹೇಳಿದುದೆಲ್ಲವನ್ನೂ ಸಾವಧಾನವಾಗಿ ಕೇಳಿ

"ಸಾಂಬನನ್ನು ಸೂತ್ರದಗೊಂಬೆ ಮಾಡಿಕೊಂಡು ವಿಶ್ವೇಶ್ವರ ವಿಚಿತ್ರ ನಾಟಕವಾಡುತ್ತಿದ್ದಾನೆ ಗೌಡ. ಮಂತ್ರವಿದ್ಯೆ ಅವನಿಗೆ ಪೂರ್ಣವಾಗಿ ಸಿದ್ಧಿಸಿದೆಯೆನ್ನುವುದು ನಿರ್ವಿವಾದ. ಆದರೆ ಇದು ಅವನನ್ನು ಎಲ್ಲಿಗೆ ಎಳೆದು

ಕೊಂಡುಹೋಗುತ್ತದೆಯೋ ಎಂದು ಯೋಚಿಸುತ್ತಿದ್ದೇನೆ, ಸಾಂಬನ ಪ್ರವೃತ್ತಿ ದುಷ್ಟ ಪ್ರವೃತ್ತಿಯಲ್ಲ– ಅದೇ ಒಂದು ಧೈರ್ಯ."

ಎಂದು ಹೇಳಿದರು. ಮಗನ ವೈಭವ ನೋಡಿ ತಂದೆ ಹಿಗ್ಗ ದಿದ್ದುದನ್ನು ಕಂಡು ಪುಟ್ಟೇಗೌಡನಿಗೆ ಸ್ವಲ್ಪ ಅಸಮಾಧಾನವಾಯಿತು.

೨೧

ಹುಲ್ಲೂರಿನ ಅನುಭವವಾದಮೇಲೆ ಸಾಂಬ ತನ್ನ ನಾಟಕದ ತಂತ್ರ ವನ್ನೇ ಬದಲಾಯಿಸಿಬಿಟ್ಟ. ಬರೆದ ನಾಟಕ ತೆಗೆದುಕೊಳ್ಳುವುದು, ಪಾತ್ರ ಗಳು ಹಂಚುವುದು, ಪಾತ್ರಧಾರಿಗಳಿಗೆ ಅಭ್ಯಾಸಮಾಡಿಸುವುದು ಮೊದಲಾದ ಕ್ರಮವನ್ನು ಪೂರ್ಣವಾಗಿ ತ್ಯಜಿಸಿಬಿಟ್ಟ. ಯಾವ ಊರಿನವರು ಬಂದು ಯಾವ ನಾಟಕ ಯಾವ ಹೊತ್ತಿನಲ್ಲಿ ಬೇಕೆಂದರೂ ಸಾಂಬ ಆಡಿಸಲು ಹಿಂದೆಗೆ ಯುತ್ತಿರಲಿಲ್ಲ. ಪಾತ್ರಧಾರಿಗಳೇ ಇಲ್ಲದೆ ನಾಟಕ ನಿಷ್ಕರ್ಷೆಯಾಗುತ್ತಿತ್ತು. ಎಲ್ಲವೂ ಆಣಿಯಾದ ರಂಗದಮೇಲೆ ನಿಂತುಕೊಂಡು ಪ್ರೇಕ್ಷಕರನ್ನುದ್ದೇಶಿಸಿ

"ನಿಮಗೆ ಯಾವ ನಾಟಕ ಬೇಕು" ಎಂದು ಕೇಳುತ್ತಿದ್ದ.

ಪ್ರೇಕ್ಷಕರು ಕೂಗುತ್ತಿದ್ದರು.

"ಪಾಂಡವ ವಿಜಯ."

"ಲಂಕಾದಹನ"

"ಸುಂದೋಪಸುಂದ,"

"ಶಿಶುಪಾಲ ವಧೆ"

ಸಾಂಬ ಅವುಗಳಲ್ಲಿ ಒಂದನ್ನಾಯ್ದುಕೊಂಡು 'ಶಿಶುಪಾಲವಧೆ'ಯಾಗ ಬಹುದೋ''

"ಆಗಬಹುದಣ್ಣಾ"

ಎಂದು ಪ್ರೇಕ್ಷಕರು ಉತ್ತರಿಸುತ್ತಿದ್ದರು.

ಸಾಂಬ ಪ್ರೇಕ್ಷಕರನ್ನು ನೋಡಿ

"ಅಲ್ಲಿ ಮೂಲೆಯಲ್ಲಿದ್ದೀಯಲ್ಲಾ ಕರಿಕಂಬಳಿ ಹೊದೆದು – ಇಲ್ಲಿ ಬಾರೋ ಅಣ್ಣ – ಎದುರಿಗೆ ನಿಂತಿದ್ದೀಯಲ್ಲಾ ಹಸಿರು ಶಾಲು ಹೊದೆದು ಇಲ್ಲಿ

ಬಾರಯ್ಯಾ-ಅಗೋ ಅಲ್ಲಿ - ದೂರ, ಚಡ್ಡಿ ಹಾಕಿಕೊಂಡು ನಿಂತಿದ್ದೀಯಲ್ಲಾ ನೀನು ಬಾಪ್ಪಾ"

ಎಂದು ತನಗೆ ಬೇಕಾಗುವಷ್ಟು ಜನರನ್ನು ಪ್ರೇಕ್ಷಕ ವರ್ಗದಿಂದಲೇ ಆರಿಸಿಕೊಂಡು, ಅವರಿಗೆ ಅಲ್ಲಿಯೇ ಪಾತ್ರಗಳನ್ನು ಹಂಚಿ, ಅರ್ಧಗಂಟೆಯೊಳಗಾಗಿ ಅವರಿಗೆ ವೇಷಭೂಷಣ ಹಾಕಿಸಿ ರಂಗದಮೇಲೆ ಕರೆತರುತ್ತಿದ್ದ.

ನಾಟಕ ಆರಂಭವಾಗುತ್ತಿತ್ತು. ಯಾರೂ ತಪ್ಪುತ್ತಿರಲಿಲ್ಲ. ಎಡವುತ್ತಿರಲಿಲ್ಲ. ಮಾತಿಗಾಗಲಿ ಹಾಡಿಗಾಗಲಿ ಕುಣಿತಕ್ಕಾಗಲಿ ಹಿಂದೆ ಮುಂದೆ ನೋಡುತ್ತಿರಲಿಲ್ಲ.

ಸಾಂಬನ ವಿಚಿತ್ರ ನಾಟಕದ ಖ್ಯಾತಿ ಬಹುಬೇಗ ದೇಶಾದ್ಯಂತ ವ್ಯಾಪಿಸಿತು. ಜನ ಅವನ ಶಕ್ತಿ ನೋಡಿ ಆಶ್ಚರ್ಯಪಡುತ್ತಿದ್ದರು. ದೂರದ ಊರಿನವರು ಕೂಡ ಬಂದು ಸಾಂಬನನ್ನು ಮರ್ಯಾದೆಯಿಂದ ಕರೆದುಕೊಂಡು ಹೋಗಿ ನಾಟಕವಾಡಿಸಿ ನೋಡಿ ಸಂತೋಷಪಡುತ್ತಿದ್ದರು.

ಸಾಂಬನ ನಾಟಕವಾಡಿಸುವುದಕ್ಕೆ ಎಲ್ಲರೂ ಮುಂದೆಬಂದಂತೆ ಸಂಪಿಗೆಯವರು ಮುಂದೆ ಬಂದಿರಲಿಲ್ಲ. ಸಾಂಬ ಮಹಾಶಕ್ತನೆಂದು ಅವರಿಗೆ ತಿಳಿದಿದ್ದರೂ ಕಾಳಾಚಾರಿಯ ಭಯದಿಂದ, ಸಾಂಬನನ್ನು ತಮ್ಮ ಊರಿಗೆ ಕರೆದುಕೊಂಡು ಹೋಗಿ ನಾಟಕವಾಡಿಸುವಷ್ಟು ಧೈರ್ಯಮಾಡಿರಲಿಲ್ಲ. ಆದರೆ ಸಂಪಿಗೆಯ ಜನ ಸಾಂಬ ನಾಟಕವಾಡಿಸುತ್ತಿದ್ದ ಹಳ್ಳಿಗಳಿಗೆ ಕದ್ದುಬಂದು ನಾಟಕ ನೋಡಿ ಹೋಗುತ್ತಿದ್ದರು.

ಸುತ್ತ ಮುತ್ತಲಿನ ಹಳ್ಳಿಯ ಜನ ಸಂಪಿಗೆಯವರನ್ನು ಕಂಡರೆ ಅಪಹಾಸ್ಯ ಮಾಡಲಾರಂಭಿಸಿದರು. ಸಂಪಿಗೆಯ ಜನರೆಂದರೆ ಕೈಗೆ ಬಳೆತೊಟ್ಟುಕೊಂಡಿರುವ ಹೆಂಬೇಡಿಗಳು ಎಂದು ಜನ ಆಡಿಕೊಳ್ಳಲಾರಂಭಿಸಿದರು.

ಸಂಪಿಗೆಯ ಜನಕ್ಕೆ ಅಪಮಾನ ಸಹಿಸುವುದಸಾಧ್ಯವಾಯಿತು.

ಕಾಳಾಚಾರಿ ಊರಿನಲ್ಲಿಲ್ಲದ ಸಮಯ ಸಾಧಿಸಿ ಸಂಪಿಗೆ ಊರಿನ ಹಿರಿಯರು ಸೇರಿ ವಿಚಾರಮಾಡಿದರು. ಅವರಲ್ಲಿ ಉಗ್ರಗಾಮಿಗಳಾದ ಕೆಲವರು

"ಸಾಂಬಯ್ಯನ ಕರೆಸಿ ನಾಟಕವಾಡಿಸಲೇಬೇಕು"

ಎಂದರು. ಮುಂದಗಾಮಿಗಳಾದ ಕೆಲವು ಹಿರಿಯರು

" ಕಾಳಾಚಾರಿ ನಮ್ಮನ್ನೆಲ್ಲಾ ಏಕಾಪೋಶನ ತೆಗೆದುಕೊಂಡುಬಿಡುತ್ತಾನೆ "

ಎಂದು ಎಚ್ಚರಿಸಿದರು.

" ಈಗವನು ಬಿಟ್ಟಿರುವುದೇನು ? "

" ನಾವು ಹತ್ತು ಜನರಾದರೂ ಜೀವಸಹಿತ ಇರುವೆನಲ್ಲಾ - ಅದೇ ಪುಣ್ಯ. "

ಮಾತಿಗೆ ಮಾತು ಬೆಳೆಯಿತು. ಕೈಕೈ ಸೇರುವವರೆಗೆ ಹೋಯಿತು.

" ಅವಮಾನ ನಾವು ಸಹಿಸುವುದಕ್ಕಾಗುವುದಿಲ್ಲ. ಸಾಂಬಯ್ಯನ ಕರೆದುಕೊಂಡು ಬಂದು ನಾಟಕವಾಡಿಸದಿದ್ದರೆ ನೆರೆಹೊರೆಯವರು ನಮ್ಮನ್ನು ಬಾಳಗೊಡಿಸಲ್ಲ."

ಎಂದು ಕೆಲವರು ಆರ್ಭಟಿಸಿದರು.

ಕೊನೆಗೆ ಅವರಲ್ಲಿ ಒಂದು ಒಪ್ಪಂದವಾಯಿತು. ನಾಲ್ಕು ಜನ ಹೋಗಿ ಸಾಂಬಯ್ಯನನ್ನು ಕಂಡು ಅವನ ಸಲಹೆ ಕೇಳುವುದು. ಅವನು ಧೈರ್ಯವಾಗಿ ಸಂಪಿಗೆಗೆ ಬಂದು ನಾಟಕವಾಡಿಸುತ್ತೇನೆಂದರೆ ಮುಂದಿನ ವ್ಯವಸ್ಥೆ ಮಾಡುವುದು - ಅವನು ಒಪ್ಪದಿದ್ದರೆ ತಮ್ಮಮೇಲೆ ದೋಷವಿರುವುದಿಲ್ಲ.

ಸಂಪಿಗೆಯ ಮುಗುವಾಳಪ್ಪ, ಮುಸಿಯಪ್ಪ, ವೀರಣ್ಣ, ಗಣಾಚಾರಿ ನಿಯೋಗಗೋಷ್ಠಿಯೆಂದು ಊರಿನವರು ತೀರ್ಮಾನಮಾಡಿದರು. ಚಲುವಾಚಾರಿಯನ್ನು ಜತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ವಿಶ್ವಪ್ರಯತ್ನ ಮಾಡಿದರು. ಸಾಧ್ಯವಾಗಲಿಲ್ಲ. ಮಗಳ ಅಪಮೃತ್ಯುವಿನ ಭಯಂಕರ ಚಿತ್ರ ಅವನ ಮನಸ್ಸಿನಿಂದ ಮಾಸಿರಲಿಲ್ಲ.

ಸಂಪಿಗೆ ಗೋಷ್ಠಿಯವರು ಸಾಂಬನನ್ನು ಹೋಗಿ ಕಂಡು ತಮ್ಮೂರಿಗೆ ಬಂದು ನಾಟಕವಾಡಬೇಕೆಂದು ಪ್ರಾರ್ಥಿಸಿದರು.

" ಇದರಿಂದ ಕಾಳಾಚಾರಿ ಕೋಪಕ್ಕೆ ನೀವು ಪಾತ್ರರಾಗುತ್ತೀರಿ— ಗೊತ್ತೋ ? "

" ಗೊತ್ತು "

" ನಾಳೆ ಕಾಳಾಚಾರಿ ನಿಮ್ಮ ಮನೆ ಮಠ ಹಾಳುಮಾಡಿದರೆ ? "

“ಕಾಪಾಡುವುದಕ್ಕೆ ನೀವು ಇದ್ದೀರೆಂದು ನಮಗೆ ಧೈರ್ಯವಾಗಿದೆ.”

“ನಾನಿಲ್ಲದಿದ್ದರೇನುಮಾಡುತ್ತಿದ್ದಿರಿ?”

“ಅದಕ್ಕೇನು ಹೇಳುವುದು ಸಾಂಬಯ್ಯನವರೇ?”

ಸಾಂಬ ಸ್ವಲ್ಪಹೊತ್ತು ಯೋಚಿಸಿ

“ನಾನೀಗಲೇ ಉತ್ತರ ಹೇಳಲಾರೆ. ನಾಳೆ ನಿಮ್ಮಲ್ಲಿ ಯಾರಾದರೂ ಬನ್ನಿ. ನನ್ನ ಉತ್ತರ ಹೇಳಿಕಳುಹಿಸುತ್ತೇನೆ.”

ಎಂದ.

ಅವರು ಹೋಗುತ್ತಲೇ ಸಾಂಬ ಪುಟ್ಟೇಗೌಡನನ್ನು ಜತೆಯಲ್ಲಿ ಕರೆದುಕೊಂಡು ನಾಗಪ್ಪನನ್ನು ನೋಡುವುದಕ್ಕೆ ಸಂತೇಹಳ್ಳಿಗೆ ಹೋದ.

ಸಂಪಿಗೆಯವರು ಬಂದು ಕರೆದ ಸುದ್ದಿ ಕೇಳಿ ನಾಗಪ್ಪನಿಗೆ ತುಂಬ ಸಂತೋಷವಾಯಿತು.

“ಏನು ನಿಶ್ಚಯ ಮಾಡಿದೆ ಸಾಂಬಪ್ಪ” ಎಂದು ಕೇಳಿದ.

“ನೀವೇನು ನಿಶ್ಚಯಿಸಿದರೆ ಅದೇ ನನ್ನ ನಿಶ್ಚಯ – ಹೋಗು ಎಂದರೆ ಹೋಗುತ್ತೇನೆ – ಬೇಡವೆಂದರೆ ಬಿಡುತ್ತೇನೆ.”

“ಗೌಡರು ಏನು ಹೇಳುತ್ತಾರೆ.”

“ನಾನೇನು ಹೇಳಲಿ ನಾಗಪ್ಪಣ್ಣ. ನೀವೂ ಸಾಂಬಯ್ಯ ಹೇಗೆ ನಿಶ್ಚಯಿಸಿದರೂ ನನಗೆ ಸಂತೋಷವೇ. ಹೇಳಿದ ಕೆಲಸ ಮಾಡುವುದು ನನಗೆ ಗೊತ್ತಪ್ಪ. ಉಳಿದ ವಿಷಯ ನಿಮಗೆ ಸೇರಿದ್ದು.”

ನಾಗಪ್ಪನ ಮೇಲೆ ಎಲ್ಲ ಜವಾಬ್ದಾರಿ ಬಿದ್ದಿತು. ಅವನು ದೀರ್ಘಾಲೋಚನೆ ಮಾಡಿ

“ಸಾಂಬಯ್ಯ, ಕಾಳಾಚಾರಿ ಸುಮ್ಮನೆ ಇರುತ್ತಾನೆಯೇ?” ಎಂದ.

“ಖಂಡಿತವಾಗಿ ಇರುವುದಿಲ್ಲ.”

“ಅವನು ಮೇಲೆ ಬೀಳುವುದಂತೂ ಖಂಡಿತ. ಜತೆಗೆ ಒಡ್ಡರ ಬಯಲಿನ ಪುಂಡರ ಸಹಾಯ ಬೇರೆ.”

“ಒಡ್ಡರ ಬಯಲಿನವರು ಅರ್ಧ ಹಣ್ಣಾಗಿದ್ದಾರೆ ನಾಗಪ್ಪಣ್ಣ.”

ಎಂದು ಪುಟ್ಟೇಗೌಡ ಅಭಿಮಾನದಿಂದ ಹೇಳಿದ.

“ದುಷ್ಟರ ಸಹವಾಸ, ಎಚ್ಚರವಾಗಿರುವುದು ಒಳ್ಳೆಯದು.”

"ನಿಮ್ಮ ಮನಸ್ಸಿನಲ್ಲಿ ಏನಿದೆ ಸ್ಪಷ್ಟವಾಗಿ ಹೇಳಿ ನಾಗಪ್ಪಣ್ಣ" ಎಂದು ಸಾಂಬ ಕೇಳಿದ.

"ನೀನು ಹೋಗಿ ನಾಟಕವಾಡಿಸಲಿ ಎಂದು ತನ್ನ ಇಚ್ಛೆ. ಆದರೆ...."

"ಕಾಳಾಚಾರಿ ಎದುರು ನಿಲ್ಲಬಲ್ಲನೇ ಎಂದು ಅನುಮಾನವಲ್ಲವೇ ?"

"ಹಾಗೂ ಹೇಳಬಹುದು."

"ಆ ಬಗ್ಗೆ ನಿಶ್ಚಿಂತೆಯಾಗಿರಿ. ಕಾಳಾಚಾರಿ ಕೊನೆಗಾಲ ಸಮೀಪಿಸಿದೆ."

"ಹಾಗಾದರೆ ತಡವೇಕೆ ಮಾಡಬೇಕು. ಹುತ್ತದಲ್ಲಿ ಹಾವಿದೆಯೆಂದು ತಿಳಿದ ಮೇಲೂ, ಮಾಂತ್ರಿಕ ಬಂದ ಮೇಲೂ ತಡಮಾಡುವುದು ಜಾಣತನವಲ್ಲ"

ಎಂದು ನಾಗಪ್ಪ ಹೇಳಿದ.

ನಾಗಪ್ಪನ ಅಪ್ಪಣೆ ದೊರೆತುದಕ್ಕೆ ಸಾಂಬ ತುಂಬ ಸಂತೋಷಪಟ್ಟ.

"ಇನ್ನೊಂದು ಮಾತು ನಾಗಪ್ಪಣ್ಣ."

"ಹೇಳಪ್ಪಾ."

"ಸಂಪಿಗೆ ನಾಟಕದ ದಿವಸ ನೀವು ಅಲ್ಲಿಗೆ ಬರಬೇಕು."

"ಏಕೆ ?"

"ಶಿಷ್ಯನನ್ನು ಆಶೀರ್ವದಿಸುವುದಕ್ಕೆ."

"ನನ್ನ ಶಿಷ್ಯನನ್ನು ಜಗದ್ಧಾತ್ರಿಯೇ ಆಶೀರ್ವದಿಸಿದ್ದಾಳೆ."

"ಗುರುಕೃಪೆಯೂ ಬೇಕು."

"ಖಂಡಿತ ಬರುತ್ತೇನೆ."

ಎಂದು ನಾಗಪ್ಪ ಆಶ್ವಾಸನವಿತ್ತ.

ಮೂರನೆಯ ದಿನ ಸಾಂಬನನ್ನು ಹುಡುಕಿಕೊಂಡ ಬಂದ ಸಂಪಿಗೆಯ ಜನಕ್ಕೆ 'ನಾಟಕವಾಡಿಸುತ್ತೇನೆ. ದಿನ ಗೊತ್ತುಮಾಡಿ ತಿಳಿಸಿ. ಮುಂದಿನ ಶುಕ್ರವಾರ ಬೇಕಾದರೆ ಇಟ್ಟುಕೊಳ್ಳಿ. ಜನಸಹಾಯ ಬೇಕಾದರೆ ಪುಟ್ಟೇಗೌಡರನ್ನು ಕೇಳಿ' ಎಂದು ಸಾಂಬ ಹೇಳಿದ.

"ನಾಟಕ ಯಾವದು ಎಂದು ಡಂಗುರ ಹಾಕಿಸೋಣ."

" ನರಕಾಸುರವಧೆ ಇಟ್ಟುಕೊಳ್ಳಿ. "

" ಆಗಬಹುದು. "

" ಅಟ್ಟಣೆ ಎಲ್ಲಿ ಹಾಕಿಸುತ್ತೀರಿ. "

" ಮಾರುತಿ ಗುಡಿ ತಾವ ಬೈಲಿದೆ. ಅಲ್ಲಿ ಹಾಕಿಸೋಣ ಎಂದಿದ್ದೇವೆ."

" ಅಲ್ಲಿ ಬೇಡ. ಕಾಳಾಚಾರಿ ಮನೆಗೆ ಹೋಗುವ ದಾರಿಯಲ್ಲಿ ಮಾವಿನ ತೋಪಿದೆಯಲ್ಲಾ – ಅದರ ಪಕ್ಕದ ಬಯಲಿನಲ್ಲಿ ಹಾಕಿಸಿ. "

" ಕಾಳಾಚಾರಿ ಮನೆ ಎದುರಿಗೇ ಆಯಿತಲ್ಲಾ. "

" ಆಗಬೇಕೆಂದೇ ನನ್ನ ಇಚ್ಛೆ. "

ಸಂಪಿಗೆಯ ಜನಕ್ಕೆ ಪ್ರಾಣಸಂಕಟಕ್ಕೆ ಬಂದಿತು. ಸಾಂಬನ ಮಾತು ತೆಗೆದು ಹಾಕುವ ಹಾಗಿರಲಿಲ್ಲ. ಕಾಳಾಚಾರಿ ಬಗ್ಗೆ ಇದ್ದ ಭಯ ನಿವಾರಣೆಯಾಗಿರಲಿಲ್ಲ. ಅವರು ಅನುಮಾನಿಸುತ್ತಿದ್ದುದನ್ನು ಕಂಡು ಸಾಂಬ

" ಇನ್ನೂ ಭಯ ಹೋಗಿಲ್ಲವೇ ? "

" ಹೋಗಿದೆ – ಆದರೆ......... "

" ಮೊದಲು ಭಯಬಿಟ್ಟುಬಿಡಿ. ಭಯವಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ನನ್ನ ಮೇಲೆ ನಂಬಿಕೆ ಇದೆಯೋ ಇಲ್ಲವೋ ? "

" ಇಲ್ಲದಿದ್ದರೆ ನಾವು ನಿಮ್ಮ ಹತ್ತಿರ ಬರುತ್ತಿದ್ದೆವೇ ? "

" ಸರಿ – ಹೋಗಿ, ಉಳಿದ ವಿಷಯ ನನಗೆ ಬಿಡಿ. ನಿಮಗೆ ಯಾರಿಗೂ ಕಾಳಾಚಾರಿಯಿಂದ ಹಾನಿಯಾಗದ ಹಾಗೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ "

ಎಂದು ಹೇಳಿದ. ಸಾಂಬನ ಮಾತು ಕೇಳಿ ಸಂಪಿಗೆಯ ಜನಕ್ಕೆ ಹೋದ ಪ್ರಾಣ ಹಿಂದಿರುಗಿದಂತಾಯಿತು.

೨೨

ಸಂಪಿಗೆಯ ಜನ ಹುಲ್ಲೂರಿಗೆ ಹೋಗಿ ಸಾಂಬನನ್ನು ಕರೆದು ಬಂದ ಸುದ್ದಿ ಬಹಳ ದಿವಸ ಗುಟ್ಟಾಗಿ ಉಳಿಯಲಿಲ್ಲ. ಕಾಳಾಚಾರಿ ಕಿವಿಗೂ ಈ ಸುದ್ದಿ ಹನುಮನ ಮೂಲಕ ಮುಟ್ಟಿತು. ಕಾಳಾಚಾರಿಯ ರಕ್ತ ಒಳಗೇ ಕುದಿದರೂ ತೋರಗೊಡದೆ

"ಎಂದಂತೆ ನಾಟಕ" ಎಂದು ಕೇಳಿದ.

"ಮುಂದಿನ ಶುಕ್ರವಾರ. ಓಬಯ್ಯನಿಗೆ ಸುದ್ದಿ ಮುಟ್ಟಿಸ್ಲಾ ?"

"ಅವನು ಬಂದೇನುಮಾಡಬಲ್ಲಾ."

ಕರೆದರೆ ಓಬಯ್ಯ ಬರುತ್ತಾನೆಯೋ ಇಲ್ಲವೋ ಎನ್ನುವ ಭಯವೂ ಕಾಳಾಚಾರಿಗಿತ್ತು. ಹನುಮ ತನ್ನ ಅವಿವೇಕದಿಂದ ಆ ರಹಸ್ಯವನ್ನೆಲ್ಲಿ ಬಯಲಿಗೆಳೆದುಬಿಡುತ್ತಾನೋ ಎಂದು ಅಂಜಿ ಕಾಳಾಚಾರಿ

"ಹಾರವರ ಹೈದ ಬಹಳ ಹೆಚ್ಚಿಕೊಂಡಿದ್ದಾನೆ ಹನುಮ."

"ಹೌದು ಆಚಾರ್ರೇ. ಹಾಳಾಗಿ ಹೋಗಲಿ ಎಂತ ನೀವು ಬಿಡಬಾರದಾಗಿತ್ತು."

"ಹುಡುಗ ಎಂದು ನಾನು ನಿರ್ಲಕ್ಷ್ಯಮಾಡಿದೆ."

"ನಾಗಪ್ಪನ ಕುಮ್ಮಕ್ಕಿಲ್ಲದಿದ್ದರೆ ಸಾಂಬ ಇಷ್ಟು ಎಗರಲಾಡುತ್ತಿದ್ನಾ?"

"ನೀನು ಹೇಳುವುದು ನಿಜ. ಇದಕ್ಕೆಲ್ಲಾ ನಾಗಪ್ಪನೇ ಕಾರಣ."

"ನಾಟಕ ಆಗದ ಹಾಗೆ ಮಾಡಿಬಿಟ್ಟರಾಯ್ತು."

"ಅದು ಸರಿಯಲ್ಲ. ನಾಟಕವಾಗಲಿ. ಹಾರವರ ಹೈದ ಯಕ್ಷಣಿ ಮಾಡಿ ಯಾರಿದ್ದರೆ ಅವರ ಕೈಲಿ ವೇಷ ಹಾಕಿಸುತ್ತಾನಂತೆ. ನಾಟಕ ನೋಡೋದಿಕ್ಕೆ ಸಾವಿರಾರು ಜನ ಬಂದೇಬರುತ್ತಾರೆ. ಎಲ್ಲರ ಎದುರಿಗೆ ಹಾರವರ ಹೈದ – ಅವರಪ್ಪ – ಅವನ ಗುರು ಆ ನಾಗ ಎಲ್ಲರಿಗೂ ಬುದ್ಧಿ ಕಲಿಸುತ್ತೀನೆ. ಕಾಳಾಚಾರಿ ವ್ಯವಹಾರಕ್ಕೆ ಕೈಹಾಕಿದರೇನಾಗುತ್ತದೆ ಎನ್ನುವುದು ಎಲ್ಲರಿಗೂ ಸರಿಯಾಗಿ ತಿಳಿಯಲಿ."

"ಅದೇ ಸರಿ ಕಣಪ್ಪಾ."

ಎಂದು ಹನುಮ ಕನ್ನೊಡೆಯನ ಕುಶಾಗ್ರಬುದ್ಧಿಗೆ ಮೆಚ್ಚುಗೆ ವ್ಯಕ್ತಪಡಿಸಿದ.

ನಾಟಕದ ವ್ಯವಸ್ಥೆಗೆ ಹುಲ್ಲೂರಿನವರ ಸಹಾಯ ಕೇಳುವುದಕ್ಕೆ ಸಂಪಿಗೆಯವರು ಹೋಗಲಿಲ್ಲ. ಗುರುವಾರವೇ ಅಟ್ಟಣೆ ಹೇಳ ಹೆಸರಿಲ್ಲವಾಗಿರುತ್ತದೆಂದು ಸಂಪಿಗೆಯ ಜನ ಭಾವಿಸಿದ್ದರು. ಬೆಳಗ್ಗೆ ಬಂದು ನೋಡುವಲ್ಲಿ ಅಟ್ಟಣೆ ಅಚ್ಚಳಿಯದಿತ್ತು.

ಸಂಪಿಗೆಯಲ್ಲಿ ಸಾಂಬನ ನಾಟಕ ಶುಕ್ರವಾರ ಎಂದು ಕೇಳಿದಾರಭ್ಯ ನಾರಾಯಣಶಾಸ್ತ್ರಿಗಳಿಗೆ ಮನಶ್ಶಾಂತಿಯಿಲ್ಲ. ಪುಟ್ಟೇಗೌಡ, ವಿಶ್ವೇಶ್ವರ ಸಮಾಧಾನ ಹೇಳಿದರೂ ಶಾಸ್ತ್ರಿಗಳ ಆತಂಕ ಪರಿಹಾರವಾಗಲಿಲ್ಲ. 'ಈ ದಿವಸ ಒಂದಲ್ಲೊಂದು ದಿನ ಬರಲೇಬೇಕಾಗಿತ್ತು. ಈಗಾಗಲೇ ಬಂದ ಹಾಗಾಯಿತು' ಎಂದುಕೊಂಡರು.

ಸೀತಮ್ಮ ದೇವರ ಮುಂದೆ ತುಪ್ಪದ ದೀಪ ಹಚ್ಚಿಟ್ಟು ಮೈದುನನಿಗೆ ಒಳ್ಳೆಯದಾಗಲಿ ಎಂದು ಬೇಡಿಕೊಂಡಳು.

ಶುಕ್ರವಾರ ಸಂಜೆಯ ವೇಳೆಗೆ ಎಲ್ಲದಿಕ್ಕುಗಳಿಂದ ಸಾಲುಸಾಲಾಗಿ ಗಾಡಿಗಳು ಸಂಪಿಗೆಗೆ ಬರಲಾರಂಭಿಸಿದವು. ಒಡ್ಡರ ಬಯಲಿನವರೂ ಬಂದು ಸೇರಿದರು. ಉದ್ದೇಶಪೂರ್ವಕವಾಗಿಯೇ ಪುಟ್ಟೇಗೌಡ ಹುಲ್ಲೂರಿನ ಜನರನ್ನು ಸುತ್ತುಮುತ್ತಲಿನ ನಾಲ್ಕಾರು ಹಳ್ಳಿಯವರನ್ನೂ ಕರೆದುಕೊಂಡು ಬಂದಿದ್ದ.

ನಾಟಕದ ವೇಳೆ ಸಮೀಪಿಸಿತು. ಸಾಂಬ ಇನ್ನೂ ಬಂದಿರಲಿಲ್ಲ. ಊರಿನವರು ಪುಟ್ಟೇಗೌಡನನ್ನು ಕೇಳಿದರು.

"ನೀವೇಕೆ ಯೋಚನೆ ಮಾಡುತ್ತೀರಿ. ದೀಪ ಅಂಟಿಸಿ. ಸಾಂಬಯ್ಯ ಹೊತ್ತಿಗೆ ಸರಿಯಾಗಿ ಬರುತ್ತಾನೆ"

ಎಂದು ಹೇಳಿದ.

ಜನ ಬಯಲು ತುಂಬ ಕಿಕ್ಕಿರಿದು ತುಂಬಿದರು. ಊರಿನ ಜಾತ್ರೆ ಕಾಲದಲ್ಲಿ ಕೂಡ ಇಷ್ಟು ಜನ ಸೇರುವುದಿಲ್ಲವೆಂದು ಜನ ಮಾತನಾಡಿಕೊಂಡರು.

ಸಾಂಬ ಹೊತ್ತಿಗೆ ಸರಿಯಾಗಿ ರಂಗದಮೇಲೆ ಮೃದಂಗ ಸಹಿತ ಕಾಣಿಸಿಕೊಂಡ. ಪ್ರೇಕ್ಷಕ ವರ್ಗದಿಂದ ಎಂಟು ಹತ್ತು ಜನರನ್ನು ಆರಿಸಿಕೊಂಡ. ಅವರಿಗೆ ವೇಷ ಭೂಷಣ ಹಾಕಿಸಿ ನಾಟಕವಾರಂಭಿಸಿಬಿಟ್ಟ.

ನಾಟಕ ಮಧ್ಯರಾತ್ರಿ ದಾಟಿತು. ನರಕಾಸುರ ದೇವತೆಗಳನ್ನೂ ಮಾನವರನ್ನೂ ಹಿಂಸೆಮಾಡಿ ಗೋಳುಗುಟ್ಟಿಸುವ ದೃಶ್ಯ ಸಾಗಿತ್ತು. ನರಕಾಸುರನ ನೃತ್ಯ – ಅವನ ಪಕ್ಷದವರ ನೃತ್ಯ - ದೇವತೆಗಳು, ಮಾನವರ ನೃತ್ಯ ರಂಗಮಂಚ ಪುಡಿಗುಟ್ಟಿಹೋಗುವಂತೆ ನಡೆದಿತ್ತು. ಅವರೆಲ್ಲರ ಕುಣಿ

ತದ, ಹಾಡಿಕೆಯ ಧ್ವನಿಯ ಮೇಲೆ ಸಾಂಬನ ಮೃದಂಗ ಕೇಳಿಸುತ್ತಿತ್ತು. ದೃಶ್ಯ ರಸವತ್ತಾಗಿ ನಡೆದಿದ್ದಂತೆ. ಸಾಂಬನ ಮೃದಂಗದ ಬಲ ಚರ್ಮ ಹರಿದು ಹೋಯಿತು. ಛಾಪಿನಲ್ಲಿ ಬಂದ ಅಪಶ್ರುತಿ ಕೇಳಿ ಜನ ಆಶ್ಚರ್ಯ ಗೊಂಡರು.

ಸಾಂಬ ಮೃದಂಗದ ಮೇಲೆ ಕೈಯಿಟ್ಟುಕೊಂಡು ಎದುರಿಗೆ ದೃಷ್ಟಿ ಬೀರಿದ.

ರಂಗದೆದುರಿಗೆ ಸರಿಯಾಗಿ ಕಾಳಾಚಾರಿ ತನ್ನ ದೊಣ್ಣೆಯೂರಿಕೊಂಡು ಅದರಾಶ್ರಯದಲ್ಲಿದ್ದ ಮುಂಗೈಮೇಲೆ ಗಲ್ಲವನ್ನಿಟ್ಟು ರಂಗವನ್ನೇ ಈಕ್ಷಿಸುತ್ತಿದ್ದ.

ಸಾಂಬ ನಸುನಗುತ್ತಾ ಹತ್ತಿರವಿದ್ದ ರವೆಗೆ ನೀರು ಹಾಕಿ ಕಲಸಿ ಒಂದು ಪಟ್ಟೆ ಮಾಡಿ ಮೃದಂಗಕ್ಕೆ ಮೆತ್ತಿದ.

ಕಾಳಾಚಾರಿ ಬಂದು ನಿಂತುದನ್ನು ನೋಡಿ ಜನ ಭಯಗ್ರಸ್ತರಾದರು. ಅಲ್ಲಿರಬಾರದು - ಹೊರಗೆ ಹೋಗಬಾರದು ಅವರ ಸ್ಥಿತಿ. ತುಟಿಪಿಟಕ್ಕೆನ್ನು ವುದಕ್ಕೆ ಯಾರಿಗೂ ಧೈರ್ಯವಿಲ್ಲ. ಹೇಗೆ ಹೇಗೆ ಕುಳಿತಿದ್ದವರು ಹಾಗೆ ಹಾಗೇ ಕುಳಿತರು; ನಿಂತಿದ್ದವರು ನಿಂತೇ ಇದ್ದರು.

ಮೃದಂಗಕ್ಕೆ ಹಚ್ಚಿದ ಕಾರಣೆ ಒಣಗಲು ಸಾಂಬ ಮೆಲ್ಲನೆ ಅದನ್ನು ಪರೀಕ್ಷಿಸಿ ಕಾಳಾಚಾರಿಯ ಕಡೆ ನೋಡಿ

" ಇಷ್ಟು ಹೊತ್ತಾದರೂ ನೀನು ಬರಲಿಲ್ಲವೆಂದಿದ್ದೆ. ಬಂದೆಯಾ"

ಎಂದು ಹೇಳಿ ಬಲವಾಗಿ ಮೃದಂಗದ ಮೇಲೆ ಒಂದು ಛಾಪುಹಾಕಿದ. ಕಾಳಾಚಾರಿ ಅದೇ ಭಂಗಿಯಲ್ಲಿ ನಿಂತೇ ಇದ್ದ. ಅವನು ಕಣ್ಣು ಕೂಡ ಎವೆ ಹಾಕಲಿಲ್ಲ.

" ನಾಟಕ ಮುಂದೆ ಸಾಗಲಿ "

ಎಂದು ಸಾಂಬ ನಟವರ್ಗಕ್ಕೆ ಆಜ್ಞಾಪಿಸಿದ. ನಾಟಕ ಪುನಃ ಆರಂಭವಾಯಿತು.

ಜನ ಒಮ್ಮೆ ರಂಗದಮೇಲೆ ನಡೆಯುತ್ತಿದ್ದ ನಾಟಕ ನೋಡುವರು; ಒಮ್ಮೆ ಕಾಳಾಚಾರಿ ಕಡೆ ನೋಡುವರು. ಕಾಳಾಚಾರಿ ಮಿಸುಕಾಡಲೇ ಇಲ್ಲ. ಮಂತ್ರಬಂಧಿತನಾಗಿ ಶಿಲಾಮೂರ್ತಿಯಂತೆ ನಿಂತೇ ಇದ್ದ.

ನಾಟಕ ತಡೆಯಿಲ್ಲದೆ ಸಾಗಿತು. ಕೊನೆಯ ದೃಶ್ಯ ಮುಗಿಯುವ ಹೊತ್ತಿಗೆ ಬೆಳಗಾಯಿತು, ನಟರು ಮಂಗಳ ಹಾಡಿದರು.

ನಾಟಕ ಮುಗಿದಮೇಲೆ ಸಾಂಬ ರಂಗಮಂಚ ಬಿಟ್ಟು ಕಾಳಾಚಾರಿ ನಿಂತಿದ್ದೆಡೆ ಬಂದ. ಜನ ದೂರ ಸರಿದು ಅವನಿಗೆ ಭಯ ಭೀತಿಯಿಂದ ದಾರಿ ಮಾಡಿಕೊಟ್ಟರು.

ಸಾಂಬ ಊರಿನವರನ್ನು ಹತ್ತಿರ ಕರೆದು

"ಈ ಮಣ್ಣುಬೊಂಬೆಗೆ ಇಷ್ಟು ಹೆದರುತ್ತೀರಾ ?" ಎಂದು ಕೇಳಿದ.

ಮುಗವಾಳಪ್ಪ ಸ್ವಲ್ಪ ಧೈರ್ಯ ತಂದುಕೊಂಡು

"ಆಚಾರಿ ಇಂಗೇ ಇನ್ನೇಸುದಿನ ನಿಂತಿರಬೇಕಪ್ಪಾ?"

ಎಂದು ಕೇಳಿದ.

ಸಾಂಬ ಅವನ ಪ್ರಶ್ನೆಗೆ ನಸುನಕ್ಕು

"ಕಲಿಯುಗ ಮುಗಿಯುವವರೆಗೆ"

ಎಂದು ಹೇಳಿದ.

ಮುಸಿಯಪ್ಪ ಕೈಜೋಡಿಸಿ

"ಸಾಂಬಪ್ನೋರೆ— ಆಳಾಗಿ ಓಗಲಿ — ಬಿಡಗಡೆ ಮಾಡಿಬಿಡಿ. ನಾವ್ಯಾಕೆ ನಿತ್ಯ ಈ ಪ್ರಾಲಬ್ಧ ನೋಡಬೇಕು"

ಎಂದು ಅಂಗಲಾಚಿದ.

ಸಾಂಬ ಮೃದಂಗವನ್ನು ಮುಂದಕ್ಕೆಳೆದುಕೊಂಡು ಅದರ ಮೇಲೆ ಒಂದು ಛಾಪು ಹೊಡೆದ.

ಕಾಳಾಚಾರಿಯ ಮೂರ್ತಿಗೆ ಜೀವಕಳೆ ಬಂತು. ಆಚಾರಿ ಅಲುಗಾಡಿದ. ಒಂದೆರಡು ಬಾರಿ ಕಣ್ಣುಮುಚ್ಚಿ ಕಣ್ಣುತೆಗೆದು ಎದುರಿಗೆ ನಿಂತಿದ್ದ ಸಾಂಬನನ್ನು ನೋಡಿ ಕೈಯಲ್ಲಿದ್ದ ದೊಣ್ಣೆ ಬಿಸುಟು ಅವನ ಎರಡು ಪಾದಗಳನ್ನು ಹಿಡಿದು ಸಾಷ್ಟಾಂಗ ನಮಸ್ಕಾರ ಮಾಡಿ

"ಮಹಾಪರಾಧವಾಯಿತು. ಪ್ರಾಣಕೊಟ್ಟು ಕಾಪಾಡಬೇಕು"

ಎಂದು ಬೇಡಿಕೊಂಡ.

ಸಾಂಬ ಕಾಳಾಚಾರಿಯನ್ನು ದಿಟ್ಟಿಸಿ ನೋಡಿ

" ಈಗಲಾದರೂ ಬುದ್ಧಿ ಬಂತೇ? ನಿನ್ನ ಶಕ್ತಿಗೂ ಮಿಗಿಲಾದ ಶಕ್ತಿ ಇದೆಯೆನ್ನುವುದು ಗೊತ್ತಾಯಿತೇ? ನಿನ್ನ ಪ್ರಾಣ ಕಟ್ಟಿಕೊಂಡು ನನಗಾಗ ಬೇಕಾದುದೇನು – ಹೋಗು ಬದುಕಿಕೋ ಹೋಗು. "

ಎಂದು ಮೃದಂಗದಮೇಲೆ ಮತ್ತೊಂದು ಏಟು ಹಾಕಿದ.

ಸಾಂಬ ಎರಡನೆಯ ಸಾರಿಗೆ ಛಾಪು ಹಾಕುವುದೇ ತಡ - ಆಚಾರಿಯ ಬಾಯಲ್ಲಿನ ಹಲ್ಲುಗಳೆಲ್ಲಾ ಪಟಪಟನೆ ಉದುರಿದವು. ಆಚಾರಿ ಬಾಯಿಗೆ ಬಟ್ಟೆ ತುರುಕಿಕೊಂಡು ಅಲ್ಲಿ ಸಿಲ್ಲದೆ ಓಡಿಬಿಟ್ಟ.

ಜನ ಸಾಲುಸಾಲಾಗಿ ಸಾಂಬನಿಗೆ ಉದ್ದಂಡ ಪ್ರಣಾಮ ಹಾಕಿದರು. ದೂರದಲ್ಲಿದ್ದ ನಾಗಪ್ಪ ಸಾಂಬನಿಗೆ ಮುಖ ತೋರಿಸಿ ಮಾಯವಾದ.

ಪದ್ಧತಿಯಂತೆ ನಟರು ಬಣ್ಣ ಬಟ್ಟೆ ಸಹಿತ ದೇವಸ್ಥಾನಕ್ಕೆ ಹೋಗಲಣಿ ಯಾದರು. ಸಾಂಬನೂ ಬರಬೇಕೆಂದು ಬಯಸಿದರು.

" ನಾನು ಬರಲಾರೆ– ನೀವು ಹೋಗಿ ಬನ್ನಿ. "

" ನಾವು ಪೂಜೆ ಮುಗಿಸಿ ಬರುವವರೆಗೆ ಇಲ್ಲೇ ಇರಬೇಕಪ್ಪಾ. "

" ಆಗಲಿ – ಇರುತ್ತೇನೆ – ಹೋಗಿಬನ್ನಿ "

ಎಂದು ಹೇಳಿದ.

ಮುಸಿಯಪ್ಪ ಓಡಿಹೋಗಿ ಮನೆಯಿಂದ ಒಂದು ಜಮಖಾನಾ, ದಿಂಬು ತಂದು ರಂಗದಮೇಲೆ ಹಾಸಿದ. ಸಾಂಬ ಮೃದಂಗವಿಳಿಸಿ ಕಾಲು ಚಾಚಿ ಕೊಂಡು ಮಲಗಿದ.

ಸಾಂಬನನ್ನು ಯಾವರೀತಿ ಗೌರವಿಸಬೇಕೆಂಬುದು ಊರಿನವರಿಗೆ ತಿಳಿ ಯದಾಯಿತು. ಮುಗವಾಳಪ್ಪ ಕಾಸಿದ ಒಂದು ಚಂಬು ಬಿಸಿ ಹಾಲನ್ನು ಬಾಳೆಯ ಹಣ್ಣು, ಸಕ್ಕರೆ, ತುಪ್ಪ ತಂದು ಸಾಂಬನ ಮುಂದಿಟ್ಟ.

ಸಾಂಬ ಪುಟ್ಟೇಗೌಡನೊಂದಿಗೂ ಊರಿನ ಹಿರಿಯರೊಂದಿಗೂ ಮಾತ ನಾಡುತ್ತ ಉಪಹಾರ ಸ್ವೀಕರಿಸಿದ.

ಬೆಳಕು ಚೆನ್ನಾಗಿ ಹರಿದು ಎಳೆ ಬಿಸಿಲು ಮೂಡಿತು. ಪೂಜೆಗೆ ಹೋಗಿದ್ದ ಜನ ಗಾಬರಿಯಾಗಿ ಓಡಿ ಬಂದು ಸಾಂಬನ ಮುಂದೆ ನಿಂತರು.

" ಏನಾಯಿತು " ಎಂದು ಸಾಂಬ ಕೇಳಿದ.

" ಬನ್ನಿ ಬುದ್ಧಿ – ನೋಡಬನ್ನಿ "

ಎಂದು ಜನ ಕೂಗಿದರು.

ಸಾಂಬ ಎದ್ದು ಅವರೊಂದಿಗೆ ಹೊರಟ. ಜನ ಅವನನ್ನು ಕಾಳಾಚಾರಿ ಮನೆಗೆ ಕರೆದುಕೊಂಡು ಹೊರಟರು.

ಕಣ್ಣು ಮುಂದಿದ್ದ ನೋಟವನ್ನು ಸಾಂಬ ನೋಡಲಾರದೆ ಹೋದ. ಆ ರುದ್ರಭೀಕರ ದೃಶ್ಯ ಜನರ ಜಂಘಾಬಲವನ್ನು ಉಡುಗಿಸಿತ್ತು.

ಕಾಳಾಚಾರಿ ನೆಲದಮೇಲೆ ಬಿದ್ದಿದ್ದಾನೆ. ಭದ್ರಮ್ಮ ತಲೆ ಬಿರಿಹುಯಿದುಕೊಂಡು ಅವನ ಬಳಿ ಕುಳಿತು, ಅವನ ಹೊಟ್ಟೆ ಬಗೆದು ಚಿಮ್ಮುತ್ತಿದ್ದ ರಕ್ತವನ್ನು ಬೊಗಸೆಗಟ್ಟಳೆ ಕುಡಿಯುತ್ತಿದ್ದಾಳೆ. ಅವಳ ಮೈಮೇಲೆ ಪ್ರಜ್ಞೆಯೇ ಇಲ್ಲ. ಕಾಳಾಚಾರಿಗೂ ಭದ್ರಮ್ಮನಿಗೂ ರಕ್ತದ ಸ್ನಾನವಾಗಿ ಹೋಗಿದೆ. ಹತ್ತಿರ ಅಳುತ್ತ ನಿಂತಿದ್ದ ಹನುಮನನ್ನು ಕುರಿತು ಸಾಂಬ

"ಏನಾಯಿತು" ಎಂದು ಕೇಳಿದ.

ಹನುಮ ಗದಗದ ನಡುಗುತ್ತ ಎದುರು ನಿಂತ. ಅವನ ಬಾಯಿ ತೊದಲುತ್ತಿತ್ತು. ಮಾತು ಹೊರಡದು.

"ಹೆದರ ಬೇಡ ಹೇಳು"

ಎಂದು ಸಾಂಬ ಹೇಳಿದ.

"ಆಚಾರ್ರು ಬರೋ ಹೊತ್ಗೆ ಭದ್ರಮ್ಮ ಬಾಗಿಲಲ್ಲಿ ನಿಂತಿದ್ದಳು. ಯಾಕೋ ಆಯಮ್ಮ ಕೋಪಮಾಡಿಕೊಂಡಹಾಗಿತ್ತು. ಆಚಾರ್ರು ಒಳಗೆ ಹೋದಕೂಡಲೇ ಹಾರೆಯೆತ್ತಿ ಅವರ ತಲೆಮ್ಯಾಕೆ ಹೊಡೆದಳು. ಆಚಾರ್ರು ಕೆಳಗೆ ಬಿದ್ದರು. ಅದೇ ಹಾರೆಯೆತ್ತಿ ಆಚಾರ್ರ ಎದೇಗೆ ಹೊಟ್ಟೇಗೆ ಹೊಡೆದಳು. ಗಾಯವಾಯಿತು. ಗಾಯ ಬಗೆದು ರಕ್ತ ಕುಡಿಯೋಕೆ ಸುರು ಮಾಡಿದ್ಳು."

"ನೀನೇನು ಮಾಡುತ್ತಿದ್ದೆ."

"ಆಚಾರ್ನ ಬಿಡಿಸಿಕೊಳ್ಳೋ ಯತ್ನಮಾಡಿದೆ. ಯಾಕೊ ಮುಂದಕ್ಕೆ ಹೆಜ್ಜೆ ಇಡೋಕೆ ಆಗ್ಲಿಲ್ಲ ಬುದ್ಧಿ. ಯಾರೋ ಹಿಡಿದು ಹಿಂದಕ್ಕೆ ಜಗ್ಗಿದಂತೆ ಆಗುತ್ತಿತ್ತು."

ಪಕ್ಕದಲ್ಲಿದ್ದ ಮುಗವಾಳಪ್ಪನಿಗೆ ಸಾಂಬ "ಅರಿಶಿನ, ಕುಂಕುಮ, ಹೂವು ಬೇಗ ತರಿಸು."

ಎಂದು ಹೇಳಿದ. ಮುಗವಾಳಪ್ಪನೇ ಮನೆಗೆ ಓಡಿಹೋಗಿ ಸಾಂಬ

ಕೇಳಿದ ಪದಾರ್ಥಗಳನ್ನು ತಂದಿತ್ತ. ಸಾಂಬ ಜನಗಳನ್ನೆಲ್ಲಾ ಹೊರಗೆ ಕಳುಹಿಸಿ, ಅರಶಿನ, ಕುಂಕುಮ ಹೂಗಳಿಂದ ಪೂಜಿಸಿ ನೂರೊಂದು ಬಾರಿ ಪ್ರದಕ್ಷಿಣ ನಮಸ್ಕಾರ ಹಾಕಿ ಕೈಜೋಡಿಸಿಕೊಂಡು

"ಮಹಾತಾಯಿ, ಜಗದ್ಧಾತ್ರಿ, ಭವಾನಿ ಶಾಂತಳಾಗು ತಾಯಿ, ಶಾಂತಳಾಗು. ನೀನು ಹೀಗೆ ಉಗ್ರಸ್ವರೂಪ ಪ್ರಕಟಮಾಡಿದರೆ ಲೋಕ ಭಸ್ಮವಾಗಿ ಹೋಗುತ್ತದೆ. ನಿನ್ನ ಮಗನ ಮೇಲೆ ಕರುಣೆಯಿಟ್ಟು ಸೌಮ್ಯಳಾಗು ತಾಯಿ"

ಎಂದು ಬೇಡಿದ.

ಭದ್ರಮ್ಮ ಕುಳಿತಲ್ಲಿಯೇ ಸೊರಗಿ ಬಿದ್ದುಬಿಟ್ಟಳು.

ಸಾಂಬ ಹೊರಗೆ ಬಂದ.

"ಏನಾಯಿತಪ್ಪಾ" ಎಂದು ಜನ ಕೇಳಿದರು.

"ಭದ್ರಮ್ಮನ ಕಷ್ಟ ಪರಿಹಾರವಾಯಿತು. ಆಕೆ ತಾಯಿಪಾದ ಸೇರಿದಳು."

ಎಂದು ಹೇಳಿ ಅಲ್ಲಿ ನಿಲ್ಲದೆ ಊರಿಗೆ ಹೊರಟುಬಿಟ್ಟ.

ಊರಿನವರು ಕಾಳಾಚಾರಿ, ಭದ್ರಮ್ಮನ ಶವಗಳನ್ನು ಪ್ರತ್ಯೇಕವಾಗಿ ಸಾಗಿಸಿದರು. ಕಾಳಾಚಾರಿಯನ್ನು ಸುಟ್ಟು, ಭದ್ರಮ್ಮನನ್ನು ಮಣ್ಣು ಮಾಡಿದರು.

ಊರಿನವರು ಅಂದೇ ಕಾಳಾಚಾರಿಯ ಮನೆಯಲ್ಲಿದ್ದ ದನಗಳನ್ನು ಅಟ್ಟಿ ಮನೆಗೆ ಬೆಂಕಿಯಿಟ್ಟುಬಿಟ್ಟರು ಕಾಳಾಚಾರಿಯ ಅವಶೇಷ ಕೂಡ ಉಳಿಯಲಿಲ್ಲ. ಜನ ಆ ದಾರಿಯಲಿ ಸುಳಿಯುವುದನ್ನು ಬಿಟ್ಟುಬಿಟ್ಟರು.

ಸಂಪಿಗೆ ಬಿಟ್ಟ ಸಾಂಬ ನೇರವಾಗಿ ಊರಿಗೆ ಹೋಗಲಿಲ್ಲ. ಸಂತೇಹಳ್ಳಿಯ ಸಮೀಪದಲ್ಲಿದ್ದ ತನ್ನ ಮಂಟಪಕ್ಕೆ ಹೋಗಿ ಅಲ್ಲಿ ಕೆಲವು ಶಾಂತಿ ವಿಧಿಗಳನ್ನು ಪೂರೈಸಿಕೊಂಡು ಸ್ನಾನಮಾಡಿ ಅವನು ಊರು ತಲುಪಬೇಕಾದರೆ ಮಧ್ಯಾಹ್ನವಾಗಿತ್ತು.

ಈವೇಳೆಗಾಗಲೇ ಪುಟ್ಟೇಗೌಡ ಮತ್ತಿತರರು ನಾರಾಯಣಶಾಸ್ತ್ರಿಗಳಿಗೆ ಸಂಪಿಗೆಯಲ್ಲಿ ನಡೆದ ವಿದ್ಯಮಾನವನ್ನರುಹಿದ್ದರು. ಮಗನ ಜೀವಕ್ಕೆ ಧಕ್ಕೆ ಬರಲಿಲ್ಲವೆಂದು ಶಾಸ್ತ್ರಿಗಳು ಸಂತೋಷಪಟ್ಟರು.

ಸಾಂಬನ ದಾರಿ ನೋಡುತ್ತ ಶಾಸ್ತ್ರಿಗಳು ನಿಂತರು. ಸಾಂಬ ಬಂದ

ಪನೇ ತಂದೆಯ ಸಮೀಪಕ್ಕೆ ಬರದೆ ಸ್ವಲ್ಪ ದೂರ ನಿಂತ. ಶಾಸ್ತ್ರಿಗಳು ಮಾತನಾಡಲಿಲ್ಲ. ಸಾಂಬ ಮೆಲ್ಲನೆ

"ಅಣ್ಣಯ್ಯ, ನಿನ್ನ ಎರಡೂ ಪಾದ ಮುಟ್ಟಿ ನಮಸ್ಕಾರಮಾಡಬೇಕೆಂದು ಮನಸ್ಸು ತವಕಪಡುತ್ತಿದೆ. ಆದರೆ ಸಾಧ್ಯವಿಲ್ಲ. ಕ್ಷಮಿಸು."

ಎಂದ.

"ನಾನು ಬಲ್ಲೆ ಬಾಪ್ಪ"

ಎಂದು ಶಾಸ್ತ್ರಿಗಳು ಮಗನನ್ನು ಹತ್ತಿರ ಕರೆದು ಅಪ್ಪಿ ಆನಂದಬಾಷ್ಪ ಸುರಿಸಿದರು.

೨೩

ಕಾಳಾಚಾರಿಯ ಪರಿಸಮಾಪ್ತಿಯಾದಮೇಲೆ ಸಾಂಬನ ಕೀರ್ತಿಭಾನು ವಿಕಾಸವಾಗತೊಡಗಿತು. ಹುಲ್ಲೂರು, ಸಂಪಿಗೆಯ ಜನರಲ್ಲದೆ ಸುತ್ತುಮುತ್ತಲಿನ ಹಳ್ಳಿಯವರೂ ಅವನನ್ನು ದೇವರವತಾರ ಎಂದು ಭಾವಿಸತೊಡಗಿದರು. ವಿಶ್ವೇಶ್ವರನ ವೈದಿಕವೃತ್ತಿ ಇಮ್ಮಡಿಯಾಗಿ ಬೆಳೆಯಿತು.

ಮೃತ್ಯುಂಜಯಶಾಸ್ತ್ರಿಯನ್ನು ಈರ್ಷೆ ಸುಡುತ್ತಿತ್ತು. ನಾರಾಯಣ ಶಾಸ್ತ್ರಿಗಳು, ಅವರ ಮಕ್ಕಳ ಪ್ರಾಬಲ್ಯ ಕಡಿಮೆಮಾಡುವುದಕ್ಕೆ ತಾನು ಮಾಡಿದ ಪ್ರಯತ್ನ, ಪಟ್ಟ ಶ್ರಮವೆಲ್ಲಾ ನಿಷ್ಪ್ರಯೋಜಕವಾಯಿತಲ್ಲಾ ಎಂದು ಹಲುಬಿದ. ಅವನ ಆಪ್ತರಾದ ತಮ್ಮಯ್ಯಶಾಸ್ತ್ರಿ, ಯಜ್ಞನಾರಾಯಣಶಾಸ್ತ್ರಿಗಳೂ ದಾರಿ ತೋರಲಸಮರ್ಥರಾದರು. ಕಾಳಾಚಾರಿಯ ಮುಖಾಂತರ ಶಾಸ್ತ್ರಿಗಳ ಪ್ರಭಾವ ಕೊನೆಗಾಣಿಸಬೇಕೆಂದು ಅವನು ಹಾಕಿಕೊಂಡಿದ್ದ ಎಣಿಕೆಯೂ ಫಲಪ್ರದವಾಗಲಿಲ್ಲ.

ಒಡ್ಡರಬಯಲಿನವರ ನೆರವು ಕೇಳುವುದು ದುಸ್ಸಾಧ್ಯವಾಯಿತು. ಕಾಳಾಚಾರಿಗಾದ ಗತಿ ಕಂಡು ಅವರು ಹೆದರಿ ಭೂಮಿಗಿಳಿದುಹೋಗಿದ್ದರು. ಶಾಸ್ತ್ರಿಗಳ ವಿರುದ್ಧ ಯಾರು ಬಂದು ಏನೇ ಹೇಳಿದರೂ ಒಡ್ಡರ ಬಯಲಿನವರು ಕಿವಿಯಮೇಲೆ ಹಾಕಿಕೊಳ್ಳುತ್ತಿರಲಿಲ್ಲ.

ಏನು ಮಾಡಬೇಕೆಂದು ಮೃತ್ಯುಂಜಯಶಾಸ್ತ್ರಿ ಯೋಚಿಸುತ್ತಿದ್ದಂತೆ ತುಮಕೂರಿಗೆ ಹೋಗಿದ್ದ ತಮ್ಮಯ್ಯಶಾಸ್ತ್ರಿ ಒಂದು ಸಂತೋಷದ ಸುದ್ದಿ ತಂದ.

ಚಾತುರ್ಮಾಸ ಕಳೆಯುವುದಕ್ಕೆ ತುಮಕೂರಿನಲ್ಲಿ ಬೀಡುಬಿಟ್ಟಿದ್ದ ಭೃಂಗ ಗಿರಿ ಶ್ರೀ ಶಂಕರಾನಂದ ಭಾರತಿ ಸ್ವಾಮಿಗಳವರು ಆ ಮಾರ್ಗವಾಗಿಯೇ ಹೋಗುವುದಾಗಿ ಹೇಳಿದ.

" ಅದರಿಂದ ನನಗೆ ಬಂದ ಭಾಗ್ಯವೇನು ? "

ಎಂದು ಮೃತ್ಯುಂಜಯಶಾಸ್ತ್ರಿ ಬೇಸರದಿಂದ ಕೇಳಿದ.

" ಸ್ವಾಮಿಗಳ ಮಠದ ಏಜೆಂಟ್ ರಾಮಾಶಾಸ್ತ್ರಿ ನಿನ್ನ ಸಹಪಾಠಿ ಯಂತೆ. "

" ಹೌದು. ನನ್ನ ಕೇಳಿದನೇನು ? "

" ತುಂಬ ಕೇಳಿದ. ಸ್ವಾಮಿಗಳ ದರ್ಶನಕ್ಕೆ ಮೃಂತ್ಯುಂಜಯ ಬರಲೇ ಇಲ್ಲವಲ್ಲಾ ಎಂದು ವ್ಯಸನಪಟ್ಟ. "

" ನಾರಾಯಣಶಾಸ್ತ್ರಿಗಳ ಕಾಟ ಕಳೆದಮೇಲೆ ತಾನೇ ನಾನು ಮಿಕ್ಕ ದ್ದನ್ನು ಕುರಿತು ಯೋಚನೆ ಮಾಡುವುದು. "

" ಆ ಕಾಟ ಕಳೆಯುವುದಕ್ಕೆ ದೇವರೇ ಈಗ ಅನುಕೂಲ ಕೊಟ್ಟಿದ್ದಾನೆ"

" ಏನು ಅನುಕೂಲವೋ – ನಾನು ಕಾಣೆನಪ್ಪಾ. "

" ಏಕೋ ಶಾಸ್ತ್ರಿ ಇಷ್ಟು ಅವಿವೇಕಿಯಾದೆ. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳುತ್ತಾರೇನಯ್ಯಾ ? "

" ತಮ್ಮಯ್ಯಾ - ನೀನು ಬಹಳ ಯೋಚನೆಮಾಡಿಕೊಂಡು ಬಂದಿರುವ ಹಾಗಿದೆ. ಏನದು ವಿವರವಾಗಿ ಹೇಳಿಬಿಡು. "

" ನೋಡು ಮೃತ್ಯುಂಜಯ. ಸ್ವಾಮಿಗಳು ತಪೋಧನರೆಂದೂ, ಸನಾ ತನ ಧರ್ಮೋದ್ಧಾರಕರೆಂದೂ ಪ್ರಸಿದ್ಧರಾಗಿದ್ದಾರೆ. ಅವರ ತಪಸ್ಸು ಎಷ್ಟು ದೊಡ್ಡದೋ ಅವರ ಕೋಪವೂ ಅಷ್ಟೇ ದೊಡ್ಡದು. ನೀನು ರಾಮಾಶಾಸ್ತ್ರಿ ಮುಖಾಂತರ ಸಾಂಬ, ಅವರಪ್ಪನ ಅವೈದಿಕ ನಡೆವಳಿಕೆ ಸ್ವಾಮಿಗಳ ಕಿವಿಗೆ ಮುಟ್ಟಿಸಬಹುದು. ಹೇಗೂ ಸ್ವಾಮಿಗಳು ಈ ಮಾರ್ಗವಾಗಿ ಊರಿಗೆ ಪ್ರಯಾಣ ಬೆಳಸುತ್ತಾರೆ. ಅವರನ್ನು ಒಂದು ದಿವಸ ಇಲ್ಲಿ ಉಳಿಸಿ ಕೊಂಡು ನಾರಾಯಣಶಾಸ್ತ್ರಿಗಳಿಗೂ, ಅವರ ಮಕ್ಕಳಿಗೂ ಛೀಮಾರಿ ಮಾಡಿ ಸಿದರೆ ನಿನ್ನ ಗ್ರಹಚಾರವೆಲ್ಲಾ ಪರಿಹಾರವಾಗುತ್ತದೆ. "

ಮೃತ್ಯುಂಜಯಶಾಸ್ತ್ರಿ ಮುಖ ಗೆಲುವಾಯಿತು. ತಮ್ಮಯ್ಯನ ಸಲಹೆಯಲ್ಲಿ ಬಹಳ ಅರ್ಥವಿರುವುದನ್ನು ಗ್ರಹಿಸಿದ.

"ನೀನು ಹೇಳುವುದು ನಿಜ ಕಣಯ್ಯಾ. ನಾರಾಯಣಶಾಸ್ತ್ರಿಗಳ ಮಗ ವಾಮಾಚಾರಕ್ಕೆ ಬಿದ್ದಿದ್ದಾನೆ ಎಂದು ಸ್ವಾಮಿಗಳಿಗೆ ತಿಳಿದರೆ ಅವರು ಬೇರೆ ಸುಮ್ಮನಿರುವುದಿಲ್ಲ. ಸ್ವಾಮಿಗಳು ದೂರ್ವಾಸ ಮುನಿಯ ಅವತಾರ. ನಾರಾಯಣಶಾಸ್ತ್ರಿಗಳು, ಸಾಂಬನ ವ್ಯವಹಾರ ತಿಳಿದರೆ ಬಹಿಷ್ಕಾರ ಹಾಕುವುದಂತೂ ಖಂಡಿತ."

"ನಿನಗಿಷ್ಟೇ ತಾನೇ ಬೇಕಾದುದು."

"ಸ್ವಾಮಿಗಳನ್ನು ಇಲ್ಲಿ ಬರಮಾಡಿಕೊಂಡು ನಾವು ಪೂರೈಸುವುದು ಹೇಗೆ?" ರಾಮೋತ್ಸವದ ಹೊಡೆತವನ್ನೇ ನಾವಿನ್ನೂ ಸುಧಾರಿಸಿಕೊಂಡಿಲ್ಲ."

"ನೀನೊಬ್ಬನೇ ಯಾಕಯ್ಯಾ ಖರ್ಚುಮಾಡಬೇಕು. ಹತ್ತು ಜನಗಳ ಮೇಲೆ ಈ ಸುದ್ದಿ ಹಾಕಿದರೆ ಸಾಕು - ಅವರೇ ಮುಂದೆ ಬರುತ್ತಾರೆ. ಇನ್ನೊಂದು ವಿಷಯ – ನಾರಾಯಣಶಾಸ್ತ್ರಿಗಳ ಸಹಕಾರವನ್ನೂ ತೆಗೆದುಕೊಳ್ಳಬೇಕು ನೋಡು."

"ನಾನು ಅವನ ಮನೆ ಬಾಗಿಲಿಗೆ ಹೋಗುವುದಿಲ್ಲ."

"ನೀನೇಕೆ ಹೋಗಬೇಕು. ಯಜ್ಞನಾರಾಯಣನನ್ನ ಕಳುಹಿಸಿದರೆ ಆಯ್ತು."

"ಶಾಸ್ತ್ರಿ ಸಹಾಯ ನಾವೇಕೆ ಕೇಳಬೇಕು."

"ಅದರಲ್ಲಿ ಎರಡು ಲೌಕಿಕ ಅಡಕವಾಗಿದೆ. ಶಾಸ್ತ್ರಿಗಳ ಮೇಲೆ ನಮಗೆ ದ್ವೇಷವಿಲ್ಲ ಎಂದು ತೋರಿಸಿಕೊಂಡ ಹಾಗಾಗುತ್ತದೆ. ಈಗ ಶಾಸ್ತ್ರಿಗಳು, ಸಾಂಬ ಎಂದರೆ ಈ ಹಳ್ಳೀ ಮುಂಡೇವಕ್ಕೆ ವೇದವಾಕ್ಯ, ಅವರ ಸಹಾಯದಿಂದ ಉತ್ಸವ ವಿಜೃಂಭಣೆಯಿಂದ ನೆರವೇರತ್ತೆ. ಮುಳ್ಳಿನಿಂದಲೇ ಮುಳ್ಳು ಕಿತ್ತೊಗೆಯಬೇಕು ಮೃತ್ಯುಂಜಯ."

"ನೀನು ಚಾಣಕ್ಯ ಕಣೋ ತಮ್ಮಯ್ಯ"

"ನನ್ನ ಸ್ತುತಿ ಇರಲಿ. ನೀನು ಮೊದಲು ತುಮಕೂರಿಗೆ ಹೋಗಿ ರಾಮಾಶಾಸ್ತ್ರಿ ಕಂಡು ಸ್ವಾಮಿಗಳಿಗೆ ಆಮಂತ್ರಣ ಕೊಟ್ಟು ಬಾ. ಅವರು ಒಪ್ಪಿಕೊಂಡಮೇಲೆ ಕೈತುಂಬ ಕೆಲಸವಿರುತ್ತದೆ. ನೀನು ತುಮಕೂರಿನಿಂದ

ಹಿಂದಿರುಗಿದಮೇಲೆ ಯಜ್ಞನಾರಾಯಣನನ್ನು ಹುಲ್ಲೂರಿಗೆ ಕಳುಹಿಸಿಕೊಡಬೇಕಾಗುತ್ತದೆ."

"ಹಾಗೇ ಆಗಲಿ. ನಾನು ನಾಳೆಯೇ ತುಮಕೂರಿಗೆ ಹೋಗುತ್ತೇನೆ" ಎಂದು ಮೃತ್ಯುಂಜಯಶಾಸ್ತ್ರಿ ಹೇಳಿದ.

ಹಳೆಯ ಸ್ನೇಹಿತ, ಸಹಪಾಠಿ ಮೃತ್ಯುಂಜಯಶಾಸ್ತ್ರಿಯನ್ನು ನೋಡಿ ರಾಮಾಶಾಸ್ತ್ರೀಗೆ ಪರಮಾನಂದವಾಯಿತು. ಮೃತ್ಯುಂಜಯ ತಾನು ಬಂದಿದ್ದ ಕಾರ್ಯವನ್ನು ವಿವರಿಸಿದ. ಶಾಂತಿಗ್ರಾಮದ ಮುಂದೆ ಹೋಗುವ ವ್ಯವಸ್ಥೆ ತಾನು ಮಾಡುವದಾಗಿ ರಾಮಾಶಾಸ್ತ್ರಿ ಭರವಸೆಯಿತ್ತ.

ಶ್ರೀಶ್ರೀಗಳವರ ದರ್ಶನ ಪಡೆದು ಮೃತ್ಯುಂಜಯಶಾಸ್ತ್ರಿ ತಾನೇ ಆಮಂತ್ರಣಕೊಡುತ್ತಾ

"ನಮ್ಮ ಕಡೆ ಅನಾಚಾರ ಪ್ರಬಲವಾಗಿ ಹೋಗಿದೆ. ಬ್ರಾಹ್ಮಣ್ಯ ಹಾಳಾಗಿ ಹೋಗುತ್ತಿದೆ. ಶ್ರೋತ್ರೀಯರು ವಾಮಾಚಾರಕ್ಕೆ ಬೀಳುತ್ತಿದ್ದಾರೆ. ತಾವೊಮ್ಮೆ ಬಂದರೆ ಪರಿಸ್ಥಿತಿ ಸುಧಾರಿಸಬಹುದು."

"ನಾರಾಯಣಶಾಸ್ತ್ರಿಗಳ ಕಿರಿಯ ಮಗ ವಾಮಾಚಾರಿಯಾಗಿದ್ದಾನೆ ಎಂದು ತಿಳಿದು ಬಂತು. ಅವನ ವಿಷಯ ತಾನೇ ನೀವು ಹೇಳುತ್ತಿರುವುದು."

"ಹೌದು."

"ನಾರಾಯಣಶಾಸ್ತ್ರಿಗಳು ದೈವಭಕ್ತರು, ಶ್ರೋತ್ರೀಯರು, ಉದಾರ ಚರಿತರು ಎಂದು ನಾವು ಕೇಳಿದ್ದೇವೆ."

"ಅದು ಸ್ವಲ್ಪಮಟ್ಟಿಗೆ ನಿಜ. ಆದರೆ ಮಗನಮೇಲಿನ ವ್ಯಾಮೋಹ ಅವರನ್ನು ಅಂಧರನ್ನಾಗಿ ಮಾಡಿದೆ. ವಾಮಾಚಾರಿ ಮಗನ ಜತೆ ಸಹ ಪಂಕ್ತಿ ಭೋಜನ ಕೂಡ ಮಾಡುತ್ತಾರೆ."

"ಅವರ ಮಗ ಎಲ್ಲಿದ್ದಾನೆ."

"ಮನೆಯಲ್ಲಿಯೇ ಇದ್ದಾನೆ."

"ಇದು ಬಹಳ ಗಹನವಾದ ವಿಷಯ ಶಾಸ್ತ್ರಿಗಳೇ. ಕೂಲಂಕಷವಾಗಿ ವಿಚಾರಮಾಡಬೇಕು. ನೀವು ಹೇಳುವುದು ನಿಜವಾಗಿದ್ದರೆ ತುಂಬಾ ಶೋಚನೀಯ. ಮೊದಲೇ ಕಲಿ ಹೆಚ್ಚಿ ಬ್ರಾಹ್ಮಣಿಕೆಗೆ ಬೆಲೆಯಿಲ್ಲದ ಹಾಗಾ

ಗಿದೆ. ಇನ್ನು ನಾರಾಯಣಶಾಸ್ತ್ರಿಗಳಂಥ ನಾಲ್ಕುಜನ ತಿಳಿದವರು ಅನಾಚಾರ ಆರಂಭಿಸಿಬಿಟ್ಟರೆ ಬ್ರಾಹ್ಮಣಿಕೆ ಬುಡಮೂಲ ನಾಶವಾಗಿಹೋಗುತ್ತದೆ."

"ತಾವೇ ಪ್ರತ್ಯಕ್ಷವಾಗಿ ಪರಾಮರ್ಶಿಸಿ ನಮಗೆ ಮಾರ್ಗದರ್ಶನ ಮಾಡಬೇಕು."

"ಆಗಬಹುದು.. ರಾಮಾಶಾಸ್ತ್ರಿಗಳ ಜತೆ ಮಾತನಾಡಿ. ಅವರೂ ನೀವು ಕೂಡಿ ನಾವು ಬರಬೇಕಾದ ದಿನ ನಿಶ್ಚಯಿಸಿ."

ಎಂದು ಅಪ್ಪಣೆ ಕೊಡಿಸಿದರು

ಮೃತ್ಯುಂಜಯಶಾಸ್ತ್ರಿ ಸ್ವಾಮಿಗಳಿವರಿಂದ ಫಲ ಮಂತ್ರಾಕ್ಷತೆ ಪಡೆದು ಹಸನ್ಮುಖನಾಗಿ ಊರಿಗೆ ಹಿಂದಿರುಗಿದ.

ಮೃತ್ಯುಂಜಯಶಾಸ್ತ್ರಿ ಹೋದ ಕೆಲಸ ಯಶಸ್ವಿಯಾದುದನ್ನು ಕಂಡು ತಮ್ಮಯ್ಯ ಯಜ್ಞನಾರಾಯಣ ಹರ್ಷಗೊಂಡರು.

"ನಮ್ಮ ಕೆಲಸಕ್ಕೆ ದೈವಸಹಾಯವಿದೆ ಮೃತ್ಯುಂಜಯ."

"ಯಜ್ಞ, ನೀನು ಹುಲ್ಲೂರಿಗೆ ಹೋಗಿ ಶ್ರೀಗಳವರು ಬರುವ ವಿಷಯ ನಾರಾಯಣಶಾಸ್ತ್ರಿಗಳಿಗೆ ತಿಳಿಸಿ ಅವರ ಸಹಾಯ ದೊರಕಿಸಿಕೊಂಡುಬಾಪ್ಪ."

ಎಂದು ಯಜ್ಞನಾರಾಯಣಶಾಸ್ತ್ರಿಗೆ ವಿಧಿಸಿದರು.

ಯಜ್ಞನಾರಾಯಣ ಹುಲ್ಲೂರಿಗೆ ಹೋಗಿ ನಾರಾಯಣಶಾಸ್ತ್ರಿಗಳನ್ನು ಕಂಡುಬರಲು ವಿಶೇಷ ಉತ್ಸುಕನಾಗಿರಲಿಲ್ಲ. ಆದರೆ ತನ್ನಮೇಲೆ ಬಿದ್ದ ಕಾರ್ಯಭಾರವನ್ನು ಅವನು ಕೊಡವಿಕೊಳ್ಳಲು ಸಾಧ್ಯವಾಗಲಿಲ್ಲ.

ಮೃತ್ಯುಂಜಯಶಾಸ್ತ್ರಿ ಜತೆ ಸೇರಿಕೊಂಡು ಯಜ್ಞನಾರಾಯಣ ಸದಾ ತಮಗೆ ಕೇಡು ಬಗೆಯುತ್ತಿದ್ದಾನೆಂದು ನಾರಾಯಣ ಶಾಸ್ತ್ರಿಗಳಿಗೆ ಚೆನ್ನಾಗಿ ಗೊತ್ತಿತ್ತು. ಅವನು ಮನೆಗೆ ಬಂದಾಗ ಶಾಸ್ತ್ರಿಗಳು ವಿಶ್ವಾಸಪೂರ್ವಕವಾಗಿಯೇ ಸ್ವಾಗತ ಬಯಸಿ ಅವನಿಗೆ ಊಟೋಪಚಾರ ಮಾಡಿಸಿ

"ಏನಪ್ಪಾ – ಇಷ್ಟು ದೂರ ಬಂದೆ?" ಎಂದು ಕೇಳಿದರು.

"ಭೃಂಗಗಿರಿ ಶ್ರೀ ಶ್ರೀಗಳವರು ತುಮಕೂರಿನಲ್ಲಿ ಚಾತುರ್ಮಾಸ ಮುಗಿಸಿಕೊಂಡು ಶಾಂತಿಗ್ರಾಮದ ಮೂಲಕ ಊರು ಸೇರುವರಂತೆ."

"ಬಹಳ ಸಂತೋಷ."

"ನಾವು ಅವರನ್ನು ಒಂದು ದಿನ ಶಾಂತಿಗ್ರಾಮದಲ್ಲಿ ಉಳಿಸಿಕೊಂಡು ಪಾದಪೂಜೆಮಾಡಿ ಅವರ ಉಪದೇಶ ಪಡೆಯಬೇಕೆಂದು ನಿಶ್ಚಯಿಸಿದ್ದೇವೆ."

"ಅವಶ್ಯಕವಾಗಿಯಾಗಲಿ. ದೊಡ್ಡವರ ಪಾದಧೂಳಿಯಿಂದ ಈ ಪ್ರಾಂತ್ಯವೇ ಪಾವನವಾಗುತ್ತದೆ. ಅದಕ್ಕೆ ನನ್ನಿಂದೇನಾಗಬೇಕು ?"

"ನಿಮ್ಮಿಂದಲೇ ಎಲ್ಲಾ ಆಗಬೇಕು. ಸಾವಿರಾರು ಜನರ ಸಂತರ್ಪಣೆ ಮಾಡಿಸಬೇಕಾಗುತ್ತದೆ. ಚಪ್ಪರ, ವಾಲಗ, ದೀಪ, ಅತಿಥಿ ಸತ್ಕಾರ ಇವುಗಳಿಗೆಲ್ಲಾ ವಿಪರೀತ ಖರ್ಚಾಗುತ್ತದೆ."

"ನಿಜ. ಆದರೆ ನಾನು ಬಡವ ಎನ್ನುವುದು ನಿನಗೆ ಗೊತ್ತಿಲ್ಲವೇ ?"

"ನೀವು ಒಂದು ಮಾತು ಹೇಳಿದರೆ ಬೇಕಾದ ಸಹಾಯ ಒದಗುತ್ತದೆ."

"ನನ್ನ ಮಾತಿನಿಂದ ಇಷ್ಟು ಕೆಲಸವಾಗುವಹಾಗಿದ್ದರೆ ಸಾವಿರ ಮಾತು ಹೇಳುತ್ತೇನೆ. ನಿಮ್ಮ ಸಹಾಯಕ್ಕೆ ನಮ್ಮ ಗೌಡರನ್ನೂ ಅವರ ಪರಿವಾರವನ್ನೂ ಕಳಿಸಿಕೊಡುತ್ತೇನೆ. ನಮಗೆ ಸಾಧ್ಯವಾದಷ್ಟು ದವಸ, ಹಾಲು, ಮೊಸರು, ಹಣ ಸಂಗ್ರಹಿಸಿಕೊಡುತ್ತೇನೆ. ಆಗಬಹುದೋ ?"

"ಆಗಬಹುದು. ನೀವೇ ಬಂದು ನಿಂತುಕೊಂಡು ಎಲ್ಲ ಕೆಲಸವನ್ನೂ ಆಗುಮಾಡಿಕೊಡಬೇಕು."

"ನೀವೆಲ್ಲಾ ಪ್ರಬುದ್ಧರಾಗಿದ್ದೀರಿ – ದಕ್ಷರಾಗಿದ್ದೀರಿ. ನಾನು ಬಂದು ಮಾಡುವುದೇನಿದೆ? ಉತ್ಸವದ ದಿನ ಬಂದು ಗುರುಗಳ ಪಾದದ ಮೇಲೆ ಬಂದು ಹೂವು ಹಾಕಿ ಬರುತ್ತೇನೆ."

"ಎಲ್ಲರನ್ನೂ ಕರೆದುಕೊಂಡು ಬರಬೇಕು ಶಾಸ್ತ್ರಿಗಳೇ."

"ಖಂಡಿತವಾಗಿ. ಬರದೇ ಉಂಟೇ ?"

ಶಾಸ್ತ್ರಿಗಳು ಕೂಡಲೆ ಪುಟ್ಟೇಗೌಡ, ರಂಗೇಗೌಡರನ್ನೂ ಊರಿನ ಪ್ರಮುಖರನ್ನೂ ಬರಮಾಡಿ ಗುರುಗಳ ಸತ್ಕಾರಕ್ಕೆ ಎಲ್ಲಾ ಸಹಾಯ ನೀಡಬೇಕೆಂದು ತಿಳಿಸಿದರು.

ಯಜ್ಞನಾರಾಯಣ ತೃಪ್ತನಾಗಿ ಶಾಸ್ತ್ರಿಗಳ ಅಪ್ಪಣೆ ಪಡೆದು ಊರಿಗೆ ಹೊರಟ.

ಶಾಸ್ತ್ರಿಗಳ ಅಳತೆ ಮೀರಿದ ಔದಾರ್ಯ ಕಂಡು ಪುಟ್ಟೇಗೌಡನಿಗೆ ಸ್ವಲ್ಪ ಅಸಮಾಧಾನವಾಗಿತ್ತು. ಅವನ ಮುಖ ಕಹಿಯಾಗಿದ್ದುದನ್ನು ಕಂಡು ಶಾಸ್ತ್ರಿಗಳು

"ಯಾಕೆ ಗೌಡ, ಬೇಸರಪಟ್ಟುಕೊಂಡಿರುವೆ" ಎಂದು ಕೇಳಿದರು.

"ಅಲ್ಲಾ ಸ್ವಾಮಿ, ಗುರುಗಳು ಯಾವದೋ ಊರಿಗೆ ಹೋದರೆ ನಾವೆಲ್ಲಾ ಗಂಟುಮೂಟೆ ಕಟ್ಟಿಕೊಂಡು ಅಲ್ಲಿಗೆ ಹೋಗಿ ಸೇವೆಮಾಡಿ ಬರ ಬೇಕಾ. ನಮ್ಮೂರಿಗೇ ಕರೆಸಿದ್ದರೆ ಆಗಿತ್ತು."

"ಅವರ ಅನುಕೂಲ ಅನಾನುಕೂಲ ಹೇಗಿದೆಯೋ? ದೊಡ್ಡವರು ಎಲ್ಲಿ ಇದ್ದರೇನಪ್ಪಾ. ನಾವೇ ಅಲ್ಲಿಗೆ ಹೋಗಿ ಸೇವೆಮಾಡಿ ಬಂದರೆ ನಮ್ಮ ಕಾಲು ಸವೆದುಹೋಗುತ್ತದೆಯೇ?"

"ಆದಕ್ಕಲ್ಲ ಸ್ವಾಮಿ ನಾನು ಹೇಳಿದ್ದು. ಮೃತ್ಯುಂಜಯ ಶಾಸ್ತ್ರಿಗಳು ನಾಳೆ ಎಲ್ಲಾ ತಾವೇ ಮಾಡಿಸಿದೆವು ಎಂದು ಹೇಳಿಕೊಳ್ಳುವುದಕ್ಕೆ ದಾರಿ ಮಾಡಿಕೊಟ್ಟ ಹಾಗಾಯಿತು ಎಂದು ಯೋಚಿಸಿದೆ."

"ಹೇಳಿಕೊಳ್ಳಲಿ. ಅದರಿಂದ ನಮಗಾಗುವ ನಷ್ಟವೇನು? ಗುರು ಸೇವೆಯನ್ನು ನಾವು ಯಾರ ಮೆಚ್ಚುಗೆಗಾಗಿಯೂ ಮಾಡುತ್ತಿಲ್ಲ. ನಮ್ಮ ಶ್ರೇಯಸ್ಸಿಗಾಗಿ ನಾವು ಮಾಡುವ ವಿಷಯ ಅದು. ಅದಕ್ಕೆ ನಾವೇಕೆ ಪಶ್ಚಾತ್ತಾಪ ಪಡಬೇಕು."

"ನಿಮ್ಮ ದಾರಿ ನಮಗೆ ಅರ್ಥವಾಗಲ್ಲ ಬುದ್ಧಿ. ಅರೀದೇ ಹೆಚು ಮಾತಾಡಿದೆ ಕ್ಷಮಿಸಿಬಿಡಿ. ನೀವು ಹ್ಯಾಗೆ ಹೇಳಿದರೆ ಹಾಗೆ ಮಾಡೋದಿಕ್ಕೆ ನಾನು ಸಿದ್ಧ"

ಎಂದು ಹೇಳಿದ. ಪುಟ್ಟೇಗೌಡನ ನಿಷ್ಕಲ್ಮಷ ಹೃದಯ ಕಂಡು ಶಾಸ್ತ್ರಿಗಳು ಹಿಗ್ಗಿದರು.

೨೪

ಭೃಂಗಗಿರಿ ಶ್ರೀಶ್ರೀಗಳವರು ಶಾಂತಿಗ್ರಾಮಕ್ಕೆ ಬರುವುದು ಆ ಗ್ರಾಮದವರಿಗೇ ಅಲ್ಲದೆ ಸುತ್ತಮುತ್ತಲಿನ ಗ್ರಾಮದವರಿಗೂ ಮಹೋತ್ಸವವಾಯಿತು. ಅವರು ಹಾದುಹೋಗುವ ರಸ್ತೆಗಳನ್ನೆಲ್ಲಾ ಶುಚಿಗೊಳಿಸಿ, ಮರಗಳಿಗೆ ಕೆಮ್ಮಣ್ಣು ಪಟ್ಟೆ, ಸುಣ್ಣ ಬಳಿದರು. ಅವರು ಬರುವ ಮುನ್ನಾದಿವಸ ರಸ್ತೆಗಳಲ್ಲೆಲ್ಲಾ ಮಂಟಪಗಳು, ತೋರಣಗಳು.

ಶಾಂತಿಗ್ರಾಮದ ಪ್ರತಿ ಮನೆಗೂ ಸುಣ್ಣಬಣ್ಣವಾಯಿತು. ಬೀದಿಗಳೆಲ್ಲಾ ತಳಿರುತೋರಣಗಳಿಂದಲಂಕೃತಗೊಂಡವು.

ಸ್ವಾಮಿಗಳವರು ಅವರ ಪರಿವಾರ ಇಳಿದುಕೊಳ್ಳುವುದಕ್ಕೆ ಛತ್ರದಲ್ಲಿ ವ್ಯವಸ್ಥೆಮಾಡಲಾಯಿತು. ಛತ್ರದ ಆವರಣದಲ್ಲಿದ್ದ ವಿಶಾಲ ಪ್ರದೇಶದಲ್ಲಿ ದೊಡ್ಡ ಚಪ್ಪರ ಹಾಕಲಾಯಿತು. ಚಪ್ಪರದ ತುಂಬ ಬಾಳೆಯ ಕಂಬ, ಮಾವಿನೆಲೆಯ ತೋರಣ ಮೆರೆದಾಡಿದವು.

ಶ್ರೀಶ್ರೀಗಳವರ ದರ್ಶನಕ್ಕೆ ಬರುತ್ತಿದ್ದವರು ತಮ್ಮ ವ್ಯವಸ್ಥೆ ತಾವೇ ಮಾಡಿಕೊಂಡರು. ಕೆಲವರು ನೆಂಟರಿಷ್ಟರ ಮನೆಗಳಿಗೆ ಹೋದರು, ಕೆಲವರು ಊರಿನ ಇನ್ನೊಂದು ಛತ್ರದಲ್ಲಿ ಸ್ಥಳಮಾಡಿಕೊಂಡರು.

ಶ್ರೀಶ್ರೀಗಳವರಿಗೆ ಆಮಂತ್ರಣ ಕೊಟ್ಟುಬಂದುದರಿಂದಲೇ ಮೃತ್ಯುಂಜಯ ಶಾಸ್ತ್ರಿಯ ಘನತೆ ಅಟ್ಟಕ್ಕೇರಿತು. ಜನ ತಾವಾಗಿಯೇ ಮುಂದೆ ಬಂದು ಸಹಾಯ ನೀಡಿದರು. ನಾರಾಯಣ ಶಾಸ್ತ್ರಿಗಳು ಮಾತು ಕೊಟ್ಟಿದ್ದಂತೆ ಧನ, ಜನ, ಧಾನ್ಯಸಹಾಯ ಒದಗಿಸಿದರು.

ಜನ ತಾವೇ ಬೇರೆ ಬೇರೆ ಕೆಲಸ ಹಂಚಿಕೊಂಡು ಉತ್ಸವದ ಕಾರ್ಯಕಲಾಪಗಳಲ್ಲಿ ಸಹಕರಿಸಿದರು. ಶ್ರೀಗಳವರು ಬೆಳಿಗ್ಗೆ ಒಂಭತ್ತು ಗಂಟೆಗೆ ಶಾಂತಿಗ್ರಾಮ ತಲುಪುತ್ತಾರೆಂದು ತಿಳಿದುಬಂತು. ಅವರು ಬಂದು ಸ್ನಾನ, ಪೂಜೆ ಮುಗಿಸಿದಮೇಲೆ ಪ್ರಸಾದ ವಿನಿಯೋಗ, ಕಾಣಿಕೆ ಸಮರ್ಪಣೆ. ಮಧ್ಯಾಹ್ನ ಎಲ್ಲರಿಗೂ ಭೂರಿಭೋಜನ. ಸಂಜೆಗೆ ಶ್ರೀಗಳವರ ಓಲಗ, ಉಪದೇಶ. ರಾತ್ರಿ ಪೂಜೆ, ಪ್ರಸಾದ ವಿನಿಯೋಗ. ಮಾರನೆಯ ದಿನ

ಸ್ನಾನ, ಪೂಜೆ ಮುಗಿಸಿಕೊಂಡು ಶ್ರೀಗಳವರು ಮುಂದಕ್ಕೆ ಪ್ರಯಾಣ ಬೆಳಸುವುದೆಂದು ಕಾರ್ಯಕ್ರಮ ಇತ್ಯರ್ಥವಾಯಿತು.

ಹುಲ್ಲೂರಿನಿಂದ ಆರು ಗಾಡಿ ಜನ ಶಾಂತಿಗ್ರಾಮಕ್ಕೆ ಹೊರಟರು. ನಾರಾಯಣ ಶಾಸ್ತ್ರಿಗಳು, ವಿಶ್ವೇಶ್ವರ, ಸೀತಮ್ಮ ಒಂದು ಗಾಡಿಯಲ್ಲಿ, ಉಳಿದ ಗಾಡಿಗಳಲ್ಲಿ ಪುಟ್ಟೇಗೌಡ ಅವನ ಮನೆಯ ಜನ, ಇತರರು ಹೊರಟರು. ಸಾಂಬ ಶಾಸ್ತ್ರಿಗಳ ಜತೆ ಹೊರಡಲಿಲ್ಲ. ತಾನು ಹಿಂದಿನಿಂದ ಬರುವುದಾಗಿ ಅವನು ಸೂಚಿಸಿದ.

ಶಾಸ್ತ್ರಿಗಳು ಅವರ ಪರಿವಾರ ಹೊತ್ತುಹುಟ್ಟುವ ಮುನ್ನವೇ ಹೊರಟು ಶಾಂತಿಗ್ರಾಮ ಸೇರಿದರು. ಅವರು ಇಳಿದುಕೊಳ್ಳುವುದಕ್ಕೆ ಊರ ಮುಂದಿದ್ದ ಈಶ್ವರನ ದೇವಾಲಯದಲ್ಲಿ ವ್ಯವಸ್ಥೆಯಾಗಿತ್ತು. ಶಾಸ್ತ್ರಿಗಳು ಶಾಂತಿಗ್ರಾಮ ತಲುಪಿದ ಕೂಡಲೆ ಮೃತ್ಯುಂಜಯ, ತಮ್ಮಯ್ಯ, ಯಜ್ಞನಾರಾಯಣ ಅವರನ್ನು ಕಂಡರು. ಸಾಂಬ ಅವರ ಜತೆಯಲ್ಲಿಲ್ಲದುದನ್ನು ಕಂಡು ಮೃತ್ಯುಂಜಯ ಶಾಸ್ತ್ರಿಯ ಮನಸ್ಸು ಹುಳಿಯಾಯಿತು.

ತಮ್ಮಯ್ಯ ನಾರಾಯಣಶಾಸ್ತ್ರಿಗಳನ್ನು ಕೇಳಿಯೇಬಿಟ್ಟ

"ಸಾಂಬ ಬರಲಿಲ್ಲವೇ ಶಾಸ್ತ್ರಿಗಳೇ?"

"ಬರುತ್ತಾನೆ. ಖಂಡಿತ ಬರುತ್ತಾನೆ"

ಎಲ್ಲರೂ ಸ್ನಾನಮಾಡಿ ತ್ರಿಪುಂಡ್ರ ಧರಿಸಿ ಮಡಿವಸ್ತ್ರ ಹಾಕಿಕೊಂಡು ಊರ ಬಾಗಿಲ ಮುಂದೆ ಕಾದಿದ್ದು ಶ್ರೀಶ್ರೀಗಳವರನ್ನು ಬರಮಾಡಿಕೊಂಡರು. ಮೃತ್ಯುಂಜಯ ಶಾಸ್ತ್ರಿ ಮುಖ್ಯರಾದವರ ಪರಿಚಯಮಾಡಿಕೊಟ್ಟ. ನಾರಾಯಣ ಶಾಸ್ತ್ರಿಗಳ ಪರಿಚಯಮಾಡಿಕೊಟ್ಟಾಗ ಶ್ರೀಶ್ರೀಗಳವರು ಅವರ ಮುಖವನ್ನು ಗಮನಿಸಿ ನೋಡಿದರು.

ಶ್ರೀಶ್ರೀಗಳವರು ತಮ್ಮ ಬಿಡಾರದಲ್ಲಿ ತಂಗಿ ಸ್ನಾನ ಪೂಜೆ ಮುಗಿಸಿದರು. ಭಕ್ತಕೋಟಿ ತಂಡತಂಡವಾಗಿ ಹೋಗಿ ಶ್ರೀಗಳವರ ದರ್ಶನ ಪಡೆದು ತಮ್ಮ ಶಕ್ತ್ಯನುಸಾರ ಕಾಣಿಕೆ ಅರ್ಪಿಸಿ, ಶ್ರೀಗಳವರಿಂದ ತೀರ್ಥ ಪ್ರಸಾದ ಪಡೆದು ಬರುತ್ತಿದ್ದರು.

ನಾರಾಯಣ ಶಾಸ್ತ್ರಿಗಳು ಸಾಂಬನ ದಾರಿ ನೋಡುತ್ತ ನಿಂತರು. ಅವನು ಬರುವ ಸೂಚನೆ ಕಾಣಲಿಲ್ಲ. ಭಕ್ತಜನರೆಲ್ಲರ ತೀರ್ಥಪ್ರಸಾದ

ಮುಗಿಯುತ್ತ ಬಂದಿತ್ತು. ಇನ್ನು ಸಾವಕಾಶಮಾಡಿದರೆ ತೀರ್ಥಪ್ರಸಾದ ತಪ್ಪಿಹೋಗಬಹುದೆಂದು ವಿಶ್ವೇಶ್ವರ, ಸೀತಮ್ಮನೊಂದಿಗೆ ಸ್ವಾಮಿಗಳ ಬಳಿ ಹೋಗಿ ಸಾಷ್ಟಾಂಗ ಪ್ರಣಾಮ ಮಾಡಿ, ಇಪ್ಪತ್ತು ರೂಪಾಯಿ ಕಾಣಿಕೆ ಮುಂದಿಟ್ಟ ತೀರ್ಥಕ್ಕೆ ಕೈಯೊಡ್ಡಿದರು.

ಪಕ್ಕದಲ್ಲಿ ನಿಂತಿದ್ದ ರಾಮಾಶಾಸ್ತ್ರಿ ಶ್ರೀಗಳವರಿಗೆ

"ಹುಲ್ಲೂರು ನಾರಾಯಣ ಶಾಸ್ತ್ರಿಗಳು"

ಎಂದು ಹೇಳಿದ.

ಕೈಯಲ್ಲಿ ಹಿಡಿದಿದ್ದ ನೀಳವಾದ ತೀರ್ಥದ ಉದ್ಧರಣೆಯನ್ನು ಶ್ರೀಗಳವರು ಹಿಂದಕ್ಕೆಳೆದುಕೊಂಡು

"ಶಾಸ್ತ್ರಿಗಳೇ, ನಿಮ್ಮ ಮೇಲೆ ಭಯಂಕರ ಆಪಾದನೆಗಳು ಬಂದಿವೆ. ಸಂಜೆ ಸಭೆಯಲ್ಲಿ ಅವು ಚರ್ಚೆಗೆ ಬರುತ್ತವೆ. ನಿಮ್ಮ ಮೇಲಿನ ಆಪಾದನೆಗಳಿಗೆ ಸಮಂಜಸವಾದ ಉತ್ತರ ದೊರೆಯುವ ತನಕ ನಿಮಗೆ ತೀರ್ಥ ಪ್ರಸಾದ ಕೊಡಲಾಗುವುದಿಲ್ಲ"

ಎಂದು ಹೇಳಿದರು. ಶಾಸ್ತ್ರಿಗಳ ಬಾಯೊಣಗಿ ಹೋಯಿತು. ಅವರು ಮಾತನಾಡಬೇಕೆಂದಿರುವಷ್ಟರಲ್ಲಿ ರಾಮಾಶಾಸ್ತ್ರಿ

"ಪಕ್ಕಕ್ಕೆ ಸರಿಯಿರಿ....ಸರಿಯಿರಿ"

ಎಂದು ಶಾಸ್ತ್ರಿಗಳನ್ನು ಹೊರಗೆ ಕಳುಹಿಸಿಬಿಟ್ಟ.

ಶಾಸ್ತ್ರಿಗಳು ಕತ್ತು ತಗ್ಗಿಸಿಕೊಂಡು ತಮ್ಮ ಬಿಡಾರ ತಲುಪಿ ಕುಳಿತುಬಿಟ್ಟರು. ವಿಶ್ವೇಶ್ವರ ಒಂದೆಡೆ ಗೊಳೋ ಎಂದು ಅಳುತ್ತ ಕುಳಿತ. ಶಾಸ್ತ್ರಿಗಳಿಗಾದ ಅಪಮಾನ ಕಂಡು ಹುಲ್ಲೂರಿನವರು ಬೆಂಕಿಯಾಗಿದ್ದರು.

ಶಾಸ್ತ್ರಿಗಳನ್ನು ಮಾತನಾಡಿಸುವುದಕ್ಕೆ ಯಾರಿಗೂ ಧೈರ್ಯವಾಗಲಿಲ್ಲ. ಅಂದು ಎಲ್ಲರಿಗೂ ಏಕಾದಶಿವ್ರತವಾಯಿತು. ಶಾಸ್ತ್ರಿಗಳು ಬಂದು ಚಾಪೆ ಉರುಳಿಸಿಕೊಂಡು ಮಲಗಿಬಿಟ್ಟರು.

ಪುಟ್ಟೇಗೌಡ ಶಾಂತಿಗ್ರಾಮದಲ್ಲಾದ ಪ್ರಸಂಗವನ್ನು ವಿವರಿಸಿ ಕಾಗದ ಬರೆದು ಕೂಡಲೆ ಬರಬೇಕೆಂದು ಸಾಂಬನಿಗೆ ತಿಳಿಸಿ ಹುಲ್ಲೂರಿಗೆ ಒಬ್ಬ ಆಳಿನ ಸಂಗಡ ಕಳಿಸಿಕೊಟ್ಟ.

ಸಾಂಬ ಕಾಗದ ನೋಡಿಕೊಂಡು 'ಸಂಜೆಗೆ ಬರುತ್ತೇನೆ. ಈಗ ಸಾಧ್ಯವಿಲ್ಲ' ಎಂದು ಆಳಿನ ಸಂಗಡ ಹೇಳಿ ಕಳುಹಿಸಿದ.

ಅಂದಿನ ದಿನ ಕಳೆಯುವುದು ಶಾಸ್ತ್ರಿಗಳಿಗೂ ಹುಲ್ಲೂರಿನವರಿಗೂ ಸಾಕುಸಾಕಾಗಿ ಹೋಯಿತು. ಶಾಸ್ತ್ರಿಗಳು ಮಲಗಿದ್ದ ಮಗ್ಗಲು ಬಿಟ್ಟೇಳಲಿಲ್ಲ.

ಮೃತ್ಯುಂಜಯ ಶಾಸ್ತ್ರಿ, ಅವನ ಸಂಗಡಿಗರು ತಮ್ಮ ಭುಜ ಚಪ್ಪರಿಸಿ ಕೊಂಡರು. ಕೊನೆಗೂ ಹುಲ್ಲೂರು ಶಾಸ್ತ್ರೀಗೆ ತಕ್ಕ ಶಾಸ್ತಿಯಾಯಿತಲ್ಲಾ ಎಂದು ಹಿರಿಹಿರಿ ಹಿಗ್ಗಿದರು.

ಸಂಜೆಯಾಯಿತು. ಜನ ಸಭಾಮಂದಿರದಲ್ಲಿ ಸ್ಥಳ ಭದ್ರಪಡಿಸಿ ಕೊಳ್ಳಲು ಮೊದಲೇ ಬಂದು ಕೂಡುತ್ತಿದ್ದರು. ವಿಶ್ವೇಶ್ವರ ತಂದೆಯನ್ನೆಬ್ಬಿಸಿ

"ಸಂಜೆಯಾಯಿತು. ಸಭಾ ಕಾರ್ಯಕ್ರಮ ಆರಂಭವಾಗಬಹುದು"

ಎಂದು ಹೇಳಿದ. ಶಾಸ್ತ್ರಿಗಳೆದ್ದು ಸ್ನಾನಮಾಡಿ, ದೇವರ ಪೂಜೆ ಮಾಡಿ ಸಭೆಗೆ ಹೋದರು.

ಶ್ರೀ ಶ್ರೀಗಳವರು ಸಭೆಗೆ ಬಿಜಯಮಾಡಿದರು. ವೇದಿಕೆಯ ಮೇಲೆ ಅವರಿಗೆ ಉನ್ನತಾಸನ ವ್ಯವಸ್ಥೆಯಾಗಿತ್ತು. ವೇದಿಕೆಯ ಸುತ್ತ ಮಠದ ಅಧಿಕಾರಿಗಳು, ಮೃತ್ಯುಂಜಯ ಶಾಸ್ತ್ರಿ, ಅವನ ಪರಿವಾರ ಕುಳಿತರು. ನಾರಾಯಣ ಶಾಸ್ತ್ರಿಗಳು, ವಿಶ್ವೇಶ್ವರ ಕೆಳಗೆ ಬಂದು ಮೂಲೆಯಲ್ಲಿ ಕುಳಿತರು. ಜನರೆಲ್ಲಾ ಶಾಸ್ತ್ರಿಗಳನ್ನು ನೋಡಿ ಗುಸ ಗುಸ ಮಾತನಾಡಿಕೊಳ್ಳಲಾರಂಭಿಸಿದರು.

ಭಕ್ತನೊಬ್ಬ ಶ್ರೀಗಳವರ ಮುಂದೆ ಹಾಡಿದ. ಮಠದ ವಿದ್ವಾಂಸರೊಬ್ಬರು ಅದ್ವೈತದ ಮೇಲೆ ತಕ್ಕ ಭಾಷಣ ಮಾಡಿದರು. ಶ್ರೀಗಳವರು ಅರ್ಧಗಂಟೆ ಕಾಲ ನಿರರ್ಗಳವಾಗಿ ಉಪದೇಶಮಾಡಿ, ಧರ್ಮನಿಷ್ಠೆ ಅಗತ್ಯವೆಂದು ಬೋಧಿಸಿದರು.

ಶ್ರೀಗಳವರ ಉಪದೇಶ ಮುಗಿದ ಮೇಲೆ ರಾಮುಶಾಸ್ತ್ರಿ ಅವರೊಂದಿಗೆ ಮಾತನಾಡಿ

" ಹುಲ್ಲೂರು ನಾರಾಯಣ ಶಾಸ್ತ್ರಿಗಳು, ಅವರ ಮಗ ಮುಂದಕ್ಕೆ ಬರಬೇಕು "

ಎಂದು ಹೇಳಿದ.

ಶಾಸ್ತ್ರಿಗಳು, ವಿಶ್ವೇಶ್ವರ ಎದ್ದು ಹೆಗಲ ಮೇಲಿದ್ದ ವಸ್ತ್ರವನ್ನು ಸೊಂಟಕ್ಕೆ ಬಿಗಿದು ಶ್ರೀಗಳವರ ಮುಂದೆ ದೀರ್ಘದಂಡ ಪ್ರಣಾಮಮಾಡಿ ನಿಂತರು.

ಒಂದು ಕಾಗದ ಬಿಚ್ಚಿ ರಾಮಾಶಾಸ್ತ್ರಿ, ನಾರಾಯಣ ಶಾಸ್ತ್ರಿಗಳ ಮೇಲಣ ಆಪಾದನೆಗಳನ್ನು ಓದಿದ.

" ಕರ್ಮಚಂಡಾಲನೂ ವಾಮಾಚಾರಿಯೂ ಆದ ಮಗ ಸಾಂಬ ಶಾಸ್ತ್ರಿಯನ್ನು ಬಹಿಷ್ಕರಿಸದೆ ನಾರಾಯಣ ಶಾಸ್ತ್ರಿಗಳು ಅವನನ್ನು ಮನೆ ಸೇರಿಸಿ, ಅವನ ಜತೆ ಸಹಪಂಕ್ತಿಭೋಜನ ಮಾಡಿದ್ದಾರೆ.

ಶಾಸ್ತ್ರಿಗಳ ಮಗ ಸಾಂಬಶಾಸ್ತ್ರಿ ಕ್ರೂರ ವಾಮಾಚಾರಿಯಾಗಿ ಜನ ರನ್ನು ಬಹುವಾಗಿ ಪೀಡಿಸುತ್ತಿದ್ದಾನೆ. ಅವನ ದೌರ್ಜನ್ಯದಿಂದ ಸಂಪಿಗೆ ಕಾಳಾಚಾರಿ ಪ್ರಾಣ ಹೋಯಿತು.

ಶಾಸ್ತ್ರಿಗಳು ಶೂದ್ರರಿಗೆಲ್ಲಾ ಮನೆಯಲ್ಲಿ ಎಡೆಕೊಟ್ಟು ಅವರಿಗೆ ಅನ್ನೋದಕಗಳನ್ನೊದಗಿಸುತ್ತಾರೆ.

ಶಾಸ್ತ್ರಿಗಳು ಪ್ರತಿವರ್ಷದ ರಾಮೋತ್ಸವದ ವ್ಯಾಜ ಹೂಡಿ ಜನರಿಂದ ಅಪಾರ ಧನ, ಧಾನ್ಯ ಸಂಗ್ರಹಮಾಡಿ ಅದನ್ನು ಸ್ವಂತಕ್ಕೆ ಉಪಯೋಗಿಸಿ ಕೊಳ್ಳುತ್ತಾರೆ. "

ರಾಮಾಶಾಸ್ತ್ರಿ ಓದಿ ಮುಗಿಸಿದ ಮೇಲೆ ಶ್ರೀಶ್ರೀಗಳವರು ನಾರಾ ಯಣ ಶಾಸ್ತ್ರಿಗಳ ಕಡೆ ತಿರುಗಿ

" ಶಾಸ್ತ್ರಿಗಳೇ, ಇವುಗಳಿಗೆ ನಿಮ್ಮ ಉತ್ತರವೇನು " ಎಂದು ಕೇಳಿ ದರು

" ಈ ಆಪಾದನೆಗಳನ್ನು ಯಾರು ಮಾಡಿದ್ದಾರೆಂದು ನಾನು ಕೇಳ ಬಹುದೇ ? "

ಎಂದರು. ರಾಮಾಶಾಸ್ತ್ರಿ ಕನಲಿ

" ಗುರುಸ್ಥಾನದಲ್ಲಿ ಮರುಪ್ರಶ್ನೆ ಕೇಳುವ ಅಧಿಕಾರ ಯಾರಿಗೂ ಇಲ್ಲ"

ಎಂದ. ಶಾಸ್ತ್ರಿಗಳು

" ಶತಾಪರಾಧವಾಯಿತು. ಕ್ಷಮಿಸಬೇಕು. ನನಗೆ ತಿಳಿದಮಟ್ಟಿಗೆ ನಾನು ಉತ್ತರ ಕೊಡಲು ಸಿದ್ಧವಾಗಿದ್ದೇನೆ "

ಎಂದರು. ರಾಮಾಶಾಸ್ತ್ರಿ ಮತ್ತೆ

"ಶಾಸ್ತ್ರಿಗಳೇ, ಎಚ್ಚರದಿಂದ ಮಾತನಾಡಿ. ಇದು ಗುರುಸ್ಥಾನ. ಇಲ್ಲಿ ಸುಳ್ಳು ಹೇಳುವುದು ಮಹಾಪಾಪ."

" ಏಜಂಟರೇ - ಎಲ್ಲಿಯೂ ಸುಳ್ಳು ಹೇಳುವುದು ಮಹಾಪಾಪ. ಎದುರಿಗೆ ಸರಸ್ವತಿಯೇ ಕುಳಿತಿರುವಾಗ ಯಾವನು ಸುಳ್ಳು ಹೇಳಲು ಸಾಧ್ಯ"

ಎಂದರು.

ಜನ ಶಾಸ್ತ್ರಿಗಳ ದಿಟ್ಟತನಕ್ಕೆ ಬೆರಗಾದರು.

" ನೀವು ಸಾಂಬಶಾಸ್ತ್ರಿಯನ್ನು ಮನೆ ಸೇರಿಸಿ, ಅವನೊಂದಿಗೆ ಸಹ ಪಂಕ್ತಿ ಭೋಜನ ಮಾಡಿರುವಿರೋ ಇಲ್ಲವೋ ? "

" ಮಾಡಿದ್ದೇನೆ. ಅವನು ನನ್ನ ಮಗ. ದೇವಿಯ ಅನುಗ್ರಹ ಪಡೆದಿರುವ ಪುಣ್ಯಾತ್ಮ. "

" ಅವನು ವಾಮಾಚಾರಿಯಲ್ಲವೇ ?

" ಹೌದು ವಾಮಾಚಾರಿ. ಆದರೆ ಅದನ್ನು ದುರುಪಯೋಗಪಡಿಸಿಕೊಂಡಿಲ್ಲ. "

" ಆ ವಿಷಯ ಶ್ರೀ ಶ್ರೀಗಳವರು ನಿರ್ಧಾರ ಮಾಡುತ್ತಾರೆ. ನಿಮ್ಮ ಅಭಿಪ್ರಾಯ ಅಗತ್ಯವಿಲ್ಲ. "

" ಚಿತ್ತ. "

" ಸಾಂಬಶಾಸ್ತ್ರಿ ಸಂಪಿಗೆ ಕಾಳಾಚಾರಿ ಸಾವಿಗೆ ಕಾರಣನಾದನೇ ಇಲ್ಲವೇ ? "

" ಇಲ್ಲ. ಸಂಪಿಗೆ ಕಾಳಾಚಾರಿ ಲೋಕಕಂಟಕನಾಗಿದ್ದ. ಅವನು ಮಾಡಿದ ಅನ್ಯಾಯ, ಆಚರಿಸಿದ ಹಿಂಸಾಕೃತ್ಯಗಳಿಗೆ ಲೆಕ್ಕವೇ ಇಲ್ಲ, ಅವನಲ್ಲಿ

ಪೂರ್ವಜನ್ಮಸಂಸ್ಕಾರದಿಂದ ಅಭೂತಪೂರ್ವ ಶಕ್ತಿಯಿತ್ತು. ಆ ಶಕ್ತಿಯನ್ನು ದುರುಪಯೋಗಪಡಿಸಿ ತನ್ನ ನಾಶಕ್ಕೆ ತಾನೇ ಕಾರಣವಾದ."

"ಸಾಂಬಶಾಸ್ತ್ರಿ ಉದ್ದೇಶಪೂರ್ವಕವಾಗಿ ಸಂಪಿಗೆಯಲ್ಲಿ ನಾಟಕ ವಾಡಿಸಿ ಕಾಳಾಚಾರಿಯ ಮೇಲೆ ವಾಮಶಕ್ತಿ ಪ್ರಯೋಗಿಸಲಿಲ್ಲವೇ?"

"ನಾಟಕವನ್ನು ಊರಿನವರ ಇಚ್ಛೆಯ ಮೇಲೆ ಆಡಿಸಿದ. ವಾಮ ಶಕ್ತಿ ಪ್ರಯೋಗಿಸಿ ಸಾಂಬನನ್ನು ಕೊನೆಗಾಣಿಸಬೇಕೆಂದು ಪ್ರಯತ್ನಪಟ್ಟವನು ಕಾಳಾಚಾರಿ. ಆದರೆ ಸಾಂಬನ ಕೈ ಮೇಲಾಯಿತು. ಇದು ದೈವಾಯತ್ತ."

"ಶೂದ್ರರಿಗೆಲ್ಲಾ ನಿಮ್ಮ ಮನೆಯ ತೊಟ್ಟಿಯಲ್ಲಿ ಅನ್ನೋದಕ ಕೊಟ್ಟಿರುವಿರಾ ಇಲ್ಲವೇ?"

"ಸಂತೋಷವಾಗಿ ಕೊಟ್ಟಿದ್ದೇನೆ. ಪುಟ್ಟೇಗೌಡ, ರಂಗೇಗೌಡ ನನ್ನ ಮನೆಯ ಮಕ್ಕಳಿದ್ದ ಹಾಗೆ. ಒಂದು ಸಂಪ್ರದಾಯಕ್ಕೆ ಕಟ್ಟಾಗಿ ಅವರ ಜತೆ ಕುಳಿತು ಊಟಮಾಡಲು ಸಾಧ್ಯವಿಲ್ಲವಲ್ಲಾ ಎಂದು ಪರಿತಾಪ ಪಟ್ಟಿದ್ದೇನೆ."

"ಇದು ಧರ್ಮವಿರುದ್ಧವಲ್ಲವೇ?"

"ಧರ್ಮವಿರುದ್ಧವಲ್ಲ - ಸಂಪ್ರದಾಯ ವಿರುದ್ಧ. ಏಜಂಟರೇ, ನಾವು ಪೂಜಿಸುವ ಶ್ರೀರಾಮ, ಶ್ರೀಕೃಷ್ಣ, ಉಪನಿಷತ್ತಿನ ಅನೇಕ ಋಷಿಗಳು ಬ್ರಾಹ್ಮಣರಲ್ಲವೆಂಬುದನ್ನು ಮರೆಯಬೇಡಿ."

"ಉಪದೇಶ ಕೊಡುವುದಕ್ಕೆ ನಿಮ್ಮನ್ನು ಇಲ್ಲಿ ಬರಮಾಡಿಕೊಂಡಿಲ್ಲ."

"ನಾನು ಅಲ್ಪ, ಗುರುಸ್ಥಾನದಲ್ಲಿ ಅಪಚಾರದ ಮಾತಾಡಿದ್ದರೆ ಕ್ಷಮಿಸಬೇಕು"

ಎಂದು ಶಾಸ್ತ್ರಿಗಳು ವಿನಯದಿಂದ ಬೇಡಿಕೊಂಡರು.

ರಾಮಾಶಾಸ್ತ್ರಿ ಶ್ರೀಶ್ರೀಗಳವರನ್ನು ಉದ್ದೇಶಿಸಿ

"ಶಾಸ್ತ್ರಿಗಳು ಎಲ್ಲಾ ಒಪ್ಪಿಕೊಂಡಂತಾಗಿದೆ" ಎಂದ.

ಶ್ರೀಶ್ರೀಗಳವರು

"ಸಾಂಬಶಾಸ್ತ್ರಿ ಬರಲಿಲ್ಲವೇ?"

ಎಂದರು. ರಾಮಾಶಾಸ್ತ್ರಿ ಕುಹಕದಿಂದ

"ಶಾಸ್ತ್ರಿಗಳು ಮಗನನ್ನು ಬಚ್ಚಿಟ್ಟು ಬಂದಿದ್ದಾರೆ"
ಎಂದ.

ಅದೇ ಹೊತ್ತಿಗೆ ಮಹಾದ್ವಾರದಲ್ಲಿ 'ಜೈ ಮಹಾಕಾಳಿ' ಎಂಬ ಘೋಷ ಕೇಳಿಸಿತು ಜನ ಭ್ರಾಂತರಾಗಿ ಅತ್ತ ತಿರುಗಿದರು. ವೇದಿಕೆಯ ಮೇಲೆ ಕುಳಿತಿದ್ದ ಶ್ರೀಶ್ರೀಗಳವರು ಎದ್ದು ನಿಂತು ಕೈಮುಗಿದು, ಮಹಾ ದ್ವಾರದ ಬಳಿಗೆ ಧಾವಿಸಿ ಹೋದರು.

ಸಾಂಬ ಹೆಗಲ ಮೇಲೆ ಮೃದಂಗ ಹೊತ್ತುಕೊಂಡು ಮಹಾದ್ವಾರದಲ್ಲಿ ನಿಂತಿದ್ದ. ಅವನ ಭುಜದ ಮೇಲೆ ಜನಿವಾರವಿಲ್ಲದಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು.

ಶ್ರೀಶ್ರೀಗಳವರು ಸಾಂಬನ ಮುಂದೆ ಭಕ್ತಿಪೂರ್ವಕವಾಗಿ ನಿಂತು
"ಬಾ, ಮಹಾನುಭಾವ. ತಾಯಿ ನಿನ್ನ ಭುಜದ ಮೇಲೆ ಕುಳಿತಿದ್ದಾಳೆ. ಲೋಕಮಾತೆಯನ್ನು ಹೊತ್ತುಕೊಂಡು ಬರುವ ನೀನೆಂಥ ಧನ್ಯನಪ್ಪಾ"

ಎಂದು ಸಾಂಬನ ಕೈಹಿಡಿದು ಜತೆಯಲ್ಲಿ ಕರೆದುಕೊಂಡು ಬಂದರು. ಸಾಂಬ ಮರ್ಯಾದೆಯಿಂದ ಶ್ರೀಶ್ರೀಗಳವರನ್ನು ವೇದಿಕೆಯ ಮೇಲಿದ್ದ ದಿವ್ಯಾ ಸನದ ಮೇಲೆ ಕೂರಿಸಿ ತಾನು ಅವರ ಪಾದದ ಬಳಿ ಕುಳಿತ.

ಸಭೆಯಲ್ಲಿದ್ದ ಜನತೆಯಲ್ಲಿ ವಿದ್ಯುತ್ಸಂಚಾರವಾದಂತಾಯಿತು. ತಾವು ನೋಡಿದ ನೋಟ ಸತ್ಯವೋ ಮಿಥ್ಯವೋ ಎಂದು ಅವರು ವಿಚಾರಮಾಡುತ್ತಿದ್ದರು. ನಾರಾಯಣ ಶಾಸ್ತ್ರಿಗಳ ಕಣ್ಣಲ್ಲಿ ಆನಂದಾಶ್ರುಗಳು ಚಿಮ್ಮಿದವು.

ವೇದಿಕೆಯ ಮೇಲೆ ಕುಳಿತಿದ್ದ ಮೃತ್ಯುಂಜಯ ಶಾಸ್ತ್ರಿ, ಅವನ ಪರಿವಾರ ಕೆಳಗಿಳಿದು ನಿಂತರು. ರಾಮಾಶಾಸ್ತ್ರಿಯೂ ಕೆಳಗಿಳಿದು ಕೈಕಟ್ಟಿ ಕೊಂಡು ನಿಂತ.

ಶ್ರೀಶ್ರೀಗಳವರು ಮೃತ್ಯುಂಜಯಶಾಸ್ತ್ರಿ, ರಾಮಾಶಾಸ್ತ್ರಿಯನ್ನು ನೋಡಿ
" ಇವನ ಮೇಲೇ ಅಲ್ಲವೆ ನೀವು ಆಪಾದನೆ ಹೊರಿಸಿದ್ದು"
ಎಂದರು.

ಯಾರೂ ತುಟಿಪಿಟಕ್ಕೆನ್ನಲಿಲ್ಲ.

ಸಾಂಬ ಎದ್ದು ನಿಂತು

"ಉತ್ತರ ಹೇಳುವುದಕ್ಕೆ ನಾನೇ ಬಂದಿದ್ದೇನೆ."

"ಅವಶ್ಯಕವಿಲ್ಲ ಮಗೂ. ನಮಗೆ ಎಲ್ಲಾ ಗೊತ್ತಿದೆ"

ಎಂದು ಶ್ರೀ ಶ್ರೀಗಳವರು ಹೇಳಿದರು.

ಸಭೆಯ ಒಂದು ಕಡೆ ಕುಳಿತಿದ್ದ ಪುಟ್ಟೇಗೌಡ ಧೈರ್ಯಮಾಡಿ ಶ್ರೀಗಳವರ ಮುಂದೆ ಬಂದು ಕೈಜೋಡಿಸಿ ನಿಂತ. ಶ್ರೀಗಳವರು ಅವನನ್ನು ನೋಡಿ

"ನೀವು ಯಾರು ? ಏನಾಗಬೇಕಾಗಿತ್ತು ?"

"ಮಹಾಸ್ವಾಮಿ, ನಾನು ಹುಲ್ಲೂರು ಪಟೇಲ ಪುಟ್ಟೇಗೌಡ."

"ಏನಾದರೂ ತಿಳಿಸುವುದಿತ್ತೇ ಗೌಡರೇ ?"

"ನಮ್ಮ ಸಾಂಬಪ್ಪನ ವಿಷಯ, ಶಾಸ್ತ್ರಿಗಳ ವಿಷಯ ಅವರಿಗಾಗದವರು ತಮ್ಮಲ್ಲಿ ತಪ್ಪು ಹೇಳಿದ್ದಾರೆ. ಅಪ್ಪಣೆಯಾದರೆ ನಿಜಸ್ಥಿತಿ ನಾನು ತಿಳಿಸುತ್ತೇನೆ. ಸ್ವಂತ ವಿಷಯವಾದ್ದರಿಂದ ಶಾಸ್ತ್ರಿಗಳು ಬಾಯಿ ಬಿಡುವುದಿಲ್ಲ."

"ಹೇಳಿ ಗೌಡರೇ."

ಪುಟ್ಟೇಗೌಡ ಸಾದ್ಯಂತವಾಗಿ ಕಾಳಾಚಾರಿ ಚರಿತ್ರೆ, ನಾಗಪ್ಪನ ವಿಷಯ, ರಾಮಲಿಂಗಾಚಾರಿ, ಚಲುವಾಚಾರಿ, ಪುಲ್ಲಯ್ಯನ ಪ್ರಕರಣ, ಶಾಸ್ತ್ರಿಗಳ ಮತ್ತು ಸಾಂಬನ ಪಾತ್ರವನ್ನು ವಿವರಿಸಿಹೇಳಿ ಮೃತ್ಯುಂಜಯ ಶಾಸ್ತ್ರಿ ಮತ್ತು ಅವನ ಪಕ್ಷದವರು ಶಾಸ್ತ್ರಿಗಳಿಗೆ ಕೊಟ್ಟ ಚಿತ್ರಹಿಂಸೆಯನ್ನು ವಿವರಿಸಿದ.

ಶ್ರೀ ಶ್ರೀಗಳವರು ಪುಟ್ಟೇಗೌಡನ ನಿರೂಪಣೆಯನ್ನು ಶಾಂತಚಿತ್ತರಾಗಿ ಕೇಳಿ

"ಸಾಂಬಶಾಸ್ತ್ರೀ, ನಿನಗೂ ನಿನ್ನ ಮನೆಯವರಿಗೂ ಬಹಿಷ್ಕಾರ ಹಾಕಬೇಕೆಂದು ಇಲ್ಲಿಯ ಶ್ರೋತ್ರೀಯ ವರ್ಗ ಅಪೇಕ್ಷಿಸುತ್ತಿದ್ದಾರೆ. ಇದಕ್ಕೆ ನೀನೇನು ಹೇಳುವೆ"

ಎಂದರು. ಸಾಂಬ ಎದ್ದುನಿಂತು

"ಗುರುಚಿತ್ತ ಹೇಗಿದೆಯೋ ಹಾಗೆ ಮಾಡಬಹುದು. ಆದರೊಂದೇ ಮಾತು, ಬಹಿಷ್ಕಾರಕ್ಕೆ ನಾನೊಬ್ಬನೇ ಹೊಣೆಯಲ್ಲದೆ ನನ್ನ ತೀರ್ಥರೂಪರಾಗಲಿ, ಅಣ್ಣನಾಗಲಿ ಹೊಣೆಯಲ್ಲ."

ಶ್ರೀ ಶ್ರೀಗಳವರು ರಾಮಾಶಾಸ್ತ್ರಿಯನ್ನು ಹತ್ತಿರ ಕರೆದು ಅವನ ಕಿವಿಯಲ್ಲೇನೋ ಉಸುರಿದರು. ನಾರಾಯಣ ಶಾಸ್ತ್ರಿಗಳನ್ನು ಹತ್ತಿರ ಬರುವಂತೆ ಆಜ್ಞಾಪಿಸಿದರು.

"ಶಾಸ್ತ್ರಿಗಳೇ, ಸ್ವಜಾತಿ ಜನ ನಿಮಗೆ ಕೊಟ್ಟ ಹಿಂಸೆಗಾಗಿ ನಾವು ತುಂಬ ವಿಷಾದಪಡುತ್ತೇವೆ. ಧರ್ಮ ಖಿಲವಾಗುತ್ತಿರುವ ಈ ಕಲಿಗಾಲ ದಲ್ಲಿಯೂ ಶ್ರದ್ಧಾಭಕ್ತಿಗಳಿಂದ ದೇವರ ಸೇವೆ ಮಾಡಿಕೊಂಡು ಹೋಗುತ್ತಿ ರುವ ನೀವೇ ಧನ್ಯರು. ನಿಮ್ಮ ಬಾಳ್ವೆ ಲೋಕಕ್ಕೆ ಮಾದರಿಯಾಗಲಿ"

ಎಂದರು. ರಾಮಾಶಾಸ್ತ್ರಿ ಒಂದು ತಟ್ಟೆ ತಂದು ಶ್ರೀಗಳವರ ಮುಂದೆ ಹಿಡಿದ. ಅವರು ಅದನ್ನು ಕೈಯಿಂದ ಮುಟ್ಟಿದರು.

ರಾಮಾಶಾಸ್ತ್ರಿ ನಾರಾಯಣ ಶಾಸ್ತ್ರಿಗಳಿಗೆ ಶಾಲುಜೋಡಿ ಹೊದಿಸಿ, ಕೈಗೆ ಚಿನ್ನದ ಕಪ್ಪ ಹಾಕಿದ. ಶಾಸ್ತ್ರಿಗಳು ಬೆರಗಾಗಿ ಶ್ರೀ ಶ್ರೀಗಳವರ ಮುಖ ನೋಡಿದರು.

"ಸಂಸ್ಥಾನ ನಿಮಗೆ 'ಧರ್ಮ ದುರಂಧರ' ಎಂದು ಬಿರುದು ದಯೆ ಪಾಲಿಸಿದೆ. ಇದೇ ರೀತಿಯಲ್ಲಿಯೂ ನೀವು ಮುಂದೆಯೂ ಧರ್ಮಕಾರ್ಯ ಮಾಡಿಕೊಂಡು ಶ್ರೀ ಶಾರದಮ್ಮನವರ ಕೃಪೆಗೆ ಪಾತ್ರರಾಗಬೇಕು"

ಎಂದರು. ನಾರಾಯಣ ಶಾಸ್ತ್ರಿಗಳ ಧ್ವನಿ ಕುಗ್ಗಿಹೋಗಿತ್ತು. ಅವರ ಹೃದಯದಲ್ಲಿ ತರಂಗ ತರಂಗವಾಗಿ ಭಾವನೆಗಳೆದ್ದವು. ಅತ್ಯಂತ ವಿನಯ ದಿಂದ

"ಗುರುದೇವಾ, ನನಗೇತಕ್ಕೆ ಈ ಸನ್ಮಾನ. ಭಗವದಾರಾಧನೆ ಮಾಡಿ ಕೊಂಡು ಹತ್ತುಜನರ ಸೇವೆ ಮಾಡಿಕೊಂಡಿರುವುದು ಬ್ರಾಹ್ಮಣನ ಧರ್ಮ. ನನ್ನ ಆಶ್ರಮಧರ್ಮ ನಾನು ಪಾಲಿಸಿಕೊಂಡು ಹೋಗುತ್ತಿದ್ದೇನೆ. ನನಗೆ ಮಾನಸನ್ಮಾನ ಬೇಕಿಲ್ಲ. ತಮ್ಮ ಪಾದಧೂಳಿ ಸದಾ ನನ್ನ ತಲೆಯ ಮೇಲಿ ದ್ದರೆ ಸಾಕು"

ಎಂದರು. ಶ್ರೀಶ್ರೀಗಳವರು

"ಶಾಸ್ತ್ರಿಗಳೇ, ಈ ಸನ್ಮಾನ ನಿಮಗಾಗಿಯಲ್ಲ, ಲೋಕಕ್ಕಾಗಿ. ನಿಮ್ಮ ಬಾಳ್ವೆ ಅನುಕರಣೀಯವೆಂದು ತೋರಬೇಕಾದುದು ಸಂಸ್ಥಾನದ ಕರ್ತವ್ಯ."

ಎಂದು ಸಾಂಬಶಾಸ್ತ್ರಿಯ ಕಡೆ ತಿರುಗಿ

"ಸಾಂಬಶಾಸ್ತ್ರಿ, ಇದುವರೆಗೆ ನೀನು ಮೂಲಪ್ರಕೃತಿಯನ್ನು ಮಹಾ ಕಾಳಿ ಎಂದು ಆರಾಧಿಸುತ್ತಿದ್ದೆ. ತಾಯಿ ನಿನ್ನ ಅನುಗ್ರಹಿಸಿ ಅಪೂರ್ವ ಶಕ್ತಿಭಂಡಾರವನ್ನು ನಿನ್ನ ಮಡುಲಿಗೆ ಹಾಕಿದ್ದಾಳೆ. ನೀನು ತಾಯಿಯ ವಿದ್ಯಾಮುಖವನ್ನು ಆರಾಧಿಸಬೇಕು. ಯಾವ ತಾಯಿ ಮಹಾಕಾಳಿಯಾಗಿ ದ್ದಾಳೊ ಅವಳೇ ಮಹಾಸರಸ್ವತಿ, ಮಹಾಲಕ್ಷ್ಮಿಯೂ ಆಗಿದ್ದಾಳೆ. ವಾಮಾಚಾರ ಬಿಟ್ಟು ನೀನು ಸದಾಚಾರ ಪ್ರವೃತ್ತನಾಗಬೇಕು."

"ಗುರ್ವಾಜ್ಞೆ ಹೇಗೆ ಆದರೆ ಹಾಗೆ ಮಾಡಲು ನಾನು ಸಿದ್ಧನಾಗಿದ್ದೇನೆ."

"ಕೈ ಹಿಡಿ"

ಎಂದು ಗುಂಡಿಯಲ್ಲಿದ್ದ ನೀರು ತೆಗೆದು ಸಾಂಬನ ಕೈಗೆ ಹಾಕಿದರು. ಸಾಂಬ ಅದನ್ನು ಶ್ರೀ ಶ್ರೀಗಳವರ ಪಾದದ ಮೇಲೆ ಅರ್ಪಿಸಿ

"ಗುರುಚರಣಾರ್ಪಣಮಸ್ತು"

ಎಂದು ಸಾಷ್ಟಾಂಗ ನಮಸ್ಕಾರ ಮಾಡಿದ.

ಶ್ರೀ ಶ್ರೀಗಳವರೆದ್ದು ನಿಂತರು. ಸಭೆಯೂ ಎದ್ದು ನಿಂತಿತು. ಸಾಂಬ ನನ್ನೂ, ನಾರಾಯಣ ಶಾಸ್ತ್ರಿಗಳನ್ನೂ ಜತೆಯಲ್ಲಿ ಕರೆದುಕೊಂಡು ಶ್ರೀಶ್ರೀ ಗಳವರು ಒಳಗೆ ದಯಮಾಡಿಸಿದರು.

ಮೃತ್ಯುಂಜಯ ಶಾಸ್ತ್ರಿ, ಅವನ ಪರಿವಾರದ ಮುಖ ಸಣ್ಣಗಾಯಿತು. ಅವರು ಅಲ್ಲಿ ನಿಲ್ಲದೆ ನುಸುಳಿಕೊಂಡು ಹೊರಗೆ ಹೊರಟುಹೋದರು.

ರಾಮಾಶಾಸ್ತ್ರಿಗೆ ಜನರಿಗೆ ಮುಖ ತೋರಿಸದ ಹಾಗಾಯಿತು. ಜನ ಅವನ ವಿಷಯವನ್ನೇ ಆಡಿಕೊಳ್ಳುತ್ತಿದ್ದರು. ವಿಶ್ವೇಶ್ವರನನ್ನೂ ಪುಟ್ಟೇ ಗೌಡನನ್ನೂ ಜನ ಸುತ್ತುಗಟ್ಟಿದರು.

೨೫

ಮಾರನೆಯ ಬೆಳಿಗ್ಗೆ ಶ್ರೀ ಶ್ರೀಗಳವರ ಪ್ರಯಾಣದ ಸಿದ್ಧತೆ ನಡೆ ಯಿತು. ಪರಿವಾರ ಸಜ್ಜಾಯಿತು. ಮೇನೆಯವರು, ಮೇನೆಯೊಂದಿಗೆ ಸಿದ್ಧರಾದರು.

ಗಳವರನ್ನು ಬೀಳ್ಕೊಡಲು ಜನ ಸೇರಿತ್ತು. ನಾರಾಯಣಶಾಸ್ತ್ರಿ
ಂಬ ಶ್ರೀಗಳವರ ಜತೆಗೇ ಇದ್ದರು. ಮೇನೆ ಹತ್ತುವ ಮುನ್ನ
ರು ನಾರಾಯಣ ಶಾಸ್ತ್ರಿಗಳನ್ನು ಹತ್ತಿರ ಕರೆದು

ಾಸ್ತ್ರಿಗಳೇ, ರಾತ್ರಿ ಅಮ್ಮನವರು ನಮ್ಮ ಕನಸಿನಲ್ಲಿ ಬಂದು ಒಂದು
ಕಾರ್ಯ ವಿಧಿಸಿ ಹೋಗಿದ್ದಾರೆ."

ನನಗೆ ಸಂಬಂಧಿಸಿದುದಾದರೆ ಶಿರಸಾವಹಿಸಿ ಪಾಲಿಸುತ್ತೇನೆ."

ನಮ್ಮ ಉತ್ತರಾಧಿಕಾರಿಯನ್ನು ಸೂಚಿಸಿದ್ದಾರೆ."

ಯಾರು ಎಂದು ಕೇಳಬಹುದೇ?"

ನಮ್ಮ ಚಿರಂಜೀವಿ – ಸಾಂಬಶಾಸ್ತ್ರಿ."

ರಾಯಣ ಶಾಸ್ತ್ರಿಗಳ ಕಣ್ಣಲ್ಲಿ ಪ್ರವಾಹ ಹೊರಟುಬಿಟ್ಟಿತು.
ು

ುಃಖವಾಗುತ್ತದೆಯೇ?"

ಲ್ಲವೆಂದು ಹೇಳಿದರೆ ಸುಳ್ಳಾಗುತ್ತದೆ. ತಾಯಿಯ ಕೃಪೆ ನೋಡಿ
ಉಕ್ಕಿ ಹರಿಯುತ್ತಿದೆ.

ಮ್ಮ ಅಭ್ಯಂತರವಿಲ್ಲವಷ್ಟೇ?"

ಾಯಿಯಾಜ್ಞೆಗೆ ಅಭ್ಯಂತರ ಮಾಡುವುದಕ್ಕೆ ನಾನು ಯಾರು?"

ಬಶಾಸ್ತ್ರಿಯನ್ನು ಶ್ರೀಗಳವರು ಹತ್ತಿರ ಕರೆದು

ಾಂಬಶಾಸ್ತ್ರಿ, ನೀನು ನಮ್ಮ ಜತೆ ಬರಬೇಕು."

ರು. ಸಾಂಬ ಭಕ್ತಿಪೂರ್ವಕವಾಗಿ ನಿವೇದಿಸಿದ

ಪ್ಪಣೆ. ಆದರೆ ನನಗೆ ಒಂದು ಗಳಿಗೆ ಅವಕಾಶ ಕೊಡಬೇಕು."

ಗಬಹುದು"

ು ಹೇಳಿ ಶ್ರೀ ಶ್ರೀಗಳವರು ಮೇನೆ ಹತ್ತಿ ಕುಳಿತು ಸಾಂಬನ
ನ್ನು ನಿರೀಕ್ಷಿಸುತ್ತಿದ್ದರು.

ಗಳಿದ್ದಲ್ಲಿಗೆ ವಿಶ್ವೇಶ್ವರ, ಸೀತಮ್ಮ, ಪುಟ್ಟೇಗೌಡ, ರಂಗೇಗೌಡ
ರು. ಸಾಂಬ ತಂದೆ, ಅಣ್ಣ, ಅತ್ತಿಗೆಗೆ ಸಾಷ್ಟಾಂಗ ನಮಸ್ಕಾರ

"ಈ ಪಾರ್ಥಿವ ದೇಹವನ್ನು ಸಾರ್ಥಕವಮಾಡಿದಿರಿ. ಹೋ
ಅಪ್ಪಣೆಕೊಡಿ"

ಎಂದ. ಶಾಸ್ತ್ರಿಗಳು ಮಗನನ್ನು ಬಿಗಿದಪ್ಪಿ ಕಣ್ಣೀರಿನ ಅ
ಮಾಡಿದರು.

ಸಾಂಬ ತಂದೆಯ ಆಲಿಂಗನದಿಂದ ಬಿಡಿಸಿಕೊಂಡು ಅತ್ತಿಗೆ
ಬಂದು

"ಅಮ್ಮ........ತಾಯಿಯ ಮುಖ ನಾನು ಕಾಣಲಿಲ್ಲ. ಆದರೆ
ತಾಯಿಯಿಲ್ಲದ ಮಗು ಎನಿಸಲಿಲ್ಲ. ಅಂಗೈಯಲ್ಲಿಟ್ಟುಕೊಂಡು
ಏಳು ಏಳು ಜನ್ಮಕ್ಕೂ ನಿನ್ನ ಋಣ ತೀರಿಸಲಾರೆ ತಾಯಿ"

ಎಂದ. ಸೀತಮ್ಮ ಸಾಂಬನನ್ನಪ್ಪಿ ಕಂಬನಿಗರೆದಳು.

ಸಾಂಬ ಪುಟ್ಟೇಗೌಡ, ರಂಗೇಗೌಡನನ್ನು ಅಪ್ಪಿ

"ಜಾತಿ ನಮ್ಮ ವಿಶ್ವಾಸಕ್ಕೆ ಭಂಗತರಲಿಲ್ಲ. ನನ್ನ ತಂದೆಯ
ನಿಮ್ಮ ಕೈಯಲ್ಲಿಟ್ಟು ಹೋಗುತ್ತೇನೆ. ಮಗ ಅವರನ್ನು ಬಿಟ್ಟುಹೋದ
ನೀವನಿಸುವುದಿಲ್ಲ ಎಂದು ನಾನು ಬಲ್ಲೆ. ನಾಗಪ್ಪಣ್ಣನವರಿಗೆ ಎ
ನನ್ನ ನಮುಸ್ಕಾರಗಳೊಂದಿಗೆ ತಿಳಿಸಬೇಕು"

ಎಂದು ಹೇಳಿದ.

ಬಾಯಲ್ಲಿ ಮಾತು ಹೊರಡದೆ ಪುಟ್ಟೇಗೌಡ ತಲೆಯಲ್ಲಾಡಿಸಿ

ಜನ ತಂಡತಂಡವಾಗಿ ಬಂದು ಸಾಂಬನ ಪಾದ ಮುಟ್ಟಿ ನ
ಸಿದರು.

ಸಾಂಬ ಮೇನೆಯ ಬಳಿ ಹೋಗಿ ಶ್ರೀಗಳವರಿಗೆ

"ಸಿದ್ಧನಾಗಿದ್ದೇನೆ"

ಎಂದ. ಮೃತ್ಯುಂಜಯಶಾಸ್ತ್ರಿ ಅವನ ಪರಿವಾರ ಸಾಂಬನ
ಮೇಲೆ ಬಿದ್ದು

"ಕ್ಷಮಿಸಿ ಅನುಗ್ರಹಿಸಬೇಕು"

ಎಂದು ಮೊರೆಯಿಟ್ಟರು. ಸಾಂಬ ಶ್ರೀಗಳವರ ಮುಖ
ಶ್ರೀಗಳವರು ಮುಗುಳ್ನಗೆ ನಕ್ಕರು. ಸಾಂಬ ಅವರ ತಲೆದಡವಿ

' ಏಳಿ - ಶ್ರೀಶ್ರೀಗಳವರು ಕ್ಷಮಿಸಿದ್ದಾರೆ"
ಎಂದು ಹೇಳಿದ.

ಮೇನೆಯ ಆಳುಗಳು ಮೇನೆಯನ್ನು ಹೆಗಲಿಗೇರಿಸಿದರು. ಜನ ಜಯ
ಕಾರ ಮಾಡಿತು. ಶ್ರೀಗಳವರ ಪರಿವಾರ ಮುಂದಕ್ಕೆ ಹೊರಟಿತು.

ಊರುಬಾಗಿಲು ತನಕ ಜನರೆಲ್ಲಾ ಶ್ರೀಗಳವರನ್ನು ಹಿಂಬಾಲಿಸಿದರು.
ರುಣ ಶಾಸ್ತ್ರಿಗಳು, ವಿಶ್ವೇಶ್ವರ, ಸೀತಮ್ಮ ಸಾಂಬನ ಹಿಂದೆಯೇ
ಬರುತ್ತಿದ್ದರು.

ಶ್ರೀಗಳವರು ಮೇನೆ ನಿಲ್ಲಿಸಿ ಹಿಂಬಾಲಿಸುತ್ತಿದ್ದವರಿಗೆ

' ಇನ್ನು ನೀವು ಹಿಂದಿರುಗಬೇಕು."
ಎಂದರು. ಮೇನೆ ಮುಂದಕ್ಕೆ ಹೋಯಿತು.

ಶಾಸ್ತ್ರಿಗಳೂ, ಇತರರೂ ಮೇನೆ ಕಣ್ಮರೆಯಾಗುವವರೆಗೂ ಅಲ್ಲಿಯೇ
ರು. ಪುಟ್ಟೇಗೌಡ ಶಾಸ್ತ್ರಿಗಳ ಹತ್ತಿರ ಬಂದು

' ಸಮುದ್ರ ಸಮುದ್ರ ಸೇರಿತು. ಬನ್ನಿ ಹೋಗೋಣ"
ಎಂದ.

ಶಾಸ್ತ್ರಿಗಳು ಮರುಮಾತನಾಡದೆ ಅವನನ್ನು ಹಿಂಬಾಲಿಸಿದರು.

ಅ. ನ. ಕೃಷ್ಣರಾಯರ ಕೃತಿಗಳು

ನಮ್ಮ ಪ್ರಕಟನೆಗಳು

ಮುಯ್ಯಿಗೆ ಮುಯ್ಯಿ	....	ಕಾದಂಬರಿ
ತಾಯಿಯ ಕರುಳು	....	ಕಾದಂಬರಿ
ಹೊಸಲು ದಾಟಿದ ಹೆಣ್ಣು	....	ಕಾದಂಬರಿ
ಜೀವನಯಾತ್ರೆ	....	ಕಾದಂಬರಿ
ಸಾಹಿತ್ಯರತ್ನ	....	ಕಾದಂಬರಿ
ಶಿಲ್ಪಿ	....	ಕತಾ ಸಂಗ್ರ
ಕಿಡಿ	....	ಕತಾ ಸಂಗ್ರ
ಮಿಂಚು	....	ಕತಾ ಸಂಗ್ರ
ಗೋಮುಖ ವ್ಯಾಘ್ರ	....	ನಾಟಕ
ಸ್ವರ್ಣಮೂರ್ತಿ	....	ನಾಟಕ
ಹಿರಣ್ಯಕಶಿಪು	....	ನಾಟಕ
ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ	....	ಸಾಹಿತ್ಯ ಪ್ರ

ಅಚ್ಚಿನಲ್ಲಿ

ಕರ್ನಾಟಕದ ಕಲಾವಿದರು ಭಾಗ ೨	....	ಕಲಾ ವಿಮ
ಮದುವೆಯೋ ಮನೆಹಾಳೋ (ಪರಿಷ್ಕೃತ)	....	ನಾಟಕ
ರಜಪೂತ ಲಕ್ಷ್ಮಿ	....	ನಾಟಕ
ಜ್ವಾಲಾಮುಖಿ	....	ನಾಟಕ
ಬಣ್ಣದ ಬೀಸಣಿಗೆ	....	ನಾಟಕ
ಉಮರ ಖಯ್ಯಂ (ಸಚಿತ್ರ)	....	ಕಾವ್ಯ ವಿಮ

ಆನಂದ್ ಬ್ರದರ್ಸ್

ಬೆಂಗಳೂರು ೨